ರಂಜನೆ ಬೋಧನೆ ಪ್ರಚೋದನೆ


ಲಂಕೇಶ್

ಆಗಸ್ಟ್ 07, 2013 ಪುಟ 20 ರೂ. 14/-

ಸಂದರ್ಶನ
ಕೆ.ಫಣಿರಾಜ್

ರಂಗತಂಡ
ರಂಗ ನಿರಂತರ

ಠದ 1,500 ಕೋಟಿ ನುಂಗಿದ ಶೇಖರ್ ಸ್ವಾಮಿ





ಐಟಿ ದಾಳಿಯ ಅಸಲಿ ಕಥೆ


ಚಿಕ್ಕಬಳ್ಳಾಪುರ: ಸೇಡಿಗಾಗಿ ಕಾದಿರುವ ಹೆಂಗಸರು



ಸನ-ತಿಪಟೂರು
ಹೈವೇ
ಲ್ಲಿಕಳ್ಳ
ಮಂತ್



ಬಸವಣ್ಣ ಬ್ರಾಹ್ಮಣ ವಿವಾದ
ಉಪ್ಪಿ.... ಇವನೊಬ್ಬ ತಿಕ್ಕಲು ನಟ




ಕಾರವಾರ
ಶಾಸಕ ಸೈಲ್‌ನ
ಕಪಟ ನಾಟಕ

ಮಂಡ್ಯ: JDS ಅಬ್ಬರ, ಕೈ ತತ್ತರ, BJP ನಿರುತ್ತರ

ಪತ್ರಿ ಪೀಡಿತರ ಕಥೆ-ವ್ಯಥೆ

ಸತ್ಯಕಥೆಗಳ
ಸರಣಿ ಆರಂಭ





ಸಂಪಾದಕ


• ಪಾರ್ವತೀಶ
bparvateesha@gmail.com


ಬಿಡಿ ಚಿತ್ರಗಳು


ಕನ್ನಡನಾಡಿನ ನಕ್ಸಲೀಯರನ್ನು ಕುರಿತು



ಅನಂತಮೂರ್ತಿ


ದೊರೆಸ್ವಾಮಿ


ಎ.ಕೆ.ಸುಬ್ಬಯ್ಯ


ದೇವನೂರು


ಇಂದೂದರ


ಬಂಜಗೆರೆ

'ರೀ... ನನಗೂ ಹಾಗೇ ಅನಿಸಿತ್ತಲ್ಲ, ಅದೇ ಯೋಚನೆ ಬಂದಿತ್ತಲ್ಲ...' ಅಂತ ಅನೇಕ ಸಾರಿ ನಮಗನಿಸುವುದುಂಟು.

ಬಹುಶಃ ನಿಮಗೂ ಬಹಳ ಸಾರಿ ಹೀಗನಿಸಿರಲಿಕ್ಕೂ ಸಾಕು.

ಯಾವುದೋ ಒಂದು ಘಟನೆಗೆ, ಅದಕ್ಕೆ ನಮ್ಮಲ್ಲಿ ಮೂಡುವ ಪ್ರತಿಕ್ರಿಯೆಗೆ ಕೆಲವೊಮ್ಮೆ ನಾವು ಯೋಚಿಸುವ ರೀತಿಯಲ್ಲೇ ಬೇರೆಲ್ಲೋ ಇರುವವರೂ ಯೋಚಿಸಿರುತ್ತಾರೆ.

ಮಲೆನಾಡಿನ ನಕ್ಸಲೈಟ್ ಹೋರಾಟಗಾರರ ಕುರಿತಂತೆ ಕೊಂಚ ಹೇಳಬೇಕಿರುವುದರಿಂದ ಈ ಮಾತು...

ಸಿದ್ದರಾಮಯ್ಯ ಮುಖ್ಯಮಂತ್ರಿಯಾದ ನಂತರ, ನಾಡಿನ ಅನೇಕ ಸಮಸ್ಯೆಗಳ ಬಗ್ಗೆ ಮಾತನಾಡಿದ್ದಾರೆ. ಅದರಲ್ಲಿ ಪ್ರಮುಖವಾದದ್ದು ನಕ್ಸಲೀಯರ ಕುರಿತಂತೆ ಹೇಳಿರುವ ವಿಚಾರ.

"ನಕ್ಸಲೀಯರು ಸಶಸ್ತ್ರ ಹೋರಾಟ ಕೈಬಿಟ್ಟು ಮುಖ್ಯವಾಹಿನಿಗೆ ಬರಲಿ. ಸರ್ಕಾರ ಜನರ ನ್ಯಾಯಯುತ ಬೇಡಿಕೆಗಳನ್ನು ಪರಿಶೀಲಿಸಲು ಸಿದ್ಧವಿದೆ. ಹಿಂಸಾ ಮಾರ್ಗದ ಮೂಲಕ ಹೋರಾಡುವ ಬದಲಾಗಿ ಕಾನೂನುಬದ್ಧ ಚೌಕಟ್ಟಿನಲ್ಲಿ ಅವರಿರಲಿ" ಎಂಬಿತ್ಯಾದಿಯಾಗಿ ಮುಖ್ಯಮಂತ್ರಿ ನಾಲ್ಕಾರು ಬಾರಿ ಹೇಳಿದ್ದಾರೆ. ಇದೇ ಧೋರಣೆಯಲ್ಲಿ ಗೃಹಮಂತ್ರಿ ಕೆ.ಜೆ. ಜಾರ್ಜ್ ಕೂಡ ಮಾತನಾಡಿದ್ದು ಪತ್ರಿಕೆಗಳಲ್ಲಿ ವರದಿಯಾಗುತ್ತಿತ್ತು.

ಇದನ್ನು ನಮ್ಮ ತಂಡ ಗಮನಿಸುತ್ತಿತ್ತು. ಆಗೊಮ್ಮೆ ಪತ್ರಿಕೆಯ ಆಫೀಸಿನಲ್ಲಿ ಕುಳಿತು ಮಾತನಾಡುತ್ತಿದ್ದಾಗ 'ಕರ್ನಾಟಕ ನಾಗರಿಕ ಸಮಾಜದ ಪರವಾಗಿ ಭೂಗತ ಹೋರಾಟಗಾರರಿಗೆ, ಸರ್ಕಾರದ ಈ ಕರೆಗೆ ಓಗೊಡುವಂತೆ' ನಾವ್ಯಾಕೆ ಒಂದು ಮನವಿ ಮಾಡಬಾರದೆಂದು ಯೋಚನೆ ಬಂತು. ಸರಿಯೆಂದುಕೊಂಡು ನಾವು ಬಲ್ಲ ಕೆಲ ಬುದ್ಧಿಜೀವಿ-ಬರಹಗಾರರು ಹಾಗೂ ಜನಪರ ಚಳವಳಿಗಳ ಮುಖಂಡರೊಂದಿಗೆ ಈ ವಿಚಾರ ಪ್ರಸ್ತಾಪಿಸಿದಾಗ ಅವರಲ್ಲೂ ಅನೇಕರಿಗೆ ಇದೇ ಆಲೋಚನೆ ಇತ್ತೆಂಬುದು ನಮಗೆ ಗೊತ್ತಾಯಿತು.

ಈ ಬಗ್ಗೆ ಗೆಳೆಯ ಬಂಜಗೆರೆ ಜಯಪ್ರಕಾಶ್ ಜೊತೆ ಚರ್ಚಿಸುತ್ತಿದ್ದಾಗ ಜೆಪಿ ಕೂಡಾ "ನಾವೆಲ್ಲಾ ಖಂಡಿತಾ ಮನವಿ ಮಾಡೋಣ, ಮೊನ್ನೆ ದೇವನೂರು ಮಹಾದೇವ ಸಿಕ್ಕಿದ್ದಾಗ ಅವರೂ ಕೂಡ ಇದೇ ತರ ಯೋಚಿಸಿದ್ದರು ಅಂತ ನನಗನಿಸಿತು" ಅಂದರು.

"ಕರ್ನಾಟಕದಲ್ಲಿ ಜನಪರ ಚಳವಳಿಗಳಿಗೆ ಹೊಸ ಚೈತನ್ಯ ತುಂಬ ಬೇಕಾಗಿದೆ. ಅದಕ್ಕೆ ಕಮಿಟ್‌ಮೆಂಟ್ ಇರುವ ಜನ ಬೇಕು. ಆ ವಿಚಾರದಲ್ಲಿ ಎಡಪಂಥೀಯರು ಲಾಲಸೆಗೊಳಗಾಗುವುದು ಕಡಿಮೆ ಅನಿಸುತ್ತೆ" ಅಂದಿದ್ದರಂತೆ ದೇವನೂರು. ನಾವು ಹೀಗೆ ವಿಚಾರ ವಿನಿಮಯ ಮಾಡುತ್ತಾ ಹೋದಾಗ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಹೆಚ್.ಎಸ್. ದೊರೆಸ್ವಾಮಿ, ಎ.ಕೆ. ಸುಬ್ಬಯ್ಯ, ಯು.ಆರ್.ಅನಂತಮೂರ್ತಿ, ಜಿ. ರಾಜಶೇಖರ್, ಇಂದೂಧರ ಹೊನ್ನಾಪುರ, ದೇವನೂರು, ಡಾ. ಜಿ. ರಾಮಕೃಷ್ಣ ಕೆ. ಫಣಿರಾಜ್, ಬಂಜಗೆರೆ ಜಯಪ್ರಕಾಶ್ ಮುಂತಾದವರೆಲ್ಲಾ ಸಹಮತ ವ್ಯಕ್ತಪಡಿಸಿ ಅದೀಗ ಒಂದು ಸಂಘಟಿತ, ಸಾಮೂಹಿಕ ಪ್ರಯತ್ನವಾಗುವ ರೀತಿ ಚಾಲನೆ ಪಡೆದುಕೊಂಡಿದೆ.

ಸದ್ಯದಲ್ಲೇ ನಾವೆಲ್ಲಾ ಸೇರಿ ಸರ್ಕಾರಕ್ಕೂ ಹಾಗೂ ನಕ್ಸಲೀಯರಿಗೂ ಏಕಕಾಲದಲ್ಲಿ ಈ ಬಗ್ಗೆ ಒಂದು ಮನವಿ ಮಾಡುವವರಿದ್ದೇವೆ.

ಕರ್ನಾಟಕದ ಹೊಸ ಸರ್ಕಾರದ ಬಗ್ಗೆ ಜನರಲ್ಲೀಗ ಸಹಜವಾಗಿಯೇ ಕೆಲವು ನಿರೀಕ್ಷೆಗಳಿವೆ. ಕೋಮುವಾದದ ದಮನ, ಜನರ ಸಮಸ್ಯೆಗಳ ನಿವಾರಣೆಗೆ ಪ್ರಾಮಾಣಿಕ ಪ್ರಯತ್ನಗಳಾಗಬೇಕೆಂಬ ಅಪೇಕ್ಷೆಗಳಿವೆ. ಇದರ ಜೊತೆಗೆ ನಮ್ಮ ಸಮಾಜದಲ್ಲಿ ಪ್ರಜಾತಾಂತ್ರಿಕ ಮೌಲ್ಯಗಳ ಪುನರ್ ಸ್ಥಾಪನೆಯ ವಿಚಾರವೂ ಅಷ್ಟೇ ಮುಖ್ಯವಾದದ್ದು. ಜನಪರ ಹೋರಾಟಗಳನ್ನು ಹಾಗೂ ರಾಜಕೀಯ ಭಿನ್ನಾಭಿಪ್ರಾಯಗಳನ್ನು ಒಂದು ಪ್ರಜಾಸತ್ತಾತ್ಮಕ ಸರ್ಕಾರ ಎಷ್ಟರಮಟ್ಟಿಗೆ ಸಹಿಸಿಕೊಳ್ಳುತ್ತದೆ ಎಂಬುದೂ ನೈಜ ಪ್ರಜಾಪ್ರಭುತ್ವದ ಮಾನದಂಡವೇ ಆಗಿರುತ್ತದೆ.

ಇಂಡಿಯಾದಲ್ಲಿ ಆಗಿಹೋದ ಸರ್ಕಾರಗಳು ಜನರ ಮೂಲಭೂತ ಸಮಸ್ಯೆಗಳನ್ನು ಬಗೆಹರಿಯಸಲಾಗದೇ ಹೋದ ಕಾರಣ ಹಾಗೂ ಪ್ರಜಾತಂತ್ರದ ಆಚರಣೆಯ ಕೊರತೆಗೆ ಪ್ರತಿರೋಧವಾಗಿ ಇಲ್ಲಿ ನಕ್ಸಲೀಯರ ಸಶಸ್ತ್ರ ಹೋರಾಟ ಸ್ಫೋಟಗೊಂಡಿತು. ಕಳೆದ ನಾಲ್ಕೈದು ದಶಕದಲ್ಲಿ ಸಾಕಷ್ಟು ರಕ್ತಪಾತವೂ ಆಗಿದೆ. ಇದಕ್ಕೆ ಸರ್ಕಾರಗಳಿಂದ ಎರಡು ರೀತಿಯ ವಿವರಣೆ ಕೇಳಿಬರುತ್ತಿದೆ.

ಒಂದು ಇದನ್ನೊಂದು ಕಾನೂನು ಸುವ್ಯವಸ್ಥೆಯ ಸಮಸ್ಯೆ ಎಂಬಂತೆ ಪರಿಗಣಿಸುವುದು, ಇನ್ನೊಮ್ಮೆ ಸಾಮಾಜಿಕ ಆರ್ಥಿಕ ಅಸಮಾನತೆಗಳೇ ನಕ್ಸಲ್ ಹೋರಾಟಕ್ಕೆ ಮೂಲಕಾರಣ ಎಂದು ಒಪ್ಪಿಕೊಳ್ಳುವುದು ಇದೊಂದು ವಾಸ್ತವ ಎಂದು ಒಪ್ಪಿಕೊಳ್ಳುವುದಾದರೆ ಕೇವಲ ಪೊಲೀಸ್ ಕಾರ್ಯಾಚರಣೆಗಳ ಮೂಲಕವೇ ಈ ಪ್ರತಿರೋಧವನ್ನು ಹತ್ತಿಕ್ಕಲು ಸಾಧ್ಯವಿಲ್ಲ.

ಜನರ ಸಮಸ್ಯೆಗಳನ್ನು ಬಗೆಹರಿಸುವ ಮೂಲಕ ನಕ್ಸಲರನ್ನು ಅಪ್ರಸ್ತುತಗೊಳಿಸುವುದೊಂದೇ ಸುಗಮವಾದ ದಾರಿಯಾಗುಳಿಯುತ್ತದೆ.

ಕರ್ನಾಟಕದಲ್ಲಿನ ನಕ್ಸಲೀಯ ಹೋರಾಟ ಆಂಧ್ರ, ಬಿಹಾರ, ಛತ್ತೀಸ್‌ಗಢ, ಬಂಗಾಲ ರಾಜ್ಯಗಳಿಗೆ ಹೋಲಿಸಿದರೆ ಸದ್ಯಕ್ಕೆ ಅಷ್ಟೊಂದು ತೀವ್ರವಾಗಿಲ್ಲ, ಬಹಳ ಮುಖ್ಯವಾಗಿ ಆ ಮಟ್ಟದ ರಕ್ತಪಾತವಾಗುವ ಸನ್ನಿವೇಶ ಉಂಟಾಗದಂತೆ ನೋಡಿಕೊಳ್ಳಬೇಕಾದ ಹೊಣೆಯು ಸರ್ಕಾರ ಹಾಗೂ ನಕ್ಸಲರು ಸೇರಿದಂತೆ ನಾಗರಿಕ ಸಮಾಜದ ಮೇಲೂ ಇದೆ ಎಂದು ನಮಗನಿಸುತ್ತಿದೆ.

ಇದಾಗಬೇಕೆಂದರೆ....


ಸರ್ಕಾರ ಇದಕ್ಕೆ ಪೂರಕವಾದ ವಾತಾವರಣ ನಿರ್ಮಿಸಬೇಕು. ಹಾಗೆಯೇ ನಕ್ಸಲೀಯರೂ ಸಹ ತಮ್ಮ ಹೋರಾಟದ ಮಾರ್ಗ ಹಾಗೂ ಕಾರ್ಯವಿಧಾನಗಳ ಬಗ್ಗೆ ಪುನರ್ ಪರಿಶೀಲನೆ ಮಾಡಿಕೊಂಡರೆ ಇನ್ನೂ ಉತ್ತಮ.

ಈ ಜುಲೈ ತಿಂಗಳಲ್ಲೇ ಮಲೆನಾಡಿನಿಂದ ನಕ್ಸಲೀಯರ ಎರಡು ಹೇಳಿಕೆಗಳು ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ.

ಒಂದು, ಪೊಲೀಸ್ ಇನ್‌ಫಾರ್ಮರ್‌ಗಳಿಗೆ ಶಿಕ್ಷೆ ವಿಧಿಸುವ ವಾರ್ನಿಂಗ್ ಕೊಟ್ಟಿರುವ ಹೇಳಿಕೆಯಾದರೆ ಇನ್ನೊಂದು ಆದಿವಾಸಿಗಳನ್ನು ಒಕ್ಕಲೆಬ್ಬಿಸುವ ಗ್ರೇಟರ್ ಕಾವೇರಿ ವನ್ಯಧಾಮ ಯೋಜನೆಯನ್ನು ವಿರೋಧಿಸುವ ಹೇಳಿಕೆ.

ಇದು ಮಲೆನಾಡಿನಲ್ಲಿ ಕೆಲ ಪ್ರದೇಶಗಳ ಮೇಲೆ ಹತೋಟಿ ಸಾಧಿಸಲು ನಕ್ಸಲರು ಹಾಗೂ ಪೊಲೀಸರು ನಡೆಸುತ್ತಿರುವ ಪ್ರಯತ್ನಗಳನ್ನು ಬಿಂಬಿಸುವಂತಿವೆ. ಅಲ್ಲಿ ಹೋರಾಟ ಶುರುವಾಗಿ ಹದಿಮೂರು ವರ್ಷಗಳಾಗುತ್ತಾ ಬಂತು. ನಕ್ಸಲರು ತಮ್ಮಗುರಿ ಹಾಗೂ ಸಾಧನೆಗಳ ಕುರಿತೊಮ್ಮೆ ಚೆಕ್ ಮಾಡಿ ನೋಡಿಕೊಳ್ಳಲು ಇದು ಸರಿಯಾದ ಸಮಯ ಅನಿಸುತ್ತದೆ.

ವಿವಿಧ ವನ್ಯಜೀವಿ ಕಾಯ್ದೆಯಡಿ ಅಲ್ಲಿನ ಜನರನ್ನು ಒಕ್ಕಲೆಬ್ಬಿಸುವ ಸರ್ಕಾರದ ದುಷ್ಟ ಯೋಜನೆಗಳು ನಿಂತಿದ್ದೇ ಅಲ್ಲಿಗೆ ನಕ್ಸಲೀಯರು ಬಂದೂಕಿನೊಂದಿಗೆ ಕಾಲಿಟ್ಟಾಗ. ಜೊತೆಗೆ 2006ರ ಅರಣ್ಯ ಸಂರಕ್ಷಣಾ ಕಾಯ್ದೆಯೂ ಕಾಡಿನೊಳಗೆ ವಾಸವಿರುವ ಲಕ್ಷಾಂತರ ಜನರ ಬದುಕು ಅತಂತ್ರವಾಗುವುದನ್ನು ತಪ್ಪಿಸಿತ್ತು. ಆ ಹಂತದವರೆಗಿನ ನಕ್ಸಲೀಯರ ಹೋರಾಟ ಜನರ ಪರವಾಗಿಯೂ ನ್ಯಾಯೋಚಿತವಾಗಿಯೂ ಇತ್ತು. ಆದರೆ ಇಲ್ಲಿನ ಸಮಸ್ಯೆ ಏನೆಂದರೆ ಜನರ ಎಲ್ಲಾ ಸಮಸ್ಯೆಗಳಿಗೂ ಸಶಸ್ತ್ರ ಹೋರಾಟವೊಂದೇ ಪರಿಹಾರವಾಗಲು ಸಾಧ್ಯವಿಲ್ಲ. ಉದಾಹರಣೆಗೆ ಒಂದು ರಸ್ತೆಯೋ, ಶಾಲೆ, ಆಸ್ಪತ್ರೆಯೋ ಬೇಕೆಂದು ಜನ ಬಂದೂಕು ಹಿಡಿದು ಪ್ರಾಣತ್ಯಾಗ ಮಾಡಬೇಕಾದ ಅನಿವಾರ್ಯತೆ ಇದೆ ಎಂದರೆ ಯಾರೂ ಅದನ್ನು ನಂಬಲಾರರು.



ನಕ್ಸಲರೊಂದಿಗೆ ಈ ಹಿಂದೆ ಖುದ್ದಾಗಿ ಮಾತನಾಡಿರುವ ನಾನು ಅವರ ಸಿದ್ಧಾಂತಗಳನ್ನು ನಿರೂಪಿಸುವ ಬರಹಗಳನ್ನು ಓದಿದ್ದೇನೆ. ಅದರಲ್ಲಿ ನನಗೆ ಜನವಿರೋಧಿಯಾಗಿರುವ ಅಂಶಗಳೇನೂ ಕಂಡಿಲ್ಲ.

ಆದರೆ

Form of struggle ವಿಚಾರ ಬಂದಾಗ ತರಹೇವಾರಿ ಸಮಸ್ಯೆಗಳು ಶುರುವಾಗುತ್ತವೆ.

'ನಕ್ಸಲ್ಬಾರಿ ಏಕಿ ರಾಸ್ತಾ' ಅಂದುಕೊಳ್ಳುವವರು, **'Power flows through the barrel of a gun`** ಅಂತಾ ಹೊರಡುವವರು ಆಯಾ ಸಮಾಜದ, ಜನ ಸಮೂಹಗಳ ಮನಃಸ್ಥಿತಿಯನ್ನು ಚೆನ್ನಾಗಿ ಅರಿತಿರಬೇಕಾಗುತ್ತದೆ. ನಕ್ಸಲರ ಪರಿಭಾಷೆಯಲ್ಲಿ ಇದನ್ನೂ **objective & subjective conditions** ಎಂದು ಅರ್ಥೈಸುತ್ತಾರೆ.

ನಮ್ಮ ಮನೋಭೂಮಿಕೆಯನ್ನು ಸಮಾಜದ ಮೇಲೆ ಹೇರುವುದಾಗಲಿ ಅಥವಾ ತಕ್ಷಣದಲ್ಲಿ ಸಮಾಜದಲ್ಲಿ ಗೋಚರಿಸದ ಸಶಸ್ತ್ರ ಬಂಡಾಯದ ಇರಾದೆಯನ್ನು ತಾನೇ ಆರೋಪಿಸಿಕೊಳ್ಳುವುದರಿಂದಾಗಲಿ ಏನು ಸಾಧಿಸಿದಂತಾಗುತ್ತದೆ.

ಹೋರಾಟಗಳಾಗದೆ ಯಾವ ಸಮಾಜದಲ್ಲಿ ಎಂತಾ ಚಿಕ್ಕ ಬದಲಾವಣೆಗಳೂ ಸಂಭವಿಸುವುದಿಲ್ಲ, ಭಾರತದ ಮಟ್ಟಿಗೆ ಹೇಳಬೇಕೆಂದರೆ ಇಲ್ಲಿನ ಕಮ್ಯೂನಿಸ್ಟರು ಅಪರಿಮಿತ ತ್ಯಾಗ, ಬದ್ಧತೆಗಳನ್ನು ಪ್ರದರ್ಶಿಸಿ ಅಸಂಖ್ಯ ಹೋರಾಟಗಳನ್ನೂ ನಡೆಸಿರುವುದು ನಿಜ. ಆದರೆ ಚಲನಶೀಲವಾದ ಮಾರ್ಕ್ಸಿಸ್ಟ್ ಸಿದ್ಧಾಂತಕ್ಕೆ ದಿನ ಕ್ರಮೇಣ ಇಲ್ಲಿ ಜಡತ್ವ ಆವರಿಸಿಕೊಂಡಿತು.

ಈ ಜಡತ್ವ ಮಾರ್ಕ್ಸಿಸ್ಟ್ ಸಿದ್ಧಾಂತವನ್ನು ಕಟ್ಟಿ ಬೆಳೆಸುವುದರಿಂದ ಹಿಡಿದು ಅದರ ಆಚರಣೆ, ಕಾರ್ಯಕರ್ತರಿಗೆ ಸೈದ್ಧಾಂತಿಕ ತರಬೇತಿ ನೀಡುವ ಹಾಗೂ ಹೋರಾಟಗಳ ನೀರಸ ಪ್ರದರ್ಶನಗಳಲೆಲ್ಲ ಕಾಣುತ್ತಿತ್ತು.

ಈ ಜಡತ್ವದಿಂದ ಹತಾಶೆಗೊಂಡ ಕ್ರಾಂತಿಕಾರಿಗಳೇ ಸ್ಫೋಟಗೊಂಡಂತೆ ಸಿಡಿದು ಹೊರಬಂದು ನಕ್ಸಲ್ ಸಶಸ್ತ್ರ ಹೋರಾಟಕ್ಕೆ ಚಾಲನೆ ಕೊಟ್ಟರು. ಇದು ಇಂಡಿಯಾದಾದ್ಯಂತ ಹೊಸ ಸಂಚಲನ ಸೃಷ್ಟಿಸಿತು. ಕೊನೆಗಾಣದ ಹೊಸ ರಾಜಕೀಯ ಚರ್ಚೆಗಳನ್ನು ಹುಟ್ಟು ಹಾಕಿತು. ಇಲ್ಲಿ ಸ್ಯಾಂಪಲ್‌ಗಾಗಿ ನಿಮಗೊಂದು ಉದಾಹರಣೆ ನೀಡುತ್ತೇನೆ.

ಭಾರತದಲ್ಲಿ ಕ್ರಾಂತಿ ಸಾಧಿಸಲು ಮೊದಲು ಯಾರನ್ನು ಬಗ್ಗು ಬಡಿಯಬೇಕೆಂಬ ಒಂದು ವಿವಾದ ನಕ್ಸಲ್ ಗುಂಪುಗಳಲ್ಲಾಗಿವೆ.

- ಅರೆ ಊಳಿಗ ಮಾನ್ಯತೆ (Semi Fendalism)
- ಸಾಮ್ರಾಜ್ಯಶಾಹಿ (Imperialism)
- ದಲ್ಲಾಳಿ ಬಂಡವಾಳಶಾಹಿ (Comproder bourgeoisis)
- ಹೀಗೆ ಅನೇಕ ಪಾಲಿಮಿಕ್ಸ್‌ಗಳಿವೆ... ಈಗಲೂ!

ಇವೆಲ್ಲಾ ಚರ್ಚಿಸಬೇಕಾದ, ಖಚಿತಗೊಳ್ಳಬೇಕಾದ ವಿಚಾರಗಳೇ ಸರಿ. ಆದರೆ ಕಳೆದೆರಡು ದಶಕದಲ್ಲಿ ಇಂಡಿಯಾದ ಸಾಮಾಜಿಕ- ಆರ್ಥಿಕ ಚಲನೆಯ ದಿಕ್ಕುಗಳೇ ಬದಲಾಗಿವೆ. ಬಹುಸಂಖ್ಯಾತ ಜನತೆಯ ಗಮನವೀಗ ಹಣ ಸಂಪಾದನೆಯತ್ತ ಹರಿಯುತ್ತಿದೆ. ಅಷ್ಟರಮಟ್ಟಿಗೆ ಹಣವೂ ಹರಿದಾಡುತ್ತಿದೆ. ಹಾಗೆಂದು ಸಮಸ್ಯೆಗಳೇನೂ ಇಲ್ಲ ಎಂದಲ್ಲ, ಈ ಹೊಸ ಅರ್ಥ ವ್ಯವಸ್ಥೆಯೊಳಗೆ ಸೇರಲಾಗದ ಕೋಟಿಗಟ್ಟಲೆ ಜನ ಈಗಲೂ ಇದ್ದಾರೆ. ಜೊತೆಗೆ ಶೋಷಣೆಯ ಸ್ವರೂಪವೂ ಬದಲಾಗುತ್ತಿದೆ. ಇಂತಾ ಜನಸಮೂಹವನ್ನು ಒಳಗೊಳ್ಳುವ ಹೊಸ ಹೋರಾಟಗಳ ಜರೂರತ್ತು ಹಿಂದೆಂದಿಗಿಂತಲೂ ಈಗ ಹೆಚ್ಚಾಗಿದೆ.

ಆದರೆ ಹೋರಾಟದ ಸ್ವರೂಪ..

- ಈ ತಕ್ಷಣದಲ್ಲಿ ಅಂತಾ ಹೋರಾಟಗಳ ಸ್ವರೂಪವೇನಾಗಿರಬೇಕೆಂಬುದೇ ಈಗಿನ ಪ್ರಶ್ನೆ. ನ್ಯಾಯಯುತ ಸಮಾಜವನ್ನು ಕನಸುವ ಜನ ಇದನ್ನು ಗಂಭೀರವಾಗಿ ಯೋಚಿಸಬೇಕಿದೆ. ಈಗ ಲಭ್ಯವಿರುವ ಅವಕಾಶಗಳನ್ನೆಲ್ಲಾ ಬಳಸಿಕೊಂಡರೆ ಜನರ ಸಮಸ್ಯೆಗಳನ್ನು ಮುನ್ನೆಲೆಗೆ ತರುವ ಸಾಧ್ಯತೆಗಳಂತೂ ಇವೆ.

ಒಂದು ಸಶಸ್ತ್ರ ಹೋರಾಟವು ಮಾಡಬಹುದಾದ ಪರಿಣಾಮಗಳನ್ನು ಕಾನೂನಿನ ಚೌಕಟ್ಟಿನಲ್ಲೇ ಕಾಣಿಸಲು ಯತ್ನಿಸುವುದಾದರೆ ಬಾಧಿತ ಜನತೆ ಲಕ್ಷಾಂತರ ಸಂಖ್ಯೆಯಲ್ಲಿ ಪಾಲ್ಗೊಳ್ಳಲು ಹಿಂಜರಿಯಲಾರರು.

ಇದನ್ನು ಸಾಧಿಸಬೇಕೆಂದರೂ ಅದಕ್ಕೆ ನೂರಾರು ಕಮಿಟೆಡ್ ಕಾರ್ಯಕರ್ತರು ಬೇಕಾಗುತ್ತಾರೆ. ಸ್ವಾರ್ಥಿಗಳಲ್ಲದ ಭ್ರಷ್ಟರೂ ಅಲ್ಲದ ನಕ್ಸಲ್ ಕಾರ್ಯಕರ್ತರು ತಮ್ಮ ಕಾಡಿನ ಭೂಗತ ಜೀವನ ತೊರೆದು ಮುಖ್ಯವಾಹಿನಿಗೆ ಬಂದು ಅದೇ ಹೋರಾಟವನ್ನು ಇಲ್ಲಿಯೇ ಮುನ್ನಡೆಸುವುದಾದರೆ ಕರ್ನಾಟಕದಲ್ಲಿ ಅನೇಕ ಹೊಸ ಸಾಧ್ಯತೆಗಳು ತೆರೆದುಕೊಳ್ಳಬಹುದು.

ನಕ್ಸಲೀಯರ ಸಶಸ್ತ್ರ ಹೋರಾಟದ ಇತಿಹಾಸದಲ್ಲಿ **'Arms Struggle suspend'** ಮಾಡಿರುವ ಅರ್ಥಾತ್ ಬಂದೂಕಿಗೆ ಕೆಲಕಾಲ ವಿಶ್ರಾಂತಿ ನೀಡಿ ಸಮೂಹ ಚಳವಳಿಗಳಲ್ಲಿ ತೊಡಗಿಸಿಕೊಂಡ ಅನೇಕ ಉದಾಹರಣೆಗಳಿವೆ. ಅಂತಾ ಹೋರಾಟಗಳಿಂದ ಸಮಾಜಕ್ಕೆ ಒಳಿತಾದದ್ದೂ ಇದೆ.

ಕರ್ನಾಟಕದ ನಕ್ಸಲರು ಈ ಕುರಿತು ಗಂಭೀರವಾಗಿ ಯೋಚಿಸಲಿ, ಇಂದು ನಾಡಿನ ಜನತೆಗೆ ನಕ್ಸಲರ ಬದ್ಧತೆ, ಸ್ಪಷ್ಟತೆ ಇರುವಂಥಾ, ಆದರೆ ಸಶಸ್ತ್ರ ಹೋರಾಟದ ಹಠವಿಲ್ಲದ ನಾಯಕತ್ವದ ಅಗತ್ಯ ಹಿಂದೆಂದಿಗಿಂತಲೂ ಹೆಚ್ಚಿದೆ. ಬೀದಿಗಳಲ್ಲಿ ಮೆರವಣಿಗೆ ಇಲ್ಲದೆ, ಘೋಷಣೆಯಲ್ಲಿ ಕಸುವಿಲ್ಲದೆ ಇರುವ ಈ ಹೊತ್ತಿನಲ್ಲಿ ಬದ್ಧತೆಯುಳ್ಳ ಹೋರಾಟಗಾರರು ತಮ್ಮದೇ ಹಠಕ್ಕೆ, ಸರ್ಕಾರದ ದಮನಕ್ಕೆ ಬಲಿಯಾಗುವ ವಿಪರ್ಯಾಸ ನಿಲ್ಲಬೇಕು.

ಕಾಡಿನಲ್ಲಿರುವವರು ಹಾಗೂ ಅಲ್ಲಿಂದ ಹೊರಬಂದಿರುವವರೆಲ್ಲರೂ ಕರ್ನಾಟಕದ ಈಗಿನ ವಾಸ್ತವವನ್ನು ಗ್ರಹಿಸಿ ಹಾಗೂ ನಾಳಿನ ಅಗತ್ಯಗಳನ್ನು ಪರಿಗಣಿಸಿ ಮುಖ್ಯವಾಹಿನಿಯಲ್ಲಿ ಕಾಣಿಸಿಕೊಳ್ಳುವ ಬಗ್ಗೆ ಯೋಚಿಸಲಿ.

ಇದರರ್ಥ...

ಶರಣಾಗತಿ ಎಂದೇನಲ್ಲ.

- ತಮ್ಮ ಘನತೆ, ಹೋರಾಟದ ಬದ್ಧತೆ **intersity**ಗಳನ್ನೆಲ್ಲಾ ಬಲಿಕೊಟ್ಟು ಸರ್ಕಾರದ ಕೃಪಾಕಟಾಕ್ಷಕ್ಕಾಗಿ ಕೈಯೊಡ್ಡುವುದೂ ಅಲ್ಲ.

ಸರ್ಕಾರವೂ ಈ ಬಗ್ಗೆ ಸಂದರ್ಭಾನುಸಾರ ಸೆನ್ಸಿಟಿವ್ ಆಗಿ ನಡೆದುಕೊಳ್ಳುತ್ತದೆಂದು ನಾವೆಲ್ಲಾ ನಿರೀಕ್ಷಿಸೋಣ.

ದಮನ ಇಲ್ಲವೆ ಶರಣಾಗತಿ ಎಂಬ ಎರಡೇ ಆಯ್ಕೆಯನ್ನು ಬಿಟ್ಟು ಇನ್ನಿತರ ಸಾಧ್ಯತೆಗಳತ್ತಲೂ ಸರ್ಕಾರ ಯೋಚಿಸುವ ಅಗತ್ಯವಿದೆ.

ಕಾಡಿನಲ್ಲಿರುವವರ ಕೈಯಲ್ಲಿ ಬಂದೂಕಿದೆ ಎಂಬುದು ನಿಜ. ಆದರೆ ಅಂತವೇ 88 ಸಾವಿರ ಬಂದೂಕುಗಳು ನಾಡಿನಲ್ಲಿರುವ ಜನರ ಹತ್ತಿರವೂ ಇವೆ. ಇವೆಲ್ಲಾ ತಮ್ಮ ಆಸ್ತಿ ಹಾಗೂ ಆತ್ಮರಕ್ಷಣೆಗಾಗಿ ಶ್ರೀಮಂತರು ಇಟ್ಟುಕೊಂಡಿರುವ ಪರವಾನಗಿ ಪಡೆದ ಗನ್ನುಗಳಾಗಿವೆ.

ನಕ್ಸಲರ ಜೊತೆಗಿರುವ ಬಡಜನರ ಹತ್ತಿರ ಆಸ್ತಿ ಇಲ್ಲ ನಿಜ, ಆದರೆ ಆತ್ಮವಾದರೂ ಇರುತ್ತದಲ್ಲ, ಹಾಗಾಗಿ ಅಂತವರು ತಮ್ಮ ಆತ್ಮರಕ್ಷಣೆಗಾಗಿ ಯಾಕೆ ಬಂದೂಕನ್ನು ಕೈಗೆತ್ತಿಕೊಳ್ಳಬೇಕಾಗಿಬಂತೆಂದು ಸರ್ಕಾರ ನಡೆಸುವವರು ಯೋಚಿಸಲಿ.

ಕರ್ನಾಟಕದಲ್ಲಿ ಇದುರೆವರೆವಿಗೂ ನಡೆದುಹೋಗಿರುವ ರಕ್ತಪಾತದ ಕತೆ ಯಾತನಾಮಯವಾಗಿದೆ. ಸಾವು ಯಾರದ್ದೇ ಆಗಿರಲಿ ಅವು ಈ ಸಮಾಜದೊಳಗಿನ ಕ್ಷೋಭೆಗೆ ಹಿಡಿದ ಕನ್ನಡಿಯೇ ಹೌದು. ಇವು ಮತ್ತೂ ಮುಂದುವರೆಯದಂತೆ ತಡೆಯುವ ಪ್ರಯತ್ನ ಆಗಲೇಬೇಕಿದೆ.

ಅಂತಾದ್ದೊಂದು ಮನವಿಯನ್ನು ನಾಗರಿಕ ಸಮಾಜದ ಪರವಾಗಿ ಮಾಡುವ ನಮ್ಮ ಪ್ರಯತ್ನಕ್ಕೆ ಇನ್ನೇನು ಚಾಲನೆ ಸಿಗಲಿದೆ.

ಪ್ರಿಯ ಓದುಗರೆ...

ನೀವು ಈ ನಾಡಿನ ಯಾವುದೇ ಭಾಗದಲ್ಲಿರಲಿ, ಇಂಥದ್ದೊಂದು ಪ್ರಯತ್ನದ ದನಿ ಕೇಳಿ ಬಂದಾಗ ಅದಕ್ಕೆ ನಿಮ್ಮ ದನಿಯನ್ನೂ ಸೇರಿಸುವಿರಾ...?

ನಿಜ ನುಡಿದ ಅಮಾರ್ತ್ಯ ಸೇನ್‌ಗೆ ಧಿಕ್ಕಾರವೇ...!

ಕಂಡಹಾಗೆ



• ಗೌರಿ ಲಂಕೇಶ್
ಪ್ರಧಾನ ಸಂಪಾದಕಿ
editorlankesh@gmail.com

ಕೇಳಿದ ವಾರವೇ ನರಹಂತಕ ನರೇಂದ್ರ ಮೋದಿ ..ಗ್ಗೆ ಬರೆದಿದ್ದರಿಂದ ಈ ವಾರವೂ ಆತನ ಬಗ್ಗೆ ..ರೆಯಬೇಕಾಗಿ ಬಂದಿರುವುದು ಬೇಸರ ಮೂಡಿಸುತ್ತಿದೆ. ..ದರೆ ಈಗಿನ ಪರಿಸ್ಥಿತಿ ಹೇಗಿದೆ ಎಂದರೆ ಮೋದಿಯನ್ನು ..ಟೀಕಿಸುವುದೇ ಅಪರಾಧವೆಂಬಂತೆ, ಅಭಿವೃದ್ಧಿಯನ್ನು ..ರೋಧಿಸಿದಂತೆ, ಭಾರತಕ್ಕೇ ದ್ರೋಹ ಬಗೆದಂತೆ ಎಂಬ ..ತಾವರಣವನ್ನು ಮೋದಿಯ ಅಂಧ ಅಭಿಮಾನಿಗಳು ..ಷ್ಟಿಸಿದ್ದಾರೆ. ಮೋದಿಯ ಕುರುಡು ಅಭಿಮಾನಿಗಳ ..ಕ್ರೋಶಕ್ಕೆ ಮೊನ್ನೆ ಗುರಿಯಾಗಿರುವವರು ಬೇರೆ ಯಾರೂ ..ಲ್ಲ ನೋಬಲ್ ಪ್ರಶಸ್ತಿ ವಿಜೇತ ಅರ್ಥಶಾಸ್ತ್ರಜ್ಞ ಅಮಾರ್ತ್ಯ ..ನ್.

ಸಿಎನ್‌ಎನ್, ಐಬಿಎನ್ ಟಿವಿ ಚಾನೆಲ್‌ನವರು ಕೇಳಿದ ..ಶ್ನೆಗಳಿಗೆ ಉತ್ತರಿಸುತ್ತಾ ಸೇನ್ ಅವರು "ಓರ್ವ ..ರತೀಯನಾಗಿ ನಾನು ನರೇಂದ್ರ ಮೋದಿ ಪ್ರಧಾನಿ ..ಗುವುದನ್ನು ಇಷ್ಟಪಡುವುದಿಲ್ಲ, ಅದಕ್ಕೆ ಕಾರಣ 2002ರಲ್ಲಿ ..ದೆದ ಹತ್ಯಾಕಾಂಡದಲ್ಲಿ ಆತ ಅಲ್ಪಸಂಖ್ಯಾತರಲ್ಲಿ ..ಮೂಡಿಸಿರುವ ಅಭದ್ರ ಭಾವನೆ. ಆತನ ಅಭಿವೃದ್ಧಿ ..ಮಾದರಿಯ ಬಗ್ಗೆಯೂ ನನಗೆ ತಕರಾರುಗಳಿವೆ. ಗುಜರಾತಿನ ..ಕ್ಷಣ ಮತ್ತು ಆರೋಗ್ಯ ಸೂಚ್ಯಂಕಗಳು ತಳಮುಟ್ಟಿದ್ದರೂ ..ಮೋದಿ ಕಟ್ಟಡಗಳ ನಿರ್ಮಾಣಕ್ಕೆ ಹೆಚ್ಚು ಒತ್ತು ..ನೀಡುತ್ತಿರುವುದು ನನ್ನ ಪ್ರಕಾರ ಸೂಕ್ತ ಅಭಿವೃದ್ಧಿ ..ಮಾದರಿಯಲ್ಲ" ಎಂದು ಸೇನ್ ಹೇಳಿದರು.

..ಚೆಡ್ಡಿಗಳಿಗೆ ಅಷ್ಟೇ ಸಾಕಿತ್ತು. ಅವರೆಲ್ಲ ಸೇನ್ ಮೇಲೆ ..ಗ ಚೀರಿಕೊಂಡು ಬಿದ್ದಿದ್ದಾರೆ. ಅದರಲ್ಲೂ ಈಗ ..ದಂತಾಗಿರುವ ಜನತಾ ಪಕ್ಷಕ್ಕೆ ಅಂತ್ಯ ಸಂಸ್ಕಾರಗಳನ್ನು ..ಡಿ ಬಿಜೆಪಿಯಲ್ಲಿ ರಾಜಕೀಯ ಆಶ್ರಯ ಪಡೆಯಲು ..ಚಣಿಸುತ್ತಿರುವ ಸುಬ್ರಹ್ಮಣ್ಯ ಸ್ವಾಮಿ ಎಂಬ ವಿದೂಷಕ ..ನ್ ಅವರ ವಿರುದ್ಧ ಕೆಂಡ ಕಾರಿದ್ದಾನೆ. ಕುತಂತ್ರಿ ..ಹ್ಮಣನೂ, ಕೋಮುವಾದಿಯೂ ಆಗಿರುವ ಸುಬ್ರಹ್ಮಣ್ಯ ..ಮಿ "ಅಮಾರ್ತ್ಯ ಸೇನ್ ಭಾರತೀಯನೇ ಅಲ್ಲ. ಆತ ..ಮು ತನ್ನ ಬೆಂಗಾಳಿ ಹೆಂಡತಿಯನ್ನು ಬಿಟ್ಟು ಇಬ್ಬರು ..ದೇಶಿ ಮಹಿಳೆಯರನ್ನು ಮದುವೆಯಾದರೋ ಆಗಿನಿಂದಲೇ ..ರು ಭಾರತೀಯತೆಯನ್ನು ಕಳೆದುಕೊಂಡರು" ಎಂದಿದ್ದಾನೆ. ..ಸುಬ್ರಹ್ಮಣ್ಯ ಸ್ವಾಮಿ ಯಾರೋ ಅಬ್ಬೆಪಾರಿಯಲ್ಲ, ..ಪ್ರತಿಷ್ಠಿತ ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ಪಾಠ ..ಹೇಳಿಕೊಡುತ್ತಿದ್ದಾತ. (ಈತ ಮುಸಲ್ಮಾನರನ್ನು ಎರಡನೆ ..ರ್ಜೆ ಪ್ರಜೆಗಳು ಎಂದು ಬೈದು ಲೇಖನವೊಂದನ್ನು ..ಬರೆದಿದ್ದರಿಂದಾಗಿ ಹಾರ್ವರ್ಡ್ ಈತನಿಗೆ ಕಳೆದ ವರ್ಷ ..ಗೇಟ್‌ಪಾಸ್ ಕೊಟ್ಟಿತ್ತು)

..ಸುಬ್ರಹ್ಮಣ್ಯ ಸ್ವಾಮಿಯಷ್ಟೇ ಹೀನಬುದ್ಧಿ ಮೋದಿ ..ಅಭಿಮಾನಿಗಳದಾದ್ದರಿಂದ ಈಗ ಅವರೆಲ್ಲರೂ ..ಇಂಟರ್‌ನೆಟ್‌ನ ವಿವಿಧ ತಾಣಗಳಲ್ಲಿ ಸೇನ್ ಅವರ ಮೂರು ..ಮದುವೆಗಳನ್ನು ಜಾಲಾಡುತ್ತಿದ್ದಾರೆ. ಅಷ್ಟೇ ಅಲ್ಲ, ಹೀಗೆ ..ಮೂವರು ಮಹಿಳೆಯರನ್ನು ಮದುವೆಯಾಗಿರುವ ಸೇನ್ ..ರಿಗೆ ಮೋದಿಯ ಬಗ್ಗೆ ಮಾತನಾಡುವ ನೈತಿಕ ಹಕ್ಕಿಲ್ಲ ..ಎಂದು ಚೀರಾಡುತ್ತಿದ್ದಾರೆ. (ಅವರೆಲ್ಲರಿಗೂ ಇಲ್ಲಿ ಒಂದೆರಡು ..ಪ್ರಶ್ನೆಯು ಪ್ರಶ್ನೆ: ಸೇನ್ ಅವರ ಮೂರು ವಿವಾಹಗಳು ..ಇರಲಿ, ಸ್ವತಃ ಮೋದಿ ತಾನು ಕೈಹಿಡಿದ ಮಡದಿಗೆ ..ಒಂದು ಬಾಳ್ವೆ ಕೊಡದೆ ಆಕೆಯನ್ನು ಮನೆಯಿಂದ ..ಹೊರಗಟ್ಟಿದ್ದು ಸರಿಯೇ? ಆಕೆಯನ್ನು ಸಂದರ್ಶಿಸಲು ..ಹೋಗುವ ಪತ್ರಕರ್ತರಿಗೆ ಧಮಕಿ ಹಾಕುವುದು ಸರಿಯೇ? ..ಹೆಂಡತಿಯನ್ನು ನೋಡಿಕೊಳ್ಳಲಾಗದವನು ದೇಶವನ್ನು ಹೇಗೆ ..ಉದ್ಧಾರ ಮಾಡಿಯಾನು?!)

..ಈಗ ಮೋದಿಯ ಅಭಿಮಾನಿಗಳು ಇಂಟರ್‌ನೆಟ್‌ನಲ್ಲಿ ..ಅವರನ್ನು 'ಮುದಿ ಗೂಬೆ', 'ಭ್ರಷ್ಟ ಮಾರ್ಕ್ಸ್‌ವಾದಿ', ..ಬುದ್ಧಿಜೀವಿ' ಎಂದೆಲ್ಲ ಖಂಡಿಸುತ್ತಿದ್ದಾರೆ.

ಚೆಡ್ಡಿಗಳ ಬೆಂಬಲದಿಂದಾಗಿ ರಾಜ್ಯಸಭಾ ಸದಸ್ಯನಾಗಿದ್ದ ಚಂದನ್ ಮಿತ್ರಾ ಎಂಬ ಪತ್ರಕರ್ತ "ಮುಂದಿನ ಎನ್‌ಡಿಎ ಸರ್ಕಾರ ಸೇನ್‌ಗೆ ನೀಡಿರುವ ಭಾರತರತ್ನ ಪ್ರಶಸ್ತಿಯನ್ನು ಹಿಂದೆ ಪಡೆಯಬೇಕು" ಎಂದು ಆಗ್ರಹಿಸಿದ್ದಾನೆ. ಇದನ್ನೆಲ್ಲ ನೋಡಿ ಸಂದೀಪ್ ರಾಯ್ ಎಂಬುವವರು "ಓರ್ವ ವ್ಯಕ್ತಿ ಮೂರು ಬಾರಿ ಮದುವೆಯಾಗುವುದಕ್ಕೂ ರಾಜಕೀಯ ಅಭಿಪ್ರಾಯವನ್ನು ಹೊಂದಿರುವುದಕ್ಕೂ ಎತ್ತಿಂದೆತ್ತಣ ಸಂಬಂಧ? ಮೋದಿ ಅಭಿಮಾನಿಗಳ ಪ್ರಕಾರ ಹಲವು ಬಾರಿ ಮದುವೆಯಾದವರು ಸ್ವಂತ ಅಭಿಪ್ರಾಯವನ್ನು ವ್ಯಕ್ತಪಡಿಸುವ ಹಕ್ಕನ್ನು ಹೊಂದಿರುವುದಿಲ್ಲವೇ? ಇವರೆಲ್ಲ ಯಾಕೆ ಮೋದಿ ವಿರುದ್ಧ ಮಾತನಾಡುವುದನ್ನೇ ಭಾರತದ ವಿರುದ್ಧ ದನಿ ಎತ್ತಿದಂತೆ ಎಂದು ವರ್ತಿಸುತ್ತಿದ್ದಾರೆ? ರತನ್ ಟಾಟಾ ಎಂಬ ಉದ್ಯಮಿ 'ಮೋದಿ ಭಾರತದ ಪ್ರಧಾನಿ ಆಗಲು ಸೂಕ್ತ' ಎಂದು ಹೇಳಿದಂತೆ ಇವತ್ತು ಸೇನ್ ಅವರು 'ಮೋದಿ ಸೂಕ್ತ ವ್ಯಕ್ತಿ ಅಲ್ಲ' ಎಂದಿದ್ದಾರಷ್ಟೇ. ಟಾಟಾನಂತೆ ಸೇನ್ ಕೂಡ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರಷ್ಟೇ. ಇದಕ್ಕೆ ಬಂದಿರುವ ಪ್ರತಿಕ್ರಿಯೆಯಲ್ಲಿ ಎಪ್ಪತ್ತು ವರ್ಷ ವಯಸ್ಸು ದಾಟಿರುವ ವ್ಯಕ್ತಿಯ ಖಾಸಗಿ ಬದುಕು ಮುಖ್ಯವಾಗಿರುವುದರಿಂದ ಜಾತ್ಯತೀತತೆ ಮತ್ತು ಅಭಿವೃದ್ಧಿ ಮಾದರಿ ಎಂಬ ಗಹನವಾದ ವಿಷಯಗಳನ್ನು ಕುರಿತ ಚರ್ಚೆಗೆ ಈ ಗದ್ದಲದಲ್ಲಿ ಅವಕಾಶವೇ ಇಲ್ಲದಂತಾಗಿದೆ" ಎಂದು ವಿಷಾದಿಸಿದ್ದಾರೆ.

* * *


ಮುಂದಿನ ಭಾರತದ ಪ್ರಧಾನಿ ಆಗುವ ಮಹತ್ವಾಕಾಂಕ್ಷೆಯನ್ನು ಹೊಂದಿರುವ ಮೋದಿ ಈಗ ತನ್ನ ಪ್ರಚಾರಕ್ಕಾಗಿ ಜಾಹೀರಾತು ಕಂಪನಿಗಳಿಗೆ ಕರೆ ಕೊಟ್ಟಿದ್ದಾನೆ. 'ಓಪನ್' ಎಂಬ ಪತ್ರಿಕೆಯ ವರದಿ ಪ್ರಕಾರ ಇಲ್ಲಿಯತನಕ ಮೋದಿ ಮತ್ತು ಆತನ ಸಾಧನೆ ಬಗ್ಗೆ ಭಾರತದೆಲ್ಲೆಡೆ ಟಾಮ್‌ಟಾಮ್ ಮಾಡಲು ಮ್ಯೂಚುಯಲ್ ಪಿಆರ್ ಎಂಬ ಕಂಪನಿ ಗುಜರಾತ್ ಸರ್ಕಾರದೊಂದಿಗೆ ಕಾಂಟ್ರಾಕ್ಟ್ ಮಾಡಿಕೊಂಡಿತ್ತು. ಆ ಕಾಂಟ್ರಾಕ್ಟ್‌ನಂತೆ ಆ ಕಂಪನಿಯು ಪ್ರತಿ ತಿಂಗಳಿಗೆ ಐದು ಲಕ್ಷ ರೂಪಾಯಿಗಳನ್ನು ಪಡೆದು ಮೋದಿಯನ್ನು ಮತ್ತು ಆತನ 'ಅಭಿವೃದ್ಧಿ ಮಾದರಿ'ಯನ್ನು ಕುರಿತು ಪತ್ರಿಕೆಗಳಲ್ಲಿ ಮತ್ತು ಟಿವಿ ಚಾನೆಲ್‌ಗಳಲ್ಲಿ ವರದಿಗಳು ಪ್ರಕಟವಾಗುವಂತೆ ನೋಡಿಕೊಂಡಿತ್ತು. ಹಾಗೆಯೇ ಆಪ್ಕೊ ಎಂಬ ಅಮೆರಿಕನ್ ಪ್ರಚಾರ ಕಂಪನಿಯು ತಿಂಗಳಿಗೆ 13 ಲಕ್ಷ ರೂಪಾಯಿಗಳನ್ನು ಪಡೆದು ಅಂತರರಾಷ್ಟ್ರೀಯ ಮಟ್ಟದಲ್ಲಿ ಮೋದಿ ಕುರಿತ ವರದಿಗಳು ಪ್ರಕಟಗೊಳ್ಳುವಂತೆ ಮಾಡಿತ್ತು. ಇದೆಲ್ಲದರ ಜೊತೆಗೆ ಪತ್ರಕರ್ತರನ್ನು ಗುಜರಾತಿಗೆ ಕರೆಸಿ, ಅವರಿಗೆ ವಾಹನ, ಉಳಿದುಕೊಳ್ಳಲು ವ್ಯವಸ್ಥೆ ಇತ್ಯಾದಿಗಳನ್ನು ನೀಡಿ ಅವರೆಲ್ಲ ಮೋದಿ ಪರವಾದ ವರದಿಗಳು ಬರೆಯುವಂತೆ ನೋಡಿಕೊಳ್ಳಲಾಗಿತ್ತು. ಇದೆಲ್ಲಕ್ಕೆ ಲಕ್ಷಾಂತರ ರೂಪಾಯಿಗಳು ವೆಚ್ಚವಾಗಿದ್ದವು. ಈ ಎಲ್ಲ ಹಣ ಸಾಮಾನ್ಯ ಗುಜರಾತಿಗಳು ತೆರಿಗೆ ರೂಪದಲ್ಲಿ ಕೊಟ್ಟ ಹಣ ಎಂಬುದನ್ನು ನೆನಪಿಟ್ಟುಕೊಳ್ಳಬೇಕು.


ಈಗ ಈ ಎರಡೂ ಕಂಪನಿಗಳೊಂದಿಗಿನ ಕಾಂಟ್ರಾಕ್ಟ್‌ಗಳು ಅಂತ್ಯಗೊಂಡಿದ್ದು ಗುಜರಾತ್ ಸರ್ಕಾರ ಹೊಸ ಒಪ್ಪಂದಗಳಿಗೆ ಮುಂದಾಗಿದೆ. ಹೊಸದಾಗಿ ಕಾಂಟ್ರಾಕ್ಟ್ ಮಾಡಿಕೊಳ್ಳುವ ಜಾಹೀರಾತು ಕಂಪನಿಯು ಭಾರತದ ಪ್ರಮುಖ ಇಂಗ್ಲಿಷ್ ಪತ್ರಿಕೆಗಳಲ್ಲದೆ ಕನ್ನಡ, ತಮಿಳು, ಒರಿಯಾ, ಬಂಗಾಳಿ ಮತ್ತು ಉರ್ದು ಪತ್ರಿಕೆಗಳಲ್ಲೂ ಮೋದಿ ಪರವಾದ ಲೇಖನಗಳು ಪ್ರಕಟವಾಗುವಂತೆ ನೋಡಿಕೊಳ್ಳಬೇಕೆಂದು ಗುಜರಾತ್ ಸರ್ಕಾರ ಶರತ್ತು ವಿಧಿಸಿದೆ. ಹೀಗೆ ಬರುವ ದಿನಗಳಲ್ಲಿ ಎಲ್ಲೆಡೆ ಮೋದಿಯ 'ಗುಣಗಾಣ' ಸೃಷ್ಟಿಸಲು ಕೋಟ್ಯಾಂತರ ರೂಪಾಯಿಗಳನ್ನು ಮೋದಿ ಸರ್ಕಾರ ತೆಗೆದಿಟ್ಟಿದೆ.

ಇದೆಲ್ಲದರ ಜೊತೆಗೆ ರಮೇಶ್ ಜೈನ್ ಎಂಬ ಮುಂಬೈ ವ್ಯಕ್ತಿ ಮತ್ತು ಬಿ.ಜಿ.ಮಹೇಶ್ ಎಂಬ ಬೆಂಗಳೂರಿಗ ಫೇಸ್‌ಬುಕ್ ಮತ್ತು ಟ್ವಿಟ್ಟರ್ ತರಹ ಸಾಮೂಹಿಕ ಮಾಧ್ಯಮಗಳಲ್ಲಿ ಮೋದಿ ಪ್ರಚಾರವನ್ನು ಶುರುಹಚ್ಚಿಕೊಂಡಿದ್ದಾರೆ. ಒಮ್ಮೆ ಇವರೆಲ್ಲರೂ ಟ್ವಿಟ್ಟರ್‌ನಲ್ಲಿ ಮೋದಿಗೆ ಒಂದು ಕೋಟಿ ತೊಂಭತ್ತು ಲಕ್ಷ 'ಹಿಂಬಾಲಕ'ರಿದ್ದಾರೆಂದೂ, ಬೇರೆ ಯಾವ ರಾಜಕಾರಣಿಯ ಹಿಂದೆಯೂ ಇಂತಹ 'ಪಡೆ' ಇಲ್ಲವೆಂದೂ ಕೊಚ್ಚಿಕೊಂಡಿದ್ದರು. ಆದರೆ ಆನಂತರ ಗೊತ್ತಾಗಿದ್ದೇನೆಂದರೆ ಮೋದಿಯ ಇಮೇಜಿಗೆ ಪಂಪ್ ಹೊಡೆಯಲೆಂದು ಲಕ್ಷಾಂತರ 'ಟ್ವಿಟ್ಟರ್ ಹಿಂಬಾಲಕ'ರನ್ನು ಖೊಟ್ಟಿಯಾಗಿ ಸೃಷ್ಟಿಸಲಾಗಿತ್ತು...

ತನ್ನ ಪ್ರತಿ ಕಣದಲ್ಲೂ ಕೋಮು ವಿಷವನ್ನು ತುಂಬಿಕೊಂಡಿರುವ, ಸಾವಿರಾರು ಅಮಾಯಕ ಜನರ ಸಾವಿಗೆ ಕಾರಣನಾದ, ಸುಳ್ಳು ಅಂಕಿಅಂಶಗಳನ್ನು ನೀಡಿ ಅಭಿವೃದ್ಧಿಯ ಹರಿಕಾರನಂತೆ ಪೋಸು ಕೊಡುವ ಮೋದಿ ಅಕಸ್ಮಾತ್ ಈ ದೇಶದ ಪ್ರಧಾನಿ ಆಗಿಬಿಟ್ಟರೆ ಎಂಬ ಭೀತಿ ಪ್ರಜ್ಞಾವಂತರನ್ನು ಕಾಡುತ್ತಿರುವುದು ನಿಜ. ಇತ್ತೀಚೆಗೆ ಬೆಂಗಳೂರಿಗೆ ಬಂದಿದ್ದ ತೀಸ್ತಾ ಸೆಟಲ್ವಾದ್ ಜೊತೆ ಈ ಭಯವನ್ನು ಹಂಚಿಕೊಂಡೆ. ತೀಸ್ತಾ ಅವರನ್ನೂ ಈ ಪ್ರಶ್ನೆ ಕಾಡುತ್ತಿದೆ. ಆಕೆ ಅವತ್ತು ಹೇಳಿದ್ದು ಇಷ್ಟು: "ಭಾರತೀಯರು ಆಳದಲ್ಲಿ ಜಾತ್ಯತೀತರು. ಆದ್ದರಿಂದ ಬಿಜೆಪಿ ತರಹದ ಕೋಮುವಾದಿ ಪಕ್ಷ ಇತರೆ ಪಕ್ಷಗಳ ನೆರವಿಲ್ಲದೆ ಸ್ವತಂತ್ರವಾಗಿ ಬಹುಮತ ಪಡೆಯುವುದು ಕಷ್ಟ. ಈ ಹಿನ್ನೆಲೆಯಲ್ಲಿ ನೋಡಿದಾಗ ಮೋದಿ ಪ್ರಧಾನಿ ಆಗುವುದು ಸುಲಭವಲ್ಲ ಅನ್ನಿಸುತ್ತೆ. ಆದರೆ ನನ್ನನ್ನು ಕಾಡುತ್ತಿರುವುದು ಈ ದೇಶದ ಯುವಕರು. ಒಂದು ಅಂದಾಜಿನ ಪ್ರಕಾರ 2014ರ ಚುನಾವಣೆಯಲ್ಲಿ ಸುಮಾರು ಹತ್ತು ಕೋಟಿಯಷ್ಟು ಹೊಸ ಮತದಾರರು ಮತ ಚಲಾಯಿಸುವ ಹಕ್ಕನ್ನು ಪಡೆಯಲಿದ್ದಾರೆ. ಇವರೆಲ್ಲ ಯುವಕರು. ಅಷ್ಟಾಗಿ ಸೈದ್ಧಾಂತಿಕ ಗಟ್ಟಿತನವನ್ನು ಹೊಂದಿರದವರು. ಮಾತ್ರವಲ್ಲ, ಅಭಿವೃದ್ಧಿ, ಪ್ರಗತಿ, ಇತ್ಯಾದಿಗಳ ಬಗ್ಗೆ ಸ್ವಂತವಾಗಿ ಯೋಚಿಸುವ ಬದಲಾಗಿ ಫೇಸ್ ಬುಕ್, ಟ್ವಿಟ್ಟರ್ ತರಹದ ಸಾಮೂಹಿಕ ತಾಣಗಳನ್ನೆ ಅವಲಂಬಿಸಿರುವವರು. ಇವರೆಲ್ಲ ಯಾವ ನಿಟ್ಟಿನಲ್ಲಿ ಯೋಚಿಸಿ ಮತಚಲಾಯಿಸುತ್ತಾರೆ ಎಂಬುದೇ ನಮ್ಮ ಮುಂದಿರುವ ಪ್ರಶ್ನೆ. ಒಮ್ಮೊಮ್ಮೆ ಈ ಹತ್ತು ಕೋಟಿ ಹೊಸ ಮತದಾರರ ಬಗ್ಗೆ ಯೋಚಿಸಿದರೆ ಭಯವಾಗುತ್ತೆ."

ಆ ಹತ್ತು ಕೋಟಿ ಯುವಕರಲ್ಲಿ ನಮ್ಮ ಕರ್ನಾಟಕದವರೂ ಲಕ್ಷಾಂತರ ಸಂಖ್ಯೆಯಲ್ಲಿದ್ದಾರೆ. ಮುಂದಿನ ಚುನಾವಣೆಗೆ ಮುನ್ನ ಅವರನ್ನೆಲ್ಲ ಜಾತ್ಯತೀತರನ್ನಾಗಿಸುವ, ಆ ಮೂಲಕ ಮೋದಿಯ ಮಹತ್ವಾಕಾಂಕ್ಷೆಯನ್ನು ಮಣ್ಣುಪಾಲಾಗಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆಯಲ್ಲವೇ? ಇದನ್ನು ಹೇಗೆ ಸಾಧಿಸಬೇಕೆಂದು ಎಲ್ಲರೂ ಯೋಚಿಸಿ ಆದಷ್ಟು ಬೇಗನೆ ಕಾರ್ಯಮುಖರಾಗಬೇಕಿದೆ. ಇಲ್ಲವೆಂದರೆ ಮೋದಿಯ ಹಿಂಬಾಲಕರ ಟ್ವಿಟ್ಟರ್ ಬೊಗಳೆಗಳ ಮಧ್ಯೆ ಯೋಚಿಸುವುದೂ ಕಷ್ಟವಾಗಲಿದೆ... ●





ನಿಟಿ ಸೆಂಟ್ರಲ್ ಎಂಬ ವೆಬ್‌ಸೈಟಿನಲ್ಲಿ ಮೋದಿಯ ಹಿಂ'ಬಾಲ'ಕರು ಸೃಷ್ಟಿಸಿರುವ ಮೋದಿ ಪರವಾದ ಕೆಲವು ಕಾರ್ಟೂನ್‌ಗಳ ಸ್ಯಾಂಪಲ್‌ಗಳು.

ಓದುಗರಲ್ಲಿ ಒಂದು ಮನವಿ...

'ನಮಗೆ ಪತ್ರಿಕೆ ಸರಿಯಾಗಿ ಸಿಗುತ್ತಿಲ್ಲ' ಎಂಬ ಕೆಲ ಓದುಗರ ಆಕ್ಷೇಪಗಳು ಆಗಾಗ್ಗೆ ನಮ್ಮ ಕಚೇರಿತನಕ ತಲುಪುತ್ತಿದೆ. ಲಂಕೇಶ್‌ಗೆ ಎಲ್ಲಾ ಜಿಲ್ಲಾ, ತಾಲ್ಲೂಕು ಹಾಗೂ ಪುಟ್ಟ ಟೌನ್ ಸೆಂಟರ್‌ಗಳೂ ಸೇರಿದಂತೆ ಇನ್ನೂರೈವತ್ತಕ್ಕೂ ಹೆಚ್ಚು ವಿತರಣಾ ಏಜೆಂಟರಿದ್ದಾರೆ. ಅಂತಹ ಸ್ಥಳಗಳಲ್ಲಿ ಓದುಗರಿಗೆ ಪತ್ರಿಕೆ ಸುಲಭ ವಾಗಿ ಲಭ್ಯವಿದೆ. ಆದರೆ ಪೇಟೆಗಳಿಂದ ಕೊಂಚ ದೂರವಿರು ವವರಿಗೆ ಹಾಗೂ ಆಗಾಗ್ಗೆ ಪೇಟೆಯತ್ತ ಬರಲಾಗದ, ಕೊಂಚ ಇಂಟೀರಿಯರ್ ಏರಿಯಾಗಳಲ್ಲಿ ಇರುವವರಿಗೆ ನಿಯಮಿತವಾಗಿ 'ಲಂಕೇಶ್' ಪಡೆಯುವುದು ಸ್ವಲ್ಪ ಕಷ್ಟವಾಗುತ್ತಿರಲೂಬಹುದು.

ಇದಲ್ಲದೆ ಅನೇಕ ಊರುಗಳಲ್ಲಿ ಬಸ್ ಸ್ಟ್ಯಾಂಡ್ ನವೀಕರಣ, ಹೊಸ ನಿಲ್ದಾಣಗಳ ನಿರ್ಮಾಣದಿಂದಾಗಿ ಅಲ್ಲಿದ್ದ ಪತ್ರಿಕಾ ಸ್ಟಾಲ್‌ಗಳೂ ಕಾಣೆಯಾಗಿವೆ. ಇದರಿಂದಾಗಿ ಕೆಲ ಪುಟ್ಟ ಪಟ್ಟಣಗಳಲ್ಲೂ ತಾತ್ಕಾಲಿಕವಾಗಿ 'ಲಂಕೇಶ್' ವಿತರಣೆಗೆ ಅಡಚಣೆಯಾಗುತ್ತಿದೆ.

ಇದಕ್ಕಿರುವ ಸದ್ಯದ ಪರಿಹಾರವೆಂದರೆ ಪತ್ರಿಕೆಯ ಚಂದಾದಾರರಾಗುವುದು.

ಚಂದಾ ವಿವರ

ವಾರ್ಷಿಕ	ರೂ. 700
ಒಂದೂವರೆ ವರ್ಷಕ್ಕೆ	ರೂ. 1000
ಎರಡು ವರ್ಷಕ್ಕೆ	ರೂ. 1400

- ಹೀಗೆ ಚಂದಾ ಹಣವನ್ನು 'ಲಂಕೇಶ್ ಮೀಡಿಯಾ' ಹೆಸರಲ್ಲಿ ಡಿಡಿ/ಚೆಕ್/ಎಂಓ ಮೂಲಕ ಕಳುಹಿಸಿದರೆ 'ಲಂಕೇಶ್' ಅನ್ನು ನಾವೇ ಕಚೇರಿಯಿಂದ ನೇರವಾಗಿ ಓದುಗರಿಗೆ ಅಂಚೆ ಮೂಲಕ ತಲುಪಿಸುತ್ತೇವೆ. ನಿತ್ಯದ ಕೆಲಸಗಳ ಗಡಿಬಿಡಿಯಲ್ಲಿ ಮ್ಯಾಗಜಿನ್ ಸ್ಟಾಲ್ ಹುಡುಕಿಕೊಂಡು ಹೋಗಲಾಗದ ಓದುಗರೂ ಈ ಸೌಲಭ್ಯ ಬಳಸಿಕೊಳ್ಳಬಹುದು.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ

ವ್ಯವಸ್ಥಾಪಕರು: 9880302817

080-26676427 ಅನ್ನು ಸಂಪರ್ಕಿಸಿ.

ಚಂದಾ ಹಣ ಕಳುಹಿಸುವಾಗ ನಿಮ್ಮ ಹೆಸರು, ವಿಳಾಸ, ಫೋನ್ ನಂಬರ್ ಅನ್ನು ಸ್ಪಷ್ಟವಾಗಿ ಬರೆಯಿರಿ.

- ವ್ಯವಸ್ಥಾಪಕರು, ಲಂಕೇಶ್ ಮೀಡಿಯಾ

ಅಭಿವೃದ್ಧಿಯ ಮರಣೋನ್ಮುಖ ಓಟ!
ಚಿತ್ರದುರ್ಗದ 'ಅಮೃತ'ಕ್ಕೂ ಅಳಿವಿನ ಕಾಟ!!

ಧಾವಂತಕ್ಕೆ ಬಿದ್ದ 'ಅಭಿವೃದ್ಧಿ'ಯ ಪಾದದಡಿ ಸಿಲುಕಿ, ನರಳುವ ನಿಸರ್ಗ ಹಾಗೂ ಜೀವಸಂಕುಲಗಳ ವ್ಯಥೆ ಇಂದು ನಿನ್ನೆಯದಲ್ಲ. ಮನುಷ್ಯ ಬುದ್ಧಿವಂತನಾಗುತ್ತಾ ಬಂದ ಪ್ರತಿ ಘಳಿಗೆಗೂ ಸಮತೋಲನದ ಸರಪಳಿ ಸರಿಪಡಿಸಲಾರದಷ್ಟು ಹಾಳಾಗುತ್ತಲೇ ಬಂದಿದೆ. ಈ ದುರಂತ ಹೊತ್ತಿಗೆಗೆ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ವ್ಯಾಪ್ತಿಯ 'ಅಮೃತ ಮಹಲ್' ದನಗಾಹಿ ಹುಲ್ಲುಗಾವಲುಗಳ ದುಸ್ಥಿತಿ ಹೊಸ ಅಧ್ಯಾಯ! ಲಕ್ಷಾಂತರ ಜನ-ಜಾನುವಾರುಗಳ ಬದುಕಿಗೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಆಸರೆಯಾಗುತ್ತಾ ಬಂದಿದ್ದ ಈ ಐತಿಹಾಸಿಕ, ಜೀವವೈವಿಧ್ಯತೆಯ ಹುಲ್ಲುಗಾವಲುಗಳ ಮೇಲೆ ಆಳುವ ಸರ್ಕಾರಗಳೇ ಅತ್ಯಾಚಾರ ಮಾಡಲು ಮುಂದಾಗಿರುವುದು ಬಲು ದೊಡ್ಡ ವಿಪರ್ಯಾಸ. ಚಳ್ಳಕೆರೆಯ ವರವು ಕಾವಲ್, ದೊಡ್ಡ ಉಳ್ಳಾರ್ತಿ, ಉಳ್ಳಾರ್ತಿ ಕಾವಲ್, ಕುದಾಪುರ ಮೊದಲಾದ 70ಕ್ಕೂ ಹೆಚ್ಚು ಹಳ್ಳಿಗಳ ಆಸುಪಾಸಿನಲ್ಲಿ ಆವರಿಸಿಕೊಂಡಿದ್ದ ಸರಿಸುಮಾರು 10,000 ಎಕರೆಯಷ್ಟು ಈ ಹುಲ್ಲುಗಾವಲು ಭೂಮಿಯನ್ನು 2009-10ರಲ್ಲಿ ಅಂದಿನ ರಾಜ್ಯ ಸರ್ಕಾರದ ಆಣತಿಯಂತೆ ಜಿಲ್ಲಾಧಿಕಾರಿಯಾಗಿದ್ದ ಆದಿತ್ಯ ಬಿಸ್ವಾಸ್ ಡಿಆರ್‌ಡಿಒ, ಐಐಎಸ್ಸಿ, ಕೆಐಎಡಿಬಿ, ಬಾಬಾ ಅಣು ಸಂಶೋಧನಾ ಕೇಂದ್ರ, ಭಾರತೀಯ ಬಾಹ್ಯಾಕಾಶ ಕೇಂದ್ರ ಮೊದಲಾದ ವೈಜ್ಞಾನಿಕ ಮತ್ತು ತಂತ್ರಜ್ಞಾನದ ಸಂಸ್ಥೆಗಳ ವಿವಿಧ ಯೋಜನೆಗಳಿಗಾಗಿ ಪರಭಾರೆ ಮಾಡಿ ಆದೇಶಿಸಿದ್ದರು. ಆ ಮೂಲಕ ಕರ್ನಾಟಕ ರಾಜ್ಯದ ಕಟ್ಟಕಡೆಯ ಹುಲ್ಲುಗಾವಲನ್ನೂ ನುಂಗಿ ಹಾಕಲು 'ಅಭಿವೃದ್ಧಿ'ಯ ರಕ್ಕಸ ಜಿಹ್ವೆ ಸಜ್ಜಾಗಿತ್ತು.

ಗ್ರೇಟ್ ಇಂಡಿಯನ್ ಬಸ್ಟರ್ಡ್, ಲೆಸ್ಸರ್ ಫ್ಲೋರಿಕಾ, ಬ್ಲ್ಯಾಕ್ ಬಕ್, ಡೆಕ್ಕನ್ ವೂಲ್ಫ್, ಕೃಷ್ಣಮೃಗ, ತೋಳ, ನರಿ, ಮುಳ್ಳುಹಂದಿ ಮೊದಲಾದ ಅಳಿವಿನಂಚಿನಲ್ಲಿರುವ ನೂರಾರು ಪ್ರಾಣಿಸಂಕುಲಗಳಲ್ಲದೆ ಅಮೃತ ಮಹಲ್ ದನಗಳು, ಕುರಿ, ಮೇಕೆ ಮುಂತಾದ ಸಾಕುಪ್ರಾಣಿಗಳೂ ಈ ಹುಲ್ಲುಗಾವಲನ್ನೇ ಆಧರಿಸಿ ಜೀವ ಉಳಿಸಿಕೊಂಡಿವೆ. ಇನ್ನು ಹಿಂದುಳಿದ ಮತ್ತು ಪರಿಶಿಷ್ಟ ಸಮುದಾಯದವರೇ ಹೆಚ್ಚಾಗಿರುವ ಚಳ್ಳಕೆರೆಯ ಹಕ್ಕಿಪಿಕ್ಕಿ, ಕುರುಬ, ಲಂಬಾಣಿ, ಗೊಲ್ಲ ಜನಾಂಗದ ಮತ್ತು ಬುಡಕಟ್ಟು ಜನ ಈ ಹುಲ್ಲುಗಾವಲಿನ ಸೂಕ್ಷ್ಮ ಅರಣ್ಯೋತ್ಪಾದನೆಯಾದ ಚಾಪೆ ಹೆಣೆಯುವಿಕೆ, ಬಿದಿರುಪುಟ್ಟಿ ಹೆಣೆಯುವಿಕೆ ಹಾಗೂ ಪಶುಪಾಲನೆ, ಅಲೆಮಾರಿ ಕುರಿಕಾಯುವಿಕೆ, ನೇಕಾರಿಕೆ, ಉಣ್ಣೆ ಕಂಬಳಿ ನೇಯುವಿಕೆಯನ್ನೇ ತಮ್ಮ ಜೀವನಾಧಾರವಾಗಿಸಿಕೊಂಡು ಬದುಕುತ್ತಿದ್ದಾರೆ. ಅಮೃತ ಮಹಲ್ ಎತ್ತುಗಳ ವಿಶೇಷ ಕಾಳಜಿಗೆಂದು ರಾಜಮನೆತನಗಳಿಂದ ಗೋಮಾಳಗಳಾಗಿ ಜೀವಪಡೆದು ನಂತರ 'ಅಮೃತ ಮಹಲ್ ಕಾವಲು'ಗಳಾಗಿ ಬದಲಾದ ಈ ಹುಲ್ಲುಗಾವಲುಗಳು ಇವತ್ತು ಈ ಭಾಗದ 'ಒಣ ಜೀವನಾಡಿ'ಗಳೇ ಆಗಿಹೋಗಿವೆ. ಇಷ್ಟೆಲ್ಲಾ ಅನಿವಾರ್ಯತೆ, ಅವಲಂಬಿಕೆಗಳನ್ನು ಒಂದೇ ಏಟಿಗೆ 'ಇಲ್ಲ'ವಾಗಿಸಿದ ಜಿಲ್ಲಾಡಳಿತ ಅಮೃತ ಮಹಲ್ ಹುಲ್ಲುಗಾವಲುಗಳನ್ನು ಅಪ್ರಯೋಜಕ ಜಮೀನು ಎಂಬ ಷರಾ ಬರೆದು ದೈತ್ಯ ಸಂಶೋಧನೆಗಳ ಮಡಿಲಿಗೊಪ್ಪಿಸಿತ್ತು. ಸರ್ಕಾರದ ಈ ಪರಿಸರದ್ರೋಹಿ ನಿರ್ಣಯದ ವಿರುದ್ಧ ತಿರುಗಿ ಬಿದ್ದ ಇಲ್ಲಿನ ಸ್ಥಳೀಯ ಬುಡಕಟ್ಟು ಜನ, ಪರಿಸರವಾದಿಗಳು 'ನ್ಯಾಷನಲ್ ಗ್ರೀನ್ ಟ್ರಿಬ್ಯೂನಲ್'ಗೆ ದೂರು ನೀಡಿ ಹುಲ್ಲುಗಾವಲುಗಳನ್ನು ರಕ್ಷಿಸುವಂತೆ ಬೇಡಿಕೊಂಡಿದ್ದರು. ಅದರಂತೆ ಪರಿಸರ ತಜ್ಞ ಎಸ್.ರವಿಚಂದ್ರ ರೆಡ್ಡಿ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಿ ತನಿಖಾವರದಿ ನೀಡುವಂತೆ ಟ್ರಿಬ್ಯೂನಲ್ ಆದೇಶಿಸಿತ್ತು. ಪೀಡಿತ ಸಮುದಾಯ ಮತ್ತು ಪ್ರದೇಶಗಳನ್ನು ಭೇಟಿ ಮಾಡಿದ ಈ ತಂಡ ಕಾನೂನುಗಳ ಪುಟ ತಿರುವಿ ಹಾಕಿ, ಜಮೀನು ಪರಭಾರೆಯ ಉದ್ದೇಶ-ವೈಪರೀತ್ಯ-ವಿನ್ಯಾಸಗಳನ್ನೆಲ್ಲ ಪರಿಶೀಲಿಸಿ ಜೂನ್ 29ರಂದು ತನ್ನ ವರದಿ ಸಲ್ಲಿಸಿತ್ತು. ಸರ್ಕಾರವೇ ಹೇಗೆ ಕಾನೂನುಗಳನ್ನು ಉಲ್ಲಂಘಿಸಿ ಅರಣ್ಯ ಭೂಮಿಯನ್ನು ಡಿ-ನೋಟಿಫೈ ಮಾಡಲಾಗಿದೆ, ಅಂಕಿ-ಅಂಶಗಳ ವಿಷಯದಲ್ಲಿ ಎಂತೆಂಥ ತಪ್ಪು ಮಾಹಿತಿಗಳನ್ನು ನಮೂದಿಸಿ ವಂಚಿಸಲಾಗಿದೆ, ಆ ಪ್ರದೇಶದ ಸಾಮಾಜಿಕ-ಆರ್ಥಿಕ-ಭೌಗೋಳಿಕ ಪರಿಣಾಮಗಳನ್ನು ಅದೆಷ್ಟು ನಿರ್ಲಕ್ಷತನದಿಂದ ಅಂದಾಜಿಸಲಾಗಿದೆ ಎಂಬ ಪ್ರತಿಯೊಂದು ಎಳೆಯನ್ನೂ ಬಿಚ್ಚಿಟ್ಟ ತನಿಖಾ ಸಮಿತಿ, ಸರ್ಕಾರ ಮತ್ತು ಜಿಲ್ಲಾಡಳಿತವನ್ನು ತರಾಟೆಗೆ ತೆಗೆದುಕೊಂಡಿದೆ. ತನಿಖೆಯ ಸಂಕ್ಷಿಪ್ತ ವರದಿ ಮತ್ತು ಆಳುವವರ ಹೊಣೆಗೇಡಿತನದ ಅನಾಹುತಗಳು ಪತ್ರಿಕೆಯ ಓದುಗರಿಗಾಗಿ ಇಲ್ಲಿವೆ...

ಐತಿಹಾಸಿಕ ಹಿನ್ನೆಲೆಯಿಂದ...

ಈ ಅಮೃತ ಮಹಲ್ ಹುಲ್ಲುಗಾವಲುಗಳು ಐತಿಹಾಸಿಕ ಹಿನ್ನೆಲೆ ಹೊಂದಿರುವಂತವು. ಆರಂಭದಲ್ಲಿ ಅಮೃತ ಮಹಲ್ ತಳಿಯ ಎತ್ತುಗಳ ಜೋಪಾನಕ್ಕೆಂದು ಇವುಗಳನ್ನು ಕಾಯ್ದಿರಿಸಲಾಗಿತ್ತು. ಮೈಸೂರು ರಾಜಮನೆತನ ಅರಸ ಚಿಕ್ಕದೇವರಾಜ ಒಡೆಯರ್ (1672-1704) ಪ್ರಪ್ರಥಮ ಬಾರಿಗೆ ರಾಸುಗಳ ಆರೈಕೆ, ಅಭಿವೃದ್ಧಿಯನ್ನು ತನ್ನ ಆಡಳಿತ ಭಾಗವಾಗಿ ಮಾಡಿಕೊಂಡಾಗ ಅವುಗಳ ನಿರ್ವಹಣೆಗೆಂದು ಗೋಮಾಳ ಜಾಗವನ್ನು ಗುರುತಿಸಲಾಗುತ್ತಿತ್ತು. ಮೊದಲು ಇವುಗಳನ್ನು 'ಬೆಣ್ಣೆ ಚಾವಡಿ' ಎಂಬ ಹೆಸರಿನಿಂದ ಕರೆಯಲಾಗುತ್ತಿತ್ತು. ಕಾಲಾನುಗತ ಮೈಸೂರು ಸಂಸ್ಥಾನ ಹೈದರಾಲಿಯ ವಶಕ್ಕೆ ಬಂದ ನಂತರವೂ ಈ ದನಗಾಹಿ ಜಮೀನುಗಳ ರೂಢಿ ಹಾಗೇ ಉಳಿದುಕೊಂಡಿತ್ತು. ಅವನ ಮಗ ಟಿಪ್ಪು ಸುಲ್ತಾನ್ ಅಧಿಕಾರಕ್ಕೆ ಬಂದಮೇಲೆ ಆತನೇ 'ಬೆಣ್ಣೆ ಚಾವಡಿ' ಎಂದಿದ್ದ ಈ ಹುಲ್ಲುಗಾವಲು ಗೋಮಾಳಗಳ ಹೆಸರನ್ನು 'ಅಮೃತ ಮಹಲ್' ಎಂದು ಬದಲಾಯಿಸಿರುವುದು ಇತಿಹಾಸ ದಾಖಲೆಗಳಿಂದ ತಿಳಿದುಬರುತ್ತೆ. ಒಣ ಮತ್ತು ಬೇಸಿಗೆ ಋತುಮಾನದಲ್ಲೂ ಹೆಚ್ಚು ಆಯಾಸಗೊಳ್ಳದೆ ವೇಗವಾಗಿ ನಡೆಯಬಲ್ಲ, ಹೊಂದಿಕೊಂಡು ಸಮರ್ಥವಾಗಿ ಬದುಕಬಲ್ಲ, ಹೆಚ್ಚೆಚ್ಚು ತೂಕವನ್ನು ಎಳೆಯಬಲ್ಲಷ್ಟು ದೈಹಿಕ ಸದೃಢತೆಯನ್ನು ಹೊಂದಿದ್ದ ಅಮೃತ ಮಹಲ್ ರಾಸುಗಳನ್ನು ಯುದ್ಧದ ಸಂದರ್ಭದಲ್ಲಿ ಶಸ್ತ್ರಾಸ್ತ್ರಗಳನ್ನು ಗಾಡಿಗಳಲ್ಲಿ ಎಳೆದೊಯ್ಯಲು ಬಳಸಲಾಗುತ್ತಿತ್ತು. ಅದು ಲಾಭದಾಯಕ ಮಾತ್ರವಲ್ಲ ಕಡಿಮೆ ವೆಚ್ಚದಾಯಕ ಮತ್ತು ಬಹುಪಯೋಗಿಯೂ ಅಂತನ್ನಿಸಿದ್ದರಿಂದ ಈ ತಳಿಗಳನ್ನು ಪೋಷಣೆಯನ್ನು ಮತ್ತಷ್ಟೂ ಹೆಚ್ಚಿಸಲಾಯಿತು. ಹಾಗಾಗಿ ಅಮೃತ ಮಹಲ್ ಕಾವಲುಗಳ ವ್ಯಾಪ್ತಿಯೂ ವಿಸ್ತರಿಸಿಕೊಳ್ಳುತ್ತಲೇ ಬಂದಿತ್ತು.

ಭಾರತಕ್ಕೆ ಸ್ವಾತಂತ್ರ್ಯ ಬಂದ ಸಂದರ್ಭದಲ್ಲಿ ಈಗಿನ ಏಕೀಕರಣದ ಪ್ರಾದೇಶಿಕತೆಗೆ ಒಳಪಡುವಂತೆ ಕರ್ನಾಟಕ ರಾಜ್ಯದಲ್ಲಿ ಒಟ್ಟು 4,00,000 ಎಕರೆ ಅಮೃತ ಮಹಲ್ ಕಾವಲುಗಳಿದ್ದವು. ಆದರೆ ನಗರೀಕರಣ, ಕೃಷಿ ಭೂ ಒತ್ತುವರಿ, ಕೈಗಾರಿಕೆಗಳ ಸ್ಥಾಪನೆ ಹೀಗೆ ಹತ್ತು ಹಲವು ಕಾರಣಗಳಿಂದಾಗಿ ಅಮೃತ ಮಹಲ್ ಹುಲ್ಲುಗಾವಲು ದಿಢೀರ್ ಕ್ಷೀಣತೆ ಕಂಡಿತ್ತು. ಈಗ ರಾಜ್ಯದಲ್ಲಿ ಕೇವಲ 60,000 ಎಕರೆ ಮಾತ್ರ ಅಮೃತ ಮಹಲ್ ದನಗಾಹಿ ಹುಲ್ಲುಗಾವಲುಗಳು ಮೈಚಾಚಿಕೊಂಡಿವೆ. ಅದರಲ್ಲೂ ಚಿತ್ರದುರ್ಗ ಜಿಲ್ಲೆಯಲ್ಲೆ ಅತಿಹೆಚ್ಚು ವಿಸ್ತಾರದಲ್ಲಿದ್ದವು. ಗಿಡ-ಮರಗಳಿಂದ ಭರ್ತಿಯಾದ ಕಾನನ ಪ್ರದೇಶದಂತೆ ತನ್ನ ವಿನ್ಯಾಸವನ್ನು ಹೊಂದದೆ ಕೇವಲ ಪೊದೆ, ಮುಳ್ಳುಸಸ್ಯ, ಬೀಳು ಪ್ರದೇಶದಂತ ಒಣವಿನ್ಯಾಸ ಹೊಂದಿರುವುದರಿಂದ ಈ ಕಾವಲುಗಳು ಸುಲಭವಾಗಿ ಅತಿಕ್ರಮಣಕ್ಕೆ ಈಡಾಗುತ್ತಾ ಬಂದವು. ಭೂಮಾಪನ ಇಲಾಖೆಯ ಸರ್ವೆಯಂತೆ ಇವು ಅರಣ್ಯ ಪ್ರದೇಶಗಳೆಂದು ಗುರುತಿಸಲ್ಪಟ್ಟಿದ್ದರೂ, ಇಲ್ಲಿನ ಪ್ರಾಣಿಗಳ ಬೇಟೆ, ಪ್ರವಾಸೋದ್ಯಮ ಸುತ್ತಾಡುವಿಕೆಗಳಿಗೆ ನಿರ್ಬಂಧವಿದ್ದರೂ, ಅರಣ್ಯ ಸಂರಕ್ಷಣಾ ಕಾಯ್ದೆ ಅನ್ವಯಿಸುತ್ತಿದ್ದರೂ ಇವು ನಶಿಸುತ್ತಲೇ ಬಂದಿವೆ. ಆ ಮೂಲಕ ಇವುಗಳನ್ನೇ ನಂಬಿ ಬದುಕು ರೂಪಿಸಿಕೊಂಡಿದ್ದ ವನ್ಯಜೀವಿ, ಸಾಕುಪ್ರಾಣಿ, ಬುಡಕಟ್ಟು ಜನರೂ ಒಕ್ಕಲೇಳುತ್ತಲೇ ಬಂದಿದ್ದಾರೆ.

1971ರಲ್ಲಿ ಚಳ್ಳಕೆರೆ ತಾಲ್ಲೂಕಿನ ಸುಮಾರು 12,000 ಎಕರೆಯಷ್ಟು ಅಮೃತ ಮಹಲ್ ಕಾವಲನ್ನು ಪಶುಸಂಗೋಪನೆ ಇಲಾಖೆಯ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮಕ್ಕೆ ವಹಿಸಿಕೊಟ್ಟದ್ದು ಬಿಟ್ಟರೆ ಸರ್ಕಾರ ಯಾವತ್ತೂ ಈ ಮಟ್ಟದಲ್ಲಿ ಸಂಬಂಧವೇ ಇಲ್ಲದ ಕೆಲಸಗಳಿಗಾಗಿ ಅಮೃತ ಮಹಲ್ ಹುಲ್ಲುಗಾವಲು ಭೂಮಿಯನ್ನು ಹಸ್ತಾಂತರಿಸಿದ್ದೇ ಇಲ್ಲ. ಆಗಿನ ಪರಭಾರೆಯಂತೆ ನಿಗಮವು ಅಲ್ಲಿ ದೇಶಿ ಹಾಗು ಮಿಶ್ರತಳಿ ಕುರಿ ಸಂವರ್ಧನಾ ಕೇಂದ್ರವನ್ನು ಸ್ಥಾಪಿಸಿದ್ದರಿಂದ ಆ ಗೋಮಾಳದ ಮೂಲ ಆಶಯವಾದ ಜಾನುವಾರು ಪಾಲನೆಗೆ ಯಾವ ಧಕ್ಕೆಯೂ ಆಗುವಂತಿರಲಿಲ್ಲ. ಆದರೆ ಈಗ ಗೋಮಾಳದ ಅಸ್ತಿತ್ವಕ್ಕೆ ಎಳ್ಳಷ್ಟೂ ಸಂಬಂಧಿಸದ ರಕ್ಷಣಾ ಪ್ರಯೋಗಶಾಲೆ, ಅಣು ಪರೀಕ್ಷಣಾ ಘಟಕ, ಡ್ರೋಣ್ ಯುದ್ಧ ವಿಮಾನಗಳ ನಾಗರಿಕ ಪ್ರಯೋಗಾರ್ಥ ಘಟಕ, ಸೌರಶಕ್ತಿ ಘಟಕ, ಸುಧಾರಿತ ಬಾಹ್ಯಾಕಾಶ ಸಂಶೋಧನಾ ಕೇಂದ್ರ ಹೀಗೆ ತಂತ್ರಜ್ಞಾನದ ಯೋಜನೆಗಳಿಗಾಗಿ ಜಮೀನು ನೀಡಲಾಗಿದೆ. ಇವುಗಳು ಅಸ್ತಿತ್ವಕ್ಕೆ ಬಂದದ್ದೇ ಆದಲ್ಲಿ ಅಮೃತ ಮಹಲ್ ಹುಲ್ಲುಗಾವಲುಗಳು ಅಲ್ಲಿರುವ ವನ್ಯಜೀವಿಗಳ ಮಾತಿರಲಿ, ಸುತ್ತಮುತ್ತಲಿನ ಜನರೂ ಬದುಕಲಿಕ್ಕೂ ಆಗದ ನಾಲಾಯಕ್ಕಾದ ವಿಕಿರಣ ಭೂಮಿಯಾಗಿಬಿಡುತ್ತೆ.

ಪರಭಾರೆ ಹಿಂದಿರುವ ಅಕ್ರಮ-ಅನೀತಿಗಳು

ಮೊದಲನೆಯದಾಗಿ, ಅಮೃತ ಮಹಲ್ ಹುಲ್ಲುಗಾವಲನ್ನು ಪರಭಾರೆ ಮಾಡಿರುವ ಉದ್ದೇಶ ಮತ್ತು ಚಳ್ಳಕೆರೆ ಭೌಗೋಳಿಕ ಪ್ರದೇಶಗಳನ್ನು ತಾಳೆ ಹಾಕಿ ನೋಡಿದರೆ ಅವೆರಡಕ್ಕೂ ಹೋಲಿಕೆಯೇ ಬರುವುದಿಲ್ಲ. ಇಂತಹ ಬೃಹತ್ ಮತ್ತು ಅತ್ಯಾಧುನಿಕ ಅಷ್ಟೇ ಸೂಕ್ಷ್ಮ ಘಟಕಗಳು ಆರಂಭವಾಗಬೇಕೆಂದರೆ ಸಹಜವಾಗಿಯೇ ನೀರಿನ ಬೇಡಿಕೆ ಅಪಾರವಾಗಿರುತ್ತದೆ. ಆದರೆ ಚಿತ್ರದುರ್ಗ ಹೇಳಿಕೇಳಿ ಒಣಭೂಮಿ. ಕೃಷ್ಣ ನದಿಮುಖಜ ಭೂಮಿಯಲ್ಲಿ ಚಾಚಿಕೊಂಡಿದ್ದರೂ ಹಿರಿಯೂರಿನ ವಾಣಿವಿಲಾಸದಲ್ಲಿ ಸಣ್ಣದಾಗಿ ಹಾದುಹೋಗುವ ವೇದಾವತಿ ತೊರೆಯೇ ಇಡೀ ಜಿಲ್ಲೆಯ ಏಕಮಾತ್ರ ಜಲನಾಡಿ. ಮಳೆ ಕೂಡಾ ಅಷ್ಟಕ್ಕಷ್ಟೇ. ಜಿಲ್ಲೆಯಲ್ಲಿ ಅತಿ ಹೆಚ್ಚು ಮಳೆ ಬೀಳುವ ಪ್ರದೇಶವೆಂದರೆ ಅದು ಹೊಳಲ್ಕೆರೆ ತಾಲ್ಲೂಕು ಮಾತ್ರ. ಬರಗಾಲದ ಅಂಚಿನಲ್ಲೇ ಬಾಳುವಂತಹ ಹೊಳಲ್ಕೆರೆಯಲ್ಲೂ ಆಗುವ ವಾರ್ಷಿಕ ಸರಾಸರಿ ಮಳೆಯ ಪ್ರಮಾಣ ಕೇವಲ 668 ಮಿ.ಮೀ ಮಾತ್ರ. ಜಿಲ್ಲೆಯಲ್ಲಿ ಅಂತರ್ಜಲವನ್ನಂತು ಕೇಳುವಂತೆಯೇ ಇಲ್ಲ. ಚಿತ್ರದುರ್ಗ ಜಿಲ್ಲೆಯಾದ್ಯಂತದ ಸುಮಾರು ಶೇ.47ರಷ್ಟು ಪ್ರದೇಶವನ್ನು ಅಂತರ್ಜಲ ನಿಗಮವು ಕ್ರಿಟಿಕಲ್ ಅಂತ ಗುರುತಿಸಿದೆ. ಇನ್ನುಳಿದದ್ದರಲ್ಲಿ ಶೇ.52 ರಷ್ಟು ಪ್ರದೇಶವೂ ಸೆಮಿ ಕ್ರಿಟಿಕಲ್ ಕೆಟಗರಿಗೆ ಬೀಳುತ್ತದೆ. ಶೇ.1ರಷ್ಟು ಭೂಮಿ ಮಾತ್ರ ಅಲ್ಪಸ್ವಲ್ಪ ಅಂತರ್ಜಲದ ಸೆಲೆಯನ್ನು ಜೀವಂತವಾಗಿರಿಸಿಕೊಂಡಿದೆ ಎನ್ನಬಹುದು. ಜಿಲ್ಲೆಯಲ್ಲಿ ಒಟ್ಟು 3,41,000 ಕೃಷಿ ಜಮೀನಿದ್ದರೂ ನೀರಾವರಿಯ ಲಾಭ ಪಡೆಯುತ್ತಿರುವುದು ಕೇವಲ 5.6% ಮಾತ್ರ. ಕುಡಿಯುವ ನೀರಿಗೂ ಇಲ್ಲಿ ಹಾಹಾಕಾರವಿದೆ. ಹಾಗಿರುವಾಗ 10,000 ಎಕರೆಯ ವಿಸ್ತೀರ್ಣದಲ್ಲಿ ಇಂತಹ ಬೃಹತ್ ಸಂಶೋಧನಾ ಕೇಂದ್ರ ಅಥವಾ ಉದ್ಯಮಗಳನ್ನು ಸ್ಥಾಪಿಸಿದರೆ ಮೂಲಸೌಕರ್ಯವಾದ ನೀರನ್ನು ಎಲ್ಲಿಂದ ಒದಗಿಸಿಯಾರು? ಅಂತಹ ಯಾವ ಪರ್ಯಾಯ ಪ್ರಯತ್ನಗಳೂ ಆರ್ಥಿಕ ಲೆಕ್ಕಾಚಾರದಿಂದ ತೃಪ್ತಿದಾಯಕವಾಗುವುದಿಲ್ಲ ಎಂಬುದನ್ನು ಮನಗಾಣಬೇಕು.

ಎರಡನೆಯದಾಗಿ, ಈ ಹುಲ್ಲುಗಾವಲು ಪ್ರದೇಶದಲ್ಲಿ ಕೆರೆ, ನಾಲೆ, ಕೃಷಿ ಜಮೀನು, ತೋಟಗಾರಿಕೆ ಜಮೀನು ವಸತಿ ಸ್ಥಳಗಳೂ ಇರುವುದರಿಂದ ಇಂತಹ ಮಹತ್ವದ ನಿರ್ಣಯವನ್ನು ಕೈಗೊಳ್ಳುವುದಕ್ಕೂ ಮುನ್ನ ಸ್ಥಳೀಯ ಆಡಳಿತ ಸಂಸ್ಥೆಗಳು, ಜನಪ್ರತಿನಿಧಿಗಳು, ಪೀಡಿತರಾಗುವ ಜನರ ಅಭಿಪ್ರಾಯವನ್ನು ಸಂಗ್ರಹಿಸುವಂತಹ ವೈಜ್ಞಾನಿಕ ಕೆಲಸವಾಗಬೇಕಿರುತ್ತೆ. ಆದರೆ ಜಿಲ್ಲಾಧಿಕಾರಿಗಳು ಅಂತಹ ಯಾವ ಕ್ರಮಕ್ಕೂ ಮುಂದಾಗದೆ ಏಕಪಕ್ಷೀಯವಾಗಿ, ರಹಸ್ಯವಾಗಿ ಇಂತಹ ತೀರ್ಮಾನಕ್ಕೆ ಬಂದಿರುವುದರ ಹಿಂದೆ ಬೇರೆ ಹಿತಾಸಕ್ತಿ ಅಥವಾ ದುರುದ್ದೇಶಗಳೂ ಕೆಲಸ ಮಾಡಿರಬಹುದಾದ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಇಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಯೋಜನೆಗಳು ಕೇವಲ ಕೈಗಾರಿಕೆಗಳಾಗಿದ್ದರೆ ಕೇವಲ ಜಮೀನಿನ ವಿಷಯವನ್ನೇ ಪರಿಗಣಿಸಬಹುದಿತ್ತು. ಆದರೆ ಇವು ಸೂಕ್ಷ್ಮ, ವಿಕಿರಣಶೀಲ, ಎಲ್ಲಾ ಬಗೆಯ ಪರಿಸರ ಮಾಲಿನ್ಯಕ್ಕೆ ಕಾರಣವಾಗಬಲ್ಲ ಅಪಾಯಕಾರಿ ಪರೀಕ್ಷಣಾ ಘಟಕಗಳು. ಹಾಗಾಗಿ ಸ್ಥಳೀಯರ ಅಭಿಪ್ರಾಯ ಮುಖ್ಯವಾಗುತ್ತದೆ. ಆದರೆ ಅದನ್ನೇ ಇಲ್ಲಿ ನಿರ್ಲಕ್ಷಿಸಲಾಗಿದೆ.


1972ರ ಪರಭಾರೆಯಂತೆ ಚಳ್ಳಕೆರೆಯ ಅಮೃತ ಮಹಲ್ ಹುಲ್ಲುಗಾವಲು ಪಶುಸಂಗೋಪನೆಯ ಉಸ್ತುವಾರಿಯಲ್ಲಿತ್ತು. ಹಾಗಾಗಿ ಜಮೀನು ಪರಭಾರೆಗೆ ಅವರಿಂದ ಒಪ್ಪಿಗೆ ಪಡೆದುಕೊಳ್ಳುವುದು ಅನಿವಾರ್ಯವಾಗಿತ್ತು. ಆಗ ಜಿಲ್ಲಾಧಿಕಾರಿ ಬಿಸ್ವಾಸ್‌ರು ಪಶುಸಂಗೋಪನೆ ಇಲಾಖೆಯ ಕಾರ್ಯದರ್ಶಿಗಳಿಗೆ ಪತ್ರವೊಂದನ್ನು ಬರೆದು ಈ ಕಾವಲು ಭೂಮಿ ಅಪ್ರಯೋಜಕವಾಗಿ ಬಿದ್ದಿದೆ, ಇದನ್ನು ಅಭಿವೃದ್ಧಿ ಕಾರ್ಯಗಳಿಗೆ ಪರಭಾರೆ ಮಾಡಲು ಅನುವು ಮಾಡಿಕೊಡಬೇಕೆಂದು ಕೇಳಿಕೊಂಡಿದ್ದರು. ಆ ಪತ್ರದಲ್ಲಿ ವಾಸ್ತವಿಕ ಅಂಕಿಅಂಶಗಳನ್ನೇ ತಿರುಚಿ ಒಪ್ಪಿಗೆ ಪಡೆದುಕೊಂಡದ್ದು ಈಗ ಬಯಲಾಗಿದೆ. ಜಿಲ್ಲಾಧಿಕಾರಿಗಳು ತಮ್ಮ ಪತ್ರದಲ್ಲಿ ಈ ಹುಲ್ಲುಗಾವಲಿನಲ್ಲಿ ಸ್ಥಾಪಿಸಲಾಗಿರುವ ಕುರಿ ಸಂಶೋಧನಾ ಕೇಂದ್ರ ತನ್ನ ಅಭಿವೃದ್ಧಿ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ವಿಫಲವಾಗಿದೆ, ಕೇಂದ್ರದಲ್ಲಿ ಈಗ ಕೇವಲ 20 ದನ ಮತ್ತು 250 ಕುರಿಗಳು ಮಾತ್ರ ಇವೆ, ಈ ಹುಲ್ಲುಗಾವಲನ್ನು ಆಶ್ರಯಿಸಿರುವ ಊರುಗಳಾದ ಕುದಾಪುರ ಮತ್ತು ವರವುಗಳಲ್ಲಿ ಕ್ರಮವಾಗಿ 3987 ಮತ್ತು 8034 ಜಾನುವಾರುಗಳು ಮಾತ್ರ ಇರುವುದರಿಂದ ಅವುಗಳಿಗೆ ಈ ಹುಲ್ಲುಗಾವಲು ಅಗತ್ಯವಿಲ್ಲ, ಹಾಗಾಗಿ ಇದನ್ನು ಪರಭಾರೆ ಮಾಡಲು ಅನುಮತಿ ನೀಡಬೇಕೆಂದು ಕೇಳಿದ್ದರು.

ಇದಿಷ್ಟೂ ಅಂಕಿ-ಅಂಶಗಳು ವಾಸ್ತವಕ್ಕೆ ದೂರವಾದವು. ಪತ್ರದಲ್ಲಿ ಕುದಾಪು ಮತ್ತು ಉಳ್ಳಾರ್ತಿ ಗ್ರಾಮಗಳನ್ನು ಮಾತ್ರ ಈ ಹುಲ್ಲುಗಾವಲು ಅವಲಂಬಿತ ಊರುಗಳೆಂದು ಹೇಳಲಾಗಿದೆ. ಆದರೆ ಇವೆರಡಲ್ಲದೆ ವರವು, ದೇವರಹಟ್ಟಿ, ನೇರಲಗೊಂಟೆ, ಮನಮೈನಹಟ್ಟಿ, ಎನ್.ಮಹದೇವಪುರ, ಗೌರಿಪುರ, ಭೀಮನಕೆರೆ, ದಾಸರಹಟ್ಟಿ, ಕಾಟೇನಹಳ್ಳಿ ಹಾಗೂ ಇನ್ನೂ ಐವತ್ತಕ್ಕೂ ಹೆಚ್ಚು ಹಳ್ಳಿಗಳು ಈ ಗೋಮಾಳದ ಹುಲ್ಲುಗಾವಲನ್ನು ಆಧರಿಸಿವೆ. ಅಂದಾಜಿನಂತೆ ಇವಿಷ್ಟು ಊರುಗಳಲ್ಲಿ 15,000ಕ್ಕೂ ಹೆಚ್ಚು ದನ-ಕರುಗಳು, 30,000ಕ್ಕೂ ಮೀರಿದ ಕುರಿ-ಮೇಕೆಗಳು ಅಡಿ ಬರುವುದು ಇದೇ ಹುಲ್ಲುಗಾವಲಿನಲ್ಲಿ. ಅವ್ಯಾವುವನ್ನೂ ಪತ್ರದಲ್ಲಿ ಪ್ರಸ್ತಾಪಿಸಿಯೇ ಇಲ್ಲ. ಇನ್ನು ಅವರೇ ಉಲ್ಲೇಖಿಸಿದಂತೆ 12,000 ಜಾನುವಾರಗಳಿಗೂ ಅವಕಾಶವಿಲ್ಲದಂತೆ ಇಡೀ ಜಮೀನನ್ನು ಮಾರಿಕೊಂಡು ನೆಪಕ್ಕೆಂಬಂತೆ ಸಣ್ಣದೊಂದು ಗೋಶಾಲೆ ಸ್ಥಾಪಿಸಲಾಗಿದೆ. ಅದು, ಐನೂರಕ್ಕಿಂತ ಹೆಚ್ಚು ಜಾನುವಾರುಗಳನ್ನೂ ಸಾಕಲಾಗದ ಬಡ ಗೋಶಾಲೆ!

ಮತ್ತೂ ಅನುಮಾನ ಮೂಡಿಸುವ ಸಂಗತಿಗಳೆಂದರೆ ಎಲ್ಲಾ ಸಂಶೋಧನೆಗಳಿಗೂ ಒಂದೇ ಕಡೆ ಜಾಗ ನೀಡಿರುವುದು. ಹಿಂದಿನ ದಾಖಲೆಗಳನ್ನು ಪರಿಶೀಲಿಸಿದಾಗ ಸಂಶೋಧನಾ ಕೇಂದ್ರಗಳು ತಮಗೆ ಯೋಗ್ಯವಾದ ಮೂಲಸೌಕರ್ಯ ಮತ್ತು ತ್ಯಾಜ್ಯ ನಿರ್ವಹಣೆಗ ಅನುಕೂಲವಾಗುವಂತೆ ಚಿತ್ರದುರ್ಗ ಜಿಲ್ಲೆಯ ಬೇರೆ ಬೇರೆ ಸ್ಥಳಗಳನ್ನು ಅಪೇಕ್ಷಿಸಿದ್ದರೂ ಎಲ್ಲಕ್ಕೂ ಒಟ್ಟಿಗೆ ಚಳ್ಳಕೆರೆಯ ಅಮೃತ ಮಹಲ್ ಕಾವಲು ಭೂಮಿಯನ್ನೆ ಮಂಜೂರು ಮಾಡಲಾಗಿದೆ. ಡಿ.ಆರ್.ಡಿ.ಒ.ದ ಅಂತಹ ಪ್ರಸ್ತಾವನೆ ಇದ ಪುಷ್ಟಿ ನೀಡುತ್ತದೆ. ಡಿ.ಆರ್.ಡಿ.ಒ ತನ್ನ ಸಂಶೋಧನ ಯೋಜನೆಗಳನ್ನು ಆರಂಭಿಸಲು ಚಳ್ಳಕೆರೆ ಮತ್ತು ಹಿರಿಯೂರ ತಾಲ್ಲೂಕುಗಳಲ್ಲಿ ಒಟ್ಟಾರೆಯಾಗಿ 3,557 ಎಕರೆ ಜಮೀನಿ ಬೇಡಿಕೆ ಇಟ್ಟಿತ್ತು. ಆದರೆ ಚಳ್ಳಕೆರೆಯ ಹುಲ್ಲುಗಾವಲಿನ ಒಂದೇ ಕಡೆ 4,290 ಎಕರೆ ಜಮೀನು ನೀಡಲಾಗಿದ ಸರ್ಕಾರಿ ಸಂಸ್ಥೆಗಳಿಗೆ ಇರಲಿ, ಖಾಸಗಿ ಒಡೆತನದ ಸಂಸ್ಥೆಗಳಿಗ ಸಂಶೋಧನೆಯ ನೆಪ ಮಾಡಿ ಕಡಿಮೆ ಬೆಲೆಗೆ ಜಮೀನ ಬಿಟ್ಟುಕೊಟ್ಟಿರುವುದು ಅನುಮಾನ ಮೂಡಿಸುತ್ತದೆ. ಸಗಿತಾರ ವೆಂಚರ್ಸ್ ಪ್ರೈ.ಲಿ. ಎನ್ನುವ ಐಟಿ ರಿಯಲ್ ಎಸ್ಟೇಟ ಸಂಸ್ಥೆಯೊಂದಕ್ಕೆ 'ಸೋಲಾರ್ ಪಾಂಡ್' ತೆರೆಯಲ ಬರೋಬ್ಬರಿ 1000 ಎಕರೆ ಹುಲ್ಲುಗಾವಲನ್ನು ಜುಜು ವಾರ್ಷಿಕ 45 ಲಕ್ಷಕ್ಕೆ ಭೋಗ್ಯಕ್ಕೆ ಹಾಕಲಾಗಿದೆ.

ಅದಾಗಲೇ ಜಮೀನಿನ ಸುತ್ತ ಆಳೆತ್ತರದ ಕಾಂಪೌಂಡ ಗೋಡೆಗಳು ಎದ್ದು ನಿಂತು ಜನ-ಜಾನುವಾರುಗಳನ ಹುಲ್ಲುಗಾವಲಿನಿಂದ ದೂರು ಇಡುತ್ತಿವೆ. ವಿಪರ್ಯಾ ಅಂತಂದರೆ ಅದೇ ಹುಲ್ಲುಗಾವಲನ್ನು ಆಧರಿಸಿ ಬು ಹೆಣೆದೋ, ಕುರಿ ಉಣ್ಣೆಯ ಕಂಬಳಿ ನೇಯ್ದೊ ನೆ ಕಂಡುಕೊಂಡಿದ್ದ ಜನ ವಿಧಿಯಿಲ್ಲದೆ ಆ ಕಾಂಪೌಂ ಗೋಡೆ ಕಟ್ಟುವ ಕಾಯಕಕ್ಕೆ ಹೊಂದಿಕೊಳ್ಳುತ್ತಿದ್ದಾರೆ. ಬಡಪಾಯಿಗಳಿಗೆ ಅದಾದರು ಎಷ್ಟು ದಿನದ ಉದ್ಯೋಗ

● ಮನೋಹರ ಪಟೇಲ್.ಆರ
(ಮೈತ್ರೇಯ ಪರಿಸರ ಅಧ್ಯಯನ ಕೇಂದ್ರ, ತಿಪಟೂ
ಮತ್ತು ಗಿರೀಶ್ ತಾಳಿಕ




ತಿಕ್ಕಲು ನಟ ಉಪೇಂದ್ರನ ಮತ್ತೊಂದು ಕುಚೇಷ್ಟೆ

ಬಸವಣ್ಣ ಬಿದ್ದ ಬ್ರಾಹ್ಮಣ ಎದ್ದ!

ಬಸವಣ್ಣ ಎಂಬ ಹೆಸರಿಗೂ ಬ್ರಾಹ್ಮಣ ಎಂಬ ...ಕ್ಕೂ ಯಾವುದೇ ವ್ಯತ್ಯಾಸವಿಲ್ಲವೆ? ಇವೆರಡೂ ಸಮಾನ ...ದ್ದೇಶ ಮತ್ತು ಅರ್ಥ ಕೊಡುವ ಪದಗಳೇ?

...ಮೊದಲು ಬಸವಣ್ಣ ಎಂಬ ಹೆಸರಿಟ್ಟು ಅದರ ವಿರುದ್ಧ ...ಭಟನೆ ವ್ಯಕ್ತವಾಗಿದ್ದೇ ತಡ, ಅದನ್ನು ಬ್ರಾಹ್ಮಣ ಎಂದು ...ಬದಲಿಸಿದ ಉಪೇಂದ್ರನ ಸಾಂಸ್ಕೃತಿಕ ಕುಚೇಷ್ಟೆ ಎಸಗಿದ ...ಮಾಜಿಕ ಅಪಚಾರ ಕೂಡ ಸಣ್ಣದೇನಲ್ಲ.



...ಕ್ರಾಂತಿಯೋಗಿ ಬಸವಣ್ಣನ ಬಗ್ಗೆ ಗೌರವವುಳ್ಳ ...ದ ಜನತೆಗಿದು ಗಾಯದ ಮೇಲೆ ಬರೆ ...ದಂಥದ್ದೇ. ಅಂದರೆ ಕೈಯಲ್ಲಿ ಖಡ್ಗ, ಗನ್ನು ...ಡಿದು ರಕ್ತ ಹರಿಸಲು ನಿಂತ ಬಸವಣ್ಣನ ...ಕ್ಕಿಂತಲೂ ಅದೇ ಬಸವಣ್ಣನಿಗೆ ಬ್ರಾಹ್ಮಣ ...ದು ಹೆಸರು ಬದಲಿಸಿದ್ದು ಹೆಚ್ಚು ...ಾಯಕಾರಿ ಮತ್ತು ಅನರ್ಥಕಾರಿ!

...ಕಾಲಾನುಕಾಲಕ್ಕೆ ಒಂದಲ್ಲ ಒಂದು ...ಸ್ಕೃತಿಕ ಅನಾಹುತ ಮಾಡುತ್ತಲೇ ...ದ ಉಪ್ಪಿ ಬಸವಣ್ಣ ಎಂಬ ...ರಿಟ್ಟು ಬಸವಣ್ಣನ ಕೈಗೆ ಖಡ್ಗ, ...ಾಲ್ವರ್ ಕೊಟ್ಟು ಮಾಡಿದ ...ೋದ್ಯವನ್ನಾದರೂ ಕ್ಷಮಿಸಬಹುದಿತ್ತು. ...ರೆ ಅದನ್ನು ಬದಲಿಸಿ ಬ್ರಾಹ್ಮಣ ಎಂಬ ...ರಿಟ್ಟದ್ದು ಮಾತ್ರ ಅಕ್ಷಮ್ಯವೇ. ಚಾರಿತ್ರಿಕವಾಗಿ ಬಸವಣ್ಣ ...ತ್ತು ಬ್ರಾಹ್ಮಣ ಪದಗಳೆರಡೂ ಪರಸ್ಪರ ವಿರೋಧಾಭಾಸದ ...ಸ್ಕೃತಿಕ ವೈರುಧ್ಯದ ಪದಗಳು. ಬ್ರಾಹ್ಮಣ್ಯದ ಕ್ರೌರ್ಯ ...ತಿಮಂತಿಕೆ, ಅಸಮಾನತೆಗಳ ವಿರುದ್ಧ ಕರ್ನಾಟಕದ ಮಟ್ಟಿಗೆ ...ದಲು ಬಂಡಾಯವೆದ್ದವನು ಬಸವಣ್ಣ. ಹನ್ನೆರಡನೆ ...ಮಾನದ ವಚನಕಾರರ, ಶಿವಶರಣರ ಅಷ್ಟೂ ವಚನಗಳು ...ಲವಾಗಿ ಖಂಡಿಸಿದ್ದು ಬ್ರಾಹ್ಮಣ್ಯದ ಆತ್ಮವಂಚಕ ...ವೃತ್ತಿಯನ್ನೇ ತಾನೇ?

...ಇಂಥದೊಂದು ಕ್ರಾಂತಿಕಾರಿ ಸಾಮಾಜಿಕ ಪರಿವರ್ತನೆಯ ...ಳುವಳಿಯಿದ್ದರೂ ಉಪ್ಪಿ ತನ್ನ ಚಿತ್ರದ ಹೆಸರನ್ನು ಬಸವಣ್ಣನ ...ಬದಲಿಗೆ ಬ್ರಾಹ್ಮಣ ಎಂದಿಡುತ್ತಿರಲಿಲ್ಲ. ಕ್ರಾಂತಿಯೋಗಿ ...ಸವಣ್ಣನ ಕುರಿತಂತೆ ಕನ್ನಡ ಜನತೆಗಿರುವ ಗೌರವ, ...ಚಿತ್ಯವನ್ನು ಬಳಸಿಕೊಂಡು ವಿವಾದ ಹುಟ್ಟಿಹಾಕಿ ...ಮೂಲಕ ಕೋಟಿ ಖಮಾಯಿಸುವ ಉಪ್ಪಿಯ ವಿಕೃತಿ ...ೇ ಮೊದಲೇನಲ್ಲ. ಇದಕ್ಕೂ ಮುನ್ನ 'ಹಿಂದೂ' ಎಂಬ ...ರಿಟ್ಟು ಆರೆಸ್ಸೆಸ್ ಪ್ರಾಯೋಜಿತ ಬಿಲ್ಲು ಎಳೆದು ಬಾಣ ...ಡುತ್ತಿರುವ ಅಯೋಧ್ಯಾ ರಾಮನ ಥರವೇ ತಾನೂ ಕೇಸರಿ ...ಧಾರಿಯಾಗಿ ಬಾಣ ಬಿಡುತ್ತಿರುವ ಪೌರಾಣಿಕ ಪಾತ್ರ ...ಸಿ ಉಪ್ಪಿ ಜಾಹೀರಾತು ಕೊಟ್ಟಿದ್ದ. ಮುಸ್ಲಿಮರ ರಕ್ತ ...ಸುವುದೇ 'ಹಿಂದೂ' ಉದ್ದೇಶ ಎಂಬಂತೆ ಉಪ್ಪಿ ...ಸಹೊರಟ ಆ ಚಿತ್ರದ ವಿರುದ್ಧವೂ ಪ್ರತಿಭಟನೆಗಳಾದವು.


...ಈ ರೀತಿ ಇಲ್ಲಸಲ್ಲದ 'ಗಿಮಿಕ್' ಮಾಡಿ ವಿವಾದ ...ಟ್ಟು ಹಾಕಿಯೇ ಸುದ್ದಿಯಾಗುವ ಉಪ್ಪಿಯ ಚಾಳಿಗೆ ...ಮೊಂದೇ ಅಲ್ಲ. ಮೊದಲು 'ಶ್!' ಎಂಬ ನಿಶಬ್ಧ ...ಚಲಿಟ್ಟು ಸಿನಿಮಾ ಮಾಡಿದ್ದು, ಆನಂತರ ಸ್ವಸ್ತಿಕ್ ...ನ್ಹೆಯನ್ನೇ ಹೆಸರೆಂದು ಪ್ರಯೋಗಿಸಿದ್ದು, ಅದಕ್ಕೂ ಮುನ್ನ ... ಎಂಬ ಅಕ್ಷರ ಬಳಸಿ ಅದನ್ನೇ ಟೈಟಲಾಗಿಸಿದ್ದು ...ನಂತರ ಬುದ್ಧನ ಥಿಯರಿ ಬಳಸಿ ಕತೆ ಮಾಡಿದ್ದೇನೆಂದು ...ದೇ 'ಉಪೇಂದ್ರ' ಎಂಬ ಹೆಸರಿಟ್ಟು ಹಲವಾರು ...ಣ್ಣುಗಳನ್ನು ಏಕಕಾಲಕ್ಕೆ ಪೀಡಿಸುವ ನಾಯಕನ ವಿಕೃತಿ ...ಮೆರೆದದ್ದು ಇತ್ತೀಚೆಗೆ ಕೈ ಬೆರಳುಗಳ ಚಿಹ್ನೆಯನ್ನೇ 'ಸೂಪರ್' ...ದಿಟ್ಟು ವಿಚಿತ್ರ ಕತೆಯ ಸಿನಿಮಾ ಮಾಡಿದ್ದು- ಹೀಗೆ ...ಪ್ಪಿಯ ಹುಚ್ಚಾಟಗಳದ್ದೇ ಪ್ರತ್ಯೇಕ ಇತಿಹಾಸವಿದೆ.

...ಈ ರೀತಿ ಚಿತ್ರವಿಚಿತ್ರ ಗಿಮಿಕ್ ಮಾಡಿ ತಾನೊಬ್ಬ ...ಶಿಷ್ಟ ನಿರ್ದೇಶಕನೆಂದು ಬೆನ್ನುತಟ್ಟಿಕೊಳ್ಳುವ ಉಪ್ಪಿಯ ...ಗಳಿಂದಾಗಿ ವಿಕೃತ ಕಾಮಿಗಳು ಹುಟ್ಟಿಕೊಂಡರೇ ...ೊರತು ಬುದ್ಧನ ತತ್ವಗಳಾಗಲಿ, ಅಹಿಂಸೆಯ ವಿಳಿಗೆ ...ಗಲಿ ಆಗಲೇ ಇಲ್ಲ. ಉಪ್ಪಿಯ ಸಿನಿಮಾ ನೋಡಿಯೇ ...ಪ ಪ್ರೇಯಸಿಗೆ ಆ್ಯಸಿಡ್ ಹಾಕಿದ್ದು ಎಂದು ವಿಕೃತನೊಬ್ಬ ...ಲೀಸರಿಗೆ ಹೇಳಿಕೆ ಕೊಟ್ಟಿದ್ದು, ವರಸೆಯಲ್ಲಿ ...ಗಿಯಾಗಬೇಕಾದವಳೊಬ್ಬಳ ರುಂಡವನ್ನು ನಡುರಸ್ತೆಯಲ್ಲಿ ...ಾಡಿದವನೊಬ್ಬ ತನ್ನ ವಿಕೃತಿಗೆ 'ಓಂ' ಚಿತ್ರದ ಹೀರೋನ ...ೀರತೆಯನ್ನೇ ಸಮರ್ಥನೆಯಾಗಿ ಬಳಸಿದ್ದು ಉಪ್ಪಿ ಹುಚ್ಚು ...ಸೃಷ್ಟಿಸಿದ ಸಾಮಾಜಿಕ ಪರಿಣಾಮಗಳಷ್ಟೆ.


...ಅಂದರೆ ಹುಡುಗಿಯೊಬ್ಬಳಿಗೆ ಇಷ್ಟವಿದೆಯೋ ಇಲ್ಲವೋ ...ಮುಖ್ಯವಲ್ಲ, ತಾನು ನಿನ್ನನ್ನು ಪ್ರೀತಿಸ್ತಿದ್ದೀನಲ್ಲ, ಆ ...ರಣಕ್ಕೆ ನೀನೂ ನನ್ನನ್ನು ಪ್ರೀತಿಸಲೇಬೇಕು. ಇಂಥ ...ಸೋಪಿಕಾರದ ಪರಮಾವಧಿಯೇ ಉಪ್ಪಿಯ ಲೇಟೆಸ್ಟ್ ... ಬಸವಣ್ಣ. ಸಿ.ಆರ್. ಮನೋಹರ್ ಎಂಬ ಮಾಜಿ ...ಎಸ್ ನಾಯಕ ಇದರ ನಿರ್ಮಾಪಕನಾದರೂ ಪರಿಕಲ್ಪನೆ, ... ಪಾತ್ರ ಸೃಷ್ಟಿ, ಸಟಿಜೆಗಳೆಲ್ಲವೂ ಉಪ್ಪಿಯದಾಗಿತ್ತು ...ಗೊಬ್ಬ ಡೈರೆಕ್ಟರ್ ಬೇಕಲ್ಲ, ಅದಕ್ಕೊಂದು ಉಪ್ಪಿಗೆ ...ದು 'ದಂಡುಪಾಳ್ಯ'ದ ಡೈರೆಕ್ಟರ್ ಶ್ರೀನಿವಾಸರಾಜು!

...ಅಧ್ವಾನದ, ಬೆಟ್ಟಗಟ್ಟೂ ಕನ್ನಡ ಬಾರದ, ಗಾದಿಗ ...ಇತಿಹಾಸದ ಗಂಧಗಾಳಿಯಿಲ್ಲದ ಶ್ರೀನಿವಾಸರಾಜು ... ಹಿಂಸೆ ಮತ್ತು ಅವಿವೇಕಿಯೆಂದರೆ ದಂಡುಪಾಳ್ಯದ ನರಹಂತಕರ ವಿಕೃತ ಹಿಂಸೆಗಳನ್ನೇ ರೋಚಕತೆ ಎಂದು ನಂಬಿದ್ದಾನೆ. ಅದನ್ನೇ ಹಸಿಹಸಿಯಾಗಿ ಚಿತ್ರಿಸಿ ತಾನೊಬ್ಬ ಸ್ಟಾರ್ ಡೈರೆಕ್ಟರ್ ಎಂದು ಭಾವಿಸಿದ್ದಾನೆ. ಈ ಹಿಂದೆ 'ಸಂಗಾತಿ', ಪ್ರಜ್ವಲ್ ದೇವರಾಜ್ ನಟಿಸಿದ್ದ 'ಕೋಟೆ', 'ನನ್ನವರು' ಇತ್ಯಾದಿ ತೋಪು ಸಿನಿಮಾಗಳನ್ನೇ ತೆಗೆದು ತಲೆ ಖಾಲಿಯಾಗಿದ್ದ ಶ್ರೀನಿವಾಸರಾಜು ದಂಡುಪಾಳ್ಯದ ಭಾಗ ಎರಡನ್ನು ಮಾಡಲು ಹೋಗಿ ಸಿನಿಮಾ ವರದಿಗಾರರಿಂದಲೇ ಛೀಮಾರಿಗೊಳಗಾಗಿದ್ದ.

'ದಂಡುಪಾಳ್ಯ'ದ ಮೊದಲ ಭಾಗದಲ್ಲೇ ಇಷ್ಟೊಂದು ರೇಪು ರಕ್ತ ಎಂದ ಮೇಲೆ ಎರಡನೇ ಪಾರ್ಟಿನಲ್ಲಿ ಕೊಲೆ, ರೇಪುಗಳ ಪ್ರಮಾಣ ದುಪ್ಪಟ್ಟಾಗಲೇ ಬೇಕಲ್ಲವೇ? ಎಂದು ಸಿನಿಮಾ ಪತ್ರಕರ್ತರು ಕೇಳಿದ ಪ್ರಶ್ನೆಗೆ ಚಿತ್ರ ವಿಚಿತ್ರ ಶೈಲಿಯ ರೇಪು, ಹತ್ಯೆಗಳ ಭಯಾನಕ ಚಿತ್ರಣವನ್ನೇ ನೀಡುತ್ತಿದ್ದ ಶ್ರೀನಿವಾಸರಾಜು ಮನಸ್ಥಿತಿಯೇ ದಂಡು ಪಾಳ್ಯದ ಹಂತಕರಿಗಿಂತಲೂ







ವಿಕಾರವಾಗಿತ್ತು.

ಇಂಥವನನ್ನು ಮುಂದಿಟ್ಟುಕೊಂಡು 'ಬಸವಣ್ಣ' ಹೆಸರಿಟ್ಟು ಉಪ್ಪಿ ಚಿತ್ರದ ಜಾಹೀರಾತು ಕೊಟ್ಟಾಗಲೇ ಅನೇಕರಿಗೆ ಅನ್ನಿಸಿದ್ದು ಶ್ರೀನಿವಾಸರಾಜು ಮಾಡಬೇಕೆಂದಿದ್ದ 'ದಂಡುಪಾಳ್ಯ-2' ಚಿತ್ರಕ್ಕೆ ಬಸವಣ್ಣ ಎಂಬ ಹೆಸರಿಟ್ಟಿರಬಹುದೆ ಎಂದು!

ತಮಾಷೆಯೆಂದರೆ ಚಿತ್ರದ ಹೆಸರು ಬಸವಣ್ಣ ಆದರೂ ಕೈಯಲ್ಲಿ ತಲವಾರ್ ಹಿಡಿದ ಉಪ್ಪಿಯ ಬಸವಣ್ಣನ ಪಾತ್ರ ಹೋಲುತ್ತಿದ್ದದ್ದು ಬ್ರಾಹ್ಮಣ್ಯದ ಪ್ರತಿರೂಪಿ ಜುಟ್ಟು ಬಿಟ್ಟ ಚಾಣಕ್ಯನ ಪಾತ್ರವನ್ನು. ಇನ್ನೊಂದೆಡೆ ಧ್ಯಾನಸ್ಥ ಬಸವಣ್ಣನ ಬಳಿ ಪಿಸ್ತೂಲನ್ನು ಕೊಡಲಾಗಿತ್ತು. ಚಿತ್ರದ ಪೋಸ್ಟರ್, ಜಾಹೀರಾತೇನೋ ಪತ್ರಿಕೆಗಳಲ್ಲಿ ಪ್ರಕಟವಾಗಿತ್ತಾದರೂ ಉಪ್ಪಿಯ ಪರಮಾಪ್ತರೇ ಹೇಳುವಂತೆ ಅದಕ್ಕಿನ್ನೂ ಕತೆ, ಚಿತ್ರಕತೆ ಏನೆಂದೂ ಸಿದ್ಧವಾಗೇ ಇರಲಿಲ್ಲ!

ಇದರರ್ಥ ಕತೆ ಕೂಡ ಗೊತ್ತಿಲ್ಲದೆ ಕೇವಲ ಪ್ರಚಾರಕ್ಕಾಗಿ ಈ ಥರದ ಹಸಿಬಿಸಿ ಗಿಮಿಕ್ಕಿಗೆ ಉಪ್ಪಿ ಕೈಯಿಟ್ಟಿದ್ದ. ಅದು ಆತನ ಹತಾಶೆ ಮತ್ತು ಬೌದ್ಧಿಕ ದಿವಾಳಿತನದ ಲೇಟೆಸ್ಟ್ ವರಸೆಯಷ್ಟೆ. ತಾನು ನಿರ್ದೇಶಕನಾಗಿ ಇನ್ನೂ ಜೀವಂತವಾಗಿದ್ದೇನೆಂದು ಸಾಬೀತು ಮಾಡಿಯೇ ತೀರುತ್ತೇನೆಂದು ಬೆರಳು ಸೂಚಕ 'ಸೂಪರ್' ಚಿತ್ರ ಮಾಡಿದ್ದು ಹೆಸರಿಗಷ್ಟೇ ಹಿಟ್ಟಾಯಿತೇ ಹೊರತು ಹಾಕಿದ ದುಡ್ಡು ಕೂಡ ಗಿಟ್ಟಲಿಲ್ಲ. ಮಹತ್ವಾಕಾಂಕ್ಷೆಯ 'ಟೋಪಿವಾಲ' ಇನ್ನಿಲ್ಲದಂತೆ ನೆಲ ಕಚ್ಚಿತು. ಮುನಿರತ್ನ ಕೋಟಿ ಕೋಟಿ ಸುರಿದು ಮಾಡಿದ 'ಕಠಾರಿವೀರ ಸುರಸುಂದರಾಂಗಿ'ಗೆ ಹಾಕಿದ ಬಂಡವಾಳಕ್ಕಾಗಿ ಹಿಂದೂ ಪರ ಸಂಘಟನೆಗಳ ಮೊರೆ ಹೋಗಬೇಕಾಯ್ತು. 'ಕಲ್ಪನಾ' ಚಿತ್ರದಲ್ಲಿ ಉಪ್ಪಿಯ ಮಂಗಳಮುಖಿಯ ಪಾತ್ರ ಪ್ರೇಕ್ಷಕರನ್ನು ರಂಜಿಸಿತ್ತಾದರೂ ಅದು ತಮಿಳು ಚಿತ್ರದ ರೀಮೇಕ್ ಎಂಬುದು ಜಗಜ್ಜಾಹೀರಾಗಿತ್ತು.

ಹಾಗೆ ನೋಡಿದರೆ ಉಪ್ಪಿಯ ಇತ್ತೀಚಿನ ಒಂಬತ್ತು ಚಿತ್ರಗಳ ಪೈಕಿ ಯಾವೊಂದು ಹಿಟ್ಟಾಗದೇ ಸಾಲುಸಾಲಾಗಿ ತೋಪಾದವು. ಅಲ್ಲಿಗೆ ಆತನ ಸ್ಟಾರ್ ವ್ಯಾಲ್ಯೂ ಮತ್ತು ತಲೆ ಸರಕು ಎರಡೂ ಒಟ್ಟೊಟ್ಟಿಗೆ ಖಾಲಿಯಾಗಿವೆ ಎಂಬುದು ಸಾಬೀತಾದಂತಾಯ್ತು. ಹೊಸ ಅವಕಾಶಗಳಿಲ್ಲ. ತಾಜ್‌ಮಹಲ್ ಚಂದ್ರು ನಿರ್ದೇಶನದ 'ಬ್ರಹ್ಮ' ಬಿಟ್ಟರೆ ಉಪ್ಪಿಯ ಲೆಕ್ಕಕ್ಕೆ ಅಂತ ಮತ್ತೊಂದು ಚಿತ್ರವಿಲ್ಲ.

ಇಂಥ ಹತಾಶೆಯಲ್ಲೇ ತನ್ನ ಅಸ್ತಿತ್ವ ಉಳಿಸಿಕೊಳ್ಳಲು ಉಪ್ಪಿ ಕೈಹಾಕಿದ್ದು 'ಬಸವಣ್ಣ'ದ ಗಿಮಿಕ್ಕಿಗೆ. ಕತೆಯನ್ನೇ ಮಾಡದೆ, ಕತೆ ಏನೆಂದು ಕೂಡ ಗೊತ್ತಿಲ್ಲದೆ ವಿವಾದ ಹುಟ್ಟಿಹಾಕುವ ಒಂದೇ ಉದ್ದೇಶದಿಂದ ದಂಡುಪಾಳ್ಯದ ಮನಸ್ಥಿತಿಯ ಶ್ರೀನಿವಾಸರಾಜುನನ್ನು ಹಿಡಿದುತಂದು ಬಸವಣ್ಣನ ಕೈಗೆ ತಲವಾರ್, ರಿವಾಲ್ವರ್ ಕೊಟ್ಟಿದ್ದೇ ಪೋಸ್ಟರ್ ಜಾಹೀರಾತು ಪ್ರಕಟಿಸಿಬಿಟ್ಟರು. ಮೊದಲೇ ಬಸವಣ್ಣನ ಹೆಸರಲ್ಲಿ ಒಂದರ ಮೇಲೊಂದು ವಾದ-ವಿವಾದಗಳಾಗುತ್ತಲೇ ಇದ್ದವಲ್ಲ; ಅದನ್ನು ಚೆನ್ನಾಗೇ ಅರ್ಥಮಾಡಿಕೊಂಡ ಉಪ್ಪಿ ಆತುರಾತುರವಾಗಿ 'ಹಿಂದೂ' ಮಾದರಿಯದ್ದೇ ಕುಚೇಷ್ಟೆಗೆ ಬಿದ್ದು ಬಸವಣ್ಣನ ಕೈಗೆ ರಿವಾಲ್ವರ್ ಕೊಟ್ಟಿದ್ದ.

ಉಪ್ಪಿಯ ಲೆಕ್ಕಾಚಾರ ಈ ವಿಷಯದಲ್ಲಿ ಸುಳ್ಳಾಗಲೇ ಇಲ್ಲ. ಬಹುಶಃ ಇದನ್ನೇ ಕಾದು ಕೂತಿದ್ದ ಟೀವಿ ಚಾನಲ್ಲುಗಳು ಇದ್ದಕ್ಕಿದ್ದಂತೆ ಎಚ್ಚೆತ್ತುಕೊಂಡವರಂತೆ ದಿನವಿಡೀ ವಾದಾವಾದ ಶುರು ಹಚ್ಚಿಕೊಂಡವು. ವಿಧಾನಸಭೆಯಲ್ಲೇ ಪ್ರತಿಭಟನೆಯಾಯಿತು. ರೂಢಿಯಂತೆ ಫಿಲ್ಮ್‌ಛೇಂಬರಿನಲ್ಲಿ ಟೈಟಲ್ ನೋಂದಾಯಿಸಬೇಕಿತ್ತು, ಅದನ್ನು ಕೂಡ ಮಾಡದೆ ಏಕಾಏಕಿ ಫಿಲ್ಮ್ ಅನೌನ್ಸ್ ಮಾಡಿದ್ದರ ಹಿಂದಿದ್ದ ಉದ್ದೇಶವೇ



ವಿವಾದ ಹುಟ್ಟು ಹಾಕುವುದಾಗಿತ್ತು ಎಂಬ ಬಗ್ಗೆ ಯಾರಲ್ಲೂ ಅನುಮಾನಗಳಿರಲಿಲ್ಲ ನಿಜ.

ಆದರೆ ಒಂದು ಯಡ್ಡವಟ್ಟನ್ನು ಸೃಷ್ಟಿಸಿ ಅದನ್ನು ಸರಿಪಡಿಸುತ್ತೇನೆಂದು ಅದಕ್ಕಿಂತಲೂ ಭಯಂಕರ ತಪ್ಪು ಮಾಡುವುದಿದೆಯೆಲ್ಲ, ಬಹುಶಃ ಇದಕ್ಕಿಂತ ಮತ್ತೊಂದು ವಿಕೃತಿ ಇರಲಿಕ್ಕಿಲ್ಲ. ಅಂದರೆ ಬಸವಣ್ಣನ ಕೈಗೆ ತಲವಾರ್ ರಿವಾಲ್ವರ್ ಕೊಟ್ಟಿದ್ದಕ್ಕಿಂತಲೂ ದೊಡ್ಡ ಅಪಚಾರ ಬಸವಣ್ಣನ ಹೆಸರಿಗೆ ಪರ್ಯಾಯವಾಗಿ ಬ್ರಾಹ್ಮಣ ಎಂದು ಬದಲಿಸಿದ್ದು. ಅಲ್ಲಿಗೆ ಬಸವಣ್ಣ ಎಂಬ ಪದದ ಪರ್ಯಾಯ ಅರ್ಥ ಬ್ರಾಹ್ಮಣ ಎಂದಾಯ್ತು ಅಥವಾ ಬ್ರಾಹ್ಮಣ ಶಬ್ದದ ಮತ್ತೊಂದು ರೂಪವೇ ಬಸವಣ್ಣ ಎಂಬರ್ಥ!

ಮೇಲುನೋಟಕ್ಕಿದು ಉಪ್ಪಿಯ ವಿಕೃತಿಯ ಮುಂದುವರಿಕೆಯೋ ಅಥವಾ ಗಿಮಿಕ್‌ನ ಇನ್ನೊಂದು ಯತ್ನದಂತೆಯೋ ಕಾಣಬಹುದು. ಪ್ರಚಾರದ ಹುಚ್ಚಿಗೆ ಬಿದ್ದು ತನಗರಿವಿಲ್ಲದೆಯೂ ಉಪ್ಪಿ ಯಡವಟ್ಟಿಗೆ ಬಿದ್ದಿರಬಹುದು. ಆದರೆ ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಇದೊಂದು ಶುದ್ಧ ಅಪರಾಧ ಮತ್ತು ಕುಚೋದ್ಯ!

ಬಸವಣ್ಣ ಮತ್ತು ಹನ್ನೆರಡನೇ ಶತಮಾನದ ಬಹುತೇಕ ಶಿವಶರಣರೆಲ್ಲ ಬ್ರಾಹ್ಮಣ್ಯದ ಕಡುವಿರೋಧಿಗಳೆಂಬ ಚರಿತ್ರೆಗೇ ಬಗೆದ ಅಪಚಾರ.


ಬಸವಣ್ಣ ಎಂಬ ಹೆಸರಿಟ್ಟ ಒಂದೇ ಕಾರಣಕ್ಕೆ ಇಷ್ಟೆಲ್ಲ ಪ್ರತಿಭಟನೆ ಸಂಭವಿಸಬಹುದಾದರೆ ಬಸವಣ್ಣ ಹೆಸರಿಗೆ ಪರ್ಯಾಯವಾಗಿ ಬ್ರಾಹ್ಮಣ ಪದ ಬಳಸಿದ್ದಕ್ಕೆ ಇನ್ನೆಂಥ ಆಕ್ರೋಶ ವ್ಯಕ್ತವಾಗಬೇಕು? ವಿಪರ್ಯಾಸವೆಂದರೆ ಬ್ರಾಹ್ಮಣ ಟೈಟಲನ್ನೂ ಬದಲಿಸುವಂತೆ ಕೆಲ ಬ್ರಾಹ್ಮಣ ಸಂಘಟನೆಗಳ ಜೊತೆ ಒಂದು ಗುಂಪಿನ ಬಿಜೆಪಿ ಶಾಸಕರೂ ಪ್ರತಿಭಟನೆಗಿಳಿದಿದ್ದಾರೆ. ಸದ್ಯ ಬಸವಣ್ಣ ಮತ್ತು ಬ್ರಾಹ್ಮಣ ಎರಡೂ ಟೈಟಲ್‌ಗಳನ್ನು ಕೈಬಿಟ್ಟಿದ್ದೇವೆಂದು ಉಪ್ಪಿಯ ಏಜೆಂಟರು ಘೋಷಿಸಿರಬಹುದು. ಆದರೆ ಬಸವಣ್ಣನಿಗೆ ಬಗೆದ ಅಪಚಾರ..?

ಉಪ್ಪಿಯ ತಲೆಯಲ್ಲಿ ಚೂರುಪಾರು ಸರಕೇನಾದರೂ ಉಳಿದಿದ್ದರೆ ಮೊದಲು ಹನ್ನೆರಡನೇ ಶತಮಾನದ ಕಾಯಕ ಜೀವಿಗಳ ಕ್ರಾಂತಿಯ ಉದ್ದೇಶವನ್ನು ಅರ್ಥಮಾಡಿಕೊಳ್ಳಲಿ. ಕನಿಷ್ಠ ಮನುಷ್ಯತ್ವವಾದರೂ ಉಪ್ಪಿಯಲ್ಲಿದ್ದರೆ ಕ್ರಾಂತಿಯೋಗಿ ಬಸವಣ್ಣನಿಗೆ ತಾನು ಬಗೆದ ಅಪಚಾರಕ್ಕಾಗಿ ಕ್ಷಮೆ ಯಾಚಿಸಲಿ.

● ರಾ. ಸೋಮನಾಥ್

ಸಭ್ಯ ವರ್ಣರಂಜಿತ ವ್ಯಕ್ತಿ ನೇಪಥ್ಯಕ್ಕೆ

ಒಂದು ಪತ್ರ



ಜುಲೈ 31ರ ಸಂಚಿಕೆಯಲ್ಲಿ ಶೃಂಗಾರ ನಾಗರಾಜರ ಬಗ್ಗೆ ಓದಿದೆ. ನಾಗರಾಜ್‌ರು ನಾನು ಬೆಂಗಳೂರಿನ ಮೌಂಟ್ ಕಾರ್ಮೆಲ್ ಕಾಲೇಜಿನಲ್ಲಿ ವಿದ್ಯಾರ್ಥಿನಿಯಾಗಿದ್ದಾಗ, ನಮ್ಮ ಕಾಲೇಜಿನ ಅಧಿಕೃತ ಫೋಟೋಗ್ರಾಫರ್ ಆಗಿದ್ದರು. ಕಾಲೇಜಿನಲ್ಲಿ ಸಮಾರಂಭಗಳಿದ್ದಾಗ ಠಾಕೂಠೀಕಾಗಿ ಸ್ಕೂಟರಿನಲ್ಲಿ ಬಂದಿಳಿಯುತ್ತಿದ್ದ ನಾಗರಾಜರಿಂದ ಫೋಟೋ ತೆಗೆಸಿಕೊಳ್ಳಲು ಹುಡುಗಿಯರು ದುಂಬಾಲು ಬೀಳುತ್ತಿದ್ದರು. ಸುಂದರ ನಟನಂತೆ ಇದ್ದ ನಾಗರಾಜ್ ಹುಡುಗಿಯರ ಕಣ್ಮಣಿಯಾಗಿದ್ದರು. ಒಮ್ಮೆ ಕಾಲೇಜಿನಿಂದ ಟ್ರಿಪ್‌ಗೆ ಹೋದಾಗ ಹುಡುಗಿಯರು ಅವರೊಡನಿದ್ದ photographer ನಾಗರಾಜರನ್ನು ಗೋಳು ಹುಯ್ದುಕೊಂಡಿದ್ದು ಅಷ್ಟಿಷ್ಟಲ್ಲ. ಆದರೆ ಅವರು ಯಾವಾಗಲೂ ಸಭ್ಯತೆಯ ಎಲ್ಲೆಯನ್ನು ಮೀರದ ವ್ಯಕ್ತಿಯಾಗಿದ್ದರು. ಆ ದಿನಗಳಲ್ಲಿ ಅವರು ತೆಗೆದ ನನ್ನ ಮತ್ತು ಗೆಳತಿಯರ ಫೋಟೋಗಳು ಇನ್ನೂ ನನ್ನಲ್ಲಿ ಇವೆ. ಆ ದಿನಗಳಲ್ಲಿ ನಾಗರಾಜರಿಗೆ ಶೃಂಗಾರ ಎಂಬ ಬಿರುದು ಅಂಟಿಕೊಂಡಿರಲಿಲ್ಲ.

ನಾಗರಾಜ್ ನಿರ್ಮಿಸಿದ 'ಪುಷ್ಪಕ ವಿಮಾನ' ಒಂದು ಅದ್ಭುತ ಚಿತ್ರ. ಸಂಭಾಷಣೆಯ ನೆರವಿಲ್ಲದ ಅದು ಮೌನ ಸಂವಾದ ನಡೆಸಿತು.

ನನ್ನ ವಿದ್ಯಾರ್ಥಿದೆಸೆಯ ಒಬ್ಬ ಸಭ್ಯ ವರ್ಣರಂಜಿತ ವ್ಯಕ್ತಿ ನೇಪಥ್ಯಕ್ಕೆ ಸರಿದದ್ದು ವಿಷಾದವೆನಿಸುತ್ತದೆ.

-ಪದ್ಮ ಶ್ರೀರಾಮ್, ಮೈಸೂರು



...2ರಲ್ಲಿ ಶೃಂಗಾರ್ ನಾಗರಾಜ್ ತೆಗೆದ ಕಪ್ಪು ಬಿಳುಪಿನ ಫೋಟೋ... ಗೆಳತಿಯರ ನಡುವೆ ಪದ್ಮಾ ಶ್ರೀರಾಮ್

ಮಂಡ್ಯ ಲೋಕಸಭೆ ಉಪಚುನಾವಣೆ

'ಜೆಡಿಎಸ್' ಅಬ್ಬರ, 'ಕೈ' ತತ್ತರ, 'ಬಿಜೆಪಿ' ನಿರುತ್ತರ!

ಮಂಡ್ಯದಲ್ಲಿ ಲೋಕಸಭೆ ಉಪಚುನಾವಣೆ ಎದುರಾಗಿದೆ. ವಿಧಾನಸಭಾ ಚುನಾವಣಾ ಫಲಿತಾಂಶ ಗ್ಯಾರಂಟಿ ಅತಂತ್ರವಾಗುತ್ತ ಆಗ ಕಾಂಗ್ರೆಸ್-ಬಿಜೆಪಿ ಯಾವುದಾದರೂ ಪಕ್ಷದೊಂದಿಗೆ ಮೈತ್ರಿ ಸರ್ಕಾರ ರಚಿಸಿ ಮಂತ್ರಿಯಾಗಿ ಮೆರೆಯಬಹುದೆಂಬ ಆಸೆಯಿಂದ ಎಂ.ಪಿ ಸ್ಥಾನಕ್ಕೆ ರಾಜೀನಾಮೆ ನೀಡಿ ನಾಗಮಂಗಲದಿಂದ ಸ್ಪರ್ಧಿಸಿ ಶಾಸಕರಾದ ಚೆಲುವರಾಯಸ್ವಾಮಿಗೆ ಈ ಉಪಚುನಾವಣೆಯ ಕ್ರೆಡಿಟ್ ಸೇರಬೇಕು. ಉಳಿದಿರುವ ಒಂಭತ್ತು ತಿಂಗಳ ಅವಧಿಗೆ ಚುನಾವಣೆ ನಡೆಯುತ್ತದೆಯೋ ಇಲ್ಲವೋ ಎಂಬ ಜಿಜ್ಞಾಸೆ ಕಾಡುತ್ತಿರುವ ಹಂತದಲ್ಲೇ ಚುನಾವಣಾ ಆಯೋಗ ದಿಢೀರೆಂದು ಎಂಪಿ ಎಲೆಕ್ಷನ್‌ಗೆ ದಿನಾಂಕ ಗೊತ್ತುಪಡಿಸಿದೆ. ಈ ಉಪಚುನಾವಣೆಯನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡಿರುವ ಜೆಡಿಎಸ್ ಯಾರನ್ನು ಕಣಕ್ಕಿಳಿಸಬೇಕೆಂಬ ಗೊಂದಲದಲ್ಲಿ ಮುಳುಗಿದ್ದರೂ ಕ್ಷೇತ್ರದಲ್ಲಿ ಜಾ.ದಳದ ಹವಾ ಜೋರಾಗೆ ಬೀಸುತ್ತಿದೆ.

ಗೆಲುವಿನ ಸರದಾರ ಎನಿಸಿದ್ದ ರೆಬಲ್‌ಸ್ಟಾರ್ ಅಂಬರೀಶ್ ಅಂತ ಅಂಬರೀಷೆ 2009ರ ಪಾರ್ಲಿಮೆಂಟ್ ಚುನಾವಣೆಯಲ್ಲಿ ಚೆಲುವರಾಯಸ್ವಾಮಿ ಎದುರು 25 ಸಾವಿರಕ್ಕೂ ಅಧಿಕ ಮತಗಳಿಂದ ಸೋಲುಂಡಿದ್ದರು. ಆ ಮಟ್ಟಿಗೆ ಜಿಲ್ಲೆಯಲ್ಲಿ ಜೆಡಿಎಸ್ ತನ್ನ ಪ್ರಾಬಲ್ಯ ಹೊಂದಿತ್ತು. ಆದರಲ್ಲಿ ಚೆಲುವರಾಯಸ್ವಾಮಿಯ ವೈಯಕ್ತಿಕ ವರ್ಚಸ್ಸೂ ಕೆಲಸ ಮಾಡಿದ್ದರಲ್ಲಿ ಎರಡು ಮಾತಿಲ್ಲ. ಸದ್ಯದ ಉಪಚುನಾವಣೆಯಲ್ಲೂ ಜೆಡಿಎಸ್ ಸಮರ್ಥ ಅಭ್ಯರ್ಥಿಯನ್ನು ಕಣಕ್ಕಿಳಿಸಿದ್ದೇ ಆದಲ್ಲಿ ಮತ್ತೊಮ್ಮೆ ಕಾಂಗ್ರೆಸನ್ನು ಸುಲಭವಾಗಿ ಮಕಾಡೆ ಮಲಗಿಸುವ ಸಾಧ್ಯತೆ ಇದೆ.

ಹಾಗೆ ನೋಡಿದರೆ ಜಿಲ್ಲೆಯಲ್ಲಿ ಜಿದ್ದಾಜಿದ್ದಿನ ಸ್ಪರ್ಧೆ ಇರುವುದು ಕಾಂಗ್ರೆಸ್-ಜೆಡಿಎಸ್ ನಡುವೆ ಮಾತ್ರ. ಉಳಿದೆಲ್ಲ ಪಕ್ಷಗಳು ಆಟಕ್ಕುಂಟು ಲೆಕ್ಕಕ್ಕಿಲ್ಲ, ಆದರೂ ಜೆಡಿಎಸ್‌ನ ಪ್ರಾಬಲ್ಯ ತುಸು ಜಾಸ್ತಿ. ಮಂಡ್ಯ, ಮಳವಳ್ಳಿ, ಪಾಂಡವಪುರ ಬಿಟ್ಟರೆ ಉಳಿದ ಎಲ್ಲಾ ಕ್ಷೇತ್ರಗಳಲ್ಲೂ ಜೆಡಿಎಸ್ ಶಾಸಕರದ್ದೇ ಕಾರುಬಾರು. ಮಂಡ್ಯ ಲೋಕಸಭಾ ಕ್ಷೇತ್ರಕ್ಕೆ ಸೇರುವ ಮೈಸೂರಿನ ಕೆ.ಆರ್ ನಗರದಲ್ಲೂ ಗೆದ್ದಿರೋದು ಜೆಡಿಎಸ್ ಅಭ್ಯರ್ಥಿಯೇ. ಹಾಗಾಗಿ ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಜೆಡಿಎಸ್‌ನ ಆರ್ಭಟವೇ ಹೆಚ್ಚಾಗಿದೆ.

ಜೆಡಿಎಸ್ ಪಡೆಯಿಂದ ಉಪಚುನಾವಣೆಗೆ ಸ್ಪರ್ಧಿಸಲು ಮಾಜಿ ಶಾಸಕ ಸಿ.ಎಸ್.ಪುಟ್ಟರಾಜು, ಎಂಎಲ್‌ಸಿ ಬಿ.ರಾಮಕೃಷ್ಣ ದೇವೇಗೌಡರ ಸೊಸೆ ಅನಿತಾ ಕುಮಾರಸ್ವಾಮಿ, ಬೇಗರಾದ ಶಾಸಕ ಡಿ.ಸಿ.ತಮ್ಮಣ್ಣನ ಪುತ್ರ ಸಂತೋಷ್‌ರವರ ಹೆಸರು ಕೇಳಿಬರುತ್ತಿವೆ. ನಿಗೂಢ ಲೆಕ್ಕಾಚಾರದ 'ದೇವೇಗೌಡರ ಟೀಮು' ಆದ್ಯಾರ ಹೆಸರಿಗೆ ಅಂಕಿತ ಹಾಕಲಿದೆ ಎನ್ನುವುದೇ ಸದ್ಯ ಮಂಡ್ಯದಲ್ಲಿ ಚರ್ಚೆಯಾಗುತ್ತಿರುವ ಲೇಟೆಸ್ಟ್ 'ಮಿಣುಕು ಸಮಾಚಾರ' ಅರ್ಥಾತ್ ಫ್ಲ್ಯಾಶ್ ನ್ಯೂಸ್!

ಇಷ್ಟೂ ಜನರಲ್ಲಿ ಪಾಂಡವಪುರದ ಮಾಜಿ ಶಾಸಕ ಸಿ.ಎಸ್.ಪುಟ್ಟರಾಜು ಹೆಸರು ಸ್ವಲ್ಪ ಜೋರಾಗಿಯೇ ಕೇಳಿಬರುತ್ತಿದೆ. ದೇವೇಗೌಡರು ಹಾಗೂ ಮತ್ತವರ ಕುಟುಂಬದೊಂದಿಗೆ ಚೆನ್ನಾಗಿರುವ ಪುಟ್ಟರಾಜುಗೆ ಟಿಕೆಟ್ ಸಿಗುವ ಛಾನ್ಸು ಹೆಚ್ಚು ಎನ್ನಲಾಗುತ್ತಿದೆ. ಹಾಗೊಮ್ಮೆ ಅವರೇ ನಿಶ್ಚಯವಾದರೆ ಗೆದ್ದು ಬರಬಲ್ಲ ಆರ್ಥಿಕ ಹಾಗೂ ಸಂಘಟನಾ ಶಕ್ತಿಯೂ ಪುಟ್ಟರಾಜುಗಿರುವುದು ಅವರ ಮತ್ತೊಂದು ಪ್ಲಸ್ ಪಾಯಿಂಟ್.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಮೇಲುಕೋಟೆ ಕ್ಷೇತ್ರದಿಂದ ಮೂರನೇ ಬಾರಿಯೂ ಪುಟ್ಟಣ್ಣಯ್ಯನವರನ್ನು ಸೋಲಿಸುವ ಹುಂಬ ವಿಶ್ವಾಸ ಪುಟ್ಟರಾಜುಗಿತ್ತು. ತನ್ನ ಸುತ್ತಲಿದ್ದ ಪಟಾಲಂನ ಫರಾಕುಗಳನ್ನೇ ಹೆಚ್ಚು ನಂಬಿದ್ದ ಪುಟ್ಟರಾಜು ತೆಗೆದುಕೊಂಡ ರಾಜಕೀಯ ಎಡವಟ್ಟುಗಳಿಂದ 70 ಸಾವಿರದಷ್ಟು ಮತಪಡೆದರೂ 10 ಸಾವಿರ ಮತಗಳ ಅಂತರದಿಂದ ಪುಟ್ಟಣ್ಣಯ್ಯ ಎದುರು ಸೋಲಬೇಕಾಯಿತು.

ಚೆಲುವರಾಯಸ್ವಾಮಿ ಒಬ್ಬರನ್ನು ಬಿಟ್ಟು ಉಳಿದ ಎಲ್ಲಾ ಕ್ಷೇತ್ರಗಳ ಜೆಡಿಎಸ್ ಶಾಸಕರೊಂದಿಗೆ ಉತ್ತಮ ಬಾಂಧವ್ಯ ಹೊಂದಿರುವ ಪುಟ್ಟರಾಜುರವರೇ ಸಮರ್ಥ ಅಭ್ಯರ್ಥಿಯೆಂಬುದು ಜೆಡಿಎಸ್ ಕಾರ್ಯಕರ್ತರ ಉವಾಚ.


ಈ ಹಾದಿಯಲ್ಲಿ ಪುಟ್ಟರಾಜುವಿಗಿರುವ ಅಡ್ಡಿಯೆಂದರೆ ಅದು ಚೆಲುವರಾಯಸ್ವಾಮಿ ಮಾತ್ರ. ಏಕೆಂದರೆ ರಾಜಕೀಯ ಅಸ್ತಿತ್ವಕ್ಕಾಗಿ ಪರಸ್ಪರ ಎಣ್ಣೆ ಸೀಗೆಕಾಯಿಯಂತಿರುವ ಇವರಿಬ್ಬರ ಸಂಬಂಧ ಸಂಪೂರ್ಣ ಹಳಸಿಹೋಗಿದೆ. ಪುಟ್ಟರಾಜು ರಾಜಕೀಯ ಏಳಿಗೆಯನ್ನು ಸಹಿಸದ ಚೆಲುವರಾಯಸ್ವಾಮಿ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಅವರ ಸೋಲಿಗೆ ಪರೋಕ್ಷ ಕಾಣಿಕೆ ನೀಡಿದ್ದರು ಎನ್ನುವ ಗುಸುಗುಸು ಕೂಡಾ ಜಿಲ್ಲೆಯಲ್ಲಿ ಚಾಲ್ತಿಯಲ್ಲಿದೆ. 2009ರ ಪಾರ್ಲಿಮೆಂಟ್ ಚುನಾವಣೆಯಲ್ಲಿ ಚೆಲುವರಾಯಸ್ವಾಮಿ ಗೆಲುವಿಗೆ ತಾನು ಶಾಸಕನಾಗಿ ಪ್ರತಿನಿಧಿಸುತ್ತಿದ್ದ ಮೇಲುಕೋಟೆ ಕ್ಷೇತ್ರದಿಂದ ಅತ್ಯಧಿಕ ಲೀಡ್ ಕೊಡಿಸಿದ್ದ ಪುಟ್ಟರಾಜು ವಿರುದ್ಧವೇ ಚೆಲುವರಾಯಸ್ವಾಮಿ ಹಗೆತನ ಸಾಧಿಸುತ್ತಿದ್ದಾರೆ. ಹಾಗಾಗಿಯೇ 'ಎಂಪಿ ಚುನಾವಣೆಯಲ್ಲಿ ನನ್ನ ಪರಮಾಪ್ತ ಎಂಎಲ್‌ಸಿ ಬಿ.ರಾಮಕೃಷ್ಣರಿಗೆ ಟಿಕೆಟ್ ಕೊಡಿ. ಪಾರ್ಟಿ ಫಂಡ್ ಅಂತ 1 ರೂಪಾಯಿಯೂ ಬೇಡ, ನಾವೇ ಹಣ ಹಾಕಿ ಗೆಲ್ಲಿಸಿಕೊಂಡು ಬರ್ತೀವಿ' ಎನ್ನುವ ಆಫರೊಂದನ್ನು ಚೆಲುವರಾಯಸ್ವಾಮಿ ಖುದ್ದು ದೇವೇಗೌಡರ ಮುಂದೆ ಇರಿಸಿದ್ದಾರಂತೆ.


ಅಷ್ಟಕ್ಕೂ ಎಂಎಲ್‌ಸಿ ಬಿ. ರಾಮಕೃಷ್ಣರ ಪೊಲಿಟಿಕಲ್ ಚರಿಶ್ಮಾ ಮದ್ದೂರು ಭಾಗಕ್ಕಷ್ಟೇ ಸೀಮಿತವಾದಂತಹುದು. ಜೆಡಿಎಸ್‌ನ ಎಲ್ಲಾ ಶಾಸಕರೊಂದಿಗೆ ವಿಶ್ವಾಸದಿಂದಿದ್ದರೂ ಚೆಲುವರಾಯಸ್ವಾಮಿ ಬಿಟ್ಟರೆ ಬೇರೆ ಯಾರೂ ಅವರ ಪರ ವಕಾಲತ್ತು ವಹಿಸುವ ಸ್ಥಿತಿ ಇಲ್ಲ. ಇನ್ನು ದೇವೇಗೌಡರ ಬೀಗ, ಮದ್ದೂರು ಶಾಸಕ ಡಿ.ಸಿ.ತಮ್ಮಣ್ಣರ ಮಗ ಸಂತೋಷ್ ಹೆಸರು ಟಿಕೆಟ್ ರೇಸ್‌ನಲ್ಲಿದೆಯಾದರೂ ಅಪ್ಪ ಮಾಡಿಟ್ಟ ದುಡ್ಡಿನಿಂದ ಉದ್ಯಮಿಯಾಗಿರುವ ಆತ ಮಂಡ್ಯ ಜಿಲ್ಲೆಗೆ ಅಪರಿಚಿತ ಎನ್ನಬಹುದು. ಕಳೆದ ವಿಧಾನಸಭೆ ಚುನಾವಣೆಯಲ್ಲಿ ಅಪ್ಪನ ಪರವಾಗಿ ಮದ್ದೂರಿನ ಕೆಲಭಾಗಗಳಲ್ಲಿ ಪ್ರಚಾರಕ್ಕೆ ಬಂದಾದ ನಂತರವಷ್ಟೆ ಜನ ಈತನನ್ನು ಗಮನಿಸಿರೋದು. ಸಂತೋಷ್‌ಗೆ ಅಪ್ಪನ ಹಡಬೆ ದುಡ್ಡಿನಿಂದ ಸಂಸದನಾಗುವ ತುಮುಲ ಹೆಚ್ಚಾಗಿದೆ. ಟಿಕೆಟ್ ಸಿಕ್ಕರೆ ಸಾಕು, ಹಣ ಎಷ್ಟಾದರೂ ಖರ್ಚಾಗಲಿ ಎನ್ನುತ್ತಿರುವ ಅಪ್ಪ-ಮಗನ ಓಲೈಕೆಗೆ ಗೌಡರು ತಥಾಸ್ತು ಅಂತೇನಾದರು ಅಂದು ಬಿಟ್ಟರೆ ಕ್ಷೇತ್ರ ಜೆಡಿಎಸ್‌ನ ಕೈ ತಪ್ಪಲಿದೆ.


ಈ ಮಧ್ಯೆ, ಗೌಡರ ಫ್ಯಾಮಿಲಿ ಕಟಾಕ್ಷಕ್ಕಾಗಿ ಕನವರಿಸುವ ಜೆಡಿಎಸ್‌ನ ಒಂದು ಗುಂಪು ಹೆಚ್.ಡಿ.ಕುಮಾರಸ್ವಾಮಿಯ ಧರ್ಮಪತ್ನಿ ಅನಿತಾರೇ ಅಭ್ಯರ್ಥಿಯಾಗಲಿ ಎಂದು ತಕರಾರು ತೆಗೆಯುತ್ತಿದೆ. ಅನಿತಾ ಕುಮಾರಸ್ವಾಮಿ ಅಭ್ಯರ್ಥಿಯಾದರೆ ಟಿಕೆಟ್‌ಗಾಗಿ ಪಟ್ಟು ಹಿಡಿದಿರುವ ಬೇರೆಲ್ಲರ ಹೆಸರು ಅಂಚಿಗೆ ಸರಿದು ವಿಧಿ ಇಲ್ಲದೆ ಎಲ್ಲರೂ ಅನಿತಾರ ಗೆಲುವಿಗೆ ದುಡಿಯುತ್ತಾರೆ ಎನ್ನುವುದು ಅಂತವರ ವಾದ.

ಮಧುಗಿರಿಯಿಂದ ಚನ್ನಪಟ್ಟಣಕ್ಕೆ ಬಂದು 'ಸೋಲುಂಡ ಸೊಸೆ'ಗೆ ಯಾವುದಾದರೂ ರಾಜಕೀಯ ಹುದ್ದೆ ಕಲ್ಪಿಸಬೇಕೆಂದು ದೇವೇಗೌಡರ ಕುಟುಂಬಕ್ಕೆ ಆಸೆ ಇದೆಯಾದರೂ ಅದಕ್ಕಾಗಿ ಮಂಡ್ಯವನ್ನು ಆಯ್ದುಕೊಳ್ಳುವುದು ಬೇಡ, ಉಪ ಚುನಾವಣೆ ನಡೆಯುತ್ತಿರುವ ಮತ್ತೊಂದು ಕ್ಷೇತ್ರವಾದ ಬೆಂಗಳೂರು ಗ್ರಾಮಾಂತರವನ್ನೇ ಪರೀಕ್ಷಿಸೋಣ, ಅನುಕಂಪದ ಮತ ಗಿಟ್ಟಬಹುದೆನ್ನುವ ಸ್ಕೆಚ್ ಕೂಡಾ ತೆರೆಮರೆಯಲ್ಲಿ ರೂಪ ಪಡೆಯುತ್ತಿರುವುದರಿಂದ ಅನಿತಾ ಮಂಡ್ಯದಲ್ಲಿ ಹೋರೆಹೊರುವುದು ಡೌಟು.

ಇಷ್ಟಾದರೂ ಜೆಡಿಎಸ್ ಸುಪ್ರಿಮೋಗಳ ಮನದಲ್ಲಿ ಯಾರ ಹೆಸರಿದೆ ಎಂಬ ಗುಟ್ಟು ಬಿಡುಕೊಡುತ್ತಿಲ್ಲ. ಮಂಡ್ಯ ಮತ್ತು ಬೆಂಗಳೂರು ಗ್ರಾಮಾಂತರ ಕ್ಷೇತ್ರಗಳ ಎಂಪಿ ಉಪಚುನಾವಣೆಗಳಲ್ಲಿ ಗೆಲ್ಲುವ ಮೂಲಕ ರಾಜ್ಯದ ಚುಕ್ಕಾಣಿ ಹಿಡಿದು ಬೀಗುತ್ತಿರುವ ಕಾಂಗ್ರೆಸ್‌ಗೆ ಮುಖಭಂಗ ಮಾಡಿ ಪಕ್ಷದ ಅಸ್ತಿತ್ವ ಸಾಬೀತುಪಡಿಸಬೇಕೆನ್ನುವ ತವಕದಲ್ಲಿರುವ ಕುಮಾರಸ್ವಾಮಿ ಮತ್ತು ದೇವೇಗೌಡ ಅಂತಿಮವಾಗಿ ಸಿ.ಎಸ್.ಪುಟ್ಟರಾಜು ಪರ ಒಲವು ವ್ಯಕ್ತಪಡಿಸಬಹುದೆಂದು ಅಂದಾಜಿಸಲಾಗುತ್ತಿದೆ.


ಆತ್ಮಾನಂದ


ಶಿವರಾಮೇಗೌಡ


ಸಿ.ಎಸ್.ಪುಟ್ಟರಾಜು


ಶ್ರೀಕಂಠದತ್ತ ಒಡೆಯರ್

ಕಾಂಗ್ರೆಸ್‌ಗೆ ಅಗ್ನಿಪರೀಕ್ಷೆ

ಇತ್ತ ಕಾಂಗ್ರೆಸ್‌ನಲ್ಲೂ ಯಾರ 'ಕೈ'ಗೆ ಟಿಕೆಟ್ ಸಿಗುತ್ತದೆನ್ನುವುದು ಇನ್ನೂ ಖಾತ್ರಿಯಾಗಿಲ್ಲ. ಜಿಲ್ಲಾ ಉಸ್ತುವಾರಿ ಸಚಿವ ಅಂಬರೀಶ್‌ರ ರಾಜಕೀಯ ಅಸ್ತಿತ್ವಕ್ಕೆ ಬ್ರೇಕ್ ನೀಡಿದ್ದ ಮಂಡ್ಯ ಲೋಕಸಭಾ ಕ್ಷೇತ್ರವನ್ನು ಗೆಲ್ಲುವುದು ಅಂಬಿ ಹಾಗೂ ಕಾಂಗ್ರೆಸ್ ಪಾಲಿಗೆ ಅಗ್ನಿಪರೀಕ್ಷೆಯಾಗಿದೆ. ಈಗ ದಕ್ಕಿರುವ ಮಂತ್ರಿ ಸ್ಥಾನ ನಿರಾತಂಕವಾಗಿ ಮುಂದುವರೆಯಬೇಕೆಂದರೆ ಜೆಡಿಎಸ್ ಅಧಿಪತ್ಯ ಕೊನೆಗಾಣಿಸಿ ಕಾಂಗ್ರೆಸ್ ಗೆಲ್ಲಿಸಬೇಕಾದ ಅನಿವಾರ್ಯತೆ ಅಂಬರೀಶ್‌ಗೆ ಎದುರಾಗಿದೆ. ಹಾಗಂತ, ಜೆಡಿಎಸ್‌ನ ಆರ್ಭಟಕ್ಕೆ ಕಡಿವಾಣ ಹಾಕಿ ಮಂಡ್ಯ ಕ್ಷೇತ್ರವನ್ನು ಕಾಂಗ್ರೆಸ್ ತೆಕ್ಕೆಗೆ ಸೇರಿಸಿಕೊಳ್ಳುವುದು ಅಷ್ಟು ಸುಲಭವೇನೂ ಇಲ್ಲ. ಹಾಗಾಗಿ ಅಂಬರೀಶ್ ಈ ಬಾರಿ ಸಾಕಷ್ಟು ಹೆಣಗಾಡಬೇಕಿದೆ. ಅಂಬಿಯನ್ನು ಮತ್ತಷ್ಟೂ ಹೈರಾಣಾಗಿಸಲು ಜಿಲ್ಲಾ ಕಾಂಗ್ರೆಸ್‌ನಲ್ಲಿ ಭಿನ್ನಮತಗಳಿಗೇನೂ ಕಡಿಮೆ ಇಲ್ಲ. ಎಲ್ಲಕ್ಕೂ ಮೊದಲು ಒಮ್ಮತದ ಕೈ ಅಭ್ಯರ್ಥಿಯನ್ನು ಆಯ್ಕೆ ಮಾಡುವುದೇ ದೊಡ್ಡ ಸವಾಲಾಗಿದೆ. ಈ ನಿಟ್ಟಿನಲ್ಲಿ ಹಲವರು ಕಾಂಗ್ರೆಸ್ ಟಿಕೆಟ್‌ಗೆ ಪ್ರಯತ್ನಿಸುತ್ತಿದ್ದು, ಕ್ಯಾಂಡಿಡೇಟ್ ಯಾರಾಗಬಹುದೆನ್ನುವ ಪ್ರಶ್ನೆ ಎಲ್ಲರನ್ನೂ ಕಾಡುತ್ತಿದೆ.

ಕಾಂಗ್ರೆಸ್‌ನಿಂದ ಸತತವಾಗಿ ಸೋಲುಂಡಿರುವ ಸೋಲಿನ ಸರದಾರ ನಾಗಮಂಗಲದ ಎಲ್.ಆರ್.ಶಿವರಾಮೇಗೌಡನ ಹೆಸರು ಅಬ್ಬರದಿಂದಲೇ ಚಲಾವಣೆಗೆ ಬಂದಿದೆ. ಕಳೆದ ಲೋಕಸಭಾ ಚುನಾವಣೆಯಲ್ಲಿ ಮಂಗನಂತೆ ಬಿಜೆಪಿಗೆ ಜಿಗಿದು ಟಿಕೆಟ್ ಗಿಟ್ಟಿಸಿದ ಶಿವರಾಮೇಗೌಡ ಆಡಳಿತಾರೂಢ ಬಿಜೆಪಿ ಪಕ್ಷದ ಕೋಟಿ ಕೋಟಿ ಪಾರ್ಟಿ ಫಂಡನ್ನು ಮನೆಗೆ ಸಾಗಿಸಿದ್ದಲ್ಲದೆ ಅಂತಿಮ ಕ್ಷಣದಲ್ಲಿ ಚೆಲುವರಾಯಸ್ವಾಮಿ ಜೊತೆ ಕೂಡಿಕೆ ಮಾಡಿಕೊಂಡು ಅಂಬರೀಶ್ ಸೋಲಿಗೆ ಕಾರಣನಾಗಿದ್ದ. ಕಳೆದ ವಿಧಾನಸಭಾ ಚುನಾವಣೆಗೂ ಮುನ್ನ ಕಾಂಗ್ರೆಸ್ ಪಡಸಾಲೆಯಲ್ಲಿ ಠಳಾಯಿಸುತ್ತಾ, ಕಾಂಗ್ರೆಸ್ ಅಧಿಕಾರಕ್ಕೆ ಬಂದೊಡನೆ ಮಂಡ್ಯದ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ತಾನೇ ಎಂಬಂತೆ ಪೋಸು ನೀಡುತ್ತಿರುವ ಎಲ್.ಆರ್.ಶಿವರಾಮೇಗೌಡ ಕ್ಷೇತ್ರದಲ್ಲಿ ತರಹೇವಾರಿ ಪಾಂಪ್ಲೆಟ್ ಹಂಚುತ್ತಾ, ದಿನಕ್ಕೆ ಹತ್ತಾರು ಬಾರಿ ಮೊಬೈಲ್ ಫೋನು, ಮೆಸೇಜ್ ಮೂಲಕ 'ನಾನು ಸ್ಪರ್ಧಿಸಿದರೆ ಹೆಂಗೆ' ಎಂದು ಕಿರಿಕಿರಿ ಶುರುವಿಟ್ಟುಕೊಂಡಿದ್ದಾನೆ. ಕಳೆದ ಬಾರಿ ತನ್ನ ಸೋಲಿನಲ್ಲಿ ಈತನ ಕೈವಾಡವೂ ಇತ್ತು ಎಂದು ಅರಿತಿರುವ ಅಂಬರೀಶ್ ಶಿವರಾಮೇಗೌಡನ ಆಯ್ಕೆಗೆ ಸಹಕರಿಸುವ ಸಾಧ್ಯತೆ ತುಂಬಾ ಕಡಿಮೆ.

'ಸ್ವಿಚ್-ಆಫ್ ಗೌಡ' ಎಂದೇ ಕುಖ್ಯಾತಿಗಳಿಸಿರುವ ನಾಗಮಂಗಲದ ಮತ್ತೊಬ್ಬ ಮಾಜಿ ಶಾಸಕ ಸುರೇಶ್‌ಗೌಡನ ಹೆಸರೂ ಕ್ಷೀಣವಾಗಿ ಕೇಳಿಬರುತ್ತಿದೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಚೆಲುವರಾಯಸ್ವಾಮಿ ಎದುರು ಗೆಲ್ಲುವ ಸಾಧ್ಯತೆಯಿದ್ದ ಸುರೇಶ್‌ಗೌಡ ಅಂತಿಮ ಹಂತದಲ್ಲಿ ಕಾರ್ಯಕರ್ತರಿಗೆ ಹಣಹಂಚದೆ ಸೂಟ್‌ಕೇಸ್ ಮುಚ್ಚಿ ರಾತ್ರೋರಾತ್ರಿ ಬೆಂಗಳೂರಿಗೆ ಪೇರಿ ಕಿತ್ತಿದ್ದ. ಅದನ್ನೇ ಕಾಯ್ದುಕೊಂಡಿದ್ದ ಚೆಲುವರಾಯಸ್ವಾಮಿ ಕೊನೆಘಳಿಗೆಯಲ್ಲಿ ಕ್ಷೇತ್ರದ ತುಂಬೆಲ್ಲಾ ಪಾದರಸದಂತೆ ಓಡಾಡಿದ್ದರಿಂದ ಸುರೇಶ್‌ಗೌಡ ಸೋತು ಸುಣ್ಣವಾಗಬೇಕಾಗಿ ಬಂತು. ಇಂತಹ ನಿರಾಶ್ರಿತ ಸ್ವಿಚ್-ಆಫ್ ಸುರೇಶ್‌ಗೌಡ ಈಗ ಲೋಕಸಭಾ ಕ್ಷೇತ್ರದ ಟಿಕೆಟ್‌ಗೆ ಬಂದಿದ್ದಾನೆ.

ಮಾಜಿ ಮಂತ್ರಿ ಆತ್ಮಾನಂದನ ಹೆಸರು ಚಲಾವಣೆಗೆ ಬರುತ್ತದಾದರೂ, ಈ ಬಗ್ಗೆ ಕಾಂಗ್ರೆಸ್ ಪಾರ್ಟಿಯವರೇ 'ನಕ್ಕೋ ನಕ್ಕೋ' ಎಂದು ಮುಖ ಸಿಂಡರಿಸುತ್ತಾರೆ. ಜನಬೆಂಬಲವೂ ಇಲ್ಲದ, ಕಾರ್ಯಕರ್ತರಿಗೆ ಕಾಫಿ, ಟೀ ಕುಡಿಸಲೂ ಹೈಕಮಾಂಡ್‌ನತ್ತಲೇ ಕೈ ಚಾಚುವ ಆತ್ಮಾನಂದನ ಮುಖ ನೋಡಿದರೆ ಕಾಂಗ್ರೆಸ್ ಕಾರ್ಯಕರ್ತರೇ ಮೂರು ಮಾರು ದೂರ ಸರಿಯುತ್ತಾರೆ. ಜನರ ಸ್ಮೃತಿಯಿಂದಲೇ ಅಳಿಸಿಹೋಗಿರುವ ಆತ್ಮಾನಂದನ ಆಯ್ಕೆಗೆ ಅಂಬಿಯೇ ಮೊದಲ ಪೆಟ್ಟು ನೀಡಲಿದ್ದಾರೆ.

ಈ ನಡುವೆ ಅಂಬರೀಶ್ ಪತ್ನಿ ಸುಮಲತಾ, ರಮ್ಯಾ, ಎಸ್.ಎಂ.ಕೃಷ್ಣರ ಪುತ್ರಿ ಶಾಂಭವಿ ಕೃಷ್ಣ ಹೆಸರುಗಳೂ ತೇಲಿಬರುತ್ತಿವೆ. 'ನನ್ನ ಪತಿ ಅಂಬರೀಶ್‌ರನ್ನು ಗೆಲ್ಲಿಸಿ ನಿಮ್ಮ ಸೇವೆಗೆ ಅವಕಾಶ ನೀಡಿ, ಆಮೇಲ್ ನೋಡಿ ವಾರದಲ್ಲಿ ಎರಡು ದಿನ ಮಂಡ್ಯದ ಮನೆಯಲ್ಲೇ ಇದ್ದು ನಿಮ್ಮ ಸೇವೆ ಮಾಡ್ತೀನಿ' ಅಂತ ಕಾಗೆ ಹಾರಿಸಿದ್ದ ಸುಮಲತಾರನ್ನು ಮಂಡ್ಯದ ಜನ ಚೆನ್ನಾಗೆ ನೋಡಿದ್ದಾರೆ. ಇನ್ನು ಚಿತ್ರನಟಿ ರಮ್ಯಾಗೆ ಸಿಲಿಕಾನ್ ಸಿಟಿ ಬೆಂಗಳೂರು ಸರಿ ಹೋದೀತೆ ವಿನಾಃ ಗದ್ದೆ ಬೀಡು ಮಂಡ್ಯವಲ್ಲ! ಎಸ್.ಎಂ.ಕೃಷ್ಣರಿಗೆ ಮಂಡ್ಯ ರಾಜಕಾರಣದಲ್ಲಿ ನೆಲೆ-ಬೆಲೆ ಎರಡೂ ಇಲ್ಲದಂತಾಗಿರುವುದರಿಂದ ಅವರ ಮಗಳು ಶಾಂಭವಿ ಕೃಷ್ಣರ ಮುಖ ಹೇಗಿದೆ ಎಂಬುದೇ ಮಂಡ್ಯ ಜನರಿಗೆ ತಿಳಿದಿಲ್ಲ.

ಲೇಟೆಸ್ಟ್ ಬೆಳವಣಿಗೆಯಲ್ಲಿ ಮೈಸೂರಿನ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರನ್ನು ಕಣಕ್ಕೆ ಇಳಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ, ಸಂಸದ ವಿಶ್ವನಾಥ್ ಮತ್ತು ಅಂಬರೀಶ್ ಆಸಕ್ತಿ ತೋರಿದ್ದಾರೆ. ಕುಂತರೆ ಏಳಲಾಗದ, ಎದ್ದರೆ ಕೂರಲಾಗದ ಮಾಜಿ ರಾಜಕುಮಾರ ಶ್ರೀಕಂಠದತ್ತ ಒಡೆಯರ್ ದರ್ಬಾರು ದಸರಾದಲ್ಲಿ ನೋಡಲಿಕ್ಕಷ್ಟೇ ಚೆಂದ ಎಂದು ಮೈಸೂರಿನ ಮತದಾರರೇ ಅವರನ್ನು ಮನೆಗೆ ಕಳಿಸಿ ದಶಕಗಳೇ ಆಗಿದೆ. ಇಂತಹ ಶ್ರೀಕಂಠದತ್ತ ನರಸಿಂಹರಾಜರನ್ನು ಕನ್ನಂಬಾಡಿಕಟ್ಟಿದ ಭಾವನಾತ್ಮಕ ಸಂಬಂಧದ ನೆಲೆಯಲ್ಲಿ ಕರೆತರಲು ಹೊರಟಿರುವ ತ್ರಿಮೂರ್ತಿಗಳ ಪ್ರಯತ್ನಕ್ಕೆ ಮಂಡ್ಯದ ಮತದಾರ ಮುನಿಸು ತೋರುವ ಲಕ್ಷಣಗಳು ಜಾಸ್ತಿ.

ಬಿಜೆಪಿಗೆ ನೆಲೆಯಿಲ್ಲ

ಇನ್ನು ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿಗೆ ನೆಲೆಯಿಲ್ಲ, ಯಡ್ಡಿಯ ಕೆಜೆಪಿಯಂತು ಲೆಕ್ಕಕ್ಕೇ ಇಲ್ಲ. ಕಾಂಗ್ರೆಸ್-ಜೆಡಿಎಸ್‌ನಲ್ಲಿ ಟಿಕೆಟ್ ಸಿಗದ ಅಭ್ಯರ್ಥಿಗೆ ಗಾಳ ಹಾಕುವ ತಂತ್ರಕ್ಕೆ ಬಿಜೆಪಿ ಮೊರೆ ಹೋಗಿದೆ. ಒಟ್ಟಾರೆ ಮಂಡ್ಯ ಲೋಕಸಭಾ ಕ್ಷೇತ್ರದ ಉಪಚುನಾವಣೆ ಕದನ ಕಣಕ್ಕೆ ಧುಮುಕಲು ಜೆಡಿಎಸ್ ಹಾಗೂ ಕಾಂಗ್ರೆಸ್‌ನಲ್ಲಿ ಆಕಾಂಕ್ಷಿತರ ದೊಡ್ಡ ದಂಡೇ ನೆರೆದಿದೆ. ಮುಂದಿನ ಲೋಕಸಭಾ ಚುನಾವಣೆಗೆ ದಿಕ್ಸೂಚಿಯಾಗಿರುವ ಈ ಎರಡು ಉಪಚುನಾವಣೆಯಲ್ಲಿ ಗೆದ್ದು ಸಿದ್ದು ನೇತೃತ್ವದ ಕಾಂಗ್ರೆಸ್‌ಗೆ ದೊಡ್ಡ ಮುಖಭಂಗ ಮಾಡಿ, ತೃತೀಯ ರಂಗದ ಕನಸು ನನಸು ಮಾಡಲು ದೇವೇಗೌಡರ ಫ್ಯಾಮಿಲಿ ಸಿದ್ಧವಾಗಿ ನಿಂತಿದ್ದರೆ, ಜೆಡಿಎಸ್‌ನಿಂದ ಕ್ಷೇತ್ರ ಕಿತ್ತುಕೊಂಡು ಕಾಂಗ್ರೆಸ್ ತೆಕ್ಕೆಗೆ ಸೇರಿಸಿ ಹೈಕಮಾಂಡ್ ನಾಯಕಿ ಸೋನಿಯಾ ಎದುರು ಮುಖ ಉಳಿಸಿಕೊಳ್ಳಲು ಸಿಎಂ ಸಿದ್ದು, ಸಚಿವ ಅಂಬಿ ಪ್ರಯತ್ನಿಸುತ್ತಿದ್ದಾರೆ.

● ನಾಗೇಶ್


ಕಾರವಾರ: ಸೋಗಲಾಡಿ ಶಾಸಕ ಸೈಲ್‌ನ ಕಪಟ ನಾಟಕಗಳು!!



ಕಾರವಾರ-ಅಂಕೋಲಾ ರಾಜಕೀಯದ ಬಾಗಿಲೆ ುಂದ ಬೆಂಕಿಗೇನಾದರೂ ಬಿದ್ದಿದೆಯಾ? ಇಂಥದೊಂದು ುಮಾನ-ಆತಂಕ ಹೊಸ ಶಾಸಕ ಸತೀಶ್ ಸೈಲ್‌ನ ಾಟಗಳು ಹುಟ್ಟುಹಾಕಿಬಿಟ್ಟವೆ! ಅಷ್ಟು ಪುಂಡ ಪುಢಾರಿ ಾನಂದ ಅಸ್ನೋಟಿಕರ್‌ನ ಅಸಡ್ಡಾಳ ಪರ್ವ ಮುಗಿದು ೈಲ್ ಎಂಬ ದೋಖಾ ದಂಧೆದಾರನ ಆಧಿಪತ್ಯ ಆರಂಭವಾ ಗುತ್ತಲೇ ಕಾರವಾರ-ಅಂಕೋಲೆಯ ಜನರು ಭ್ರಮ ನಿರಸನ ಾಂಡಿದ್ದಾರೆ. ಅಸ್ನೋಟಿಕರ್ ಬಗ್ಗೆ ಜನರಿಗೆ ದೊಡ್ಡ ಮಟ್ಟದ ೇಸರ-ಅಸಹ್ಯ ಮೂಡಿತ್ತು. ಇದನ್ನು ಅದಿರು ಕಳ್ಳ ಾಗಾಣಿಕೆದಾರ ಸೈಲ್ ತನ್ನ ಕಪ್ಪು ಹಣದಿಂದ ಓಟಾಗಿ ಿವರ್ತಿಸಿಕೊಂಡು ಗೆದ್ದುಬಂದಿದ್ದ. ಜನರು ಬದಲಾವಣೆ ಯಸಿದ್ದರು; ಆದರೆ ಸೈಲ್‌ನ ನಿರೀಕ್ಷೆ ಶಾಸಕತ್ವದಿಂದ ನ್ನ ದಗಲುಬಾಜಿ ಬಿಜಿನೆಸ್ ಸಾಮ್ರಾಜ್ಯ ವ್ಯವಸ್ಥಿತವಾಗಿ ುಯುವುದಾಗಿತ್ತು!

ಶಾಸಕನಾಗುತ್ತಲೇ ಸೈಲ್ ಜನಪರ ಪೋಸು ಕೊಡುತ್ತ ಪರ್ ಸ್ಪೀಡ್‌ನಲ್ಲಿ ಓಡತೊಡಗಿದ. ಆತನ ಎಮ್ಮೆಲ್ಲೆಗಿರಿ ಬ್ಬಾರಿನ ಅವಸರ ಅನಾಹುತದ ಮುನ್ಸೂಚನೆ ಕೊಡುತ್ತಿತ್ತು. ಈತ ಕ್ಷೇತ್ರೋದ್ಧಾರದ ವರಸೆ ತೋರಿಸಿದಾಗೆಲ್ಲ ದರಲ್ಲಿನ ದ್ವಂದ್ವ-ವಿರೋಧಾಭಾಸಗಳೇ ಎದ್ದು ಕಾಣಲಾ ಂಭಿಸಿತು! ಸೈಲ್ ಕಾರವಾರ-ಅಂಕೋಲೆಯ ಅಭಿವೃದ್ಧಿಗೆ ೇಕಾದ ಕಲ್ಲು ಕ್ವಾರಿ-ಮರಳುಗಾರಿಕೆ-ಮೆಡಿಕಲ್ ಕಾಲೇಜು-ಎಂಜಿನಿಯರಿಂಗ್ ಕಾಲೇಜು... ಯಾವುದರ ಬಗ್ಗೆ ಸೈಲ್ ಸಕ್ತಿ ವ್ಯಕ್ತಪಡಿಸಿದರೂ ಅದರಲ್ಲೂ ಆತನ ಉದ್ಯಮೋದ್ಧಾರದ ಪರ್ಸನ್ ಹಿತಾಸಕ್ತಿ ಅಡಗಿರುತ್ತಿತ್ತು! ಶಾಸಕನಾಗಿ ತಿಂಗಳೆರಡು ಕಳೆಯುವುದರಲ್ಲೇ ಸೈಲ್‌ನ ಕಪಟ ನಾಟಕಗಳು ಒಂದೊಂದಾಗಿ ಪ್ರಯೋಗವಾಗಲು ಶುರುವಾಯ್ತು! ಇದು ಆತನ ಗೆಲ್ಲಿಸಿದವರನ್ನು ಬೆಚ್ಚಿ ಬೀಳಿಸಿತು. ಈಗ "ತವುಡು ತಿನ್ನೋವ ಹೋಗಿ ಭತ್ತವೇ ತಿನ್ನೋವ ಬಂದನಾ?" ಎಂದು ಜನರು ಹಣೆ-ಹಣೆ ಚಚ್ಚಿಕೊಳ್ಳುತ್ತಿದ್ದಾರೆ...

ಕ್ವಾರಿ ಕಿಂಗ್



ಕಾರವಾರದಿಂದ ಹಾದುಹೋಗುವ ರಾಷ್ಟ್ರೀಯ ಹೆದ್ದಾರಿ 66 ಅಡಿ ಅಗಲ ಮಾಡಲಾಗುತ್ತಿದೆ. ಈ ಅಗಲೀಕರಣದಿಂದ ಹೆದ್ದಾರಿ ಗುಂಟದ ಬಡ ಬೆಸ್ತರು, ಸಣ್ಣ-ಪುಟ್ಟ ಜೀವನಾಧಾರ ಕಸುಬು ಮಾಡುವ ಪಾರ ಕುಟುಂಬಗಳು ಬೀದಿ ಪಾಲಾಗು ತ್ತವೆ. ಹಾಗಾಗಿ ಈ ಚತುಷ್ಪಥ ಯೋಜನೆ ವಿರುದ್ಧ ಜನರು ತಿರುಗಿ ಬಿದ್ದಿದ್ದಾರೆ. ಜನರನ್ನು ನಿರಾಶ್ರಿತರಾಗಿಸುವ ಸದ್ರಿ ಯೋಜನೆಗೆ ಪರ್ಯಾಯ ರಸ್ತೆಯನ್ನು ಹೋರಾಟಗಾರರು ತೋರಿಸಿದ್ದಾರೆ. ಇದರಿಂದ ಹೆದ್ದಾರಿ ಉದ್ದವೂ ಸುಮಾರು 12 ಕಿ.ಮೀ. ಕಡಿಮೆ ಆಗುತ್ತದೆ. ಈ ಮುದಗಾದಿಂದ ಶೇಜವಾಡ ುಖಾಂತರ ಮಾಜಾಳಿ ತಲುಪುವ 'ಹೈದರ್ ಘಾಟ್' ಬಗ್ಗೆ ಸೈಲ್‌ಗೆ ಸಹಮತವಿಲ್ಲ. ಹಾಗಂತ ಈತ ನೇರಾನೇರ ಾನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಸೂಚಿಸಿದ (ಕಾರವಾರ ುಂಗುವ) ಪ್ಲಾನ್ ಪರವಾಗಿದ್ದೇನೆಂದು ಹೇಳುತ್ತಿಲ್ಲ. ಹೈದರ್ ಘಾಟ್ ಹೈವೆಗೆ ವಿರೋಧವು ವ್ಯಕ್ತಪಡಿಸುತ್ತಿಲ್ಲ.

ಹೈವೇ ಪ್ರಕರಣದಲ್ಲಿ ಸೈಲ್‌ನದು ಪಕ್ಕಾ ಡಬ್ಬಲ್ ಗೇಮ್. ತಾನು ಜನಪರ ಎಂದು ಶೋ ಮಾಡುತ್ತಲೇ ಆತ ಕಾರವಾರಿಗರಿಗೆ ಮೋಸ-ವಂಚನೆ ಮಾಡುತ್ತಿದ್ದಾನೆ. ಎಂಬ ರಹಸ್ಯವಾಗಿ ಹೈವೇ ಅಗಲೀಕರಣಕ್ಕೆ ಕುಮ್ಮಕ್ಕು ಕೊಡುತ್ತಿರುವ ಸೈಲ್‌ನ ಹಿಕಮತ್ತಿನ ಹಿಂದೆ ಆತನ ಚಿರೆಕಲ್ಲು ಕ್ವಾರಿ ಉದ್ಯಮ-ರಿಯಲ್ ಎಸ್ಟೇಟ್ ದಂಧೆಗಳ ಹಿತಾಸಕ್ತಿ ಅಡಗಿದೆ! ಹೈವೇ ಅಗಲೀಕರಣ 45 ಮೀಟರ್‌ನಷ್ಟಾದರೆ ಬಿಣಗಾದಲ್ಲಿರುವ ಪುರಾತನ ಸರ್ಕಾರಿ ಚಿರೆಕಲ್ಲಿನ ಕ್ವಾರಿ ಸ್ವಾಹಾ ಆಗುತ್ತದೆ. ಉತ್ತರ ಕನ್ನಡದಲ್ಲಿ ಬ್ರಿಟಿಷರ ಕಾಲದಿಂದಲೂ ಇರುವ ಕ್ವಾರಿಯದು. ಕಾರವಾರ-ಅಂಕೋಲಾದ ಬಹುತೇಕ ಎಲ್ಲ ಸರ್ಕಾರಿ ಇಲಾಖೆಗಳ ಅಭಿವೃದ್ಧಿ ಕಾಮಗಾರಿಗೆ ಬೇಕಾದ ಜಲ್ಲಿ ಕಲ್ಲು ಈ ಕ್ವಾರಿಯೇ ಪೂರೈಸುತ್ತಿತ್ತು! ಇದನ್ನೇ ಸರ್ಕಾರಿ ಏಜೆನ್ಸಿಗಳು ಅವಲಂಬಿಸಿವೆ.

ಉಳಿದೆಲ್ಲ ಅಕ್ರಮ ಕ್ವಾರಿ ಅಸ್ನೋಟಿಕರ್-ಕಾಗೇರಿ ಕಚ್ಚಾಟದಲ್ಲಿ ಸ್ಥಗಿತವಾಗಿದ್ದವು. ಅದೇ ಹೊತ್ತಿಗೆ ಸೈಲ್‌ನ ಬೇಲೇಕೇರಿ ಅದಿರು ರಫ್ತು ದಂಧೆಗೂ ತಡೆಬಿದ್ದಿತ್ತು. ಬೇಲೇಕೇರಿ ಬಂದರಿನಿಂದ ಕಳ್ಳ ಅದಿರನ್ನು ವಿದೇಶಕ್ಕೆ ಕಳಿಸಿ ಗೋಣಿಚೀಲದಲ್ಲಿ ಹಣ ತುಂಬುತ್ತಿದ್ದ ಸೈಲ್ ಕಂಗಾಲಾಗಿದ್ದ ದಿನಗಳವು. ಆಗಾತನಿಗೆ ಇಂಥದೇ ಗಣಿ ಉದ್ಯಮದ ಹಪಾಹಪಿ ಶುರುವಾಗಿತ್ತು. ಆಗಾತನ ಕಣ್ಣಿಗೆ ಬಿದ್ದಿದ್ದು ಅಂಕೋಲಾ ತಾಲ್ಲೂಕಿನ ಅಗಸೂರು ಎಂಬಲ್ಲಿದ್ದ 30 ಎಕರೆಯಷ್ಟು ವಿಶಾಲವಾದ ಚಿರೆ ಕಲ್ಲಿನ ಆಗರವಾದ ಪ್ರದೇಶ! ಅರಣ್ಯ ಇಲಾಖೆಗೆ ಸೇರದ ಈ ಮಾಲ್ಕಿ ಜಮೀನು ರಾತ್ರಿ ಬೆಳಗಾಗುವುದರಲ್ಲಿ ಸೈಲ್ ಬೇನಾಮಿಯಾಗಿ ಖರೀದಿಸಿಬಿಟ್ಟ. ಅವಸಾನದ ಮಂಗಲದಾಸ್ ಕಾಮತ್ ಎಂಬ ತನ್ನ ದೋ ನಂಬರ್ ದಂಧೆಗಳ ಪಾರ್ಟನರ್ ಹೆಸರಲ್ಲಿ ಈ ಮೂವತ್ತು ಎಕರೆ ಕಲ್ಲಿನ ಗಣಿ ಜಾಗ ಸೈಲ್ ಕಬ್ಜಾ ಮಾಡಿಕೊಳ್ಳುತ್ತಾನೆ.

ಈ ಕ್ವಾರಿ ಮೂಲಕ ಸೈಲ್-ಕಾಮತ್ ಕೂಡಿ ಹಾಕಿದ ಕಾಸಿಗೆ ಲೆಕ್ಕವೇ ಇಲ್ಲ. ಆನಂದ್ ಅಸ್ನೋಟಿಕರ್‌ನ ಚಿರೆಕಲ್ಲು ಮಾಫಿಯಾ ಮಸಲತ್ತಿನ ಅಡ್ಡ ಪರಿಣಾಮದಿಂದ ಕಾರವಾರ-ಅಂಕೋಲೆಯ ಆಷ್ಟೂ (ಬಿಣಗಾದ ಸರ್ಕಾರಿ ಕ್ವಾರಿ ಬಿಟ್ಟು) ಕ್ವಾರಿಗಳು ಬಂದಾಗಿದ್ದು ಸೈಲ್‌ಗೆ ಏಕಸಾಮ್ಯದಿಂದ ಮೆರೆಯಲು ಅನುಕೂಲ ಕಲ್ಪಿಸಿತ್ತು! ಈ ಕಲ್ಲು ಉದ್ಯಮ ಶಾಸಕತ್ವದ ಬಲದಿಂದ ಈಗ ಮತ್ತಷ್ಟು ಮಜಬೂತಾಗಿ ವಿಸ್ತರಿಸಲು ಸೈಲ್ ಹವಣಿಸುತ್ತಿದ್ದಾನೆ. ಅಕ್ರಮ ಕ್ವಾರಿಗಳೆಲ್ಲ ಹೇಗೂ ನಿಲ್ಲಿಸಲಾಗಿದೆ. ಈಗಿರುವ ಏಕೈಕ ಬಿಣಗಾ ಬಳಿಯ ಲೈಸೆನ್ಸ್ ಇರುವ ಕ್ವಾರಿಯನ್ನು ಹೆದ್ದಾರಿ ಅಗಲೀಕರಣಕ್ಕೆ ಬಲಿಗೊಟ್ಟರೆ ತಾನೇ ಜಲ್ಲಿಕಲ್ಲಿನ ಉದ್ಯಮಕ್ಕೆ ಏಕಮೇವಾದ್ವಿತೀಯ ಅಧಿಪತಿಯೆಂಬುದು ಸೈಲನ ದೂ(ದು)ರಾಲೋಚನೆ! ಆಗ ಜೆಲ್ಲಿ ಕಲ್ಲಿಗೆ ತಾನು ಹೇಳಿದ್ದೇ ರೇಟು! ಸರ್ಕಾರಿ ಏಜೆನ್ಸಿಗಳೂ ತನ್ನ ಕ್ವಾರಿಯನ್ನೇ ಅವಲಂಬಿಸಬೇಕು. ಬೇಲೇಕೇರಿಯಲ್ಲಿ ಆದ ಹಾನಿ ಅಗಸೂರು ಜಲ್ಲಿ ಕಲ್ಲಿನ ಕ್ವಾರಿಯಲ್ಲಿ ರಿಕವರಿ ಮಾಡುವ ಪ್ಲಾನು ಸೈಲ್ ಗ್ಯಾಂಗಿನದು! ಹಾಗಾಗಿ ಸೈಲ್ ಸಾಹೇಬರು ಕಾರವಾರದ ಅಮಾಯಕರನ್ನು ಆಹುತಿ ಕೊಟ್ಟಾದರೂ ಚತುಷ್ಪಥ ರಸ್ತೆ ನಿರ್ಮಾಣಕ್ಕೆ ಸಹಕರಿಸೋ ಇರಾದೆಯಲ್ಲಿದ್ದಾರೆ. ಒಳಗೊಳಗೇ ಹೈವೇ ಅಗಲೀಕರಣ ಒಪ್ಪಿಗೆ ಕೊಟ್ಟು ಬಿಟ್ಟಿದ್ದಾರೆ!

ಲ್ಯಾಂಡ್ ಲಾರ್ಡ್

"ಏನೇ ಮಾಡು-ಮುದ್ದು ಮಾಡು" ಧೋರಣೆಯ ಸತೀಶ್ ಸೈಲ್‌ನ ಶಾಸಕನಾದಾಕ್ಷಣ ಅಸಲೀ ಸ್ವಭಾವ ಬದಲಾಗಲು ಸಾಧ್ಯವಾ? ದುಷ್ಟ ಅಸ್ನೋಟಿಕರ್‌ನ ದಾರಿಯಲ್ಲೇ ಸೈಲ್ ಹೆಜ್ಜೆ ಹಾಕುತ್ತಿರುವ ಸಂಶಯವೀಗ ಸೃಷ್ಟಿಯಾಗಿದೆ. ಅಸ್ನೋಟಿಕರ್‌ನಂತೆ ಈ ಸೈಲನೂ ಶಾಸಕಗಿರಿಯನ್ನು ತನ್ನ ದಗಾಕೋರ ದಂಧೆ ರಕ್ಷಣೆಗೆ ಬಳಸಿಕೊಳ್ಳುವ ಸಾಧ್ಯತೆ ಎರಡೇ ತಿಂಗಳಲ್ಲಿ ಕಾರವಾರಿಗರಿಗೆ ಗೋಚರಿಸಿ ಬಿಟ್ಟಿದೆ! ಚತುಷ್ಪಥ ಹೈವೇ ಹೈದರ್ ಘಾಟ್ ಮೂಲಕ ಹೋದರೆ ಕಾರವಾರ ನಗರ ಮತ್ತದರ ಆಚೀಚೆ ತಾನು ಖರೀದಿಸಿರುವ ನೂರಾರು ಎಕರೆ ಭೂಮಿಗೆ ಬೆಲೆ ಬರದೇ ಬರಡಾಗುತ್ತದೆಂಬ ಆತಂಕ ಸೈಲ್ ಸಾಹುಕಾರ್‌ಗೆ ಪಾಪ! ಆತ ಅಕ್ರಮ ಅದಿರು ದಂಧೆಯಿಂದ ಸಂಗ್ರಹಿಸಿದ್ದ ಅಪಾರ ಹಣದಿಂದ ಉತ್ತರ ಕನ್ನಡ, ಗೋವಾ ಮತ್ತಿತರೆಡೆ ಭರ್ಜರಿ ಭೂಮಿ ಖರೀದಿಸಿದ್ದಾನೆ. ಆತನ ಮನೆಯಿರುವ ಮಾಜಾಳಿಯೊಂದರಲ್ಲೇ ಐದಾರು ನೂರು ಎಕರೆ ಜಾಗ ಈತನ ಕಬ್ಜಾಕ್ಕೆ ಸೇರಿಕೊಂಡಿದೆ. ಇದಕ್ಕೆಲ್ಲ ರಿಯಲ್ ಎಸ್ಟೇಟ್ ಖದರು ಬರಬೇಕೆಂದರೆ ಚತುಷ್ಪಥ ಹೈವೇ ಸುಂದರ ಬೀಚು, ಅಸಂಖ್ಯ ಅಮಾಯಕ ಕುಟುಂಬಗಳನ್ನೆಲ್ಲ ನುಂಗಿ ನೊಣೆದು ಕಾರವಾರವನ್ನೇ ಸೀಳಿ-ಧ್ವಂಸ ಮಾಡಿ ಹಾದುಹೋಗಬೇಕೆಂಬುದು ಸೈಲನ ಅಂತರಂಗದ ಆಸೆ.

ಹೈವೆಗೆ ಬೇಕಿರುವಷ್ಟು ಅಗಲದ ಜಾಗ ಹೈದರ್ ಘಾಟ್ ರಸ್ತೆಯಲ್ಲಿ ಸಿಗುತ್ತದೆ. ಮುದಗಾದಿಂದ ಶೇಜವಾಡದವರೆಗೆ ಹೊಸ ಹೈವೆಯಾದರೆ ಈಗಿನ ಸರ್ಕಾರಿ ನೀಲನಕ್ಷೆಗಿಂತಲೂ ದೂರ ಕಡಿಮೆ ಆಗುತ್ತದೆ. ಒಂದೇ ಒಂದು ಮನೆ ತೆಗೆಯುವ ಪ್ರಮೇಯವೇ ಬರದು. ನಿರಾಶ್ರಿತ ಸಮಸ್ಯೆ-ಪುನರ್ವಸತಿ ಸಂಕಟ ಉಂಟಾಗದು. ಯಾವ ಬೀಚೂ ಬಲಿಯಾಗದು. ಜನರಿಗೇನೂ ಈ ಹೈದರ್ ಘಾಟ್ ಹೈವೆಯಿಂದ ತೊಂದರೆ ಇಲ್ಲ; ಧಕ್ಕೆಯಾಗುವುದು ಸೈಲ್‌ನ ರಿಯಲ್ ಎಸ್ಟೇಟ್ ಉದ್ಯಮಕ್ಕಷ್ಟೇ! ಹಾಗೆಯೇ ಈಗಿನ ರೋಡ್ ಮ್ಯಾಪ್‌ನಂತೆ ಕಾರವಾರ ನಗರ ಪ್ರವೇಶಿಸಿದಾಗ ಸಿಗುವ ಎಲ್ಲ ಸರ್ಕಾರಿ ಕಟ್ಟಡಗಳನ್ನು ಬಚಾವ್ ಮಾಡಲಾಗಿದೆ. ಈ ಸರ್ಕಾರಿ ಸ್ಥಾವರಕ್ಕಾಗಿ ಜನಸಮುದಾಯದ ಜೀವ-ಜೀವನವನ್ನು ಕಡೆಗಣಿಸಲಾಗಿದೆ. ಪಿಡಬ್ಲ್ಯುಡಿ ಎದುರಿನ ಮೀನುಗಾರ ಗುಡಿಸಲುಗಳು ತೆಗೆಸಬೇಕಾಗಿದೆ. ಬೆಸ್ತರಿಗೆ ಜೀವನೋಪಾಯ ಕಸುಬಿಗೆ ಆಧಾರವಾದ ರವೀಂದ್ರನಾಥ್ ಟಾಗೋರ್ ಬೀಚ್ ಈ ಅಗಲೀಕರಣ ನುಂಗಿ ಹಾಕಲಾಗಿದೆ. ನೌಕಾನೆಲೆ ಸುಮಾರು 10 ಬೀಚನ್ನು ಈಗಾಗಲೇ ಆಪೋಷನ ಪಡೆದಾಗಿದೆ. ಈಗಿರುವುದು ಟಾಗೋರ್ ಬೀಚ್ ಒಂದೇ ಒಂದು. ಅದೂ ರಸ್ತೆ ಅಗಲೀಕರಣಕ್ಕೆ ಸ್ವಾಹಾ ಆದರೆ ಕಾರವಾರದ 'ಕಳೆ'ಯೇ ಹೋದಂತೆಯೇ!! ಮೀನುಗಾರರ ಬಲೆ-ಬೋಟ್-ದೋಣಿ ಇಡಲಿಕ್ಕೂ ಜಾಗವಿರದು. ಬೆಸ್ತರ ಬದುಕು ದುಸ್ತರವಾಗಲಿದೆ. ಎರಡು ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗಿರುವ ಸಾಂಸ್ಕೃತಿಕ ಕಾರ್ಯಕ್ರಮ ಮುಂತಾದ ಸಮಾರಂಭ ನಡೆಯುವ ವೇದಿಕೆ, ವಾರ್‌ಶಿಪ್ ಮ್ಯೂಸಿಯಂಗಳೆಲ್ಲ ರಸ್ತೆ ಪಾಲಾಗಲಿದೆ!! ಇದೆಲ್ಲಾ ಗೊತ್ತಿದ್ದೂ ಶಾಸಕ ಸೈಲ್ ಹಾಗೇ ಸುಮ್ಮನಿದ್ದಾನೆ.

ಊರು ಹಾಳಾದರೇನು? ಬೀಳಾದರೇನು? ಯಾರು ಸತ್ತರೇನು? ಬದುಕಿದರೇನು? ಸೈಲ್‌ಗೆ ಆತ ಕೊಂಡಿಟ್ಟಿರುವ ನೂರಾರು ಎಕರೆ ಭೂಮಿಗೆ ಭರ್ಜರಿ ಬೆಲೆ ಬರಬೇಕಷ್ಟೇ. ಕಾರವಾರದ ಡಿಪ್ಲೋಮಾ ಕಾಲೇಜ್ ಪಕ್ಕದ ಸುಮಾರು ಮೂರು ಎಕರೆ ಜಾಗ ಸೈಲ್ ಹಿಂಬಾಗಿಲ ಪುಢಾರಿಣಿ ಮ್ಯಾಗಿ ಮೇಡಮ್‌ರಿಂದ ಖರೀದಿಸಿದ್ದಾನೆ. ಇದು ಉತ್ತರ ಕನ್ನಡದ ಎಂಪಿಯಾಗಿದ್ದ ಮ್ಯಾಗಿಯ ಮಾವ (ಗಂಡನ ತಂದೆ) ಜೋಕಿಂ ಆಳ್ವರ ಆಸ್ತಿ. ಈ ಜಾಗದಲ್ಲಿ ಒಂದಿಂಚು ಸಹ ಹೆದ್ದಾರಿ ಅಗಲೀಕರಣದಲ್ಲಿ ಹೋಗದಂತೆ ನೋಡಿಕೊಂಡಿರುವ ಹಣವಂತ ಸೈಲ್ ಬಡವರ ಗುಡಿಸಲು-ಸುಂದರ-ಮೀನುಗಾರರ ಜೀವನಾಧಾರ ಟಾಗೋರ್ ಬೀಚ್ ಕಡೆ ಅಗಲೀಕರಣ ತಿರುಗುವಂತೆ 'ಜಾದೂ' ಮಾಡಿದ್ದಾನೆ!

ಸೈಲ್ ಶೋ

ಶಾಸಕ ಸೈಲ್‌ಗೆ ಜನಪರ ನೀತಿ, ಸೈದ್ಧಾಂತಿಕ-ಬದ್ಧತೆ, ಹೋರಾಟದ ಹಿನ್ನೆಲೆಗಳ್ಯಾವುದೂ ಇಲ್ಲ. ಅಸ್ನೋಟಿಕರ್‌ನ ಅಸಹ್ಯ ಅರ್ಭಟ ಹೆಚ್ಚಾದಂತೆಲ್ಲ ಅದನ್ನು ಜನರು ವಿರೋಧಿಸಿದಾಗ-ಪ್ರತಿಭಟಿಸಿದಾಗ ಆ ಹೋರಾಟಗಳನ್ನೆಲ್ಲ ಹಣ ಬಲದಿಂದ ಹೈಜಾಕ್ ಮಾಡಿದ್ದ ಸೈಲ್ ಅನಿವಾರ್ಯ ಆಯ್ಕೆಯಂತಾಗಿ ಶಾಸಕನಾಗಿ ಹೋದ! ಅಸ್ನೋಟಿಕರ್‌ನ ಮಣಿಸಲು ಈತ ಜನರ ಹೋರಾಟಗಳಲ್ಲಿ ಮಿಂಚಿದ್ದೇ ಮಿಂಚಿದ್ದು. ಶಾಸಕನಾದ ಮೇಲೆ ಸೈಲ್ ಸರಿ ಉಲ್ಟಾ ಹೊಡೆಯುತ್ತಿದ್ದಾನೆ. ಅದಕ್ಕೊಂದು ಉದಾಹರಣೆ ಇಲ್ಲಿದೆ.

ತಟ ರಕ್ಷಣೆಯ ಕಚೇರಿ-ಸಂರಕ್ಷಿತ ಪ್ರದೇಶಕ್ಕೆಂದು ಮೀನುಗಾರ ಬದುಕಿಗಾಧಾರವಾದ ಟಾಗೋರ್ ಬೀಚನ್ನು ಸರ್ಕಾರ ಸ್ವಾಧೀನಪಡಿಸಿಕೊಳ್ಳಲು ಹೊಂಚು ಹಾಕಿದಾಗ ಇಡೀ ಕಾರವಾರಕ್ಕೆ ಕಾರವಾರವೇ ಸಿಡಿದೆದ್ದಿತ್ತು! ಮೀನುಗಾರರಂತೂ "ನಮ್ಮ ಕಸುಬಿಗೇಕೆ ಕಲ್ಲು ಹಾಕುತ್ತೀರಿ? ನಮ್ಮ ಹೊಟ್ಟೆ ಮೇಲೆ ಹೊಡೆಯುತ್ತೀರಿ?" ಎಂದು ಸರ್ಕಾರಿ ಮಂದಿಗೆ ಕೇಳಿದ್ದರು. ಯಾವಾಗ ಜನರ ಪ್ರತಿಭಟನೆ ಜೋರಾಯ್ತೋ ಆಗ ಸೈಲ್ ಸಾಹುಕಾರ್ ಎಂಟ್ರಿ ಕೊಟ್ಟಿದ್ದ; ಬೀಚ್ ಬಚಾವ್‌ಗಾಗಿ ರಸ್ತೆ ಬಂದ್ ಮಾಡಿ ಲಂಡನ್ ಬ್ರಿಡ್ಜ್ ಮೇಲೆ ಅಂಗಾತ ಮಲಗಿದ್ದ. ಯಾರದೋ ಸಂಘಟನೆ ಹೈಜಾಕ್ ಮಾಡಿ ಹೀರೋ ಆಗಿದ್ದ. "ಬೀಚ್‌ಗಾಗಿ-ಮೀನುಗಾರರಿಗಾಗಿ ಜೀವವೇ ಕೊಡ್ತೇನೆ...!" ಎಂದು ಅಬ್ಬರಿಸಿ ಬೊಬ್ಬಿರಿಸಿದ್ದ. ಆಗಾತ ಶಾಸಕನಾಗಿರಲಿಲ್ಲ. ಈಗ ಶಾಸಕನಾಗಿದ್ದಾನೆ. ಅದೇ ಬೀಚ್ ಮೇಲೆ ಹೈವೇ ಚತುಷ್ಪಥ ಮಾಡಲು ಮಸಲತ್ತು ಮಾಡುತ್ತಿದ್ದಾನೆ.


ಸೈಲ್ ಆಡುವುದಕ್ಕೂ ಮಾಡುವುದಕ್ಕೂ ತಾಳಮೇಳವೇ ಇಲ್ಲ. ತನ್ನ ಉದ್ಯಮದ ಉತ್ಕರ್ಷಕ್ಕೆ ತಕ್ಕಂತೆ ಆತ ಬಣ್ಣ ಬದಲಿಸುತ್ತಾನೆ. ಸೀಬರ್ಡ್ ನಿರಾಶ್ರಿತರ ಪರಿಹಾರಕ್ಕಾಗಿ ಆತ ಕಾಸು ಖರ್ಚು ಮಾಡಿ ಸುಪ್ರೀಂ ಕೋರ್ಟ್ ತನಕ ಹೋಗಿದ್ದೇನೋ ಖರೆ. ಸೀಬರ್ಡ್ ನಿರಾಶ್ರಿತರ ಕಾಳಜಿಯೇ ತನ್ನ ಪರಮ ಧ್ಯೇಯ ಎಂಬಂತೆ ಈತ ಹಾರಾಡಿದ್ದೇ ಹಾರಾಡಿದ್ದು. ಈ ಸೀಬರ್ಡ್ ನೌಕಾ ನೆಲೆ ನಿರಾಶ್ರಿತರಲ್ಲಿ ಒಂದಿಷ್ಟು ಮಂದಿ ಹೆದ್ದಾರಿ ಪಕ್ಕವೇ ಅಲ್ಲಲ್ಲಿ ಮನೆ ಮಾಡಿಕೊಂಡು ಬದುಕು ಪುನರ್ನಿರ್ಮಿಸಿಕೊಳ್ಳುತ್ತಿದ್ದಾರೆ. ಈಗವರನ್ನು ಮತ್ತೆ ಹೈವೇ ಅಗಲೀಕರಣಕ್ಕಾಗಿ ಒಕ್ಕಲೆಬ್ಬಿಸಿ ಅಕ್ಷರಶಃ ಹೈರಾಣಾಗಿ ಹೋಗುತ್ತಾರೆ. ಈ ಸೀಬರ್ಡ್ ನಿರಾಶ್ರಿತರಿಗೆ ಒದಗಿಬಂದಿರುವ ಸಂಕಷ್ಟ ಅದ್ಯಾಕೋ ಶಾಸಕ ಸೈಲ್ ಸಾವ್ಕಾರ್‌ಗೆ ಕಾಣಿಸುತ್ತಿಲ್ಲ; ಅವರ ಅಳಲು ಅರ್ಥವಾಗುತ್ತಿಲ್ಲ. ಏಕೆಂದರೆ ಈಗಾತ ಶಾಸಕ. ಒಟ್ಟಿನಲ್ಲಿ ಕಾರವಾರಿಗರಿಗೆ ಸೈಲ್‌ನ ಅಸಲೀ ಅವತಾರ ಕಾಣಲಾರಂಭಿಸಿದೆ!

ಶಾಸಕನಾಗಿ ಎರಡೂವರೆ ತಿಂಗಳು ಕಳೆದರೂ ಸೈಲ್ ಕಾರವಾರದಲ್ಲಿ ಒಂದು ಅಧಿಕೃತ ಆಫೀಸೆಂಬುದು ತೆರೆದಿಲ್ಲ. ಸರ್ಕಾರವೇ ಕೊಟ್ಟಿರುವ ಕಚೇರಿಗೆ ಬೀಗ ಜಡಿದಿಟ್ಟಿದ್ದಾನೆ. ಈತ ಸಿಗಬೇಕೆಂದರೆ ಜನರು ಮಾಜಾಳಿಯಲ್ಲಿರುವ ಆತನ ಖಾಸಗಿ ಬಂಗ್ಲೆಗೆ ಹೋಗಬೇಕು. ಕಾರವಾರದಿಂದ ಹತ್ತು ಕಿ.ಮೀ. ದೂರ ಸೈಲ್ ಸಾಹೇಬರ ದರ್ಶನಕ್ಕಾಗಿ ಹಣ-ಸಮಯ ವ್ಯರ್ಥ ಮಾಡಬೇಕಾಗಿದೆ. ಈತ ತನ್ನ ಖಾಸಗಿ ಇಂಜಿನಿಯರಿಂಗ್ ಕಾಲೇಜಿನ ಪ್ರಚಾರಕ್ಕಾಗಿ ಸಣ್ಣತನ ತೋರಿಸಿ ಹೆಸರು ವಾಸಿಯಾಗಿದ್ದು ಕುತೂಹಲಕರವಾಗಿದೆ. ಇಂಜಿನಿಯರಿಂಗ್‌ನ ಸೀಇಟಿ ಪರೀಕ್ಷೆಯಲ್ಲಿ ಕ್ವಾಲಿಫೈ ಆಗಿದ್ದವರ ದಾಖಲಾತಿ ಪರಿಶೀಲನೆ ಜಿಲ್ಲಾ ಕೇಂದ್ರ ಕಾರವಾರದಲ್ಲಿ ಇಡಲಾಗಿತ್ತು. ಈ ದಾಖಲಾತಿ ಕೇಂದ್ರವನ್ನು ಸೈಲ್ ತನ್ನ ಇಂಜಿನಿಯರಿಂಗ್ ಕಾಲೇಜಲ್ಲೇ ತೆರೆಯಬೇಕೆಂದು ರಚ್ಚೆ ಹಿಡಿದು ಸಕ್ಸಸ್ ಆಗಿದ್ದರು. ಕಾರವಾರ ನಗರದಿಂದ ಸುಮಾರು 12 ಕಿ.ಮೀ. ದೂರದಲ್ಲಿರುವ ಸೈಲ್‌ನ ಈ ಇಂಜಿನಿಯರಿಂಗ್ ಕಾಲೇಜಿಗೆ ಹೋಗಲು ಅಭ್ಯರ್ಥಿಗಳು ಪರದಾಡಿದ್ದ ಪರಿ ಹೇಳತೀರದು. ಅಧಿಕಾರ ಮದ ಸೈಲ್‌ನಿಗೆ ಹೇಗೇಗೆ ಏರಿದೆ, ಅದು ಜನರಿಗೆ ಹೇಗೇಗೆ ಪೀಡಿಸುತ್ತಿದೆ ಎಂಬುದಕ್ಕೆ ಇದು ಸಣ್ಣ ಸ್ಯಾಂಪಲ್!

ಮೊದಲಿದ್ದ ಸೈಲ್ ಶಾಸಕನಾದ ನಂತರ ದಿಕ್ಕು ತಪ್ಪಿರುವುದು ಯಾರಾದರೂ ಒಪ್ಪುವಂಥದ್ದೇ. ಎಷ್ಟುವ ಮೊದಲೇ ಸೈಲ್ ಎಚ್ಚೆತ್ತುಕೊಳ್ಳುವನಾ? ರಾಜಕಾರಣವನ್ನು ದಂಧೆ ಮಾಡಿಕೊಂಡ ಉದ್ಯಮಪತಿ ಅಸ್ನೋಟಿಕರ್ ಕಸದಬುಟ್ಟಿ ಸೇರಿದ್ದು ಸೈಲ್‌ಗೆ ಪಾಠ ಆಗಬಹುದು ವಿಚಿತ್ರವಾದರೂ ಸತ್ಯ! ಜನ ಕಿವಿ ಹಿಂಡುವ ಮೊದಲೇ ಸೈಲ್ ಸರಿದಾರಿಗೆ ಬರುವಂತಾದರೆ ಕಾರವಾರ-ಅಂಕೋಲೆಗಳ ಪುಣ್ಯ!

• ಸುಯೋಧನ

ಉಲ್ಟಾ-ಪಲ್ಟಾ



ಕಾರವಾರ ಗಣಿ ಮತ್ತು ಭೂವಿಜ್ಞಾನ ಇಲಾಖೆ ಬ್ರಹ್ಮಾಂಡ ಭ್ರಷ್ಟನಾದ ಭಟ್ಟನ ಸುಪರ್ದಿಯಲ್ಲಿದೆ. ಈತ ಜಿಲ್ಲೆಯ ಉದ್ದಗಲಕ್ಕೆ ಇರುವ ಜಲ್ಲಿಕಲ್ಲಿನ ಕ್ವಾರಿ, ಕೆಂಪು ಕಲ್ಲು ಗಣಿ, ಮರಳು ಗಣಿ ದೊರೆಗಳಿಗೆಲ್ಲ ಅವರವರ ಶಕ್ತ್ಯಾನುಸಾರ ಮಾಮೂಲಿ ಫಿಕ್ಸ್ ಮಾಡಿಕೊಂಡಿದ್ದಾನೆ. ಹೀಗಾಗಿ ಕಲ್ಲು, ಮರಳು ಅನಧಿಕೃತವಾಗಿ ನಿರ್ಭಯವಾಗಿ ಸಾಗಾಟ ಆಗುತ್ತಲೇ ಇದೆ. ಈ ಭಟ್ಟನ ಧನದಾಹದಿಂದ ಜಿಲ್ಲೆಯಲ್ಲಿ ಕ್ವಾರಿ ಮಾಫಿಯಾ, ಮರಳು ಮಾಫಿಯಾ ಹಾವಳಿ ಇಡುತ್ತಿದೆ.


ಇಂಥ ಭಟ್ಟ ಬಿಜೆಪಿಯ ಹಿಜರಿನ್ ಸಚಿವನಾಗಿದ್ದ ಆನಂದ್ ಅಸ್ನೋಟಿಕರ್‌ನ ಮೆಚ್ಚಿಸಲು ಆತನ ವೈರಿ-ಹಾಲಿ ಶಾಸಕ- ಸತೀಶ್ ಸೈಲ್‌ನ ಅಗಸೂರಿನ ಚಿರೆ ಕಲ್ಲು ಕ್ವಾರಿಗೆ ಲಕ್ಷಾಂತರ ರೂ. ದಂಡ ಹಾಕಿದ್ದ. ಇದು ಸೈಲ್-ಕಾಮತ್ ಎಂಬ ಖತರ್‌ನಾಕ್ ದೋಸ್ತಿಗಳ ಅನಧಿಕೃತ ಕ್ವಾರಿ. ಹಿಂದೆ ತನ್ನ ಕಾಡಿದ್ದ ಭಟ್ಟನ ಬಾಲ ಕಟ್ ಮಾಡಲು ಸೈಲ್ ಈಗ ಹವಣಿಸುತ್ತಿದ್ದಾನೆ. ಜಿಲ್ಲಾ ಉಸ್ತುವಾರಿ ಮಂತ್ರಿಯೂ, ತನ್ನ ಹಿತೈಷಿಯೂ ಆಗಿರುವ ದೇಶಪಾಂಡೆ ಮೊನ್ನೆ ಕರೆದಿದ್ದ ಜಿಲ್ಲಾಭಿವೃದ್ಧಿ ರಿವ್ಯೂ ಮೀಟಿಂಗ್‌ನಲ್ಲಿ ಸೈಲ್ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಧಿಕಾರಿ ಭಟ್ಟನ ಮೇಲೆ ಮುಗಿಬಿದ್ದ. "ಸರ್ ಈ ಭಟ್ಟ ಅಭಿವೃದ್ಧಿ ಕಾಮಗಾರಿಗೆ ಅಗತ್ಯವಾದ ಕಲ್ಲು ಕ್ವಾರಿ ಶುರು ಮಾಡಲು ಬಿಡುತ್ತಿಲ್ಲ... ಕ್ವಾರಿಯವರಿಗೆ ಕಾಡುತ್ತಾನೆ..." ಎಂದು ಮಂತ್ರಿಗಳಿಗೆ ದೂರಿದ್ದ.

ಆ ತಕ್ಷಣ ಚಾಲಾಕಿ ಭಟ್ಟನೂ ತಿರುಗಿ ಬೀಳಬೇಕಾ? ಸೈಲ್ ಎಮ್ಮೆಲ್ಲೆ ಆಗುವ ಮೊದಲು ಅಕ್ರಮ ಗಣಿಗಾರಿಕೆಗೆ [illegible] ಕೊಡಬಾರದೆಂದು ಕೊಟ್ಟ ನೋಟಿಸ್ ಎತ್ತಿ ಹಿಡಿದು ತೋರಿಸಿಬಿಟ್ಟ ಭಟ್ಟ! ಅಂದು ಎದುರಾಳಿ ಅಸ್ನೋಟಿಕರ್‌ನ [illegible] ಕ್ವಾರಿ ನಡೆಸಲು ಬಿಡಬಾರದೆಂದು ಸೈಲ್ ಮಾಡಿದ ತಂತ್ರವೇ ಈಗಾತನಿಗೆ ತಿರುಗುಬಾಣ ಆಗಿದ್ದ [illegible] ಸೈಲ್ ಪೆಚ್ಚಾದ. ಆದರೆ ಭಟ್ಟನ ಭಾನ್ಗಡಿಗೆ ಕಡಿವಾಣ ಹಾಕುವ ಅನಿವಾರ್ಯತೆ ಇದೆ. ಮಂತ್ರಿ ದೇಶಪಾಂಡೆಗೆ [illegible] ಅರ್ಥವಾದೀತಾ? ಅಥವಾ ಆತ ಕೊಡುವ ಪಾಲೇ ಪಂಚಾಮೃತ ಎಂದು ಸ್ವೀಕರಿಸುವರಾ? ಭಟ್ಟ ಆಳುವವರಿಗೆ [illegible] ಒದಗೋದನ್ನು ನಿಲ್ಲಿಸಲು!

ಪದ್ಮಶ್ರೀ ಚಿಟ್ಟಾಣಿಯವರನ್ನು ಕಡೆಗಣಿಸಿದ ದೇಶಪಾಂಡೆ!

ರಘುನಾಥರಾವ್ ವಿಶ್ವನಾಥ್ ರಾವ್ ದೇಶಪಾಂಡೆಯ ಮಂತ್ರಿಗಿರಿ ದರ್ಬಾರೆಂದರೆ ಅದು ಪಕ್ಕಾ ರಾಜವೈಭೋಗ; ಪ್ರಜಾಪ್ರಭುತ್ವದ ಅಣಕ. ದೇಶಪಾಂಡೆಯದು ಲಾಗಾಯ್ತಿನಿಂದಲೂ ಪಾಳೆಗಾರಿ ಜಾಯಮಾನ. ಏಳೆಂಟು ವರ್ಷದ ಬಳಿಕ ಮತ್ತೆ ಮಂತ್ರಿ ಆಗಿರುವ ದೇಶಪಾಂಡೆಗೆ ಅಧಿಕಾರದ ಪಿತ್ಥ ನೆತ್ತಿಗೇರತೊಡಗಿದೆ! ಈ ರಾಜಕೀಯ ಮಧ್ಯದ ಬಿಡುವಿನಲ್ಲಿ ಆತನ ತಲೆ ಮಾಸಿ ಬೆಳ್ಳಿ ಕೂದಲಾಗಿದೆಯೇ ಹೊರತು ಬುದ್ಧಿ ಒಂಚೂರೂ ಬದಲಾಗಿಲ್ಲ. ನಾಯಕನೊಬ್ಬನಿಗೆ ಬೇಕಾದ ನಯವಿನಯ-ದೂರದೃಷ್ಟಿ-ಸಮಯಪ್ರಜ್ಞೆ ಯಾವುದೂ ಬೆಳೆದಿಲ್ಲ.

ಈತ ಹಿಂದೆಲ್ಲ ಮಂತ್ರಿಯಾದಾಗ ಸ್ವಾಹಾ ರಾಜ್ಯಮಟ್ಟದಾಗಿರುತ್ತಿತ್ತು. ಠೇಂಕಾರ-ದುರಹಂಕಾರ ಉತ್ತರ ಕನ್ನಡಕ್ಕಷ್ಟೇ ಸೀಮಿತವಾಗಿರುತ್ತಿತ್ತು! ಈ ಬಾರಿ ಆತ್ಮ ವಿಧಾನಸಭೆ ಒಳಗೆ ಮತ್ತು ಹೊರಗೆ ತಾನೇ ನಂಬರ್ ಟೂ ಎಂಬಂತೆ ಬುರ್ನಾಸ್ ಪೋಸು ಬೇರೆ ಕೊಡತೊಡಗಿದ್ದಾರೆ. ಬಾಡಿ ಲಾಂಗ್ವೇಜ್ ಮೂಲಕವಾದರೂ ಕಾಂಗ್ರೆಸ್‌ನ ಮುಂಚೂಣಿಯಲ್ಲಿದ್ದರೆ ಸಿಎಂಗಿರಿ ಆಸೆ ಈಡೇರಬಹುದೆಂಬ ದೂ(ದು)ರಾಲೋಚನೆ ದೇಶಪಾಂಡೆಯದು. ದಿಲ್ಲಿ ಹೈಕಮಾಂಡ್‌ನಲ್ಲೂ ಧನಾಧಾರಿತ ಆಶ್ರಯದಾತರ ತಂಡ ಕಟ್ಟಿಕೊಂಡಿರುವ ಈತನದೀಗ ಎರಡೇ ಎರಡು ಗುರಿ. ಒಂದು, ತಾನು ಸಿಎಂ ಆಗೋದು; ಮತ್ತೊಂದು, ತನ್ನ ಸುಪುತ್ರನೂ, ಕೇಂದ್ರ ಮಂತ್ರಿ ಪ್ರಫುಲ್ ಪಟೇಲರ ಅಳಿಮಯ್ಯನೂ ಆಗಿರುವ ಪ್ರಶಾಂತನನ್ನು ಉತ್ತರ ಕನ್ನಡದ ಎಂಪಿ ಮಾಡೋದು.


ಚಿಟ್ಟಾಣಿ

ದೇಶಪಾಂಡೆಯ ರಾಜಕಾರಣ ಏನೇ ಇದ್ದು ಹಾಳಾಗಿಹೋಗ್ಲಿ. ಆತ ಮಂತ್ರಿಯಂಥ ಉನ್ನತ-ಹೊಣೆಗಾರಿಕೆಯ-ಗಂಭೀರ ಸ್ಥಾನದಲ್ಲಿದ್ದುಕೊಂಡು ತೋರಿಸುವ ದುರಹಂಕಾರ-ದೌಲತ್ತು ಇದೆಯಲ್ಲ, ಅದು ಅನಾಹುತಕಾರಿ. ಈತನ ಜಿಲ್ಲಾಡಳಿತ ಸ್ಟೈಲ್ ಸರ್ವಾಧಿಕಾರದ ಪ್ರತೀಕ. ಸ್ವಜಾತಿ ಕೊಂಕಣಿ ಕಳ್ಳ ಚೇಲಾಗಳ, ಕಂಟ್ರಾಕ್ಟರ್‌ಗಳ, ವರ್ತಕರ ಹಿತಾಸಕ್ತಿಯೇ ಆತನ ಹಿಡನ್ ಅಜೆಂಡಾ. ಜನ ಸಾಮಾನ್ಯರ-ಜನಪ್ರತಿನಿಧಿಗಳ ಮತ್ತು ಅಧಿಕಾರಿಗಳ ಎದುರು ಈ ಜಿಲ್ಲಾ ಉಸ್ತುವಾರಿ ಮಂತ್ರಿ ಆಗಾಗ ``I am the Government'' ಎಂದಬ್ಬರಿಸೋದು ಮಾಮೂಲಿ. ಈ ಬಾರಿಯೂ ದೇಶಪಾಂಡೆ ಸಾಹೇಬರು ಮಂತ್ರಿಯಾಗಿ ಎರಡು ತಿಂಗಳು ಕಳೆಯೋದರಲ್ಲಿ ನಾಲ್ಕು ಬಾರಿ ಈ "ಧ್ಯೇಯ ವಾಕ್ಯ" ಉದುರಿಸಿ ಆಗಿದೆ!


ಸರಿಯಾಗಿ ಕನ್ನಡವೂ ಮಾತಾಡಲು ಬಾರದ ಈ ಮರಾಠಿ-ಕೊಂಕಣಿ ಕುಳಕ್ಕೆ ಜನರೆಂದರೆ ಒಂಥರಾ ಅಲರ್ಜಿ. ಅಷ್ಟು ಸುಲಭಕ್ಕೆ ದೇಶಪಾಂಡೆಗೆ ಬಡವರ, ನೊಂದವರ ಸಮಸ್ಯೆ ಅರ್ಥವಾಗದು. ಆತ ಸಾರ್ವಜನಿಕರ ಅಹವಾಲು ಸ್ವೀಕರಿಸೋದು, ಜನತಾ ದರ್ಶನ ಮಾಡೋದು, ಪ್ರಗತಿ ಪರಾಮರ್ಶೆ ಸಭೆ ನಡೆಸೋದೆಲ್ಲ ಸೋಗಲಾಡಿ ಶೋ! ಮೊನ್ನೆ-ಮೊನ್ನೆ ಎರಡೆರಡು ಇಂಥ ಭಂಡಾಟ ಮಂತ್ರಿಗಳು ಆಡಿ ಮುಗಿಸಿದ್ದಾರೆ. ಅಹವಾಲು ತರುವ ಮನುಷ್ಯರನ್ನು ಕೀಳಾಗಿ ಕಾಣುವ ಸ್ವಭಾವದ ದೇಶಪಾಂಡೆ ಕಾಳಿ ಜಲವಿದ್ಯುತ್ ನಿರಾಶ್ರಿತನೊಬ್ಬನ ಮೇಲೆ ಮುಗಿಬಿದ್ದಿದ್ದರು. ಆತ ಪರಿಹಾರ ಹಣಕ್ಕಾಗಿ ಮಂತ್ರಿಗಳಿಗೆ ಮೊರೆಯಿಟ್ಟಿದ್ದ. ತಕ್ಷಣ ದೇಶಪಾಂಡೆಯೊಳಗಿನ ಸೈತಾನ ಜಾಗ್ರತನಾಗಿ ಬಿಡಬೇಕಾ?

"ಹೌದ್ರಿ, ನನ್ನಪ್ಪಂದೂ 200 ಎಕ್ರೆ ಭೂಮಿ ಹೋಗಿದೆ. ಪರಿಹಾರ ಸಿಗ್ಲಿಲ್ಲಾ.... ನಿಮ್ಗೆ ಇನ್ನೆಲ್ಲಿ ಪರಿಹಾರ ಕೊಡೋದು.....?" ಎಂದಬ್ಬರಿಸಿಬಿಟ್ಟರು ದೇಶಪಾಂಡೆ ಸಾಹೇಬರು. ಈ ಆರ್ಭಟ ನಡೆದು ಸರಿಯಾಗಿ ಹದಿನೈದು ದಿನವೂ ಕಳೆದಿಲ್ಲ, ಯಕ್ಷಗಾನ ಲೋಕದ ಮೇರು ಕಲಾವಿದ-ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಚಿಟ್ಟಾಣಿ ರಾಮಚಂದ್ರ ಹೆಗಡೆಯವರನ್ನು ನೂರಾರು ಜನರೆದುರು ಉಪೇಕ್ಷಿಸಿ ಸುದ್ದಿ ಮಾಡಿದ್ದಾರೆ.

ಚಿಟ್ಟಾಣಿಯ ತವರೂರು ಹೊನ್ನಾವರಕ್ಕೆ ಹೋಗಿದ್ದ ಮಂತ್ರಿ ದೇಶಪಾಂಡೆ ಜನರಿಂದ ಮನವಿ-ಅಹವಾಲು ಸ್ವೀಕರಿಸುವ ಕಾರ್ಯಕ್ರಮ ಹಮ್ಮಿಕೊಂಡಿದ್ದರು. ಮಂತ್ರಿಗಳನ್ನು ಕಾಣಲು ಬಂದಿದ್ದ ಸಾಮಾನ್ಯರ ಸಾಲಿನಲ್ಲಿ ಅಸಾಮಾನ್ಯ ಯಕ್ಷಗಾನ ನಟ-ದೇಶ, ವಿದೇಶದಲ್ಲಿ ಹೆಸರು ಮಾಡಿರುವ ಚಿಟ್ಟಾಣಿಯವರೂ ಇದ್ದರು. ತಮ್ಮ ಸರದಿ ಬಂದಾಗ ಮುಗ್ಧ-ಸರಳ-ನಿರಾಡಂಬರ ಚಿಟ್ಟಾಣಿ ಮಂತ್ರಿಗೆ ಸ್ವಯಂ ಪರಿಚಯಿಸಿಕೊಳ್ಳಬೇಕಾಗಿ ಬಂತು! ಇಂಥ ಸುಪ್ರಸಿದ್ಧ-ದೇಶದ ಅತ್ಯುನ್ನತ ಪದ್ಮ ಪ್ರಶಸ್ತಿ ಪಡೆದ ಕಲಾವಿದನ ಕಂಡಾಗ ಸ್ವಲ್ಪ ಸೂಕ್ಷ್ಮತೆ, ಸಮಯ ಪ್ರಜ್ಞೆ, ಸಾಮಾನ್ಯ ಜ್ಞಾನ, ಕಲೆ-ಸಂಸ್ಕೃತಿಯ ಕನಿಷ್ಠ ತಿಳಿವಳಿಕೆ, ಮಂತ್ರಿಗಿರಿಯ ಜವಾಬ್ದಾರಿ ಇರುವಾತನಾಗಿದ್ದರೆ ತಕ್ಷಣ ತಾನೇ ಸೌಜನ್ಯಕ್ಕಾದರೂ 'ವಿಶ್' ಮಾಡುತ್ತಿದ್ದರು. ಆದರೆ 24 x 7 ರಾಜಕಾರಣಿ ದೇಶಪಾಂಡೆಗೆ ಚಿಟ್ಟಾಣಿಯೇ ಪರಿಚಯಿಸಿಕೊಳ್ಳಬೇಕಾಗಿ ಬಂತು. ಇದು ದೇಶಪಾಂಡೆಯ ದೊ(ದ)ಡ್ಡತನ ಬಿಡಿ.

ವಿಷಯ ಅದಲ್ಲ; ಚಿಟ್ಟಾಣಿ ಮಾತಾಡಿಸಿದಾಗ ಆತನ ಮುಖವೂ ನೋಡದೆ ಮನವಿ ಕಸಿದುಕೊಂಡಂತೆ ಎಳೆದುಕೊಂಡ ದೇಶಪಾಂಡೆ "ಗೊತ್ತಿದೇರಿ ನೀವ್ಯಾರೆಂದು" ಎನ್ನುತ್ತಲೇ ಮುಂದಡಿ ಇಟ್ಟರು. ಸಾಮಾನ್ಯರಲ್ಲಿ ಸಾಮಾನ್ಯರಂತೆ ಬಂದಿದ್ದ ಈ ಅಸಾಮಾನ್ಯ ಕಲಾವಿದ ಮತ್ತೆ ಮಂತ್ರಿಗಳಿಗೆ "ಸರ್, ಈ ಕೆಲ್ಸ ಆಗ್ಬೇಕ್ರೀ..." ಎಂದು ಬೇಡಿಕೊಂಡರು. ಆಗಲೂ ದೇಶಪಾಂಡೆಯಿಂದ ಬಂದಿದ್ದು ಸೊಕ್ಕಿನ ಶಬ್ದಗಳೇ!! "ಮಂತ್ರಿಗಳ ಕೈಗೆ ಮನವಿ ಕೊಟ್ರೆ ಮುಗೀತು...." ಎಂದು ತಾತ್ಸಾರ ತೋರಿಸಿದರು. ದೇಶಪಾಂಡೆಯ "ನಡವಳಿಕೆ" ಕಂಡೋರು "ಎಲಾ ಇವನ ಅಹಂಕಾರವೇ!" ಎಂದು ಬೆಚ್ಚಿಬಿದ್ದರು!

ಯಾರಿಗೂ ಗೌರವ ಕೊಟ್ಟೇ ಗೊತ್ತಿಲ್ಲ ದೇಶಪಾಂಡೆಗೆ. ಆದರೆ ತನಗೆಲ್ಲರೂ ಡೊಗ್ಗುಸಲಾಮು ಹಾಕಬೇಕೆಂಬ ಅಪೇಕ್ಷೆ. 75 ರ ಹರೆಯದಲ್ಲೂ 25ರ ಯುವಕನಂತೆ ರಂಗದ ಮೇಲೆ ಕುಣಿವ-ನಟಿಸುವ ಚಿಟ್ಟಾಣಿಯ ಕಲಾ ಪ್ರೌಢಿಮೆ, ಆತನಿಗೆ ಸಿಕ್ಕಿರುವ ಪ್ರಶಸ್ತಿ, ಪುರಸ್ಕಾರ, ಜನಪ್ರಿಯತೆ, ದೇಶಪಾಂಡೆಗೆ ಗೊತ್ತಿಲ್ಲವಾ? ಖಂಡಿತ ಗೊತ್ತಿದೆ. ತನ್ನ ಅಥವಾ ತನ್ನ ಪೆದ್ದು ವಂಶೋದ್ಧಾರಕ-ಪ್ರಶಾಂತನ ರಾಜಕೀಯ ಉತ್ಕರ್ಷೆಗೆ ಅನುಕೂಲವಾಗುವಂತಿದ್ದರಷ್ಟೇ ಚಿಟ್ಟಾಣಿಯಂಥವರನ್ನು ದೇಶಪಾಂಡೆ ಬಳಸಿಕೊಳ್ಳುತ್ತಾರೆ. ಇದೇ ಚಿಟ್ಟಾಣಿಯವರನ್ನು ಕಳೆದ ಲೋಕಸಭಾ ಚುನಾವಣೆ ಹೊತ್ತಲ್ಲಿ ದೇಶಪಾಂಡೆ ತನ್ನ ಫ್ಯಾಮಿಲಿ ಟ್ರಸ್ಟ್ ವತಿಯಿಂದ ದೊಡ್ಡ ಸಾಧಕರಿಗೆ ಸನ್ಮಾನಿಸಿದ್ದರು.




ಆಗ ದೇಶಪಾಂಡೆಗೆ ತನ್ನ ಮಗನಿಗೆ ಎಂಪಿ ಕ್ಯಾಂಡಿಡೇಟ್ ಎಂದು ಬಿಂಬಿಸುವ ಜರೂರತ್ತು-ದರ್ದು ಇತ್ತು. ತನ್ನಪ್ಪನ (ವಿಆರ್‌ಡಿ ಟ್ರಸ್ಟ್) ಹೆಸರಲ್ಲಿರುವ ಟ್ರಸ್ಟ್‌ನಿಂದ ಆತ ಪ್ರಖ್ಯಾತರನ್ನು ಕುಮಟಾಕ್ಕೆ ಕರೆದು ಭರ್ಜರಿ ಫಂಕ್ಷನ್‌ನಲ್ಲಿ ಸನ್ಮಾನಿಸಿದ್ದರು. ಆಗ ಅಪ್ಪ-ಮಗ ಚಿಟ್ಟಾಣಿಯನ್ನೂ ಪುಂಖಾನುಪುಂಖವಾಗಿ ಹಾಡಿಹೊಗಳಿದ್ದರು. ಅದಕ್ಕೆ ಪ್ರತಿಯಾಗಿ ಚಿಟ್ಟಾಣಿಯೂ ಈ ಅಪ್ಪ-ಮಗನ ಕೊಂಡಾಡಿದ್ದರು. "ದೊಡ್ಡೋರ ಮನೆ ಹುಡುಗ ಬಂದು ಸನ್ಮಾನಕ್ಕೆ ಕರೆದ... ಎಂಥ ವಿನಯ.... ಎಂಥ ಕಳೆ.... ಮುಂದೆ ದೊಡ್ಡೋನಾಗೋ ಲಕ್ಷಣ....!!!" ಎಂದೆಲ್ಲ ಪ್ರಶಾಂತನನ್ನು ತಾರೀಫು ಮಾಡಿದ್ದರು. ಮೊನ್ನೆ ದೇಶಪಾಂಥೆಯ ಪೊಗರು ಕಂಡ ಚಿಟ್ಟಾಣಿಯಲ್ಲಿ ಸಣ್ಣದೊಂದು ವಿಷಾದ-ತಪ್ಪಿತಸ್ಥನ ಭಾವನೆ ಮೂಡಿರಲಿಕ್ಕೂ ಸಾಕು; ಆ ಸನ್ಮಾನ-ಅವಮಾನದ ಗುಟ್ಟು ಅರ್ಥವಾಗಲಿಕ್ಕೂ ಸಾಕು.

ಅದಿರಲಿ; ಪದ್ಮ ಪ್ರಶಸ್ತಿ ಪಡೆದವರಿಗೆ ಈ ನಾಗರಿಕ ಸಮಾಜದಲ್ಲಿ ಒಂದಿಷ್ಟು ವಿಶೇಷ ಗೌರವ-ಪ್ರೋಟೋಕಾಲ್‌ಗಳಿರುತ್ತವೆ. ಅಂಥವರಿಗೆ ಅಧಿಕಾರಸ್ಥರು ಗೌರವಾದರದಿಂದ ಅಟೆಂಡ್ ಮಾಡೋದು ಕರ್ತವ್ಯ. ಹೀಗಿರುವಾಗ ರಾಜ್ಯದ ಕ್ಯಾಬಿನೆಟ್ ಮಂತ್ರಿಯೇ ಪದ್ಮಶ್ರೀ ವಿಜೇತನ ಉದಾಸೀನದಿಂದ ಕಡೆಗಣಿಸುತ್ತಾರೆಂದರೆ ಏನನ್ನೋದು? ಇದರಿಂದ ಚಿಟ್ಟಾಣಿಗೇನೂ ಹಾನಿ ಇಲ್ಲ; ದೇಶಪಾಂಡೆಯ ಸಣ್ಣತನ ಸಾಬೀತಾಯ್ತಷ್ಟೇ. ದೇಶಪಾಂಡೆಗೆ ಬುರ್ನಾಸ್ ರಾಜಕಾರಣ, ಅಧಿಕಾರೋನ್ಮಾದ ಬಿಟ್ಟರೆ ಕಲೆ-ಸಾಹಿತ್ಯ-ಶಿಷ್ಟಾಚಾರ-ಮನುಷ್ಯತ್ವ ಗೊತ್ತಿಲ್ಲ! ಅದನ್ನು ಆತನೇ ಪದೇ-ಪದೇ ಖಾತ್ರಿ ಪಡಿಸುತ್ತಿರುವುದು ನಾಚಿಕೆಗೇಡು!

ಸಿಎಂ ಸಿದ್ದು ದೇಶಪಾಂಡೆಗೆ "ದಂಡ" ಪ್ರಯೋಗಿಸಲು ಯೋಚಿಸಿದರೆ ಅವರ ಮಾನ ಉಳಿದೀತು!

● ನಹುಷ

ಪೂಜಾರಿ ಪರಿತಾಪ




ಕರಾವಳಿ ಕಾಂಗ್ರೆಸ್‌ನ ಕಣ್ಣು ಕುಕ್ಕುವ ನಾಯಕ ಜನಾರ್ಧನ್ ಪೂಜಾರಿ ಕೆಲವು ಸಲ ಮುಗ್ಧ, ಕೆಲವು ಸಲ ಮೂರ್ಖ; ಹಲವು ಸಲ ನೇರ-ನಿಷ್ಠುರ, ಮರುಘಳಿಗೆಯೇ ಎಡಬಿಡಂಗಿ. ಇಂಥ ದ್ವಂದ್ವದಿಂದಾಗಿಯೇ ಆತ ಮೊಯ್ಲಿ ಮಹಾತ್ಮನ ಪಟ್ಟುಗಳೆದುರು ಸೋಲುತ್ತಾ ಬಂದಿದ್ದಾರೆ. ಹಾಗೆ ನೋಡಿದರೆ ಮೊಯ್ಲಿ-ಸೊರಕೆ-ಆಸ್ಕರ್‌ಗಿಂತಲೂ ಪೂಜಾರಿ ಪ್ರಾಮಾಣಿಕ ಕಾಂಗ್ರೆಸಿಗ. ಅವಿಭಜಿತ ದಕ್ಷಿಣ ಕನ್ನಡದ ಎಲ್ಲ ಪಕ್ಷದ ಮಹಾಮಹಿಮರಿಗಿಂತಲೂ ಸೆಕ್ಯುಲರ್-ಮಾನವತಾವಾದಿ-ಬಂಡಾಯಗಾರ. ಮೂಢನಂಬಿಕೆ-ವಿಧವಾ ಪದ್ಧತಿಯಂಥ ಅನಿಷ್ಟಗಳ ವಿರುದ್ಧ ಸೆಟೆದು ನಿಂತ ಛಾತಿವಂತ. ನಾರಾಯಣ ಗುರು ಅನುಯಾಯಿ.

ಕರಾವಳಿಯ ಕಾಂಗ್ರೆಸ್‌ನಲ್ಲಿ ಕಲ್ಲಡ್ಕ ಪ್ರಭಾಕರ್ ಭಟ್ ಎಂಬ 'ಖತರ್‌ನಾಕ್ ಕೋಮುವಾದಿ ಪ್ರಚೋದಿತ ಚಡ್ಡಿ ರಾಜಕಾರಣದ ವಿರುದ್ಧ ಯಾರಾದರೂ ಮಾತನಾಡಿದ್ದರೆ ಅದು ಈ ಪೂಜಾರಿ ಮಾತ್ರ. ಉಳಿದ ಆಸ್ಕರ್-ಮೊಯ್ಲಿ-ಸೊರಕೆ ಮತ್ತಿತರ ಜೂನಿಯರ್ ಕಾಂಗ್ರೆಸಿಗರು ತಲೆ ಮರೆಸಿಕೊಂಡು ರಾಜಕಾರಣ ಮಾಡಿದ್ದೇ ಹೆಚ್ಚು, ಇಂಥ ಪೂಜಾರಿ ಅದ್ಯಾಕೋ ಸಿದ್ದರಾಮಯ್ಯ ಸಿಎಂ ಆದ ತಕ್ಷಣ ಹೊರಡಿಸಿದ ಒಂದು ಆವಾಜ್ ಆತ ಮೃದು ಹಿಂದೂತ್ವವಾದಿಯಾ? ಎಂಬ ಅನುಮಾನ ಮೂಡಿಸಿದೆ.

ಆಗಿದ್ದು ಇಷ್ಟು; ಉಡುಪಿ ಶ್ರೀಕೃಷ್ಣ ದೇವಸ್ಥಾನವನ್ನು ಅಷ್ಟಮಠದ ಸುಪರ್ದಿಯಿಂದ ಮುಜರಾಯಿ ಇಲಾಖೆಗೆ ತರಲಾಗುವುದೆಂದು ಸಿಎಂ ಸಿದ್ದಣ್ಣ ಅಧಿಕಾರಕ್ಕೇರಿದ ಹೊಸದರಲ್ಲಿ ಹಲುಬಿದ್ದರು. ಆಗ ಈ ಪೂಜಾರಿ ಮಾಮ ತಕ್ಷಣಕ್ಕೆ ಸಿಎಂ ವಿರುದ್ಧವೇ ಪ್ರೋತ್ಕರಿಸಿಬಿಟ್ಟರು. "ನಿಮಗೆ ಮಾಡಲಿಕ್ಕೆ ಬೇಕಷ್ಟು ಕೆಲ್ಸ ಇದೆ... ಆಡಳಿತದತ್ತ ಗಮನ ಹರಿಸಿ... ಉಡುಪಿ ದೇವಸ್ಥಾನದ ಉಸಾಬರಿಗೆ ಹೋಗಬೇಡಿ... ಹುಷಾರ್...!!" ಎಂದೆಲ್ಲ ಹಿಂದೂವಾದಿಗಳ- ಕಾವಿ ಹಿತರಕ್ಷಕರ ಧ್ವನಿಯಲ್ಲಿ ಮಾತಾಡಿಬಿಟ್ಟರು. ಪೂಜಾರಿ ಬಿಜೆಪಿ ಸರ್ಕಾರ ತೊಲಗುತ್ತಲೇ ಮನಃ ಪರಿವರ್ತಿತರಾದರಾ ಎಂದು ಕರಾವಳಿಯ ಸೆಕ್ಯುಲರಿಸ್ಟ್‌ಗಳು ಆತಂಕಿತರಾದರು.

ಆದರೆ ರಹಸ್ಯ ವಿಚಿತ್ರವಾಗಿತ್ತು. ಮಂಗಳೂರಿನ ಕುದ್ರೋಳಿ ಎಂಬಲ್ಲಿ ಪೂಜಾರಿ ಅಧ್ವರ್ಯದಲ್ಲಿ ಒಂದು ದೇವಾಲಯ ನಡೆಯುತ್ತಿದೆ. ಅಲ್ಲಾಗುವ ನವರಾತ್ರಿ ಉತ್ಸವ ತುಂಬ ಫೇಮಸ್. ಪೂಜಾರಿಗೊಂದು "ಉದಾರಿವಾದಿ ಧಾರ್ಮಿಕನ" ಗೆಟಪ್ ಕೊಟ್ಟಿದ್ದು ಈ ದೇವಾಲಯದ ಸುಧಾರಿತ ಧಾರ್ಮಿಕ ವಿಧಿ-ವಿಧಾನ-ಉತ್ಸವಗಳು! ಈ ದೇವಾಲಯದೊಳಗೇ ಸೋನಿಯಾ ಗಾಂಧಿ ಕಾಯಿಲೆಬಿದ್ದು ವಿದೇಶಕ್ಕೆ ಟ್ರೀಟ್‌ಮೆಂಟ್‌ಗೆಂದು ಹೋದಾಗ ಬೇಗ ಗುಣಮುಖರಾಗಿ ಬರಲೆಂದು ಪೂಜಾರಿ ಉರುಳು ಸೇವೆ ಮಾಡಿದ್ದರು! ಈ ದೇವಾಲಯವೇನಾದರೂ ಮುಜರಾಯಿ ಇಲಾಖೆಗೆ ಹೋಗಬಹುದೆಂಬ ಹೆದರಿಕೆಯಿಂದ ಪೂಜಾರಿ ಪೇಜಾವರ ಸ್ವಾಮೀಜಿ ಪರ ಪರೋಕ್ಷ ವಕಾಲತ್ತು ಮಾಡಿದ್ದಾರೆಂದು ಕೆಲವರು ಕುಹಕವಾಡುತ್ತಾರೆ.

ಒಟ್ಟಿನಲ್ಲಿ ಪೂಜಾರಿ ಹೊಸ ಸಿಎಂ ವಿರುದ್ಧವೇ ಸಾರ್ವಜನಿಕವಾಗಿ ತಿರುಗಿ ಬಿದ್ದಿದ್ದರು. ಆನಂತರ ಅದೇನಾಯ್ತೋ! ಸಿದ್ದುವೂ ಸುಮ್ಮನಿದ್ದಾರೆ. ಪೂಜಾರಿಯೂ ಈ ಈಶ್ಯೂ ಬಿಟ್ಟಿದ್ದಾರೆ. ಆದರೆ ಪೂಜಾರಿ ಈಗ ಎಡಬಿಡಂಗಿಯಂತೆ ಕಂಗೊಳಿಸುತ್ತಿದ್ದಾರೆ. ಒಂದು ರೂಪಾಯಿಗೆ ಒಂದು ಕೆಜಿಯಂತೆ ಮುವತ್ತು ಕೆಜಿ ಅಕ್ಕಿ ಕೊಡುವ ಸಿಎಂ ಸಿದ್ದು ಸ್ಕೀಮಿಗೆ ಗ್ರಾಮೀಣಾಭಿವೃದ್ಧಿ ಮಂತ್ರಿ ಎಚ್.ಕೆ. ಪಾಟೀಲ್ ಆಕ್ಷೇಪ ವ್ಯಕ್ತಪಡಿಸಿ ಹೇಳಿಕೆ ಕೊಟ್ಟಿದ್ದಕ್ಕೆ ಪೂಜಾರಿ ಗರಮ್ ಆಗಿದ್ದಾರೆ. ಸಿಎಂ ವಿರುದ್ಧ ಮಾತಾಡಿದ್ದಕ್ಕೆ ಪಾಟೀಲರು ಕ್ಷಮೆ ಯಾಚಿಸಬೇಕು ಅಥವಾ ಮಂತ್ರಿಗಿರಿಗೆ ರಾಜಿನಾಮೆ ಕೊಡಬೇಕೆಂಬುದು ಪೂಜಾರಿ ಆಗ್ರಹ.



ಪಾರ್ಟಿ ಸಿಎಂ ವಿರುದ್ಧ ತಾನ... ದರೆ ಮಾತಾಡಬಹುದು. ಪಾಟೀ... ರಾದರೆ ಮಾತಾಡಬಾರದು. ಮಂ... ಅಷ್ಟ ಮಠಾಧೀಶರಿಗೆ ಅನುಕೂ... ವಾಗುವಂತೆ ಮಾತಾಡಿ ಸ್ವ-ಪಕ್ಷ... ಸಿಎಂನನ್ನು ಮುಜುಗರಕ್ಕೀಡುಮಾಡ... ವಾಗ ಹಿರಿಯ ಪೂಜಾರಿಗೆ ಈ... 'ಎಚ್ಚರ' ಏಕಿರಲಿಲ್ಲ. ಇದ... ಪೂಜಾರಿಯ 'ಒರಿಜನಲ್ ಸ್ಟೈಲ್'



ಬಿಜೆಪಿ ಅಧ್ಯಕ್ಷ ರಾಜನಾಥ್ ಸಿಂಗ್ ಜೊತೆ



ಮುರಳಿ ಮನೋಹರ್ ಜೋಷಿ ಜೊತೆ



ಕೇಂದ್ರ ಮಂತ್ರಿ ಶ್ರೀಪ್ರಕಾಶ್ ಜೈಸ್ವಾಲ್ ಜೊತೆ

ತಿಪಟೂರು-ಹಾಸನ ಹೈವೇಗೆ ಶನಿಕಾಟ

ಅಭಿವೃದ್ಧಿ ಅನ್ನೋ ಹೆಸರಿನಲ್ಲಿ ಏನೇ ಮಾಡಿದರೂ ದೇಶದಲ್ಲಿ ಅವರನ್ನು ಹೇಳೋರು ಕೇಳೋರು ಯಾರೂ ಇಲ್ಲದಿಲ್ಲ. ಇದು ನಮ್ಮ ಅಭಿವೃದ್ಧಿ ಯೋಜನೆಗಳ ಮತ್ತೊಂದು ಕರಾಳ ಮುಖ. ಇದಕ್ಕೆ ತಾಜಾ ಉದಾಹರಣೆ ಇಲ್ಲಿದೆ ನೋಡಿ.

ಹಾಸನ ಮತ್ತು ತುಮಕೂರು ಜಿಲ್ಲೆಗಳನ್ನು ಸಂಪರ್ಕಿಸಲು ಉದ್ದೇಶಿಸಲಾಗಿದ್ದ ಚಿಕ್ಕನಾಯಕನಹಳ್ಳಿ-ತಿಪಟೂರು-ಹಾಸನ ರಸ್ತೆಯನ್ನು ಆಧುನಿಕ ಕಾಂಕ್ರೀಟ್ ರಸ್ತೆಯನ್ನಾಗಿ ನಿರ್ಮಾಣ ಮಾಡುವ ಗುತ್ತಿಗೆ ಹಿಡಿದಿದ್ದ ಅಭಿಜಿತ್ ಕಂಪನಿಯ ಮಾಲಿಕ ಮನೋಜ್ ಜೈಸ್ವಾಲ್ ಯೋಜನೆಯನ್ನು ನಡುನೀರಲ್ಲಿ ಬಿಟ್ಟು ಪರಾರಿಯಾಗಿದ್ದಾನೆ. ಒಬ್ಬ ಗುತ್ತಿಗೆದಾರ ಓಡಿಹೋದ ಎಂದಮಾತ್ರಕ್ಕೆ ಯಾರೂ ಏನೂ ತಲೆಕೆಡಿಸಿಕೊಳ್ಳಬೇಕಿರಲಿಲ್ಲ. ಆದರೆ ಈ ಖದೀಮ ಸುಮ್ಮನೆ ಓಡಿಹೋಗಿಲ್ಲ; ಉದ್ದಕ್ಕೂ ರಸ್ತೆಯನ್ನು ತೋಡಿಹಾಕಿ, ಇಡೀ ರಸ್ತೆಯನ್ನು ಕಲ್ಲುಗಳು, ಗುಂಡಿಗಳು ಹಾಗೂ ಕೆಸರಿನ ಹೊಂಡವನ್ನಾಗಿ ಮಾಡಿಟ್ಟುಹೋಗಿದ್ದಾನೆ.

ಹೈಕ್ಲಾಸ್ ಹೈವೇಯ ಕನಸು ಕಾಣುತ್ತಿದ್ದ ಜನರಿಗೆ ಈ ರಸ್ತೆ ಅಕ್ಷರಶಃ ನರಕದಂತಾಗಿದೆ.

ಈ ರಸ್ತೆಯ ದುರಂತ ಕತೆ ಬಹಳ ಕುತೂಹಲಕಾರಿ ಯಾಗಿದೆ. ಈ ಹಿಂದೆ ಹದಗೆಟ್ಟಿದ್ದ ರಸ್ತೆಯನ್ನು ದುರಸ್ತಿ ಮಾಡಿಸುವಂತೆ ಆಗ್ರಹಿಸಿ ಪ್ರತಿಭಟನೆ ನಡೆಸಿದ ಜನರ ಮೇಲೆ ಪೊಲೀಸರು ಮನಬಂದಂತೆ ಲಾಠಿ ಚಾರ್ಜ್ ಮಾಡಿದ್ದರು. ದುದ್ದ ಪೊಲೀಸ್ ಠಾಣೆಯಲ್ಲಿ ಸುಮಾರು 250–300 ಮಂದಿಯ ಮೇಲೆ ಸುಳ್ಳು ಕೇಸುಗಳೂ ದಾಖಲಾಗಿದ್ದವು.



ಸಂತೋಷ್

ಹೀಗೆ ಜನರ ತೀವ್ರ ಒತ್ತಾಯದ ಪರಿಣಾಮವಾಗಿ 2006ರಿಂದಲೇ ಈ ರಸ್ತೆಯ ಟೆಂಡರ್ ಪ್ರಕ್ರಿಯೆ ಚಾಲನೆ ಪಡೆದುಕೊಂಡಿದ್ದು, ಹಲವಾರು ಸುತ್ತು ಗ್ರಾಮುಚ್ಚಾಲೆ ಆಡಿದ ನಂತರ ಅಂತಿಮವಾಗಿ [illegible]-04-2011ರಂದು ಅಭಿಜಿತ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ ಎಂಬ ನಾಗಪುರ ಮೂಲದ ಕಂಪನಿಗೆ ಒಟ್ಟು [illegible] ಕಿಮೀ ಉದ್ದದ ರಸ್ತೆಗೆ 241.76 ಕೋಟಿ ಮೊತ್ತದ ಗುತ್ತಿಗೆ ನೀಡಲಾಯಿತು. ಬಿ.ಒ.ಟಿ ಒಪ್ಪಂದದ ಪ್ರಕಾರ ಕಂಪನಿಯು ಈ ರಸ್ತೆ ನಿರ್ಮಾಣಕ್ಕಾಗಿ ಶೇ.61 (148 ಕೋಟಿ)ರಷ್ಟು ಬಂಡವಾಳ ತೊಡಗಿಸಬೇಕು; ಕೇಂದ್ರ ಸರ್ಕಾರ ಶೇ.20(48.35 ಕೋಟಿ) ಮತ್ತು ರಾಜ್ಯ ಸರ್ಕಾರ ಉಳಿದ ಶೇ.19 (45.93 ಕೋಟಿ)ರಷ್ಟು ಹಣ ಹೂಡಬೇಕು. ಕಂಪನಿ ಹೂಡಿಕೆಗೆ ಪ್ರತಿಯಾಗಿ 30 ವರ್ಷಗಳ ಕಾಲ ಈ ರಸ್ತೆಯಲ್ಲಿ ಸುಂಕ ವಸೂಲಿ ಮಾಡಿಕೊಂಡು, ನಂತರ ಸರ್ಕಾರಕ್ಕೆ ಹಸ್ತಾಂತರಿಸಿಕೊಡಬೇಕು. ಇದು ಮೂಲ ಕರಾರಿನ ಸಾರಾಂಶ.

ಆದರೆ ಬಡಪಾಯಿಗಳ ದುಡ್ಡಲ್ಲೇ ಬಂಡವಾಳಿಗರ ಜಾತ್ರೆ ನಡೆಸಿ ಪಳಗಿರುವ ಈ ಕಂಪನಿ ಮಾಡಿದ್ದೇ ಬೇರೆ. ತಾನು ವಹಿಸಿಕೊಂಡ ಗುತ್ತಿಗೆಯನ್ನು ಕೆವಿಆರ್ ಎಂಬ ಆಂಧ್ರ ಮೂಲದ ಕಂಪನಿಗೆ ಸಬ್ ಕಾಂಟ್ರಾಕ್ಟ್ ಕೊಟ್ಟಿದೆ. ಅವರು ಮತ್ತೊಂದಿಷ್ಟು ಮಂದಿಗೆ ತುಂಡು ಗುತ್ತಿಗೆ ಕೊಟ್ಟಿದ್ದಾರೆ. ಇವರೆಲ್ಲಾ ಸೇರಿ ರಸ್ತೆಯನ್ನು ಬಗೆದು ಹಾಕಿದ್ದಾರೆ. ಸ್ಯಾಂಪಲ್‌ಗೆ ಎಂಬಂತೆ ಸುಮಾರು 4 ಕಿ.ಮೀ ರಸ್ತೆಯ ಒಂದು ಬದಿಗೆ ಕಾಂಕ್ರೀಟ್ ಹಾಕಿಸಿ ಮೂಗಿಗೆ ತುಪ್ಪ ಸವರುವ ಕೆಲಸ ಮಾಡಿದ್ದಾರೆ. ನಂತರ 92 ಕೋಟಿ ಮೊತ್ತದ ಕಾಮಗಾರಿ ಪೂರ್ಣಗೊಳಿಸಿರುವುದಾಗಿ ಘೋಷಿಸಿ, ಸರ್ಕಾರದ ಬಾಬ್ತು ಹಣವನ್ನು ಬಿಡುಗಡೆ ಮಾಡುವಂತೆ ಬೇಡಿಕೆ ಸಲ್ಲಿಸಿದ್ದಾರೆ.

ಸಾರ್ವಜನಿಕ ಸಂಪನ್ಮೂಲದಲ್ಲೇ ಸಾವಿರಾರು ಕೋಟಿಗಳನ್ನು ಬಾಚುತ್ತಿರುವ ಮನೋಜ್ ಜೈಸ್ವಾಲ್ ಸುಳ್ಳುಲೆಕ್ಕದಲ್ಲಿ ಎತ್ತಿದ ಕೈ. ಆದರೆ ವಾಸ್ತವದಲ್ಲಿ ಇದುವರೆಗೆ ಸುಮಾರು 17 ಕೋಟಿ ಮೊತ್ತದ ಕಾಮಗಾರಿ ಆಗಿರಬಹುದೆಂದು ಕ.ರಾ.ರ.ಅ.ನಿಗಮದ ಇಂಜಿನಿಯರ್ ಒಬ್ಬರ ಅಂದಾಜು. ಈಗಿನ ನಿಯಮಾವಳಿ ಪ್ರಕಾರ ಶೇ. 60ರಷ್ಟು ಕಾಮಗಾರಿ ಮುಗಿದನಂತರವೇ ಸರ್ಕಾರ ತನ್ನ ಪಾಲಿನ ಹಣ ಬಿಡುಗಡೆ ಮಾಡಬೇಕು. ಹೀಗಿದ್ದರೂ ಸರ್ಕಾರದ ಹಣ ಬಿಡುಗಡೆಯ ಡೀಲು ಕುದುರಿಸಲು ಕಂಪನಿ ಏಜೆಂಟರು ಸಕ್ರಿಯರಾಗಿದ್ದರು. ಇನ್ನೇನು ಎಲ್ಲವೂ ಮುಗಿಯುವುದರಲ್ಲಿತ್ತು. ಅಷ್ಟರಲ್ಲಿ ಈ ಖದೀಮ ಜೈಸ್ವಾಲ್ ಭಾರೀ ಹಗರಣವೊಂದರಲ್ಲಿ ಸಿಕ್ಕಿಬಿದ್ದು ಎಲ್ಲಾ ಎಡವಟ್ಟಾಗಿ ಹೋಯ್ತು.

ಕಳೆದ ವರ್ಷ ದೇಶಾದ್ಯಂತ ಭಾರೀ ಕೋಲಾಹಲವನ್ನುಂಟುಮಾಡಿದ ಕಲ್ಲಿದ್ದಲು ಹಗರಣದಲ್ಲಿ ಮನೋಜ್ ಜೈಸ್ವಾಲ್ ಕೂಡ ಸಿಕ್ಕಿಬಿದ್ದಿದ್ದಾನೆ. ಸಿಬಿಐನವರು ಈತನ ಕಂಪನಿಯ ಎಲ್ಲಾ ಪ್ರಮುಖ ಕಚೇರಿಗಳ ಮೇಲೆ ದಾಳಿ ನಡೆಸಿ ಎಲ್ಲಾ ದಾಖಲೆಪತ್ರಗಳನ್ನು ವಶಪಡಿಸಿಕೊಂಡಿದ್ದಾರೆ. ಅಷ್ಟು ಮಾತ್ರವಲ್ಲ; ಈ ಕಂಪನಿ ಸಮೂಹದ ಎಲ್ಲಾ ಬ್ಯಾಂಕ್ ಖಾತೆಗಳನ್ನು ಮುಟ್ಟುಗೋಲು ಹಾಕಿಕೊಂಡಿದ್ದಾರೆ. ಇಷ್ಟೂ ಸಾಲದು ಎಂಬಂತೆ ಸದರಿ ಹೈವೇ ಯೋಜನೆಗೆ ಸಂಬಂಧಿಸಿದ ವ್ಯವಹಾರವನ್ನೂ ಕೂಡ ತನಿಖೆಗೆ ಕೈಗೆತ್ತಿಕೊಂಡಿದ್ದಾರೆ.

ಯಾವಾಗ ಸಿಬಿಐ ಅಧಿಕಾರಿಗಳ ಪ್ರವೇಶವಾಯ್ತೋ, ಅಂದಿನಿಂದಲೇ ಅಭಿಜಿತ್ ಕಂಪನಿ ಜೊತೆ ಕೈಜೋಡಿಸಿದ್ದ ಅಧಿಕಾರಿಗಳು, ರಾಜಕಾರಣಿಗಳು ಸ್ವಲ್ಪ ಅಂತರ ಕಾಯ್ದುಕೊಳ್ಳುವ ತಂತ್ರ ಅಳವಡಿಸಿಕೊಂಡರು. ಹೀಗಾಗಿ ಈ ಕಾಮಗಾರಿ, ತ್ರಿಶಂಕು ಸ್ಥಿತಿಯಲ್ಲೇ ನಿಂತುಬಿಟ್ಟಿದೆ.

ಈ ಎಲ್ಲ ಅವಾಂತರಗಳ ಹೊರೆಯನ್ನು ಈ ಭಾಗದ ಜನತೆ ಅನುಭವಿಸಬೇಕಾಗಿದೆ. ಒಂದು ಉದಾಹರಣೆ ನೋಡಿ: ದುದ್ದ - ಹಾಸನ ನಡುವೆ ಸುಮಾರು 17-18 ಕಿ.ಮೀಗಳ ಅಂತರವಿದೆ. ಎಂಥದೇ ಕೆಟ್ಟ ರಸ್ತೆಯಲ್ಲಾದರೂ ಅರ್ಧ-ಮುಕ್ಕಾಲು ಗಂಟೆಯಲ್ಲಿ ಈ ಅಂತರವನ್ನು ಕ್ರಮಿಸಬಹುದಲ್ಲವೆ? ಆದರೆ ಈ ಊನಗೊಂಡ ರಸ್ತೆಯಲ್ಲಿ ಹಾಸನ ತಲುಪಲು ಒಂದೂವರೆ ತಾಸು ಬೇಕು ಎಂದರೆ ಇದರ ಅಧ್ವಾನವನ್ನು ಊಹಿಸಿಕೊಳ್ಳಬಹುದು. ಇಂಥಾ ದುಸ್ಥಿತಿಯಲ್ಲಿ ಕಾಮಗಾರಿ ಸ್ಥಗಿತಗೊಳಿಸಿ ಇನ್ನೇನು ವರ್ಷ ತುಂಬುತ್ತಿದೆ. ಆದರೆ ಈ ಭಾಗದ ಜನಪ್ರತಿನಿಧಿಗಳದು ಈ ಕಾಮಗಾರಿ ವಿಷಯದಲ್ಲಿ ಪಕ್ಷಾತೀತ ಐಕ್ಯತೆ. ಅಂದರೆ ಯಾವುದೇ ಎಂಎಲ್‌ಎ ಈ ಅಧ್ವಾನದ ಬಗ್ಗೆ ಬಾಯಿಬಿಚ್ಚುತ್ತಿಲ್ಲ. ಬಾಯಲ್ಲಿ ಕಡುಬು ತುಂಬಿಕೊಂಡವರು ಮಾತಾಡಲು ಹೇಗೆ ಸಾಧ್ಯ? ಮಣ್ಣಿನ ಮಕ್ಕಳ ಪಕ್ಷದ ಶಾಸಕರಾದ ಪ್ರಕಾಶ್(ಹಾಸನ), ರೇವಣ್ಣ(ಹೊಳೆನರಸಿಪುರ), ಶಿವಲಿಂಗೇಗೌಡ(ಅರಸಿಕೆರೆ), ಸುರೇಶ್‌ಬಾಬು (ಚಿಕ್ಕನಾಯಕನಹಳ್ಳಿ) ಗಳಾಗಲಿ, ಕೈ ಪಕ್ಷದ ತಿಪಟೂರು ಶಾಸಕ ಷಡಕ್ಷರಿಯಾಗಲಿ ಅಥವಾ ಈ ಹಿಂದೆ ಈ ಕ್ಷೇತ್ರವನ್ನು ಪ್ರತಿನಿಧಿಸಿದ್ದ ಆರೆಸ್ಸೆಸ್ ಮೂಲದ ಬಿಜೆಪಿ ಶಾಸಕ ನಾಗೇಶ್ ಆಗಲಿ ಯಾರೂ ಈ ಜ್ವಲಂತ ಸಮಸ್ಯೆಯ ಬಗ್ಗೆ ಗಮನ ಹರಿಸಿದವರೇ ಅಲ್ಲ.

ಸಮಸ್ಯೆಯನ್ನು ಬಗೆಹರಿಸುವ ಬದಲಿಗೆ ಒಂದಲ್ಲ ಒಂದು ರೂಪದಲ್ಲಿ ಕಂಪನಿಯ ಹಿತ ಕಾಯುವ ಕಾರ್ಯದಲ್ಲಿ ಈ ಮಂದಿ ನಿರತರಾಗಿದ್ದಾರೆ. ರೋಸಿ ಹೋದ ಜನತೆ ರೈತಸಂಘ ಮತ್ತಿತರರ ಜೊತೆಗೂಡಿ ಕೆಲ ವಾರಗಳ ಹಿಂದೆ ಗಂಡಸಿ ಹ್ಯಾಂಡ್‌ಪೋಸ್ಟ್ ಬಳಿ ಭಾರೀ ಪ್ರತಿಭಟನೆ ನಡೆಸಿದರು. ಪರಾರಿಯಾಗಿರುವ ಗುತ್ತಿಗೆದಾರ ಕಂಪನಿಯನ್ನು ರದ್ದುಪಡಿಸಿ ಕೂಡಲೇ ಕಾಮಗಾರಿ ಪೂರ್ಣಗೊಳಿಸಲು ಕ್ರಮ ತೆಗೆದುಕೊಳ್ಳಬೇಕೆಂಬುದು ಜನರ ಆಗ್ರಹವಾಗಿತ್ತು.

ಜಲ್ಲಿ ಕಳ್ಳ ಹೇಮಂತ

ಆದರೆ ಇದೇ ಸಂದರ್ಭದಲ್ಲಿ ಒಂದು ವಿಲಕ್ಷಣ ಘಟನೆಯೂ ನಡೆಯಿತು. ಶಾಸಕ ಶಿವಲಿಂಗೇಗೌಡರ ಅಭಿಮಾನಿಗಳ ಸಂಘ ಎಂಬ ಬ್ಯಾನರ್ ಹಿಡಿದು ಬಂದ ಒಂದಷ್ಟು ಜನರು ಇದೇ ಪ್ರತಿಭಟನಾ ಸ್ಥಳದಲ್ಲಿ ಇದ್ದಕ್ಕಿದ್ದಂತೆ ಪ್ರತ್ಯಕ್ಷರಾಗಿ ಸರ್ಕಾರ ಕೂಡಲೇ ಕಂಪನಿಗೆ ಹಣ ಬಿಡುಗಡೆ ಮಾಡಬೇಕೆಂದು ಘೋಷಣೆ ಕೂಗತೊಡಗಿದರು. ಈ ಬಗ್ಗೆ ಹೆಚ್ಚಿಗೆ ವಿವರಿಸಬೇಕಾದ ಆಗತ್ಯವಿಲ್ಲ.

ಇದು ರಾಜಕಾರಣದ ವರಸೆಯಾದರೆ ಅಧಿಕಾರಿಗಳದು ಇನ್ನೂ ಐನಾತಿ ವರಸೆ. ಈ ಕಾಮಗಾರಿಯನ್ನು ಸ್ಥಗಿತಗೊಳಿಸಿ ಇನ್ನೇನು ಒಂದು ವರ್ಷ ತುಂಬುತ್ತಾ ಬಂದಿದ್ದರೂ ರಸ್ತೆ ಅಭಿವೃದ್ಧಿ ನಿಗಮದ ಪ್ರಕಾರ ಕಳೆದ ಮೇ ತಿಂಗಳಿನವರೆಗೂ ಕಾಮಗಾರಿ ನಡೆದಿರುವುದಾಗಿ ಇಂಜಿನಿಯರ್ ಮಂಜುನಾಥ್ ಎಂಬುವವರು ಇನ್‌ಸ್ಪೆಕ್ಷನ್ ರಿಪೋರ್ಟ್ ನೀಡಿ ಕಂಪನಿಯ ಋಣ ತೀರಿಸಿದ್ದಾರೆ. ಈ ಇಂಜಿನಿಯರ್‌ನನ್ನು ಭೇಟಿಯಾಗಿ ಅಹವಾಲು ಸಲ್ಲಿಸಿದ ರೈತ ಮುಖಂಡರೊಂದಿಗೆ ಪಕ್ಕಾ ಕಂಪನಿ ಏಜೆಂಟನಂತೆ ವರ್ತಿಸಿದ್ದಾನೆ. ಈ ಬಗ್ಗೆ ಲೋಕಾಯುಕ್ತ ದೂರಿನಲ್ಲೂ ಉಲ್ಲೇಖಿಸಲಾಗಿದೆ.

ಮತ್ತೊಂದು ಕಡೆ ಸದರಿ ರಸ್ತೆ ಕಾಮಗಾರಿಗೆಂದು



ಹೇಮಂತ್ ಮತ್ತು ದರ್ಶನ್ ಸಹೋದರರು.

ನಿಗದಿಯಾಗಿದ್ದ ರಂಗಾಪುರ ಕಾವಲ್‌ನಲ್ಲಿರುವ ಕಲ್ಲು ಕ್ವಾರಿಯಿಂದ ಕೋಟಿಗಟ್ಟಲೆ ಮೊತ್ತದ ಜಲ್ಲಿಯನ್ನು ಅಕ್ರಮವಾಗಿ ಕೆಲವು ಎಂಎಲ್‌ಎಗಳ ಅನುಯಾಯಿಗಳು ಬೇರೆ ಕಾಮಗಾರಿಗಳಿಗೆ ದುರ್ಬಳಕೆ ಮಾಡಿಕೊಂಡು ಕೋಟಿಗಟ್ಟಲೆ ಅಕ್ರಮ ಹಣ ಬಾಚುತ್ತಿದ್ದಾರೆಂದೂ ವ್ಯಾಪಕ ಆರೋಪಗಳಿವೆ. ಅರಸಿಕೆರೆ ತಾಲ್ಲೂಕಿನ ಗಿಡ್ಡೇಗೌಡನ ಕೊಪ್ಪಲು ವಾಸಿಗಳಾದ ಹೇಮಂತ್ ಮತ್ತು ದರ್ಶನ್ ಎಂಬ ಇಬ್ಬರು ಎಂಎಲ್‌ಎ ಚೇಲಾಗಳು ನಡೆಸಿರುವ ಅಕ್ರಮಕ್ಕೆ ಅಧಿಕಾರಿಗಳು ಹಾಗೂ ಶಾಸಕರೇ ಬೆಂಗಾವಲಿಗೆ ನಿಂತಿದ್ದಾರೆಂದು ಈ ಭಾಗದ ಜನರ ಒಕ್ಕೊರಲಿನ ಅಭಿಪ್ರಾಯ.

ಜನಪ್ರತಿನಿಧಿಗಳ ಧೋರಣೆ, ಅಧಿಕಾರಿಗಳ ದರ್ಪ ಕಂಡು ಬೇಸತ್ತ ದುದ್ದ ಬಳಿಯ ಕಿತ್ತನಕೆರೆ ಗ್ರಾಮದ ಯುವಕ ಸಂತೋಷ್ ಲೋಕಾಯುಕ್ತ ಕೋರ್ಟಿನಲ್ಲಿ ದಾವೆ ಹೂಡಿದ್ದಾರೆ. ಈ ಬಗ್ಗೆ 20-06-2013ರಂದು ಪ್ರಕರಣ ಸಂಖ್ಯೆ 1259/2013 ದಾಖಲಾಗಿದೆ.

ಇದೆಲ್ಲಾ ಒಂದು ಕಡೆ ಇರಲಿ. ನೂತನ ಸಿಎಂ ಸಿದ್ದರಾಮಯ್ಯನವರು ತಮ್ಮ ನೂತನ ಬಜೆಟ್‌ನಲ್ಲಿ 80 ಕೋಟಿ ವೆಚ್ಚದಲ್ಲಿ, ಸುಮಾರು 70 ಕಿಮೀ ಉದ್ದದ ರಸ್ತೆ ನಿರ್ಮಿಸುವುದಾಗಿ ಪ್ರಸ್ತಾಪಿಸಿರುವುದು ಒಂದು ಸೋಜಿಗದ ಸಂಗತಿಯೇ ಸರಿ. ಈ ಘೋಷಿತ ಯೋಜನೆ ಅರ್ಧಕ್ಕೆ ನಿಂತಿರುವ ಕಾಮಗಾರಿಗೆ ಸಂಬಂಧಿಸಿದ್ದೇ ಆಗಿದ್ದ ಪಕ್ಷದಲ್ಲಿ, ತಪ್ಪಿತಸ್ಥ ಅಧಿಕಾರಿಗಳು ಮತ್ತು ಕಂಪನಿಯ ಮೇಲೆ ಕಾನೂನು ಕ್ರಮ ಜರುಗಿಸುವುದೂ ಕೂಡ ಜರೂರಾಗಿ ನಡೆಯಬೇಕಾದ ಕೆಲಸವಲ್ಲವೆ?

• ದೊಡ್ಡಿಪಾಳ್ಯ ನರಸಿಂಹಮೂರ್ತಿ

> **ಶ್ರೀಮಂತಿಕೆಯ ಸೊಕ್ಕು**
>
> ಸಾರ್ವಜನಿಕ ಹಣವನ್ನು ನುಂಗಿ ನೊಣೆಯುತ್ತಿರುವ ಅಭಿಜಿತ್ ಗ್ರೂಪ್‌ನ ಮಾಲಿಕ ಮನೋಜ್ ಜೈಸ್ವಾಲ್‌ನ ಆರ್ಭಟ ಹೇಗಿದೆ ನೋಡಿ.
>
> ಇತ್ತೀಚೆಗೆ ಆತ ಜರ್ಮನಿಯಿಂದ ಖಾಸಗಿ ಜೆಟ್ ವಿಮಾನವೊಂದನ್ನು ಖರೀದಿಸಿ ತಂದಿದ್ದಾನೆ. ಅದರ ಬೆಲೆ ಬರೋಬ್ಬರಿ 150 ಕೋಟಿಗಳು! ಈ ವಿಶೇಷ ವಿಮಾನದ ಪಾರ್ಕಿಂಗ್ ಮತ್ತು ನಿರ್ವಹಣೆಗೆ ಪ್ರತಿ ತಿಂಗಳು ಒಂದೂವರೆ ಕೋಟಿಗಳನ್ನು ವ್ಯಯಿಸಲಾಗುತ್ತಿದೆ. ಮತ್ತೊಂದು ಕಡೆ ಸರ್ಕಾರಿ ಹಣಕಾಸು ಸಂಸ್ಥೆಗಳು ಈ ಖದೀಮನಿಗೆ ಸಾವಿರಾರು ಕೋಟಿಗಳ ಸಾಲ-ಅನುದಾನ ನೀಡುತ್ತಾ ಬಂದಿವೆ.
>
> ನಾಗಪುರ್‌ನಲ್ಲಿ ಖಾಸಗಿ ಜೆಟ್ ವಿಮಾನ ಹೊಂದಿರುವ ಏಕೈಕ ಬ್ಯುಸಿನೆಸ್‌ಮ್ಯಾನ್ ಎಂಬ ಹೆಗ್ಗಳಿಕೆ ಈತನದು. ಅಂದಹಾಗೆ ಆರೆಸ್ಸೆಸ್‌ನ ಕೇಂದ್ರ ಕಚೇರಿಯೂ ಇದೇ ನಾಗಪುರ್‌ದಲ್ಲಿದ್ದು, ಬಹಳಷ್ಟು ಉದ್ಯಮಪತಿಗಳು ಆರೆಸ್ಸೆಸ್‌ನೊಂದಿಗೆ ನಿಕಟಸಂಪರ್ಕ ಹೊಂದಿರುವುದು ಇಲ್ಲಿನ ವಿಶೇಷ.

ಕಂಪನಿಯ ಡೀಲಿಂಗ್ ಟ್ರಿಕ್ಸ್

ಈ ಮನೋಜ್ ಜೈಸ್ವಾಲ್ ತನ್ನ ತಂದೆಯಿಂದ ಬೇರಾಗಿ ತನ್ನ ಕಿರಿಯ ಮಗ ಅಭಿಜಿತ್ ಹೆಸರಿನಲ್ಲಿ ಕಂಪನಿ ಪ್ರಾರಂಭಿಸಿದ್ದು 2005ರಲ್ಲಿ. [illegible] ಕಂಪನಿ ಸ್ಥಾಪಿಸಿದ ಕೇವಲ ಎಂಟೇ ವರ್ಷಗಳಲ್ಲಿ ಸಾವಿರಾರು ಕೋಟಿಗಳನ್ನು ಬಾಚುತ್ತಾ, ರಿಲಯನ್ಸ್‌ನ [illegible] ಮೂಗಿನ ಮೇಲೆ ಬೆರಳಿಡುವಂತೆ ಮಾಡಿದ್ದಾನೆ. [illegible] ಬೆಳವಣಿಗೆಯ ಹಿಂದೆ ಮೂರನೇ ದರ್ಜೆ [illegible] ಛಾಯೆಯಿದೆ.

[illegible] ಭಾರೀ [illegible] ಏರ್ಪಡಿಸುವುದು ಈ [illegible] ಒಂದು ವಿಶೇಷ ಕಲೆ. ಒಂದು ಉದಾಹರಣೆ [illegible] ಮನೋಜ್ ಜೈಸ್ವಾಲ್‌ನ ಮಗಳು ಸ್ವಾತಿಯ ಮದುವೆ [illegible] ನಾಗಪುರದಲ್ಲಾದರೂ, ಈ ಬಗ್ಗೆ ಭಾರೀ [illegible] ಬೆಂಗಳೂರಿನಲ್ಲೂ ಏರ್ಪಡಿಸಲಾಗಿತ್ತು, [illegible] ಗೋಷ್ಠಿಗಳನ್ನೂ ಆಯೋಜಿಸಲಾಗಿತ್ತು [illegible], ರಾಜಕಾರಣಿಗಳು ಹಾಗೂ ಹಿರಿಯ [illegible] ಆಮಂತ್ರಣವಿತ್ತು, ಗಣ್ಯರ ಆಮಂತ್ರಣ [illegible] ಉಡುಗೊರೆಯಾಗಿ ಕಳಿಸಲಾಗಿತ್ತು. ಇಂಥಾ ಆಮಂತ್ರಣದ ಆಕರ್ಷಣೆಗೆ ಒಳಗಾದ ಟಾಪ್ ಲೆವೆಲ್ ರಾಜಕಾರಣಿಗಳು, ಬಿಲ್ಡರ್‌ಗಳು, ಅಧಿಕಾರಿಗಳು ಜೈಸ್ವಾಲ್‌ನ ಕೈಕುಲುಕಲು ಸಾಲುಗಟ್ಟಿ ನಿಂತಿದ್ದರು. ನಂತರ ನಡೆಯುವುದನ್ನು ಸುಲಭವಾಗಿ ಊಹಿಸಬಹುದು. ಇದು ಇವರ ಪ್ರಮುಖ ಬ್ಯುಸಿನೆಸ್ ಟ್ರಿಕ್ಸ್.



[illegible] ಜೊತೆ

ಕೇಂದ್ರ ಕಲ್ಲಿದ್ದಲು ಸಚಿವ ಶ್ರೀಪ್ರಕಾಶ್ ಜೈಸ್ವಾಲ್ ಈತನಿಗೆ ಹತ್ತಿರದ ಬಂಧು. ಆರೆಸ್ಸೆಸ್‌ನ ಲಿಂಕ್ ಇರುವ 'ಆಸ್ಥಾ' ಎಂಬ ಚಾನೆಲ್‌ನ ಮತ್ತೊಂದು ಸೋದರ ಸಂಸ್ಥೆ 'ಅಹಿಂಸಾ' ಎಂಬ ಚಾನೆಲ್‌ನ ಸಿಇಒ ಸಂತೋಷ್ ಜೈನ್‌ನ ಮಗಳನ್ನು ತಮ್ಮ ಮನೆಯ ಸೊಸೆಯಾಗಿಸಿಕೊಂಡು ತನ್ನ ಬ್ಯುಸಿನೆಸ್ ಲಿಂಕ್‌ಗಳನ್ನು ಮತ್ತಷ್ಟು ಭದ್ರಪಡಿಸಿಕೊಂಡಿದ್ದಾನೆ. ಮಹಾರಾಷ್ಟ್ರದ ಹಲವಾರು ಕಾಂಗ್ರೆಸ್ ಎಂಪಿಗಳ ಜೊತೆ ಪಾಲುದಾರಿಕೆ ವ್ಯವಹಾರ ಹೊಂದಿದ್ದಾನೆ.

ಇಂಥಾ ತಂತ್ರಗಾರಿಕೆಯಿಂದಲೇ ಈತ ಚೀನಾ ಪ್ರಧಾನಿಯನ್ನು ಭೇಟಿಯಾದ ಉದ್ಯಮಪತಿಗಳ ಅಧಿಕೃತ ನಿಯೋಗದಲ್ಲಿ ಸ್ಥಾನ ಪಡೆದುಕೊಂಡಿದ್ದ. ಒಂದು ವಿಷಯ ನೆನಪಿರಲಿ; 2005ಕ್ಕೆ ಮುಂಚೆ ಉದ್ಯಮ ಕ್ಷೇತ್ರದಲ್ಲಿ ಈತನ ಹೆಸರು ಯಾರಿಗೂ ಗೊತ್ತಿರಲಿಲ್ಲ, ರಾಜಕಾರಣಿಗಳು ಹಾಗೂ ಅಧಿಕಾರಶಾಹಿಗಳೊಂದಿಗೆ ಈತ ಎಂಥಾ ನೆಂಟನ್ನು ಬೆಸೆದಿರಬಹುದೆಂದು ನೀವೇ ಊಹಿಸಿ.

ಮಠದ 1500 ಕೋಟಿ ನುಂಗಿದ ಶೇಖರ್ ಸ್ವಾಮಿ

ಐಟಿ ದಾಳಿಯ ಅಸಲಿ ಕಥೆ

ರಾ. ಸೋಮನಾಥ್



ಮೊನ್ನೆ ಜುಲೈ 18 ರ ಐಟಿ ದಾಳಿ ರಾಜ್ಯದ ಒಕ್ಕಲಿಗರನ್ನು ತುಳಿಯಲೆಂದೇ ಕಾಂಗ್ರೆಸ್ ನಡೆಸಿದ ದಬ್ಬಾಳಿಕೆಯಾಗಿತ್ತೆ?

ಮಂಡ್ಯದ ಸ್ವಾಭಿಮಾನಿ ಒಕ್ಕಲಿಗರ ವೇದಿಕೆ ನಡೆಸಿದ ಪ್ರತಿಭಟನೆಯಲ್ಲಿ ಮುಖ್ಯಮಂತ್ರಿ ಸಿದ್ದು ಪ್ರತಿಕೃತಿಗೆ ಚಪ್ಪಲಿ ಕಟ್ಟಿದ್ದು, ತುಮಕೂರಿನಲ್ಲಿ ನೆರೆದ ಹತ್ತು ಸಾವಿರ ಒಕ್ಕಲಿಗರು ಕಾಂಗ್ರೆಸ್ಸಿಗೆ ಧಿಕ್ಕಾರ ಹಾಕಿದ್ದು, ಮಾಜಿ ಬಿಜೆಪಿ ಮಂತ್ರಿ ರಾಮಚಂದ್ರ ಗೌಡರನ್ನು ಮುಂದಿಟ್ಟುಕೊಂಡು ವಿಶ್ವಹಿಂದೂ ಪರಿಷತ್ ಆದಿಚುಂಚನಗಿರಿ ಮಠದ ಮೇಲೆ ನಡೆದ ಐಟಿ ದಾಳಿಗೆ ಕಾಂಗ್ರೆಸ್ ಸರ್ಕಾರವನ್ನೇ ಹೊಣೆಯಾಗಿಸಿದ್ದು ಮತ್ತು ವಿಧಾನಮಂಡಲದ ಅಧಿವೇಶನದಲ್ಲೇ ಡೀಕೆ, ಚೆಲುವರಾಯಸ್ವಾಮಿ, ಸಿ.ಟಿ. ರವಿ, ಸದಾನಂದ ಗೌಡರೆಲ್ಲ ಸೇರಿಕೊಂಡು ಒಕ್ಕಲಿಗರ ಹಿತಾಸಕ್ತಿ ರಕ್ಷಣೆಗೆ ಟೊಂಕ ಕಟ್ಟಿ ನಿಂತದ್ದು; ಇತ್ಯಾದಿಗಳೆಲ್ಲ ಒಕ್ಕಲಿಗ ಸಮೂಹದ ಸ್ವಾಭಿಮಾನದ ಸಂಕೇತಗಳೆ?

ಆದಿಚುಂಚನಗಿರಿ ಮಠದ ಮೇಲೆ ನಡೆದ ಐಟಿ ದಾಳಿಯ ವಿರುದ್ಧ ರಾಜ್ಯವ್ಯಾಪಿ ಪ್ರತಿಭಟನೆಗಳಾಗಿವೆ. ಕೆಲವೆಡೆ ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನೇ ಇದಕ್ಕೆ ನೇರ ಹೊಣೆಯೆಂಬಂತೆ ಪ್ರತಿಭಟಿಸಲಾಗಿದೆ. ಇನ್ನೂ ಕೆಲವೆಡೆ ಕೇಂದ್ರ ಮತ್ತು ರಾಜ್ಯಗಳೆರಡರಲ್ಲೂ ಕಾಂಗ್ರೆಸ್ ಅಧಿಕಾರದಲ್ಲಿರುವುದರ ಪ್ರತಿಫಲವೆಂದೂ, ಕಾಂಗ್ರೆಸ್ ಒಕ್ಕಲಿಗರ ವಿರೋಧಿಯಾಗಿರುವುದೇ ಇಷ್ಟೆಲ್ಲಕ್ಕೂ ಕಾರಣವೆಂದೂ ಬಿಂಬಿಸಲಾಯ್ತು ನಿಜ.

ಪ್ರಶ್ನೆಯೆಂದರೆ ನಿಜಕ್ಕೂ ಇದು ಆದಿಚುಂಚನಗಿರಿ ಮಠ ಅಥವಾ ಒಕ್ಕಲಿಗ ಜನಾಂಗದ ಮೇಲಾದ ದಾಳಿಯಾ ಅಥವಾ ಒಕ್ಕಲಿಗ ಸಮೂಹದ ಹಿತಶತ್ರುಗಳ ಮೇಲೆ ನಡೆದ ದಾಳಿಯೇ? ಎಂಬ ಬಗ್ಗೆ ಯಾರಲ್ಲೂ ಸ್ಪಷ್ಟತೆಯಿಲ್ಲ.

ಜುಲೈ 18ರ ದಾಳಿ

ಬೀದಿಗಿಳಿದ ಒಕ್ಕಲಿಗರಿಗೆ ಬಹುಶಃ ಸತ್ಯ ಗೊತ್ತಾಗಿದ್ದರೆ ಈ ಮಟ್ಟದ ಮೂರ್ಖತನ ಸಂಭವಿಸುತ್ತಿರಲಿಲ್ಲವೇನೊ. ಒಕ್ಕಲಿಗರನ್ನು ಈ ರೀತಿ ಸಾಮೂಹಿಕವಾಗಿ ಮೂರ್ಖರನ್ನಾಗಿ ಮಾಡಿದ ಶೇಖರ್ ಸ್ವಾಮಿ ಉರ್ಫ್ ಪ್ರಕಾಶ್‌ನಾಥ ಸಮಸ್ತ ಆದಿಚುಂಚನಗಿರಿ ಮಠದ ಆಸ್ತಿಪಾಸ್ತಿಯನ್ನೆಲ್ಲ ಹಾಡುಹಗಲೇ ದೋಚದಿದ್ದರೆ, ಒಕ್ಕಲಿಗರನ್ನು ಇನ್ನಿಲ್ಲದಂತೆ ವಂಚಿಸದೇ ಹೋಗಿದ್ದರೆ ಇಂಥದೊಂದು ಐಟಿ ದಾಳಿ ನಡೆಯುತ್ತಿತ್ತಾ?

ಆದಾಯ ತೆರಿಗೆ ದಾಳಿಗೆ ಗುರಿಯಾದ ಕುಂಬಳಗೋಡಿನ ಬಿಜಿಎಸ್ ಗ್ಲೋಬಲ್ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್ ಎಂಬ ಮೆಡಿಕಲ್ ಕಾಲೇಜಿಗೂ ಆದಿಚುಂಚನಗಿರಿ ಮಠಕ್ಕೂ ಏನಾದರೂ ಸಂಬಂಧವಿದೆಯೇ? ಕುಂಬಳಗೋಡಿನ ಬಿಜಿಎಸ್ ಗ್ಲೋಬಲ್ ಧಣಿ ಯಾರು? ಕುಂಬಳಗೋಡಿನ ಪ್ರತಿಷ್ಠಿತ ಬಿಜಿಎಸ್ ಇಂಟರ್‌ನ್ಯಾಷನಲ್ ಸ್ಕೂಲ್, ದೇಶದ ರಾಜಧಾನಿ ನವದೆಹಲಿಯಲ್ಲಿ ಬಾಲಗಂಗಾಧರನಾಥರು ಸ್ಥಾಪಿಸಿದ ಬಿಜಿಎಸ್ ಇಂಟರ್‌ನ್ಯಾಷನಲ್ ಪಬ್ಲಿಕ್ ಸ್ಕೂಲ್, ಬನ್ನೇರುಘಟ್ಟ ರಸ್ತೆಯಲ್ಲಿರುವ ಹುಳಿಮಾವು ಏರಿಯಾದ ಪ್ರತಿಷ್ಠಿತ ಬಿಜಿಎಸ್ ನ್ಯಾಷನಲ್ ಪಬ್ಲಿಕ್ ಸ್ಕೂಲ್, ಮೈಸೂರಿನ ಕುವೆಂಪು ನಗರದಲ್ಲಿರುವ ಹೆಸರಾಂತ ಬಿಜಿಎಸ್ ಅಪೋಲೋ ಆಸ್ಪತ್ರೆ, ಕೆಂಗೇರಿಯ ಉತ್ತರಹಳ್ಳಿ ರಸ್ತೆಯಲ್ಲಿರುವ ಬಿಜಿಎಸ್ ಗ್ಲೋಬಲ್ ಹಾಸ್ಪಿಟಲ್, ಅದಕ್ಕೆ ಹೊಂದಿಕೊಂಡಂತಿರುವ ಬಿಜಿಎಸ್ ಪಬ್ಲಿಕ್ ಸ್ಕೂಲ್, ಕುಂಬಳಗೋಡಿನ ಖ್ಯಾತ ಎಸ್‌ಜೆಬಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಅದರ ಸಮೀಪದ ಎಸ್‌ಜೆಬಿ ನರ್ಸಿಂಗ್ ಕಾಲೇಜು, ರಾಮನಗರದ ಬಿಜಿಎಸ್ ಆಸ್ಪತ್ರೆ, ವಿಜಯನಗರದ ಆದಿಚುಂಚನಗಿರಿ ಹಾಸ್ಟೆಲ್; ಇತ್ಯಾದಿ ಬಿಜಿಎಸ್ ಹೆಸರಿನಲ್ಲಿ ಈತನಕ ಮಠ ನಡೆಸಿಕೊಂಡು ಬಂದಿದ್ದ ಸ್ಕೂಲ್, ಕಾಲೇಜು, ಆಸ್ಪತ್ರೆ ಇತ್ಯಾದಿಗಳೆಲ್ಲ ಸದ್ದಿಲ್ಲದೆ ಪ್ರತ್ಯೇಕ ಟ್ರಸ್ಟ್‌ಗೊಳಪಡುವ ಮೂಲಕ ಶೇಖರ್‌ಸ್ವಾಮಿ ಎಂಬ ಖದೀಮನ ಖಾಸಗಿ ಸೊತ್ತಾಗಿ ಪರಿವರ್ತನೆಗೊಂಡ ಮೇಲೆ ಶೇಖರ್‌ಸ್ವಾಮಿ ಉರ್ಫ್ ಪ್ರಕಾಶನಾಥ ಬ್ಲ್ಯಾಕ್‌ಮನಿ ಅಡ್ಡೆಯ ಮೇಲೆ ನಡೆದ ದಾಳಿ ಹೇಗೆ ಆದಿಚುಂಚನಗಿರಿ ಮಠದ ಮೇಲೆ ನಡೆದ ದಾಳಿಯಾಗುತ್ತದೆ?





ಪ್ರಕಾಶನಾಥ್ ಉರ್ಫ್ ಶೇಖರ್ ಮಠದ ಸಾವಿರದೈನೂರು ಕೋಟಿ ರೂಪಾಯಿಗಳ ಬೆಲೆಬಾಳುವ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳನ್ನು ತನ್ನ ಸೊತ್ತಾಗಿ ಮಾಡಿಕೊಂಡಿದ್ದರ ವಿರುದ್ಧ ಚಕಾರವೆತ್ತದ ಒಕ್ಕಲಿಗ ಸಮೂಹ ಜನಾಂಗದ ಕಣ್ಣಿಗೆ ಮಣ್ಣೆರಚಿ ಸಮೂಹದ ಆಸ್ತಿ ಲಪಟಾಯಿಸಿದವನ ಪರ ಬೀದಿಗಿಳಿಯುವುದು ಆತ್ಮವಂಚನೆಯಲ್ಲದೆ ಮತ್ತೇನು?

ಇವತ್ತು ಮಠದ ಮೇಲೆ ಐಟಿ ದಾಳಿ ನಡೆಯಿತೆಂದು ಬೀದಿಗಿಳಿದವರೆಲ್ಲ ನಿಜವಾದ ಮಠದ ಭಕ್ತರೇ ಅಥವಾ ಖದೀಮ ಪ್ರಕಾಶನಾಥನ ಛೇಲಾಗಳೇ ಎಂಬುದನ್ನು ಬದಿಗಿಟ್ಟು ನೋಡಿದರೂ ತಾವೆಂಥಾ ಮೂರ್ಖರೆಂಬುದನ್ನು ಪ್ರತಿಭಟನೆಗಿಳಿದವರೆಲ್ಲ ಅರ್ಥ ಮಾಡಿಕೊಳ್ಳಬೇಕಾದ ದಾಖಲೆಯೊಂದನ್ನು ಪತ್ರಿಕೆ ಈ ಮೂಲಕ ಬಹಿರಂಗಪಡಿಸುತ್ತಿದೆ.

ಪ್ರತ್ಯೇಕ ಟ್ರಸ್ಟ್!

ಅದು 2011 ಜನವರಿ 18 ರಂದು ರೂಪುಗೊಂಡ ಬಿಜಿಎಸ್ ಹೆಲ್ತ್ ಅಂಡ್ ಎಜುಕೇಷನ್ ಟ್ರಸ್ಟ್‌ನ ಕರಾರುಪತ್ರ!

ಇದನ್ನು ವಿಜಯನಗರದ ಶಾಖಾಮಠಕ್ಕೇ ಬಂದ ವಿಜಯನಗರದ ಸಬ್ ರಿಜಿಸ್ಟ್ರಾರ್ ಹೊಂಬಾಳಯ್ಯನವರು 2011 ರ ಜನವರಿ 25 ರಂದು ತಮ್ಮ ಹಸ್ತಾಕ್ಷರ ಮತ್ತು ಮುದ್ರೆ ಸಮೇತ ನೋಂದಾವಣಿ ಮಾಡಿದ್ದಾರೆ. ಈ ಕರಾರುಪತ್ರಕ್ಕೆ ಆಗ ಬದುಕಿದ್ದ ಬಾಲಗಂಗಾಧರನಾಥ ಸ್ವಾಮಿಗಳೇ ತಮ್ಮ ಫೋಟೋ ಸಮೇತ ಸಹಿಯನ್ನೂ ಹಾಕಿದ್ದಾರೆ. ಜೊತೆಗೆ ಶೇಖರ್‌ಸ್ವಾಮಿ ಉರ್ಫ್ ಪ್ರಕಾಶನಾಥನ ಸಹಿಯಲ್ಲದೆ ಆದಿಚುಂಚನಗಿರಿಯ ಕಿರಿಯ ಸ್ವಾಮಿ ಪುರುಷೋತ್ತಮಾನಂದನಾಥ ಮತ್ತು ವಿಜಯನಗರದ ಡಾ. ಸುನೀಲ್‌ಬಾಬು ಕೂಡ ಸಹಿ ಹಾಕಿದ್ದಾರೆ!

ಆದಿಚುಂಚನಗಿರಿ ಪೀಠಾಧಿಪತಿ ಬಾಲಗಂಗಾಧರನಾಥರೇ ಬರೆದುಕೊಟ್ಟಂತೆ ಬಿಜಿಎಸ್ ಹೆಲ್ತ್ ಅಂಡ್ ಎಜುಕೇಷನ್ ಟ್ರಸ್ಟ್‌ಗೆ ಪ್ರಕಾಶನಾಥ ಸ್ವಾಮೀಜಿಯೇ ಆಜೀವ ಸೆಕ್ರೆಟರಿ ಮತ್ತು ಆಡಳಿತಗಾರ. ಆದಿಚುಂಚನಗಿರಿ ಪೀಠಾಧಿಪತಿ ಬಾಲಗಂಗಾಧರನಾಥರು ಸದರಿ ಟ್ರಸ್ಟ್‌ನ ಅಧ್ಯಕ್ಷರಾದರೆ ಪುರುಷೋತ್ತಮಾನಂದನಾಥ ಮತ್ತು ಡಾ. ಸುನೀಲ್ ಬಾಬು ಉಳಿಕೆ ಟ್ರಸ್ಟಿಗಳು. ಆದರೆ ಮೂರು ವರ್ಷದ ನಂತರ ಪ್ರಕಾಶನಾಥ ತನಗೆ ಬೇಕಾದ ಯಾರನ್ನಾದರೂ ಈ ಇಬ್ಬರು ಟ್ರಸ್ಟಿಗಳನ್ನು ಕಿತ್ತುಹಾಕಿ ಆ ಜಾಗಕ್ಕೆ ನೇಮಿಸಿಕೊಳ್ಳಬಹುದು. ಪ್ರಕಾಶನಾಥ ಬದುಕಿರುವಷ್ಟೂ ಕಾಲ ಆತನೇ ಸದರಿ ಟ್ರಸ್ಟಿಗೆ ಕಾರ್ಯದರ್ಶಿಯಾಗಿರಬೇಕು ಮತ್ತು ಹಣಕಾಸು, ಆಡಳಿತ, ಆಸ್ತಿ ಎಲ್ಲವನ್ನೂ ಆತನೇ ನಿಭಾಯಿಸಬೇಕು.


ಇದಲ್ಲದೆ ಟ್ರಸ್ಟ್ ಡೀಡ್‌ನ ಪ್ರಮುಖ ನಿಯಮಾವಳಿಯೊಂದಿದೆ. ಆ ಪ್ರಕಾರ ಶೇಖರ್ ಉರ್ಫ್ ಪ್ರಕಾಶನಾಥ ಬಿಜಿಎಸ್ ಹೆಲ್ತ್ ಅಂಡ್ ಎಜುಕೇಷನ್ ಟ್ರಸ್ಟ್‌ಗೆ ಸೇರಿದ ಯಾವುದೇ ಆಸ್ತಿಯನ್ನು ಮಾರಲೂಬಹುದು, ಅಡಮಾನ ಇಡಲೂಬಹುದು. ಅದನ್ನು ಯಾವೊಬ್ಬ ಟ್ರಸ್ಟಿಯೂ ಪ್ರಶ್ನಿಸುವಂತಿಲ್ಲ, 2011 ರ ಜನವರಿ 25 ರಂದು ವಿಜಯನಗರದ ಶಾಖಾಮಠಕ್ಕೇ ಬಂದು ನೋಂದಾಯಿಸಿಕೊಂಡ ವಿಜಯನಗರ ಸಬ್‌ರಿಜಿಸ್ಟ್ರಾರ್ ಹೊಂಬಾಳಯ್ಯನವರ ಸಹಿಯುಳ್ಳ ಈ ಟ್ರಸ್ಟ್‌ನ ವಿವರಗಳನ್ನು ಓದುತ್ತಿದ್ದರೆ ಮಠದ ಭಕ್ತಾದಿಗಳೇ ಎದೆಬಡಿದುಕೊಳ್ಳಬೇಕು.

1500 ಕೋಟಿಯ ಸೊತ್ತು

ಹೊಸ ಟ್ರಸ್ಟ್‌ನ ಕರಾರಿನಂತೆ ಆದಿಚುಂಚನಗಿರಿ ಮಠ ಆತನಕ ಏನೆಲ್ಲ ಸೊತ್ತುಗಳನ್ನು ತನ್ನ ಪ್ರತಿಷ್ಠಿತ ಸಂಸ್ಥೆಗಳೆಂದು ಬಿಂಬಿಸಿತ್ತೋ ಅಂಥ ಬಹುತೇಕ ಸಂಸ್ಥೆಗಳೆಲ್ಲ ಈಗ ಹೊಸ ಟ್ರಸ್ಟ್‌ನ ಸುಪರ್ದಿಗೊಳಪಟ್ಟಿವೆ. ಸರಿಸುಮಾರು 150 ಕೋಟಿ ರೂಪಾಯಿಗಳ ಆಸ್ತಿಯಾದ ಕುಂಬಳಗೋಡಿನ ಬಿಜಿಎಸ್ ಇಂಟರ್‌ನ್ಯಾಷನಲ್ ರೆಸಿಡೆನ್ಷಿಯಲ್ ಸ್ಕೂಲ್, ನೂರು ಕೋಟಿಗೂ ಅಧಿಕ ಬೆಲೆಬಾಳುವ ನವದೆಹಲಿಯ ದ್ವಾರಕಾದಲ್ಲಿರುವ ಬಿಜಿಎಸ್ ಇಂಟರ್‌ನ್ಯಾಷನಲ್ ಪಬ್ಲಿಕ್ ಸ್ಕೂಲ್, 500 ಕೋಟಿ ರೂಪಾಯಿಗಳ ಸೊತ್ತಾದ 16 ಎಕರೆ ವಿಸ್ತೀರ್ಣದ ಬನ್ನೇರುಘಟ್ಟ ರಸ್ತೆ ಹುಳಿಮಾವಿನ ಬಿಜಿಎಸ್ ನ್ಯಾಷನಲ್ ಪಬ್ಲಿಕ್ ಸ್ಕೂಲ್, 200 ಕೋಟಿಗೂ ಮೀರಿದ ಆಸ್ತಿಯಾದ ಮೈಸೂರಿನ ಕುವೆಂಪುನಗರದ ಬಿಜಿಎಸ್ ಅಪೋಲೋ ಆಸ್ಪತ್ರೆ, ಹೆಚ್ಚುಕಮ್ಮಿ 500 ಕೋಟಿಯ ಪ್ರತಿಷ್ಠಿತ ಕೆಂಗೇರಿ–ಉತ್ತರಹಳ್ಳಿ ರಸ್ತೆಯ ಬಿಜಿಎಸ್ ಗ್ಲೋಬಲ್ ಹಾಸ್ಪಿಟಲ್, ನೂರು ಕೋಟಿಯ ಉತ್ತರಹಳ್ಳಿ ರಸ್ತೆಯ ಬಿಜಿಎಸ್ ಪಬ್ಲಿಕ್ ಸ್ಕೂಲ್, ನೆಲಮಂಗಲದ ಜಗದ್ಗುರು ಚಂದ್ರಶೇಖರನಾಥ ಸ್ವಾಮೀಜಿ ಐಟಿಐ, ವಿಜಯನಗರದ ಶಾಖಾ ಮಠವೂ ಸೇರಿದಂತೆ ಆರ್‌ಪಿಸಿ ಲೇಔಟ್‌ನ ಆದಿಚುಂಚನಗಿರಿ ಹಾಸ್ಟೆಲ್, ರಾಮನಗರದ ಪ್ರತಿಷ್ಠಿತ ಬಿಜಿಎಸ್ ಆಸ್ಪತ್ರೆ, ಕುಂಬಳಗೋಡಿನ ಎಸ್‌ಜೆಬಿ ಬಿಜಿನೆಸ್ ಮ್ಯಾನೇಜ್‌ಮೆಂಟ್ ಕಾಲೇಜ್, ಅದರ ಪಕ್ಕದ ನರ್ಸಿಂಗ್ ಕಾಲೇಜು ಮತ್ತು ಎಸ್‌ಜೆಬಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಇತ್ಯಾದಿಗಳೆಲ್ಲ ಹೊಸ ಟ್ರಸ್ಟ್ ಡೀಡಿನ ಪ್ರಕಾರ ಪ್ರಕಾಶನಾಥನ ಹೊಸ ಟ್ರಸ್ಟಿಗೊಳಪಡುತ್ತವೆ!

ಹೀಗೆ 2011ರ ಜನವರಿಯಲ್ಲಿ ನಿಗೂಢವಾಗಿ ನಡೆದುಹೋದ ಹೊಸ ಟ್ರಸ್ಟ್ ಡೀಡಿನ ಪ್ರಕಾರ ಶೇಖರ್‌ಸ್ವಾಮಿಯ ಖಾಸಗಿ ಸೊತ್ತಾಗಿ ಪರಿವರ್ತನೆಗೊಂಡ ಮಠದ ಸೊತ್ತುಗಳು ಪೈಕಿ ಕುಂಬಳಗೋಡಿನ ಬಿಜಿಎಸ್ ಗ್ಲೋಬಲ್ ಆಸ್ಪತ್ರೆ ಮತ್ತು ಅದರ ಸಹವರ್ತಿ ಬಿಜಿಎಸ್ ಗ್ಲೋಬಲ್ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್ ಪ್ರಮುಖವಾದವು. ಈಗ ನಡೆದ ಐಟಿ ದಾಳಿ ಇದೇ ಕುಂಬಳಗೋಡಿನ ಬಿಜಿಎಸ್ ಮೆಡಿಕಲ್ ಕಾಲೇಜಿಗೆ ಸಂಬಂಧಪಟ್ಟಂತೆ ಅದರ ಮೆಡಿಕಲ್ ಸೀಟು ದಂಧೆಯ ಪರಿಣಾಮವಾಗಿತ್ತು.

ಜುಲೈ 18 ರ ಐಟಿ ದಾಳಿ ಕೇವಲ ಬಿಜಿಎಸ್ ಹೆಸರಿನ ಮಠದ ಸೊತ್ತೆಂದು ಒಕ್ಕಲಿಗರು ಭಾವಿಸಿದ್ದ ಅಡ್ಡೆಗಳ ಮೇಲಷ್ಟೇ ಆಗಿರಲಿಲ್ಲ. ದಲಿತರಿಗೆ ಸೇರಿದ ಅಂಬೇಡ್ಕರ್ ಮೆಡಿಕಲ್ ಕಾಲೇಜು ಮತ್ತು ಗುಲ್ಬರ್ಗಾದ ಪ್ರತಿಷ್ಠಿತ ಲಿಂಗಾಯತ ರಾಜಕಾರಣಿಗಳ ಆಧಿಪತ್ಯಕ್ಕೊಳಪಟ್ಟ ಎಚ್‌ಕೆಇ ಸಂಸ್ಥೆಗಳ ಮೇಲೂ ಒಟ್ಟೊಟ್ಟಿಗೆ ನಡೆದಿತ್ತು. ಎಚ್‌ಕೆಇ



[redacted]

8. Management and Control of Educational Institutions belonging to Sri Adichunchanagiri Shikshana Trust

The educational arm of Sri Adichunchanagiri Mahasamsthana Math is being administered, controlled and managed by Sri Adichunchanagiri Shikshana Trust. Few of the educational institutions run by the Shikshana Trust are the following:

01. BGS International Residential School, Nithyanandanagar, Kengeri Hobli, Bangalore-60

02. BGS International Public School, Dwaraka, Sector-5, New Delhi,


03. BGS National Public School, Hulimavu, Bannerghatta Road, Bangalore

04. BGS Apollo Hospital, Adichunchanagiri Road, Kuvempunagar, Mysore-23

05. BGS – Global Hospitals, No.67, BGS Health and Education City, Uttarahalli Road, Kengeri, Bangalore-60

06. BGS Public School, No.67, BGS Health and Education City, Uttarahalli Road, Kengeri, Bangalore-60

11



[redacted]

07. SJB Institute of Technology, No.67, BGS Health and Education City, Uttarahalli Road, Kengeri, Bangalore-60

08. SJB School of Nursing and College, No.67, BGS Health and Education City, Uttarahalli Road, Kengeri, Bangalore-60

09. SJB College of Business Management, No.67, BGS Health and Education City, Uttarahalli Road, Kengeri, Bangalore-60

10. BGS Hospitals, Ramanagaram,

11. Sri Jagadguru Chandrashekharanatha Swamiji Industrial Training Centre, [illegible], Bangalore District.


12. The Entire Projects to be coming up at 100acres At Chamundi Hill, Nanjangud – Ooty Road, Mysore.

13. Sri Adichunchanagiri Hostel, RPC Layout, Vijayanagar, Bangalore.

All these institutions are at present [illegible] and administered by Sri Sri [illegible] Swamiji for and on behalf of Sri Adichunchanagiri Shikshana Trust

12

ಬಿಜಿಎಸ್‌ನ ಹಲವಾರು ಸಂಸ್ಥೆಗಳನ್ನು ಪ್ರಕಾಶನಾಥ ಸ್ವಾಮಿಗೆ ಹಸ್ತಾಂತರಿಸುವುದು.



ಕರಾರುಪತ್ರದಲ್ಲಿ ಬಾಲಗಂಗಾಧರನಾಥ ಸ್ವಾಮಿಗಳ ಫೋಟೋ ಮತ್ತು ಸಹಿ



...ನ ಮೆಡಿಕಲ್ ಕಾಲೇಜಿಗೆ ಬಿಜಿಎಸ್ ...ಯಾಗಿದ್ದ ಸುನೀಲ್ ನಮೋಶಿ ಮತ್ತು ಯಡ್ಡಿಯ ...ಪ್ಪ ಮಾಲೀಕರಾಗಿದ್ದರು. ಅಲ್ಲಿಗೆ ನಡೆದ ಐಟಿ ...ಸ್ಸಂಶಯವಾಗಿ ಮೆಡಿಕಲ್ ಸೀಟು ದಂಧೆಯ ...ಣವನ್ನು ಗುರಿಯಾಗಿಟ್ಟುಕೊಂಡೇ ನಡೆದಿತ್ತೆಂಬ ...ರಿಗೂ ಅನುಮಾನಗಳಿರಲಿಲ್ಲ.

...ಮಠದ ಟ್ರಸ್ಟಿಗೂ ತಿದ್ದುಪಡಿ

...ರೆ ತಾಂತ್ರಿಕವಾಗಿ ಶೇಖರ್‌ಸ್ವಾಮಿ ಉರ್ಫ್ ...ಥ ತನ್ನ ರಿಯಲ್ ಎಸ್ಟೇಟ್ ಮತ್ತು ಮಠದ ...ಲೂಟಿಯ ರಕ್ಷಣೆಗೊಂದು ವ್ಯವಸ್ಥಿತ ಏರ್ಪಾಡು ...ಂಡಿದ್ದ. ಅದು ಬಿಜಿಎಸ್ ಹೆಲ್ತ್ ಅಂಡ್ ...ಷನ್ ಟ್ರಸ್ಟ್‌ನ ಕೇಂದ್ರ ಕಚೇರಿ ವಿಜಯನಗರದ ...ಚನಗಿರಿ ಶಾಖಾ ಮಠದಲ್ಲೇ ಇರಬೇಕೆಂಬ ಕರಾರು. ...ರಿನ ಪ್ರಕಾರ ಶೇಖರ್‌ಸ್ವಾಮಿ ಬಯಸಿದಷ್ಟೂ ...ಬಿಜಿಎಸ್ ಟ್ರಸ್ಟ್‌ನ ಕಚೇರಿ ವಿಜಯನಗರದ ...ಠದಲ್ಲಿರಬಹುದು ಮತ್ತು ಆತ ಬಯಸಿದಾಗ ...ಬೇಕಾದೆಡೆ ಅದನ್ನು ಸ್ಥಳಾಂತರಿಸಲೂಬಹುದು.

ಶ್ರೀನಿವಾಸಯ್ಯ, ತಿಪಟೂರಿನ ಚೌಧುರಿ ಶಂಕರ್ ಮತ್ತು ಮೈಸೂರಿನ ವೃದ್ಧ ವಕೀಲ ಚಿಕ್ಕಬೋರಯ್ಯನವರ ಜೊತೆಗೆ ಶೇಖರ್‌ಸ್ವಾಮಿ ಉರ್ಫ್ ಪ್ರಕಾಶನಾಥ ಕೂಡ ಮಠದ ಟ್ರಸ್ಟಿಯಾಗಿರತಕ್ಕದ್ದು!

ಅಂದರೆ ಇಡೀ ಆದಿಚುಂಚನಗಿರಿ ಸಾಮ್ರಾಜ್ಯದ ಮಾತೃಸಂಸ್ಥೆಯಾದ ಮಠದ ಟ್ರಸ್ಟ್‌ಗೂ ಪ್ರಕಾಶನಾಥ ಟ್ರಸ್ಟಿ ಮತ್ತು ಪ್ರತ್ಯೇಕವಾಗಿ ರೂಪಿಸಿದ ಬಿಜಿಎಸ್ ಟ್ರಸ್ಟ್‌ಗೆ ಆತನೇ ಆಜೀವ ಕಾರ್ಯದರ್ಶಿ!

ಅಲ್ಲಿಗೆ ನಾಮಕಾವಸ್ತೆಗಷ್ಟೇ ನಿರ್ಮಲನಾಥರು ಪೀಠಾಧಿಪತಿಯಾದಂತಾಯ್ತು. ಬೆಳ್ಳೂರು ಕ್ರಾಸಿನ ಆದಿಚುಂಚನಗಿರಿ ಮೆಡಿಕಲ್ ಕಾಲೇಜು, ಆದಿಚುಂಚನಗಿರಿ ಬೆಟ್ಟದ ಕಾಲಭೈರವನ ದೇವಾಲಯ, ಶಿವಮೊಗ್ಗ, ಹಾಸನ, ಮೈಸೂರು, ತುಮಕೂರು, ಚಿಕ್ಕಬಳ್ಳಾಪುರ ಶಾಖಾಮಠಗಳು ಮತ್ತು ಅವು ನಡೆಸುವ ಉತ್ಪತ್ತಿಯಿಲ್ಲದ ಕನ್ನಡ ಮಾಧ್ಯಮ ಶಾಲೆಗಳ ಹೊರತಾಗಿ ಕೋಟಿಕೋಟಿ ಆದಾಯವುಳ್ಳ ಬೆಂಗಳೂರು, ಮೈಸೂರಿನ ಪ್ರತಿಷ್ಠಿತ ಆಸ್ತಿಗಳೆಲ್ಲವೂ ಶೇಖರಸ್ವಾಮಿಯ ಖಾಸಗಿ ಸೊತ್ತಾಗಿ ಪರಿವರ್ತಿಸಿದಂತಾಯ್ತು.

...i Sri Prakashnatha Swamiji shall be a trustee for life. As long as Sri Sri ...akashanatha Swamiji is a trustee on the Board, he shall also be the Secretary of the ...ust. As Secretary he shall be responsible to look after the day-to-day management ... the trust and discharge/ carry out such duties or responsibilities as may be assigned ... the Board of Trustees from time to time.

ಪ್ರಕಾಶನಾಥ ಸ್ವಾಮಿ ಟ್ರಸ್ಟಿಗೆ ಜೀವನಪರ್ಯಂತ ಟ್ರಸ್ಟಿ ಆಗಿರುತ್ತಾನೆಂದು ವಿವರಿಸಿರುವ ಕರಾರು ಪತ್ರ


...ಗೆ ತನ್ನ ಮಠದ ಆಸ್ತಿ ಕಬಳಿಕೆಗೆ ಒಕ್ಕಲಿಗರ ...ತ್ಮಕ ಕೇಂದ್ರವನ್ನೇ ಗುರಾಣಿಯಂತೆ ಬಳಸಿಕೊಂಡ ... ಶೇಖರ್‌ಸ್ವಾಮಿ ಮಾಡಿದ ಮತ್ತೊಂದು ...ತವೆಂದರೆ ಆದಿಚುಂಚನಗಿರಿ ಮಠದ ಟ್ರಸ್ಟ್ ... ತಿದ್ದುಪಡಿ ಮಾಡಿಸಿದ್ದು. ಒಂದೇ ದಿನಾಂಕದಲ್ಲಿ 2011 ರ ಜನವರಿ 18 ರಂದೇ ಆದಿಚುಂಚನಗಿರಿ ಮಠದ ಟ್ರಸ್ಟ್ ಡೀಡ್ ಮತ್ತು ಬಿಜಿಎಸ್ ಟ್ರಸ್ಟ್‌ನ ...ಟು ಡೀಡು ಎರಡಕ್ಕೂ ಏಕಕಾಲಕ್ಕೆ ...ಗಾಧರನಾಥರು ಸಹಿ ಹಾಕಿದ್ದಾರೆ.

...ಠದ ಟ್ರಸ್ಟ್ ಡೀಡಿಗೆ ಮಾಡಿದ ತಿದ್ದುಪಡಿಯ ... ಮಂಡ್ಯ ಶಾಖಾ ಮಠದ ಪುರುಷೋತ್ತಮನಾಥ, ...ಉತ್ತರಾಧಿಕಾರಿಯಾಗಿದ್ದ ನಿರ್ಮಲನಾಥ, ...ಚನಗಿರಿಯ ಸಮಸ್ತ ಮೆಡಿಕಲ್ ಸೀಟು ದಂಧೆಯ ...ಕೋರ ಯು.ಪಿ. ಶಿವರಾಮ್, ಗಾಂಧಿವಾದಿ

ಆದೇನು ದೌರ್ಬಲ್ಯವೋ ಅದೆಂಥ ಸಾಕ್ಷ್ಯಾಧಾರವನ್ನಿಟ್ಟು ಕೊಂಡು ಶೇಖರ್‌ಸ್ವಾಮಿ ಬಾಲಗಂಗಾಧರನಾಥರನ್ನು ಬ್ಲಾಕ್‌ಮೇಲ್ ಮಾಡಿ ತನ್ನ ಕಪಿಮುಷ್ಠಿಯಲ್ಲಿಟ್ಟು ಕೊಂಡಿದ್ದನೋ; ಅಂತೂ ಬಾಲಗಂಗಾಧರನಾಥರು ತಾವು ಜೀವನಪರ್ಯಂತ ಕಟ್ಟಿದ ಇಡೀ ಸಾಮ್ರಾಜ್ಯವನ್ನು ಶೇಖರ್ ಸ್ವಾಮಿಯ ಮಡಿಲಿಗೆ ಹಾಕಿಯೇ ಕೊನೆಯುಸಿರೆಳೆದಿದ್ದರು. ಲಕ್ಷಾಂತರ ಒಕ್ಕಲಿಗರು ಪೈಸೆಗೆ ಪೈಸೆ ಕೂಡಿಸಿ, ಪಾದಪೂಜೆಯ ಕಾಣಿಕೆ ಮೂಲಕ, ಡೊನೇಷನ್ ಮೂಲಕ, ಬೆಳೆದ ಫಸಲಿನ ಮೂಲಕ, ಸರ್ಕಾರ ಒಕ್ಕಲಿಗರ ಪುರೋಭಿವೃದ್ಧಿಗೆಂದು ನೀಡಿದ ಭೂಮಿಯ ಮೂಲಕ ಏನೆಲ್ಲಾ ಬಿಜಿಎಸ್ ಶಿಕ್ಷಣ ಸಾಮ್ರಾಜ್ಯ ಬೆಳೆದು ನಿಂತಿತ್ತೊ ಅದೆಲ್ಲ ಶೇಖರ್‌ಸ್ವಾಮಿಯ ಖಾಸಗಿ ಸೊತ್ತಾಗಿ ಪರಿವರ್ತನೆಗೊಂಡ ದುರಂತದ ಬಗ್ಗೆ ಪತ್ರಿಕೆ ಕಾಲಾನುಕಾಲಕ್ಕೆ ಒಕ್ಕಲಿಗರನ್ನು ಎಚ್ಚರಿಸುತ್ತಲೇ ಬಂದದ್ದು ಈಗ ಟ್ರಸ್ಟ್ ಡೀಡುಗಳ ಮೂಲಕ ಸಾಬೀತಾಗಿತ್ತು.

ತಮಿಳುನಾಡಿನ ಐಟಿ ಅಧಿಕಾರಿ

ಇಷ್ಟಾಗ್ಯೂ ಶೇಖರ್‌ಸ್ವಾಮಿ ಉರ್ಫ್ ಪ್ರಕಾಶನಾಥ ನಾಗಲಿ, ಮಠವಾಗಲಿ ಬಡ ಒಕ್ಕಲಿಗರ ಮಕ್ಕಳನ್ನು ಇಂಜಿನಿಯರ್, ಡಾಕ್ಟರ್‌ಗಳಾಗಿ ರೂಪಿಸಿದ್ದರೆ ಆ ಮಾತು ಬೇರೆಯಿತ್ತು. ಆದರೆ ನಡೆದದ್ದು ಶುದ್ಧ ಸೀಟು ದಂಧೆ. ಬೆಳ್ಳೂರಿನ ಮೆಡಿಕಲ್ ಕಾಲೇಜಿನಿಂದ ಹಿಡಿದು ಕುಂಬಳಗೋಡಿನ ಬಿಜಿಎಸ್ ಗ್ಲೋಬಲ್ ಮೆಡಿಕಲ್ ಕಾಲೇಜಿನವರೆಗೆ ಪ್ರತಿವರ್ಷ ಭರ್ಜರಿ ಮೆಡಿಕಲ್ ಸೀಟು ದಂಧೆಯೇ ನಡೆಯಿತು. ದೂರದ ಕಾಶ್ಮೀರಿ ಶ್ರೀಮಂತರ ಮಕ್ಕಳು, ನಾರ್ತ್ ಇಂಡಿಯನ್ ಮಾರ್ವಾಡಿಗಳ ಮಕ್ಕಳು, ವಿದೇಶಿಯರೆಲ್ಲ ಕೋಟಿಕೋಟಿ ತೆತ್ತು ಮೆಡಿಕಲ್ ಸೀಟು ಖರೀದಿಸುತ್ತಿರುವಾಗ ಬಡ ಒಕ್ಕಲಿಗರ ಮಕ್ಕಳಿಗೆ ಹೇಗೆ ತಾನೇ ಮೆಡಿಕಲ್ ಸೀಟು ಕೊಡಲು ಸಾಧ್ಯ?



ನಿರ್ಮಲಾನಂದ ಸ್ವಾಮಿ

ಇಂಥ ಮೆಡಿಕಲ್ ಸೀಟು ದಂಧೆಯ ಸೂತ್ರಧಾರಿಯಾಗಿದ್ದವನೇ ಶೇಖರ್‌ಸ್ವಾಮಿ. ಬಿಜಿಎಸ್ ಟ್ರಸ್ಟ್ ಮೂಲಕ ಕುಂಬಳಗೋಡಿನ ಗ್ಲೋಬಲ್ ಆಸ್ಪತ್ರೆ ಮತ್ತು ಮೆಡಿಕಲ್ ಕಾಲೇಜಿಗೆ ತಾನೇ ಅಧಿಕೃತ ಮಾಲೀಕನಾದ ಶೇಖರ್ ತನ್ನ ಸೀಟು ದಂಧೆಗೆ ಬಳಸಿಕೊಂಡಿದ್ದು ವಿಜಯನಗರ ಶಾಖಾಮಠದ ಹೊಸ ಟ್ರಸ್ಟ್ ಅಡ್ಡೆಯನ್ನೇ!

ಈ ಮಧ್ಯೆ ತಮಿಳುನಾಡಿನ ನಿಗೂಢ ಆಸಾಮಿಯೊಬ್ಬ ತನ್ನ ಮಗನಿಗೆ ಮೆಡಿಕಲ್ ಸೀಟು ಬೇಕೆಂದು ಕಳೆದ ಕೆಲ ತಿಂಗಳುಗಳಿಂದ ಕುಂಬಳಗೋಡಿನ ಬಿಜಿಎಸ್ ಇನ್ಸ್‌ಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ ಮತ್ತು ಶೇಖರ್‌ಸ್ವಾಮಿಯ ವಿಜಯನಗರ ಮಠದ ಅಡ್ಡೆಗಳಿಗೆ ಪದೇಪದೇ ಬರುತ್ತಿದ್ದ. ಆತ ಇಡೀ ದಕ್ಷಿಣ ಭಾರತದ ಆದಾಯ ತೆರಿಗೆ ಇಲಾಖೆಗೆ ಮುಖ್ಯಸ್ಥನೆಂಬುದನ್ನು ಕೂಡ ವಿವೇಚಿಸದ ಶೇಖರ್‌ಸ್ವಾಮಿ ತನ್ನ ಮಾಮೂಲಿ ಗತ್ತಿನಲ್ಲೇ ಸೀಟು ಬೇಕೆಂದರೆ ಇಂತಿಷ್ಟು ಕೋಟಿ ಎಂದಿದ್ದಾನೆ. ಅದಕ್ಕೆ ರಶೀದಿ ಕೊಡ್ತೀರಾ ಎಂದರೆ ಕಾಲೇಜಿನಲ್ಲಿ ಕಟ್ಟುವ ಕೆಲ ಲಕ್ಷಕ್ಕಷ್ಟೇ ರಶೀದಿ, ಮಿಕ್ಕಂತೆ ಇಂತಿಷ್ಟು ಲಕ್ಷಗಳನ್ನು ವಿಜಯನಗರದ ಶಾಖಾ ಮಠದ ತನ್ನ ಅಡ್ಡೆಯ ಮ್ಯಾನೇಜರ್ ಶಿವರಾಮನ ಕೈಗೆ ಕೊಡುವಂತೆ ಹೇಳಿದ್ದಾನೆ.

ಅಲ್ಲಿಗೆ ಪ್ರತಿ ಮೆಡಿಕಲ್ ಸೀಟೊಂದಕ್ಕೆ ಸರಿಸುಮಾರು ಮುಕ್ಕಾಲು ಕೋಟಿ ಮೊತ್ತದ ಬ್ಲಾಕ್‌ಮನಿ ಶೇಖರನ ಜೇಬು ಸೇರುತ್ತದೆ ಎಂಬುದು ಐಟಿ ಅಧಿಕಾರಿಗಳಿಗೆ ಗ್ಯಾರಂಟಿಯಾಗಿದೆ. ಇದೇರೀತಿ ಸಪ್ತಗಿರಿ ಮೆಡಿಕಲ್ ಕಾಲೇಜು, ಗುಲ್ಬರ್ಗಾ ಲಿಂಗಾಯತರ ಎಚ್‌ಕೆಇಎಸ್ ಸಂಸ್ಥೆಗಳ ಬ್ಲಾಕ್‌ಮನಿ ಜಾಲ ಮತ್ತು ಸೀಟು ದಂಧೆಗಳ ಮಾಹಿತಿಯೂ ಸಿಕ್ಕಿದೆ. ಇದೆಲ್ಲದರ ಪ್ರತಿಫಲವೇ ಜುಲೈ 18 ರ ಐಟಿ ದಾಳಿ.

ಒಕ್ಕಲಿಗರ ಮೂರ್ಖತನ

ಏಕಕಾಲಕ್ಕೆ ಕುಂಬಳಗೋಡಿನ ಬಿಜಿಎಸ್ ಮೆಡಿಕಲ್ ಕಾಲೇಜು, ವಿಜಯನಗರ ಶಾಖಾ ಮಠದ ಟ್ರಸ್ಟ್ ಅಡ್ಡೆಗಳ ಮೇಲೆ ನಡೆದ ಐಟಿ ದಾಳಿಯನ್ನು ಕಾಂಗ್ರೆಸ್ ನಾಯಕ ದೀಕೆ ಸೇರಿದಂತೆ ಅನೇಕ ಒಕ್ಕಲಿಗ ನಾಯಕರು ಮಠದ ಮೇಲಿನ ದಾಳಿಯೆಂಬಂತೆ ಬಿಂಬಿಸಿದ್ದಾರೆ. ವಿಷಯದ ತಾಂತ್ರಿಕ ವಿವರಗಳ ತಲೆಬುಡ ಗೊತ್ತಿಲ್ಲದ ಕೆಲ ಪತ್ರಿಕೆಗಳು ಮಠದ ಮೇಲೇ ದಾಳಿ ನಡೆಯಿತೆಂದು ಮುಖಪುಟದ ಹೆಡ್ಡಿಂಗ್ ಸುದ್ದಿಯನ್ನಾಗಿಸಿದ್ದಾರೆ. ಬಹುಶಃ ವಿಷಯ ಗೊತ್ತಿದ್ದೂ ಮಿಡಿಯಾಗಳು ಕುಚೇಷ್ಟೆ ನಡೆಸಿರಲೂಬಹುದು. ಆದರೆ ಸತ್ಯ ಏನೆಂಬುದನ್ನು 2011 ರ ಜನವರಿ 18 ರ ಬಿಜಿಎಸ್ ಟ್ರಸ್ಟ್‌ನ ಡೀಡ್ ಒಂದೇ ಸಾಕ್ಷ್ಯಾಧಾರ ಸಮೇತ ಸಾಬೀತುಮಾಡುತ್ತದೆ.

ವಿಜಯನಗರದ ಶಾಖಾಮಠದ ಇಡೀ ಸೊತ್ತೇ ಶೇಖರನ ಖಾಸಗಿ ಆಸ್ತಿಯಾಗಿರುವಾಗ, ಬೆಂಗಳೂರಿನ ಬಿಜಿಎಸ್ ಹೆಸರಿನ ಶಿಕ್ಷಣ ಸಂಸ್ಥೆಗಳೆಲ್ಲ ಶೇಖರ್‌ಸ್ವಾಮಿಯ ಸೊತ್ತಾಗಿರುವಾಗ, ಅಲ್ಲಿ ದುಡ್ಡಿದ್ದವರಿಗಷ್ಟೇ ಸೀಟು ಮೀಸಲಾದಾಗ, ಒಕ್ಕಲಿಗರೆಂಬ ಕಾರಣಕ್ಕೆ ಕಾಟಾಚಾರದ ರಿಯಾಯಿತಿ ಕೂಡ ಇಲ್ಲದಿರುವಾಗ, ಉತ್ತರ ಭಾರತದ ಸಾಹುಕಾರರ ಮಕ್ಕಳಿಗಷ್ಟೇ ಪ್ರಾಮುಖ್ಯತೆಯಿರುವಾಗ ಮಠಕ್ಕಾಗಲಿ, ಒಕ್ಕಲಿಗರಿಗಾಗಲಿ ಯಾವುದೇ ಸಂಬಂಧ, ಋಣಾನುಬಂಧವಿಲ್ಲದ ಬಿಜಿಎಸ್ ಡೊನೇಷನ್ ಸಾಮ್ರಾಜ್ಯದ ಮೇಲಿನ ದಾಳಿ ಅದ್ಹೇಗೆ ಒಕ್ಕಲಿಗರನ್ನು ತುಳಿಯುವ ಯತ್ನವಾಗುತ್ತದೆ?

ಹೋಗಲಿ ಇನ್ನು ಮುಂದಾದರೂ ಬಿಜಿಎಸ್ ಸಂಸ್ಥೆಗಳಲ್ಲಿ ಒಕ್ಕಲಿಗರಿಗೆಂದು ಇಂತಿಷ್ಟು ಸೀಟುಗಳನ್ನು ಶೇಖರ್‌ಸ್ವಾಮಿ ಮೀಸಲಿಡುತ್ತಾನಾ?

ಮಠದ ಸಾವಿರಾರು ಕೋಟಿಯ ಸೊತ್ತನ್ನು ಕಬಳಿಸಿದ, ಒಕ್ಕಲಿಗ ಸಮಾಜವನ್ನೇ ವಂಚಿಸಿದ ಶೇಖರ್‌ಸ್ವಾಮಿ ಉರ್ಫ್ ಪ್ರಕಾಶನಾಥನ ವಿರುದ್ಧ ಬೀದಿಗಿಳಿಯದೆ ಆತ ಮಠಕ್ಕೆ ಬಗೆದ ದ್ರೋಹದ ಸಮರ್ಥನೆಗೆ ನಿಂತ ಒಕ್ಕಲಿಗರ ಪ್ರತಿಭಟನೆಗೆ ಏನಾದರೂ ಅರ್ಥವಿದೆಯೇ? ಅದನ್ನು ಒಕ್ಕಲಿಗರ ಮೂರ್ಖತನ ಎನ್ನಬೇಕೋ? ಆತ್ಮವಂಚನೆಯೆನ್ನಬೇಕೊ?

(ಮುಂದಿನ ವಾರಕ್ಕೆ)

ಚಿಕ್ಕಬಳ್ಳಾಪುರ ಡಬಲ್ ಮರ್ಡರ್ ಸೇಡಿಗಾಗಿ ಕಾದಿರುವ ಹೆಂಗಸರು!

...ಬೆಂಗಳೂರು, ಮಂಡ್ಯ, ಮೈಸೂರು, ಶಿವಮೊಗ್ಗದ ...ಪಾಲಿಂಗಳೆಲ್ಲಾ ತಣ್ಣಗೆ ಮಲಗಿರುವಾಗ ಈ ನಾಡಿನ ...ರ ಕೋಲಾರದಲ್ಲೀಗ ಮಚ್ಚು-ಲಾಂಗುಗಳ ಶಬ್ದ ಶುರುವಾಗಿದೆ. ಚಿಕ್ಕಬಳ್ಳಾಪುರದ ಸೆಷನ್ಸ್ ಕೋರ್ಟ್‌ನ ...ಸಲ್ಲೇ ಮೊನ್ನೆ ಮಚ್ಚು ಲಾಂಗುಗಳನ್ನು ಪತ್ತೆ ಹಚ್ಚಿರುವ ...ರು ನಾಲ್ವರನ್ನು ಬಂಧಿಸಿದ್ದಾರೆ. ಇವರೆಲ್ಲಾ ರೌಡಿ ...ಹನ ಭಂಟರು.

...ಗೆ ಹತ್ತು ತಿಂಗಳ ಹಿಂದೆ ಶಿಡ್ಲಘಟ್ಟದ ಬೋದನೂರು ...ನನ್ನು ರಸ್ತೆಯಲ್ಲೇ ಅಟ್ಟಾಡಿಸಿ ಭಯಾನಕವಾಗಿ ಕೊಲ್ಲಲಾಗಿತ್ತು.

...ಂದು ಸೇಡಿನ ಕೊಲೆ!

...10ರ ಆಗಸ್ಟ್ 21ರಂದು ಈ ಮೋಹನ ತನ್ನ ...ಳಿಗಳಾಗಿದ್ದ ಮಂಜುನಾಥ್ ಹಾಗೂ ನರಸಿಂಹ ...ವರನ್ನು ಜಾತವಾರದ ಹತ್ತಿರ ಕೊಚ್ಚಿ ಕೊಲೆ ...ಪ್ಪ. ಶಿಡ್ಲಘಟ್ಟ ಟೌನಿನ ದೋ ನಂಬರ್ ದಂಧೆಗಳಲ್ಲಿ ...ದ್ದ ಬರುತ್ತಿದ್ದ ಮಂಜು ಹಾಗೂ ನರಸಿಂಹನನ್ನು ...ನ್ ಅವತ್ತು ಕೊಲ್ಲಿಸಿದ್ದ. ಒಂದು ಕಾಲದಲ್ಲಿ ...ನ ಶಿಷ್ಯರೇ ಆಗಿದ್ದ ಇವರಿಬ್ಬರೂ ಒಂದು ಕೇಸಿನಲ್ಲಿ ...ನನ್ನು ರಾಜಸ್ಥಾನದ ಪೊಲೀಸರು ...ಂದು ಹೋದಾಗ ಇದೇ ದಂಧೆಯನ್ನೇ ...ಂಟ್ರೋಲಿಗೆ ತೆಗೆದುಕೊಂಡಿದ್ದರು. ... ಬಸ್ ದಂಧೆ, ಮಟ್ಕಾ, ಲಿಕ್ಕರ್ ...ಳ ಜೊತೆಗೆ ರಿಯಲ್ ಎಸ್ಟೇಟ್ ದಲಿಗೂ ...ಭರ್ಜರಿ ಹಣ ಮಾಡಿಕೊಳ್ಳುತ್ತಿದ್ದರು. ... ಮೋಹನ್ ರಾಜಸ್ಥಾನದ ...ಂದ ಬಿಡಿಸಿಕೊಂಡು ಬಂದ. ಆದರೆ ...ಗುರು ಮೋಹನನಿಗೆ ಜಾಗ ...ಬಿಟ್ಟಿದ್ದರು. ಆಗಲೇ ಕೊಚ್ಚಿದ್ದ



ಮೋಹನ್ 2010ರ ಆಗಸ್ಟ್‌ನಲ್ಲಿ ಮಂಜು- ನರಸಿಂಹರನ್ನು ಮುಗಿಸಿಬಿಟ್ಟ. ಕೋರ್ಟ್ ಕೇಸೊಂದಕ್ಕಾಗಿ ಹೊರಟಿದ್ದ ಇವರಿಬ್ಬರನ್ನು ಶಿಡ್ಲಘಟ್ಟ-ಚಿಕ್ಕಬಳ್ಳಾಪುರ ರಸ್ತೆಯ ಜಾತಾವರ ಬಳಿ ಮೋಹನನ ಗ್ಯಾಂಗ್ ಅಡ್ಡಹಾಕಿ ಸ್ಕಾರ್ಪಿಯೋ ಕಾರಿನೊಳಗೇ ಕೊಚ್ಚಿ ಕೊಲೆ ಮಾಡಿತು.



ಮೋಹನ್

ಹೀಗೆ ತನಗಡ್ಡವಿದ್ದ ಶಿಷ್ಯರನ್ನೇ ಮೋಹನ ಮುಗಿಸಿದನಾದರೂ ಆ ಘಟನೆಯೇ ಮೋಹನನ ಕೊಲೆಗೂ ಮುಹೂರ್ತವಿಟ್ಟ ಘಳಿಗೆಯೂ ಆಗಿತ್ತು.

ಇದಾದ ಎರಡನೇ ವರ್ಷದಲ್ಲಿ 2012ರ ಅದೇ ಆಗಸ್ಟ್ 25 ರಂದು ಮಾಲೂರಿನಲ್ಲಿದ್ದ ಗರ್ಭಿಣಿ ಪತ್ನಿ ರಮಾಳನ್ನು ನೋಡಿಕೊಂಡು ಬರುತ್ತಿದ್ದ ಮೋಹನನನ್ನು ಗಾಡಿಯಲ್ಲೇ ಹಿಡಿದು ಕೊಚ್ಚಿ ಕೊಲ್ಲಲಾಗಿತ್ತು.

ಈ ಸೇಡಿನ ಹತ್ಯೆ ನಡೆಸಿದವರು ಹರಿಣಿ ಹಾಗೂ ಸುಗುಣ ಎಂಬ ಸುದ್ದಿ ಹರಡಿತು.

ಇವರಲ್ಲಿ ಹರಿಣಿ ಮಂಜುನಾಥನ ವಿಧವೆಯಾದರೆ ಸುಗುಣ ನರಸಿಂಹನ ಪತ್ನಿ!

ಇವರಿಬ್ಬರೂ ಮೋಹನನಿಂದ ಹತ್ಯೆಗೀಡಾಗಿದ್ದವರು.

ಈಗ ಚಿಕ್ಕಬಳ್ಳಾಪುರ ಟೌನಿನಲ್ಲಿ ಇನ್ನೊಮ್ಮೆ ಮಚ್ಚು ಲಾಂಗುಗಳು ಕಂಡುಬಂದಿರುವುದೂ ಈ ಹರಿಣಿ-ಸುಗುಣರ



ಮಂಜುನಾಥ್

ಸೇಡಿನ ಬೆಂಕಿಯ ಭೀತಿಗೆ!

ಅವತ್ತು ಮಂಜುನಾಥ ಹಾಗೂ ನರಸಿಂಹರನ್ನು ಕೊಂದ ಮೋಹನನ ಗ್ಯಾಂಗ್‌ನಲ್ಲಿ ರಂಗನಾಥ್, ಲಕ್ಷ್ಮಣ, ಇಡ್ಲೋಡು, ನಾಗೇಶ, ಶಶಿಕುಮಾರ್, ಮಂಜುನಾಥ್ ಇದ್ದರು. ಪೊಲೀಸರು ನಂತರ ಇವರನ್ನೆಲ್ಲಾ ಬೆಂಗಳೂರಿನ ಯಲಹಂಕದಲ್ಲಿ ಅರೆಸ್ಟ್ ಮಾಡಿದ್ದರು. ಇವರ ಪೈಕಿ ರಂಗನಾಥ್ ಮೊನ್ನೆ ಕೇಸ್‌ಗಾಗಿ ಚಿಕ್ಕಬಳ್ಳಾಪುರ ಸೆಷನ್ಸ್ ಕೋರ್ಟಿಗೆ ಬಂದಿದ್ದಾನೆ.


ರಂಗನಾಥನಿಗೆ ಈಗಲೂ ಜೀವ ಭಯ. ತನ್ನ ಬಾಸ್ ಮೋಹನ್‌ನನ್ನೇ ಕೊಲ್ಲಿಸಿದ ಹರಿಣಿ-ಸುಗುಣರ ಬಂಧುಗಳು ತನ್ನನ್ನು ಜೀವಸಹಿತ ಬಿಡಲಾರರೆಂಬ ಭೀತಿ ಅವನಿಗೆ. ಹಾಗಾಗಿ ಕೋರ್ಟ್‌ಗೆ ಬಂದಾಗ ತನ್ನ ರಕ್ಷಣೆಗೆಂದು ನಾಲ್ವರು ಬಂಟರನ್ನು ಕರೆತಂದಿದ್ದ. ಗೋಪಾಲಕೃಷ್ಣ, ಗಂಗಾಧರ, ಮುನಿರಾಜು ಹಾಗೂ ರವಿ ಎಂಬ ಈ ಬಂಟರುಗಳು ಕಾರಿನೊಳಗೆ ಮಚ್ಚು ಲಾಂಗುಗಳನ್ನಿಟ್ಟುಕೊಂಡೇ ಕೋರ್ಟ್ ಆವರಣದೊಳಕ್ಕೆ ಬಂದಿದ್ದರು. ಆದರೆ ಅವರ ಇಂಡಿಕಾ ಕಾರ್ KA-35 K-5808 ನೊಳಗಿದ್ದ ಹತಾರಗಳು ಪೊಲೀಸರ ಕಣ್ಣಿಗೆ ಬಿದ್ದು ಈಗ ಅವರೂ ಅರೆಸ್ಟಾಗಿದ್ದಾರೆ.

ಸರ್ಕಲ್ ಇನ್ಸ್‌ಪೆಕ್ಟರ್ ಮಹೇಶ್‌ಕುಮಾರ್ ಈ ಖತರ್‌ನಾಕ್ ಆಸಾಮಿಗಳನ್ನು ಜೈಲಿಗೆ ತಳ್ಳಿದ್ದಾರೆ. ಆದರೂ ಸೇಡಿನ ಬೆಂಕಿಯಿಂದ ಕುದಿಯುತ್ತಿರುವ ಹರಿಣಿ-ಸುಗುಣ ಮತ್ತವರ ಬಂಧುಗಳು ಇನ್ನೊಂದು ಅವಕಾಶಕ್ಕಾಗಿ ಕಾಯುವುದು ಗ್ಯಾರಂಟಿ ಎಂಬಂತೆ ಕಾಣುತ್ತಿದೆ.

ರಕ್ತಪಾತವನ್ನು ಉದ್ಯಾಪಿಸಿದವರು ತಮ್ಮ ರಕ್ತ ಚೆಲ್ಲದೆ ಹೋದರೆ ಅದೂ ಮುಗಿಯುವುದುಂಟೆ?

● ವರದಿಗಾರ

ಮುಸ್ಲಿಮ್ ಮಹಿಳೆಯರ ಮಸೀದಿ-ಶಾಲಾ ಪ್ರವೇಶ:
ನಮ್ಮ ಮುಂದಿರುವ ಸವಾಲು



'ಮುಸ್ಲಿಮ್ ಹೆಣ್ಣು ಮಕ್ಕಳು ಮಸೀದಿಗೆ ನಮಾಜ್‌ಗೆ ಹೋಗುವುದರ ಕುರಿತಂತೆ ನೀನ್ಯಾಕೆ ಮಾತನಾಡುವುದಿಲ್ಲ...?' ಎಂದು ಕೆಲವು ಗೆಳೆಯರು ನನ್ನ ಹಣೆಗೆ ಪಿಸ್ತೂಲ್ ಒತ್ತಿ ಕೇಳುತ್ತಿದ್ದಾರೆ. ಹೀಗೆಂದು ಕೇಳಿದವರಲ್ಲಿ ಹೆಣ್ಣು ಮಕ್ಕಳು ತಲೆವಸ್ತ್ರ ಹಾಕಿ ಶಾಲೆಗೆ ಹೋಗುವುದನ್ನು ಶತಾಗತಾಯ ವಿರೋಧಿಸಿದವರಿದ್ದಾರೆ. 'ತಲೆವಸ್ತ್ರ (ಸ್ಕಾರ್ಫ್) ಅವರಿಗೆ ಮುಖ್ಯವೆಂದಾದರೆ ಅವರು ಮನೆಯಲ್ಲೇ ಇರಲಿ' ಎಂದು ವಾದಿಸಿದ ಕಮ್ಯುನಿಸ್ಟ್ ಗೆಳೆಯರಿದ್ದಾರೆ. ಇದೀಗ ಕೆಲವರಂತೂ 'ದಲಿತರ ಮೇಲೆ ಪ್ರೀತಿ ತೋರಿಸುವ ನೀನು ಮುಸ್ಲಿಮ್ ಮಹಿಳೆ ಮಸೀದಿಯಲ್ಲಿ ನಮಾಜ್ ಮಾಡುವುದರ ಕುರಿತಂತೆ ಯಾಕೆ ಸುಮ್ಮನಿದ್ದೀಯ?' ಎಂದು ಪದೇ ಪದೇ ಕೇಳಿ, ನನ್ನ ಬಾಯಿ ಮುಚ್ಚಿಸುವ ವ್ಯರ್ಥ ಪ್ರಯತ್ನ ಮಾಡುತ್ತಿದ್ದಾರೆ. ಅದಕ್ಕಾಗಿ ನಾನಿಲ್ಲಿ ಅನಿವಾರ್ಯವಾಗಿ ಪ್ರತಿಕ್ರಿಯಿಸುತ್ತಿದ್ದೇನೆ. ಯಾಕೆಂದರೆ ಮುಸ್ಲಿಮ್ ಮಹಿಳೆಯರು ಮಸೀದಿಗೆ ಹೋಗಬೇಕು, ಹೋಗ ಬಾರದು ಎನ್ನುವುದು ನನಗೆ ಯಾವತ್ತೂ ಪ್ರಶ್ನೆಯಾಗಿರಲಿಲ್ಲ. ಮಸೀದಿಗೆ ಹೋಗಲೇಬೇಕೆಂದರೆ ಮುಸ್ಲಿಮ್ ಮಹಿಳೆಯರಿಗೆ ಪ್ರವೇಶ ನೀಡುವ ಮಸೀದಿಗಳು ಇದೀಗ ಎಲ್ಲ ಕಡೆ ತಲೆಯೆತ್ತುತ್ತಿವೆ. ನನಗೆ ಮುಖ್ಯವೆನಿಸುವುದು ಶಾಲೆ, ಕಾಲೇಜುಗಳಿಗೆ ಮುಸ್ಲಿಮ್ ಮಹಿಳೆಯರು ಇನ್ನಷ್ಟು ಹೆಚ್ಚು ಹೆಚ್ಚು ಪ್ರಮಾಣದಲ್ಲಿ ತೆರಳಬೇಕು. ನಾವಿಂದು ಧ್ವನಿಯೆತ್ತಬೇಕಾದುದು ಈ ಕುರಿತಂತೆ.

ಹಾಸನದಲ್ಲಿ ನಡೆದ ಮುಸ್ಲಿಮ್ ಮಹಿಳೆಯರ ಮಸೀದಿ ಪ್ರವೇಶ ವಿವಾದ ಹೊಸತೇನೂ ಅಲ್ಲ ಮತ್ತು ಈ ಚಳವಳಿಯ ಹಿಂದೆ ಮುಸ್ಲಿಮ್ ಮೂಲಭೂತವಾದಿಗಳೆಂದು ಪ್ರಗತಿಪರರು ಯಾರನ್ನು ಕರೆಯುತ್ತಾರೆಯೋ ಅವರೂ ಇದ್ದಾರೆ ಎಂದರೆ ನೀವು ಒಪ್ಪುತ್ತೀರೋ ಇಲ್ಲವೋ. ಸುಮಾರು ಹದಿನೈದು ವರ್ಷಗಳ ಹಿಂದೊಮ್ಮೆ ಇಂತಹದೇ ಪ್ರಕರಣ ಹಾಸನದಲ್ಲಿ ನಡೆದಿತ್ತು. ಮಸೀದಿ ಪ್ರವೇಶವನ್ನು ಎತ್ತಿ ಹಿಡಿದ ಬಾನು ಮುಷ್ತಾಕ್ ಮೇಲೆ ಕೆಲವರು ನಿಷೇಧವನ್ನೂ ಹೇರಿದ್ದರು. ಆಗ ಲಂಕೇಶ್ ಪತ್ರಿಕೆಯಲ್ಲಿ ಅದನ್ನು ಬಲವಾಗಿ ಖಂಡಿಸಿದವನಲ್ಲಿ ನಾನೂ ಒಬ್ಬ. ಆಗ ನನ್ನ ಅಣ್ಣ ರಶೀದನೂ ಬಾನು ಮೇಲಿನ ನಿಷೇಧದ ವಿರುದ್ಧ ಪ್ರತಿಭಟಿಸಿದ್ದ. ಆದರೆ ನಾನು ನನ್ನ ಅಭಿಪ್ರಾಯವನ್ನು ಒಂದು ಸ್ವಲ್ಪ ಮೆದುವಾಗಿ ಬರೆದಿದ್ದೆ. ಮುಸ್ಲಿಮ್ ಮಹಿಳೆಯರ ಸಮಸ್ಯೆ ಮಸೀದಿಯಲ್ಲ, ಶಾಲೆ, ಕಾಲೇಜುಗಳು ಎಂದು ಅಭಿಪ್ರಾಯಿಸಿದ್ದೆ. ಅದಕ್ಕೆ ಕಾರಣವೂ ಇತ್ತು.

ಕರ್ನಾಟಕದಲ್ಲಿ ಮುಸ್ಲಿಮ್ ಮಹಿಳೆಯರೂ ಧರ್ಮದ ಪ್ರಮುಖ ಭಾಗವಾದುದು ಈ ಭಾಗದಲ್ಲಿ ಜಮಾತೆ ಇಸ್ಲಾಮ್ ತಲೆ ಎತ್ತಿದ ಬಳಿಕ ಎನ್ನುವುದನ್ನು ಗಮನಿಸಬೇಕು. ಜಮಾತೆ ಇಸ್ಲಾಮನ್ನು ಕೆಲವರು ಮುಸ್ಲಿಮ್ ಮೂಲಭೂತವಾದಿ ಸಂಘಟನೆಯೆಂದು ಕರೆಯುತ್ತಿರುವುದೂ ಇಲ್ಲಿ ಮುಖ್ಯವಾಗುತ್ತದೆ. ನಿಜಕ್ಕೂ ಇದೊಂದು ಬಿಕ್ಕಟ್ಟೇ ಸರಿ. ನಾವು ಯಾರನ್ನು ಮುಸ್ಲಿಮ್ ಮೂಲಭೂತವಾದಿಗಳೆಂದು ಟೀಕಿಸುತ್ತೇವೆಯೋ ಅವರೇ ಮೊತ್ತ ಮೊದಲಾಗಿ ಕನ್ನಡದಲ್ಲಿ ಕುರ್‌ಆನನ್ನು ತರ್ಜುಮೆ ಮಾಡಿದರು. ಬಹುಸಂಸ್ಕೃತಿಯ ಪ್ರತಿನಿಧಿಗಳೆನಿಸಿಕೊಂಡ ಇಲ್ಲಿನ ದರ್ಗಾದ ಜನರೆಲ್ಲ ಇದನ್ನು ಪ್ರತಿಭಟಿಸಿದ್ದರು. "ಕನ್ನಡದಲ್ಲಿ ಕುರ್‌ಆನ್ ತರುವುದೇ..." ಎಂದು ಆಘಾತ ವ್ಯಕ್ತಪಡಿಸಿದ್ದರು. ನನ್ನ ಬಾಲ್ಯದಲ್ಲಿ ಮುಸ್ಲಿಮ್ ಸಮುದಾಯದ ಬಹುತೇಕ ಮಂದಿ ಜಮಾತೆ ಇಸ್ಲಾಮಿನ ವಿರುದ್ಧ ಧ್ವನಿಯೆತ್ತಿದ್ದರು. ಕತ್ತಿ ಹಿಡಿದು ಅವರ ಮೇಲೆ ಏರಿ ಹೋದವರೂ ಇದ್ದಾರೆ. ಅದಕ್ಕೆ ಮುಖ್ಯ ಕಾರಣವೊಂದಿತ್ತು. ಜಮಾತೆ ಇಸ್ಲಾಮ್ ದರ್ಗಾಗಳನ್ನು ನಂಬುವುದಿಲ್ಲ. ಅದಕ್ಕೆ ಕುರ್‌ಆನ್‌ನಲ್ಲಿ ಸ್ಥಾನವಿಲ್ಲ ಎಂದು ವಾದಿಸುತ್ತಾರೆ. ದರ್ಗಾದಲ್ಲಿ ದೀಪ ಹಚ್ಚುವುದು, ಉರೂಸ್ ಆಚರಿಸುವುದು ಇತ್ಯಾದಿಗಳೆಲ್ಲ ಇಸ್ಲಾಮ್ ಧರ್ಮಕ್ಕೆ ವಿರುದ್ಧ ಎಂದು ಜಮಾತೆ ಇಸ್ಲಾಮಿನ ಮಂದಿ ವಾದಿಸುತ್ತಾರೆ. ಬಾಬಾಬುಡನ್‌ಗಿರಿ ದರ್ಗಾದ ಬಗ್ಗೆ ಯಾವುದೇ ಧಾರ್ಮಿಕ ಭಾವನೆಗಳನ್ನೂ ಜಮಾತೆ ಇಸ್ಲಾಮಿ ಪಂಗಡವಾಗಲಿ, ಸಲಫಿ ಪಂಗಡವಾಗಲಿ ಹೊಂದಿಲ್ಲ. ಪರೋಕ್ಷವಾಗಿ ಅದು ಧ್ವಂಸವಾಗಬೇಕು ಎಂದೇ ಅವರು ಆಶಿಸುತ್ತಾರೆ. ಆದರೆ ಸೂಫಿ ಸಂತರ ದರ್ಗಾಗಳ ಬಗ್ಗೆ ಭಾರತದ ಭಾವನೆ ಭಿನ್ನವಾದುದು. ಅದು ಈ ದೇಶದ ಬಹುಸಂಸ್ಕೃತಿಯನ್ನು ಪ್ರತಿನಿಧಿಸುತ್ತದೆ ಎಂದು ಪ್ರಗತಿಪರರ ಸಹಿತ ಎಲ್ಲರೂ ವಾದಿಸುತ್ತಾರೆ. ಆದರೆ ಇಂದು ನಮ್ಮ ನಡುವಿನ ದರ್ಗಾಗಳನ್ನು ನೆಲೆ ಮಾಡಿಕೊಂಡ ಸುನ್ನಿಗಳು ಮುಸ್ಲಿಮ್ ಮಹಿಳೆಯರು ಶಾಲಾ ಕಾಲೇಜುಗಳಿಗೆ ಹೋಗುವುದನ್ನು ಇಷ್ಟಪಡುವುದಿಲ್ಲ. ಮಸೀದಿಗಳಲ್ಲಿ ಮಹಿಳೆಯರು ನಮಾಜ್ ಮಾಡುವುದನ್ನು ಅಷ್ಟೇ ತೀವ್ರವಾಗಿ ವಿರೋಧಿಸುತ್ತಾರೆ. ಇಂತಹ ಕಾಲಘಟ್ಟದಲ್ಲಿ ಇಸ್ಲಾಮ್‌ನ ಮೂಲಭೂತ ತತ್ವಗಳ ಆಧಾರದ ಮೇಲೆ ನಿಂತಿದ್ದೇವೆ ಎನ್ನುವ ಜಮಾತೆ ಇಸ್ಲಾಮಿಗಳು ಮುಸ್ಲಿಮರು ವೇದಿಕೆಗೆ, ಶಾಲೆಗೆ ಹೋಗುವುದನ್ನು ಪ್ರೋತ್ಸಾಹಿಸಿದರು. ಆದರೆ ಅದು ಧಾರ್ಮಿಕ ಗೆರೆಗಳ ಒಳಗೆ ಎನ್ನುವುದನ್ನು ನಾವು ಗಮನಿಸಬೇಕು.

ಜಮಾತೆ ಇಸ್ಲಾಮಿನ ನಂತರ ಕರಾವಳಿಯಾದ್ಯಂತ ತಲೆಯೆತ್ತಿದ ಸಂಘಟನೆ ಸಲಫಿ ಮೂವ್‌ಮೆಂಟ್. ಆದೀಗ ತನ್ನ ರೆಕ್ಕೆಗಳನ್ನು ಬಿಚ್ಚಿದೆ. ಇದು ಜಮಾತೆ ಇಸ್ಲಾಮಿಗಿಂತಲೂ ಕಟುವಾಗಿ ಇಸ್ಲಾಮ್ ಮೂಲಭೂತ ತತ್ವಗಳನ್ನು ಪಾಲಿಸಲು ಹೆಣಗುತ್ತಿದೆ. ಮುಸ್ಲಿಮ್ ಮಹಿಳೆಯರು ಮಸೀದಿಗಳಿಗೆ ಹೋಗಬೇಕು ಎನ್ನುವ ಚಳವಳಿ ಆರಂಭಿಸಿದ್ದು, ಅದಕ್ಕೆ ಕುರ್‌ಆನ್‌ನ ಸಾಕ್ಷಗಳನ್ನು ಒದಗಿಸಿದ್ದು ಇದೇ ಸಲಫಿಗಳು. ಕರಾವಳಿಯಲ್ಲಿ ಉಳ್ಳಾಲ ದರ್ಗಾಕ್ಕೆ ಸವಾಲಾಗಿ ಸಲಫಿಗಳು ಹುಟ್ಟಿಕೊಂಡರು. ಸೌದಿ ಅರೇಬಿಯಾದ ಸಲಫಿಗಳು ಇವರಿಗೆ ಆದರ್ಶವಾದರು. ದರ್ಗಾಗಳ ವಿರುದ್ಧ ಇವರ ಹೋರಾಟ ಹಲವು ಮನೆಗಳನ್ನು, ಕುಟುಂಬಗಳನ್ನು ಒಡೆದಿದೆ. ಪ್ರವಾದಿಯ ಹುಟ್ಟು ಹಬ್ಬ ದಿನಾಚರಣೆಯನ್ನು, ಸಾರ್ವಜನಿಕ ಮೆರವಣಿಗೆಯನ್ನು ಇವರು ಶತಾಯಗತಾಯ ವಿರೋಧಿಸುತ್ತಾರೆ. ಒಂದೇ ಮನೆಯಲ್ಲಿ ತಂದೆ ಸುನ್ನಿ, ಮಗ ಸಲಫಿಗಳಾಗಿ ಬದುಕುವುದಿದೆ. ಅವರ ನಡುವೆಯೇ ಜಗಳಗಳಾಗುವುದಿದೆ. ಮನೆಯಲ್ಲಿ ಪ್ರವಾದಿಯ ಪಾರಾಯಣ(ಮೌಲೂದು)ವನ್ನು ತಂದೆ ಒಪ್ಪಿದ್ದರೆ ಮಗ ವಿರೋಧಿಸುವುದಿದೆ. ಇದೇ ಸಲಫಿಗಳು ಮಹಿಳೆಯರು ಮಸೀದಿಗಳಿಗೆ ಹೋಗಬೇಕು ಎನ್ನುವ ಚಳವಳಿ ಆರಂಭಿಸಿದ್ದು ಮತ್ತು ಮಂಗಳೂರು ಸೇರಿದಂತೆ ಇವರ ಎಲ್ಲ ಮಸೀದಿಗಳಲ್ಲಿ ಮಹಿಳೆಯರು ಮಸೀದಿಗೆ ಹೋಗುತ್ತಾರೆ. ಮಾತ್ರವಲ್ಲ ಇವರ ಶಾಲಾ ಕಾಲೇಜುಗಳಿವೆ. ಅಲ್ಲಿ ಮುಸ್ಲಿಮ್ ಮಹಿಳೆಯರು ಅರಬೀ ಅಕ್ಷರ ಮಾತ್ರ ಕಲಿಯುವುದಲ್ಲ, ಅದರ ಅರ್ಥ ಸಹಿತ ಕಲಿಯುತ್ತಾರೆ. ಸಲಫಿಯ ಮಹಿಳೆಯರು ಯಾವುದೇ ಮುಸ್ಲಿಮ್ ಧರ್ಮಗುರುವನ್ನು ಮೀರುವಂತೆ ಧಾರ್ಮಿಕ ಜ್ಞಾನವನ್ನು ಹೊಂದಿರುತ್ತಾರೆ.

ಸುನ್ನಿ ಮಸೀದಿಗಳಲ್ಲಿ ಮುಸ್ಲಿಮ್ ಮಹಿಳೆಯರು ಮಸೀದಿಗೆ ಹೋಗಲು ಅವಕಾಶ ನೀಡಬೇಕು ಎಂದು ಮಂಗಳೂರಿನ ಕೆಲವು ಸಲಫಿ ಮಹಿಳೆಯರು ನ್ಯಾಯಾಲಯಕ್ಕೂ ತೆರಳಿದ್ದಾರೆ. ಮಸೀದಿಗೆ ತೆರಳಿದಾಕ್ಷಣ ಮುಸ್ಲಿಮ್ ಮಹಿಳೆಯರ ಹಕ್ಕುಗಳು ಸಿಕ್ಕೇ ಬಿಡುತ್ತವೆ ಎಂದು ನಾನು ಈ ಕಾರಣಕ್ಕಾಗಿಯೇ ನಂಬುವುದಿಲ್ಲ. ಕೆಲವು ಕಟ್ಟಾ ಸಲಫಿಗಳು ಮುಸ್ಲಿಮ್ ಮಹಿಳೆಯ ಕುರಿತಂತೆ ಅಷ್ಟೇ ಕಟ್ಟಾ ನಿಲುವನ್ನು ತಳೆದಿದ್ದಾರೆ. ಕಣ್ಣು ಮಾತ್ರ ಕಾಣುವಂತೆ ಮುಖ ಮುಚ್ಚಿಕೊಳ್ಳುವ ಬುರ್ಖಾಗಳು ಬಂದಿರುವುದು ಈ ಸಲಫಿಗಳ ಮೂಲಕವೇ ಎನ್ನುವುದನ್ನು ನಾವು ಗಮನಿಸಬೇಕು. ಕೆಲವು ಸಲಫಿಗಳ ಗಡ್ಡಗಳು ವಿಕಾರವಾಗಿ ಬೆಳೆದಿರುತ್ತವೆ. ಮತ್ತು ಅವರು ಅದನ್ನು ಉದ್ದೇಶಪೂರ್ವಕವಾಗಿ ಪ್ರದರ್ಶನಕ್ಕಾಗಿಯೇ ಬಿಟ್ಟಿರುತ್ತಾರೆ. ಪ್ರವಾದಿಯವರು ಮಧ್ಯಮ ನಿಲುವಿಗೆ ಆದ್ಯತೆ ನೀಡಿದವರು. ಪ್ರೀತಿ, ದ್ವೇಷ ಮಾತ್ರವಲ್ಲ ಆರಾಧನೆಯೂ ತನ್ನ ಮಧ್ಯಮ ನಿಲುವನ್ನು ದಾಟಬಾರದು ಎಂದು ಹೇಳಿದವರು. ಮನುಷ್ಯನ ಸೌಂದರ್ಯಕ್ಕೆ ಒತ್ತುಕೊಟ್ಟವರು. ಗಡ್ಡ ಆಧ್ಯಾತ್ಮದ ಸಂಕೇತ. ಅದು ಮನುಷ್ಯನ ಮುಖದಲ್ಲಿ ಆಧ್ಯಾತ್ಮದ ಬೆಳಕನ್ನು ಚಿಮ್ಮಿಸಬೇಕು. ನನ್ನ ಸಲಫಿ ಗೆಳೆಯನಿದ್ದ ಅವನಿಗೆ ಗಲ್ಲದಲ್ಲಿ ಆದಾಗಷ್ಟೇ ನಾಲ್ಕೈದು ಕೂದಲುಗಳಷ್ಟೇ ಮೂಡಿತ್ತು. ಅದನ್ನು ವಿಕಾರವಾಗಿ ನೇತಾಡಿಸಿಕೊಂಡು ಓಡಾಡುತ್ತಿದ್ದ. ನಾನೊಮ್ಮೆ "ಅದನ್ನು ಸ್ವಲ್ಪ ಟ್ರಿಮ್ ಮಾಡಿಸು. ಇನ್ನಷ್ಟು ಸುಂದರವಾಗಿ ಕಾಣುತ್ತೀಯ" ಅಂದೆ.

"ಇಲ್ಲ. ಗಡ್ಡದಲ್ಲಿ ಮಲಾಯಿಕ್‌ಗಳು ನೇತಾಡುತ್ತಾರಂತೆ... ಪ್ರವಾದಿಯವರು ಹೇಳಿದ್ದಾರೆ..." ಅಂತ ಅವನಂದ.


ಇಸ್ಲಾಮ್‌ನಲ್ಲಿ ಯಾವುದೇ ಆಚರಣೆಗಳಿಗೂ ಲೌಕಿಕ ಕಾರಣವೊಂದು ಇರುತ್ತದೆ. ಇದೇ ಸಲಫಿಗಳು ತಮ್ಮ ಪ್ಯಾಂಟನ್ನು ಮೊಣಕಾಲುವರೆಗೆ ಮಾತ್ರ ಬಿಡುತ್ತಾರೆ. ಬಟ್ಟೆಯನ್ನು ನೆಲ ತಾಗುವಂತೆ ಬಿಡುವುದನ್ನು ಪ್ರವಾದಿಯವರು ದ್ವೇಷಿಸಿದ್ದರು. ಅದು ದುರಹಂಕಾರದ, ಅಶುಚಿತ್ವದ ಸಂಕೇತ ಎಂದೂ ಹೇಳಿದ್ದರು. ಲೌಕಿಕ ಕಾರಣವಿಲ್ಲದ ಯಾವ ಆಚರಣೆಯೂ ಇಸ್ಲಾಮ್ ಧರ್ಮದಲ್ಲಿಲ್ಲ.

"ಸುಂದರವಾಗಿ ಕಾಣುವುದು ಪ್ರವಾದಿಯವರ ಆಗ್ರಹವಾಗಿತ್ತು, ನೀನು ಗಡ್ಡ ತೆಗೆದರೆ ಗಡ್ಡದಲ್ಲಿ ನೇತಾಡುವ ಮಲಾಯಿಕ್‌ಗಳೇನು ನೆಲೆಯಿಲ್ಲದೆ ಮರದಲ್ಲಿ ನೇತಾಡುವ ಪ್ರಸಂಗ ಬರುವುದಿಲ್ಲ. ಗಡ್ಡವನ್ನು ಚೆಂದ ಬಾಚಿ, ಟ್ರಿಮ್ ಮಾಡು" ಎಂದು ಸಲಫಿ ಹುಡುಗನಿಗೆ ಸಲಹೆ ನೀಡಿದ್ದೆ. ಆದರೆ ಅವ ನನಗೇ ಗಡ್ಡ ಬಿಡಲು ಪ್ರತಿ ಸಲಹೆ ಕೊಟ್ಟಿದ್ದ.

ಪ್ರಗತಿಪರರು ಸೇರಿದಂತೆ ಕೆಲವು ಮಹಿಳಾವಾದಿಗ "ಮುಸ್ಲಿಮ್ ಮಹಿಳೆಯರಿಗೆ ಮಸೀದಿ ಪ್ರವೇಶಿಸ ಅವಕಾಶ ನೀಡಬೇಕು" ಎಂದು ಹೇಳಿಕೆ ನೀಡುತ್ತಿದ್ದಾ ಆದರೆ ಇದೇ ಸಂದರ್ಭದಲ್ಲಿ ಆದಕ್ಕೆ ಪ್ರೋತ್ಸಾಹ ನೀಡು ಜಮಾತೆ ಇಸ್ಲಾಮಿ ಮತ್ತು ಸಲಫಿ ಮೂವ್‌ಮೆಂಟ್‌ಗಳ ಮೂಲಭೂತವಾದಿಗಳು ಎಂದೂ ಕರೆಯುತ್ತಾರೆ. ಇ ನಿಜಕ್ಕೂ ನಮ್ಮ ಮುಂದಿರುವ ಬಿಕ್ಕಟ್ಟು. ಈ ಬಿಕ್ಕಟ್ಟಿನಿಂ ಪಾರಾಗಲು ನಾನು ಆರಿಸಿದ್ದು ಒಂದೇ. ನಾನೇ ಮಸೀದಿ ಹೋಗುವುದು ಅಪರೂಪವಾಗಿರುವಾಗ ಇನ್ನು ಮುಸ್ಲಿ ಮಹಿಳೆಯರ ಮಸೀದಿ ಪ್ರವೇಶದ ಕುರಿತಂತೆ ಆಗ್ರಹಿಸುವು ಅಪ್ರಸ್ತುತ. ಆದರೆ ಮುಸ್ಲಿಮ್ ಮಹಿಳೆಯರು ಹೆ ಹೆಚ್ಚು ಶಾಲೆ, ಕಾಲೇಜುಗಳಿಗೆ ತೆರಳಬೇಕು, ಅದಕ್ಕೆ ಅವಕಾ ನೀಡಬೇಕು ಎನ್ನುವುದು ನನ್ನ ಆಗ್ರಹ.

ಇತ್ತೀಚೆಗೆ ಮುಸ್ಲಿಮ್ ಮಹಿಳೆಯರು ವ್ಯಾಪಕವ ಕಾಲೇಜು ಮೆಟ್ಟಿಲುಗಳನ್ನು ಹತ್ತುತ್ತಿದ್ದಾರೆ. ಇಂಜಿನಿಯ ಡಾಕ್ಟರ್‌ಗಳಾಗಿ ದುಡಿಯುತ್ತಿದ್ದಾರೆ. ಇದು ಮುಸ್ಲಿ ಸಮುದಾಯಕ್ಕೆ ತುಂಬಾ ಸಂತೋಷ ತರುವ ವಿಚಾ ಪಿಯುಸಿ, ಎಸ್ಸೆಸ್ಸೆಲ್ಸಿ ಫಲಿತಾಂಶದಲ್ಲಿ ಅತ್ಯಧಿಕ ಅಂಕಗಳ ಪಡೆದ ಮುಸ್ಲಿಮ್ ಬಾಲಕಿಯರ ಫೋಟೋಗಳು ಪತ್ರಿಕೆ ಸಂಪಾದಕೀಯ ವಿಭಾಗಗಳಲ್ಲಿ ರಾಶಿರಾಶಿಯಾಗಿ ಬೀಳುತ್ತಿರುವುದು ನೋಡುವಾಗ ಎದೆ ತುಂಬುತ್ತ ದುರದೃಷ್ಟಕ್ಕೆ, ಮಸೀದಿ ಪ್ರವೇಶ ಪಕ್ಕಕ್ಕಿರಲಿ, ಮುಸ್ಲಿ ಮಹಿಳೆಯರಿಗೆ ಶಾಲೆಗಳಿಗೆ ಪ್ರವೇಶ ನೀಡಲು ನಾ ಬೀದಿಗಿಳಿಯುವ ಪರಿಸ್ಥಿತಿ ನಿರ್ಮಾಣವಾಗಿದೆ. ಒಂ ಕಾಲದಲ್ಲಿ ಮುಸ್ಲಿಮ್ ಮಹಿಳೆ ಶಾಲೆ ಮೆಟ್ಟಿಲು ಹತ್ತುವು ಕಷ್ಟಕರವಾಗಿತ್ತು. ಇಂದು ಆದಕ್ಕೆ ಭಿನ್ನವಾಗಿ ಮಹಿಳೆಯ ಆಸಕ್ತಿಯಿಂದ ಶಾಲೆಯ ಮೆಟ್ಟಿಲನ್ನು ತುಳಿಯುವಾಗ, ಸ್ಕಾ ಹಾಕಿದರೆ ಪ್ರವೇಶವಿಲ್ಲ ಎಂದು ಅವರನ್ನು ತಡೆಯು ಪ್ರಯತ್ನ ನಡೆಯುತ್ತಿದೆ.

ಮನೆಯಲ್ಲಿ ತಂದೆ ತಾಯಿಗಳನ್ನು ಒಲಿಸಿ, ಮುಸ್ಲಿ ಬಾಲಕಿಯರು ಶಾಲೆಗೆ ಬಂದರೆ, ಅಲ್ಲಿ "ನೀನು ಸ್ಕಾ ಹಾಕಿದರೆ ಶಾಲೆಗೆ ಪ್ರವೇಶವಿಲ್ಲ" ಎಂದು ವಿದ್ಯಾವಂತರೆ ಕೊಂಡವರೇ ತಡೆಯುವುದು ಅಮಾನವೀಯ, ಕ್ರೌಯ ಮಸೀದಿಯ ಪ್ರವೇಶಕ್ಕಿಂತಲೂ ಶಾಲೆಯ ಪ್ರವೇಶ ಬ ಮುಖ್ಯ. ಆದರೆ ವಿದ್ಯಾವಂತರೆನಿಸಿಕೊಂಡವರೇ ಇ ತಡೆಯಾಗಿರುವಾಗ ಮಸೀದಿಯ ಪ್ರವೇಶದ ಬಗ್ಗೆ ನಾ ಬೊಬ್ಬೆ ಹೊಡೆಯುವುದರಲ್ಲಿ ಯಾವ ಅರ್ಥವಿದೆ? ಶಿಕ್ಷ ಪೂರಕವಾಗಿ ಯುನಿಫಾರ್ಮ್ ಹೊರತು, ಯುನಿಫಾರ್ಮ್ ಗಾಗಿ ಶಿಕ್ಷಣವಲ್ಲ. ಯುನಿಫಾರ್ಮ್ ಬಣ್ಣದ ಸ್ಕಾರ್ಫ ತಲೆಗೆ ತೊಟ್ಟುಕೊಳ್ಳುತ್ತೇವೆ ಎಂದರೂ ಆಸ್ಪದ ನೀ ಅದೆಷ್ಟೋ ಮುಸ್ಲಿಮ್ ಬಾಲಕಿಯರನ್ನು ಕರಾವಳಿಯ ಶಾಲೆಯಿಂದ ಹೊರ ಹಾಕಿದರಲ್ಲ, ಅದು ಇಂದಿನ ನಿಜವಾ ಸಮಸ್ಯೆ. ಮುಸ್ಲಿಮರು ಮಾತ್ರವಲ್ಲ, ಇಡೀ ಸಮಾಜ ಇ ಇದರ ವಿರುದ್ಧ ಧ್ವನಿಯೆತ್ತಬೇಕು. ಮುಸ್ಲಿ ವಿದ್ಯಾರ್ಥಿನಿಯರ ಶಾಲಾ ಕಲಿಕೆಯ ಪರ ನಿಲ್ಲಬೇಕು. ಈ ಬಗ್ಗೆ ಮಾಧ್ಯಮಗಳು ಹ ಒತ್ತುಕೊಟ್ಟು ಚರ್ಚಿಗಿಳಿಯ ಬೇಕಾ ಮುಸ್ಲಿಮ್ ಮಹಿಳೆಯರನ್ನೂ, ಸಮಾಜವ ದೇಶವನ್ನು ಒಟ್ಟಾಗಿ ಮೇಲೆತ್ತಬೇಕಾಗಿದೆ



● ಬಿ.ಎಂ.ಬಷೀ

ಓದುಗರಲ್ಲಿ ಕ್ಷಮೆ ಯಾಚಿಸುತ್ತಾ...

ಕಳೆದ ಸಂಚಿಕೆಯಲ್ಲಿ ಪ್ರಕಟವಾದ ಬಿ.ಎಂ. ಬಷೀರ್‌ರವರ 'ಮುಸ್ಲಿಂ ಮಹಿಳೆ ಮಸೀದಿ- ಶಾಲೆ ಪ್ರವೇಶದ ಸವಾಲುಗಳು' ಎಂಬ ಲೇಖನದಲ್ಲಿ ಸೂಫಿ ಹಾಗೂ ಸಲಫಿಗಳ ಕುರಿತ ಉಲ್ಲೇಖಗಳಿದ್ದವು. ಆದರೆ ಅಕಸ್ಮಾತ್ತಾಗಿ 'ಸಲಫಿ' ಎಂದಿರಬೇಕಿದ್ದ ಕೆಲವೆಡೆ 'ಸೂಫಿ' ಎಂದು ಬದಲಾಗಿದೆ. ಇದು ತಪ್ಪು ಅರ್ಥಕ್ಕೆ ಅವಕಾಶ ನೀಡುವಂತಿದೆ. ಹಾಗಾಗಿ ಈ ತಪ್ಪನ್ನು ಸರಿಪಡಿಸಿ ಇಡೀ ಲೇಖನವನ್ನು ಇಲ್ಲಿ ಪುನರ್ ಮುದ್ರಿಸಲಾಗಿದೆ... - ಸಂ

ಮಹಿಳೆಯರಿಗೆ ಮಸೀದಿಗೆ ಪ್ರವೇಶ ಇರಬೇಕು

ಮುಸ್ಲಿಂ ಮಹಿಳೆಯರು ಪ್ರಾರ್ಥನೆ ಮಾಡಲು ಮಸೀದಿಗೆ ತಮಗೂ ಪ್ರವೇಶವಿರಬೇಕೆಂದು ಒತ್ತಾಯಿಸುತ್ತಿರುವ ವಿಷಯದಲ್ಲಿ ಬಿ.ಎಂ.ಬಷೀರ್ ಅವರು ಹೇಳಿದ ಮಾತು ಒಂದು ದೃಷ್ಟಿಯಿಂದ ಸರಿಯೇ. ಈಗ ಎಲ್ಲರಿಗೂ, ಅದರಲ್ಲಿಯೂ ಮಹಿಳೆಯರಿಗೆ, ಬೇಕಾಗಿರುವುದು ಶಿಕ್ಷಣ. ಮಸೀದಿಗೋ, ದೇವಸ್ಥಾನಕ್ಕೋ, ಚರ್ಚಿಗೋ ಹೋಗದಿದ್ದರೂ ಪರವಾಗಿಲ್ಲ. ಆದರೂ ಮಸೀದಿಯಂಥಾ ಸಾರ್ವಜನಿಕ ಪ್ರವೇಶಕ್ಕೆ ಮಹಿಳೆಯರೆಂಬ ಕಾರಣಕ್ಕೆ ಪ್ರವೇಶವನ್ನು ನಿಷೇಧಿಸುವುದು ಎಷ್ಟು ಸರಿ? ಹಾಸನದ ಈ ವಿದ್ಯಮಾನ ದಲಿತರು ದೇವಾಲಯ ಪ್ರವೇಶಕ್ಕಾಗಿ ನಡೆಸಿದ, ನಡೆಸುತ್ತಿರುವ ಹೋರಾಟವನ್ನು ನೆನಪಿಗೆ ತರುತ್ತದೆ. ಅವರಿಗೂ ದೇವಾಲಯ ಪ್ರವೇಶದಿಂದ ಆಗ ಬೇಕಾದ್ದೇನೂ ಇರಲಿಲ್ಲ, ಇಲ್ಲ. ಆದರೂ, ಒಂದು ಮೂಲಭೂತ ಹಕ್ಕಾಗಿ ದೇವಾಲಯಕ್ಕೆ ಪ್ರವೇಶವನ್ನು ಪಡೆಯಲು ಅವರು ಹೋರಾಡಿದರು. ಆ ಹೋರಾಟ ಕೆಲವು ಕಡೆ ಈಗಲೂ ನಡೆಯುತ್ತಿದೆ. ಆದರಿಂದಾಗಿಯೇ ಘರ್ಷಣೆಗಳೂ, ಸಾಮಾಜಿಕ ಬಹಿಷ್ಕಾರಗಳೂ ಇಂದಿಗೂ ವರದಿಯಾಗುತ್ತಿವೆ.

ಮುಸ್ಲಿಂ ಮಹಿಳೆಯರು ಮಸೀದಿಗೆ ಹೋಗುವುದನ್ನು ಬೆಂಬಲಿಸುವವರು ಮತ್ತು ವಿರೋಧಿಸುವವರು - ಈ ಇಬ್ಬರಲ್ಲಿ ಮೂಲಭೂತವಾದಿಗಳು ಯಾರು ಎನ್ನುವುದು ಗೊಂದಲಕಾರಿಯಾಗಿಯೇ ಇದೆ. ಇತ್ತೀಚೆಗೆ ಒಂದು ಕನ್ನಡ ವಾಹಿನಿಯಲ್ಲಿ ನಡೆದ ಚರ್ಚೆಯಲ್ಲಿ ಭಾಗವಹಿಸಿದವರು ಕುರಾನ್ ಮತ್ತು ಪರಂಪರೆಗಳ ಆಧಾರದಲ್ಲಿಯೇ ಮಹಿಳೆಯರ ಮಸೀದಿ ಪ್ರವೇಶವನ್ನು ವಿರೋಧಿಸಿದರು. ಅವರ ಮಾತು ಮೂಲಭೂತವಾದವನ್ನೇ ಧ್ವನಿಸುತ್ತಿತ್ತು. ಈಗ ಬಷೀರ್ ಅವರು ಮಹಿಳೆಯರನ್ನು ಈ ವಿಷಯದಲ್ಲಿ ಬೆಂಬಲಿಸುವವರೂ ಮೂಲಭೂತವಾದಿಗಳೇ ಎಂದಿದ್ದಾರೆ. ಹಾಗಾದರೆ ಇಲ್ಲಿ ಪ್ರಗತಿಪರರು ಯಾರು, ಮೂಲಭೂತವಾದಿಗಳು ಯಾರು?

ಯಾವುದೇ ಧಾರ್ಮಿಕ ಗ್ರಂಥವಾಗಲಿ, ವೇದ, ಬೈಬಲ್, ಕುರಾನ್, ಯಾವುದೇ ಆಗಲಿ ಒಂದು ನಿರ್ದಿಷ್ಟ ಕಾಲಘಟ್ಟದಲ್ಲಿ ಆ ಸಮಯದ ಅವಶ್ಯಕತೆಗಳನ್ನು ಪೂರೈಸುವ ಸಲುವಾಗಿ ಅಂದಿನ ಸಮಾಜದ ಜನ ಅಥವಾ ಆ ಸಮಾಜದ ಕೆಲವರು ಬರೆದುಕೊಳ್ಳುವ ಕೃತಿ. ಈ ಮಾತನ್ನು ಆ ಗ್ರಂಥಗಳೆಲ್ಲವೂ ದೈವ ಸೃಷ್ಟಿಯೇ ಎಂದು ನಂಬುವವರಿಗೆ ಹಿಡಿಸದಿರಬಹುದು. ಆ ಅದೇ ವಾಸ್ತವ ಎಂಬುದು ವೈಚಾರಿಕವಾಗಿ ಯೋಚಿಸುವ ಯಾರೇ ಆ ಒಪ್ಪುವ ಮಾತು. ಹೀಗಿರಬೇಕಾದರೆ, ಇಂದಿನ ಸಂದರ್ಭದಲ್ಲಿ ಏಳುವ ಪ್ರಶ್ನೆ ಉತ್ತರಗಳಿಗಾಗಿ ಮತ್ತೆ ಆ ಗ್ರಂಥಗಳಲ್ಲಿ ಹುಡುಕುವುದು ಎಷ್ಟು ಸರಿ? ಧೋರಣೆಯೇ ನಿಧಾನವಾಗಿ ಮೂಲಭೂತವಾದಕ್ಕೆ ದಾರಿಮಾಡಿಕೊಡುವು ಆ ಗ್ರಂಥಗಳು ಎಷ್ಟೇ ಶ್ರೇಷ್ಠವಾದುವೇ ಆಗಿದ್ದರೂ ಅವುಗಳಲ್ಲಿ ಸಾರ್ವಕಾ ಸತ್ಯ ಅಡಗಿದೆ ಎನ್ನುವುದು ಅತಿರೇಕದ ಮಾತಾಗುತ್ತದೆ.

ಸದ್ಯದ ಈ ಸಮಸ್ಯೆಯ ಬಗ್ಗೆ ಎಲ್ಲ ಪ್ರಗತಿಪರರೂ, ಮುಸ್ಲಿಮರ ಒಳಗೊಂಡಂತೆ, ಸರಿಯಾದ ರೀತಿಯಲ್ಲಿ ಯೋಚಿಸಿ ತೀರ್ಮಾನಕ್ಕೆ ಬರಬೇ ವಿಷಯ. ನಮಗೆ ನಂಬಿಕೆ ಇದೆಯೋ ಇಲ್ಲವೋ (ನನಗಂತೂ ಇಲ್ಲ) ನಂ ಇರುವವರು ಒಂದು ನಿರ್ದಿಷ್ಟ ಜಾಗದಲ್ಲಿ ಪ್ರಾರ್ಥನೆ ಸಲ್ಲಿಸುತ್ತೇವೆ ಅದನ್ನು ವಿರೋಧಿಸುವುದು ಅವರ ಹಕ್ಕನ್ನು ಮೊಟಕುಗೊಳಿಸಿದಂತೆ ಅಲ್ಲವೇ?

- ನಗರಗೆರೆ ರಮೇಶ್, ಬೆಂಗಳೂ

ಹುಬ್ಬಳ್ಳಿ : ಗುರುಸಿದ್ದೇಶ್ವರ ಬ್ಯಾಂಕ್ ಹರ-ಹರಾ!

ಹುಬ್ಬಳ್ಳಿಯ ಪ್ರತಿಷ್ಠಿತ ಸಹಕಾರಿ ...ಗಳಲ್ಲಿ ಒಂದಾದ ಗುರು ಸಿದ್ದೇಶ್ವರ ಬ್ಯಾಂಕ್‌ನ ...ಕೋಟಿ ರೂ. ಗುಳುಂ ಕಹಾನಿ ಹೊರಬಿದ್ದಿದೆ.

...ಬ್ಯಾಂಕ್‌ನ ಕಬ್ಬಾದಾರರು ಬರೋಬ್ಬರಿ 5 ... 30 ಲಕ್ಷ ರೂಪಾಯಿಗಳನ್ನು ನುಂಗಿರುವುದು ...ತನಿಖೆಯಿಂದ ಬಹಿರಂಗವಾಗಿದೆ. ಇಷ್ಟೆಲ್ಲಾ ...ನುವುದು ಕೃಷಿ ಸಾಲಮನ್ನಾ ಹೆಸರಿನಲ್ಲಿ. ...ಬರ ಕಾರಣಕ್ಕೆ ರೈತರ ಸಾಲಮನ್ನಾ ...ವುದಾಗಿ ಸರ್ಕಾರ ಘೋಷಿಸಿದ ಬೆನ್ನಲ್ಲೇ ಈ ...ನ ಆಡಳಿತ ಮಂಡಳಿಯವರು ತಮ್ಮ ...ನ್ನು ನೀಗಿಸಿಕೊಳ್ಳಲು ಸ್ಕೆಚ್ ಹಾಕಿಬಿಟ್ಟರು. ...ಬಂಧು-ಮಿತ್ರರ ಹೆಸರಿನಲ್ಲೇ ನಕಲಿ ದಾಖಲೆ ... ಸರ್ಕಾರದ ಹಣವನ್ನು ಗುಳುಂ ...ಬಿಟ್ಟರು.

...ದರೆ ಇವರ ಗ್ರಹಚಾರ ಕೆಟ್ಟಿದ್ದರಿಂದ ನುಂಗಿದ ...ಗಂಟಲಲ್ಲೇ ಸಿಕ್ಕಿಬಿದ್ದಿದೆ. ಬ್ಯಾಂಕ್‌ನ ...ರಿಗಳು ಮತ್ತು ಆಡಳಿತ ಮಂಡಳಿ ಸದಸ್ಯರ ... ಕ್ರಿಮಿನಲ್ ಮೊಕದ್ದಮೆ ದಾಖಲಿಸುವಂತೆ ...ಸಹಕಾರ ಸಂಘಗಳ ನಿಬಂಧಕರು ಆಯಾ ಜಿಲ್ಲಾ ...ಬಂಧಕರಿಗೆ ಆದೇಶಿಸಿದ್ದಾರೆ.

...ಬ್ಬಳ್ಳಿಯ ಗುರುಸಿದ್ದೇಶ್ವರ ಸಹಕಾರ ಬ್ಯಾಂಕ್‌ನ ... ಮಂಡಳಿಯವರು 'ನಾವೆಲ್ಲಾ ಪವರ್‌ಫುಲ್ ...ದರು, ನಮ್ಮನ್ನು ಯಾರೂ ಏನೂ ...ವಾಗದು' ಎನ್ನುವ ಅಹಂನಿಂದ ಮೆರೆಯಲು ... ಮುಖ್ಯಮಂತ್ರಿ ಜಗದೀಶ್ ಶೆಟ್ಟರ ...ರ್ಶಾದವೇ ಕಾರಣ. ಬ್ಯಾಂಕ್‌ನ ಅಧ್ಯಕ್ಷ ಹಾಗೂ ... ಸಂಸ್ಥೆಯ ನಿರ್ದೇಶಕ ಶಂಕರಣ್ಣ ಮುನವಳ್ಳಿ, ...ಧ್ಯಕ್ಷ ಸಿ.ಬಿ. ಪಾಟೀಲ, ಡೈರೆಕ್ಟರುಗಳಾದ ವಿ.ಬಿ. ..., ಎಫ್.ಸಿ. ಭೂಪದ, ಓ.ವಿ. ಗದಗ, ...ನಂದ ಹೊಸಕೋಟಿ, ಎಫ್.ಬಿ. ಬೀರವಳ್ಳಿ, ...ಶ ತೆಂಗಿನಕಾಯಿ, ಬಾಲ ವಿಕಾಸ ಅಕಾಡಮಿಯ ...ಅಧ್ಯಕ್ಷ, ಹು-ಧಾ ಮಹಾನಗರ ಬಿಜೆಪಿ ಅಧ್ಯಕ್ಷ ... ಪಾಟೀಲ, ಬಿ.ಕೆ. ಕುರುಡಗಿ ಮಠ, ಪಿ.ಎಚ್. ... ಎಂ.ಆರ್. ಜಾಧವ, ಜೊತೆಗೆ ಬ್ಯಾಂಕ್‌ನ ... ಮ್ಯಾನೇಜರ್ ಪ್ರೇಮಾನಂದ ಕೆರೊಡಿ, ...ಬು ಸಲಹೆಗಾರ ಚೆನ್ನಪ್ಪ ಝುಳಕಿ ಒಳಗೊಂಡಂತೆ ... 15 ಮಂದಿ ಅಲಿಬಾಬಾ ತಂಡ ಈಗ ...ಹ್ಯಾಂಡ್ ಆಗಿ ಸಿಕ್ಕಿಬಿದ್ದಿದೆ.

...ಇಲ್ಲುಂಡ ಆರೋಪಿಗಳ ವಿರುದ್ಧ ಸರಕಾರಕ್ಕೆ ಮೋಸ ... ವಂಚನೆ ಆರೋಪ ಐಪಿಸಿ ಸೆಕ್ಷನ್ 34, 409, ...468 ಹಾಗೂ 471 ಅಡಿಯಲ್ಲಿ ಹುಬ್ಬಳ್ಳಿಯ ಸಬರಬನ್ ಪೊಲೀಸ್ ಠಾಣೆಯಲ್ಲಿ ಧಾರವಾಡ ಜಿಲ್ಲಾ ಸಹಕಾರ ಬ್ಯಾಂಕ್‌ಗಳ ಉಪ ನಿಬಂಧಕ ಎಂ.ಪಿ. ಶೆಲ್ಲಿಕೇರಿ (Cr.No. 213/2013) ಎಫ್‌ಐಆರ್ ದಾಖಲಿಸಿದ್ದಾರೆ. ಇದು ಶಿಸ್ತಿನ ಪಕ್ಷ ಬಿಜೆಪಿಯ ಜಗದೀಶ ಶೆಟ್ಟರನ ಶಿಷ್ಯ ಕೋಟಿಯ ಕೃಷಿ ಸಾಲಮನ್ನಾ ಎಂಬ ಗುಳುಂ ವ್ಯವಹಾರ.


ವಿಜಯಾನಂದ ಹೊಸಕೋಟಿ


ಮಹೇಶ್ ತೆಂಗಿನಕಾಯಿ


ಶಂಕರಣ್ಣ ಮುನವಳ್ಳಿ



ಈ ಬ್ಯಾಂಕನ್ನು ನಂಬಿ ಹಣ ಹಾಕಿದ್ದವರು ಮುಂದೇನು ಕಾದಿದೆಯೋ ಎಂಬ ಆತಂಕದಲ್ಲಿ 'ಹರ ಹರಾ... ಗುರು ಸಿದ್ದೇಶ್ವರಾ' ಅಂತಾ ಧ್ಯಾನ ಮಗ್ನರಾಗಿದ್ದಾರೆಂಬುದು ಲೇಟೆಸ್ಟ್ ಸುದ್ದಿ.


ನಡೆದದ್ದೇನು?

2008ರಲ್ಲಿ ಕೇಂದ್ರ ಸರಕಾರ ಸಾಲ ಮನ್ನಾ ಯೋಜನೆ ರೂಪಿಸಿತು. ಇದೇ ಸದವಕಾಶವೆಂದು ಮುನವಳ್ಳಿ ಗ್ಯಾಂಗ್ ಪಟ್ಟಿಯೊಂದನ್ನು ತಯಾರಿಸಿ ಸಹಕಾರಿ ಇಲಾಖೆಗೆ ಕಳಿಸಿತು. ಆಗ ಬಿಜೆಪಿ ಸರಕಾರದಲ್ಲಿ ಜಗದೀಶ ಶೆಟ್ಟರ್ ಮಂತ್ರಿಯಾಗಿದ್ದರು. 2009ರಲ್ಲಿ ಕೇಂದ್ರ ಸರಕಾರದ ರೈತರ ಕೃಷಿ ಸಾಲಮನ್ನಾ ಹಾಗೂ ಕೃಷಿ ಸಾಲ ಪರಿಹಾರ ಹಂಚಿಕೆಗೆಂದು ಗುರು ಸಿದ್ದೇಶ್ವರ ಬ್ಯಾಂಕ್‌ಗೆ 5.30 ಕೋಟಿ ರೂಪಾಯಿ ಬಿಡುಗಡೆಗೊಳಿಸಿತು. ಹಣ ಬಿಡುಗಡೆ ಮಾಡಿಸುವಲ್ಲಿ ಶೆಟ್ಟರ್ ಸಾಕಷ್ಟು ಬೆವರು ಸುರಿಸಿದರೆಂಬ ಸುದ್ದಿಯಿದೆ. ಅದರ ಫಲವಾಗಿ ಬ್ಯಾಂಕಿನಲ್ಲಿದ್ದ ದಾಖಲೆಗಳನ್ನೇ ತಿದ್ದುಪಡಿ ಮಾಡಿ ಕೃಷಿ ಸಾಲ ಪಡೆಯದೇ ಬೇರೆ ವ್ಯಾಪಾರ ವಹಿವಾಟಗಾಗಿ ಪಡೆದ ಸಾಲವನ್ನೇ ತಿದ್ದಿ ಆಡಳಿತ ಮಂಡಳಿ ಸದಸ್ಯರುಗಳು ತಮ್ಮವರ ಪಾಲಿಗ ಸಾಲಕ್ಕೆ ಜಮಾ ಮಾಡಿ, ಖೊಟ್ಟಿ ದಾಖಲೆಗಳನ್ನ ಸೃಷ್ಟಿಸಿದರು. ಹೀಗೆ ರಾತ್ರಿ ಬೆಳಗಾಗುವದರೊಳಗೆ ರೈತರಾದ ಸದಸ್ಯರ ಸಂಖ್ಯೆ ಬರೋಬ್ಬರಿ 1,390! ಎಲ್ಲಾ ಗುರುಸಿದ್ದೇಶ್ವರನ ಮಹಿಮೆ!

ಗುರುಸಿದ್ದೇಶ್ವರ ಬ್ಯಾಂಕ್‌ನಲ್ಲಿ ಬಹುತೇಕ ಸದಸ್ಯರು ವ್ಯಾಪಾರಿಗಳು ಹಾಗೂ ಸರಕಾರಿ ನೌಕರರು, ಬ್ಯಾಂಕ್ ಮಂಡಳಿ ಸದಸ್ಯರನ್ನು ಒಳಗೊಂಡಂತೆ ಹಲವರು ಕೃಷಿ ಭೂಮಿ ಹೊಂದಿದ್ದರು. ಹೆಚ್ಚು ಕಡಿಮೆ ಇದೊಂದು ವ್ಯಾಪಾರಸ್ಥರ ಬ್ಯಾಂಕ್. ಅಕ್ಕ ಹೊಂಡದ ವ್ಯಾಪಾರಸ್ಥರಲ್ಲಿ ಅನೇಕರು ಈ ಬ್ಯಾಂಕಿನ ಸದಸ್ಯರು. ಇವರು ಮನೆ ಹಾಗು ಹೊಲದ ಉತಾರಗಳನ್ನು ಇಟ್ಟು ಲಕ್ಷಾಂತರ ರೂಪಾಯಿ ಗಳನ್ನು ಸಾಲ ಪಡೆದಿದ್ದಾರೆ. ಅದು ತಮ್ಮ ವ್ಯಾಪಾರಕ್ಕಾಗಿಯೇ ಹೊರತು ಕೃಷಿಗಾಗಿ ಅಲ್ಲವೇ ಅಲ್ಲ. ಹೀಗಾಗಿ ಕೇಂದ್ರ ಸರಕಾರದ ಕೃಷಿ ಸಾಲ ಮನ್ನಾ ಯೋಜನೆಯ ಲಾಭ ಪಡೆಯಲು ಈ ಬ್ಯಾಂಕಿಗೆ ಅಂತಹ ಅರ್ಹತೆ ಇರಲಿಲ್ಲ. ಹೀಗಿದ್ದರೂ 2009ರಲ್ಲಿ 5.30 ಕೋಟಿ ರೂಪಾಯಿ ಪರಿಹಾರದ ಹಣ ಪಡೆಯಬೇಕಾದರೆ ಜಗದೀಶ ಶೆಟ್ಟರ್ ಕೈವಾಡದ ಹೊರತು ಬೇರೆ ಕಾರಣಗಳೇನಿಲ್ಲ.

ಅಲ್ಲದೇ ಶಂಕರಣ್ಣ ಮುನವಳ್ಳಿ ಗ್ಯಾಂಗ್ 2009-10ನೇ ಸಾಲಿನ ಜಮಾ-ಖರ್ಚು ದಾಖಲೆಗಳಲ್ಲಿ ಹೊಂದಾಣಿಕೆ ಮಾಡಿ ಮತ್ತೊಂದು ಪವಾಡ ಮಾಡಿದ್ದಾರೆ. ಆದರೆ ಮಾಡಿದ ತಪ್ಪನ್ನು ಮುಚ್ಚಿ ತಿಪ್ಪೆ ಸಾರಿಸಲು 2008-09ರಿಂದ 2010-11ರ ನಡುವಿನ ಮೂರು ವರ್ಷದಲ್ಲಿ 3 ಬಾರಿ ರಾಜ್ಯ ಸಹಕಾರಿ ಇಲಾಖೆಯಿಂದ ಬ್ಯಾಂಕಿನ ಆಡಿಟ್ ಆಗಿದೆ. 'ಆಗ ಇಲ್ಲದ ತಪ್ಪು ಈಗ ಎಲ್ಲಿಂದ ಬಂತು?' ಎನ್ನುತ್ತಾ ತಿರುಗುವ ಮುನವಳ್ಳಿ ಒಂದು ವಿಷಯ ತಿಳಿದುಕೊಂಡರೆ ಒಳ್ಳೆಯದು. ಆಗ ಶೆಟ್ಟರ್ ಮಂತ್ರಿಯಾಗಿ, ಕೊನೆಗೆ ಮುಖ್ಯಮಂತ್ರಿಯೂ ಆಗಿದ್ದರಿಂದ ಇವರೆಲ್ಲಾ ಪವರ್‌ಫುಲ್ ಆಗಿದ್ದರು. ಈಗ ಪವರ್ ಕಟ್ ಆಗಿದೆ. ಕಾನೂನಿನ ಕುಣಿಕೆ ಸರಿಯಾಗಿ ಬಿದ್ದರೆ ಇವರ ಜೈಲಿನ ದಾರಿಯೂ ಸಮೀಪಿಸುತ್ತದೆ.

● ಹುಬ್ಬಳ್ಳಿಯಾಂವ



ಕ್ಯಾಲೆಂಡರ್ ತಿರುಗಿಸುವಾಗ ಬೇಜಾರಾಗುತ್ತೆ ಅಲ್ವಾ?

...ಷ್ಟ ಸಿಎಂ ಆದಮೇಲೆ ಧಾರಾಕಾರವಾಗಿ ಮಳೆ ...ರೀತಿದೆಯಲ್ಲ!

ಅಣ್ಣಪ್ಪ, ಬೆಂಗಳೂರು

- ...ರೆ ಸಿದ್ದುಗೆ ಟೀಕೆಯ ಸುರಿಮಳೆ ಬಗ್ಗೆ ...ಚಿಂತೆಯಾಗಿದೆ.

☛ ...ಯೂರಪ್ಪ ಬಿಜೆಪಿಯನ್ನು ಪುನರ್ ವಿವಾಹ ...ತ್ತಾರಾ?

ಶರೀಫ್, ಕುಕ್ಕುಂಜೆ ಮಂಗಳೂರು

- ...ಕಿಗಷ್ಟೇ ಅವಕಾಶ ಸಿಗುವಂತಿದೆ.

☛ ...ಸ್ಟಿಸ್ಟ್‌ಗಳಿಗೂ ಸೋಷಲಿಸ್ಟ್‌ಗಳಿಗೂ ಏನು ...?

ಬಿ. ಬಸವರಾಜ್, ಧಾರವಾಡ

- ...ಸಿ ಕಾಡಿಸಲೂ ಇವರು ಬಾರಿಸಲೂ ಇರುತ್ತಾರೆ.

☛ ...ಶ್ ರಾಜನ್ ಸಿಎಂ ಕುರ್ಚಿಯಲ್ಲಿ ಇದ್ದು ಎಚ್‌ಡಿಕೆ ...ಲ್ಲ ಇವರೆಲ್ಲಾ ಕಾಡುತ್ತಿದ್ದರೆ!

ಕೀಟಲೆ

- ಬಂದೂಕದ ಬದಲಾಗಿ ಡಂಬೂಕ ಹಿಡಿದಿರುತ್ತಿದ್ದರು.

☛ ಮನೆ ಕೆಲಸದಲ್ಲಿ ಗಂಡಸರು ಸಹಾಯ ಮಾಡೋದನ್ನ ನೋಡಿದೀರಾ?

ಸುಜಾತ, ದಾವಣಗೆರೆ

- ಯಾಕಿಲ್ಲ, ಮನೆಯಾಕೆ ಕಸ ಗುಡಿಸುವಾಗ ಕಾಲೆತ್ತಿ ಕುರ್ಚಿ ಮೇಲಿಟ್ಟುಕೊಳ್ಳುತ್ತಾರಲ್ಲ.



☛ ಬೈಕ್‌ನ ಹಿಂದೆ ಹುಡುಗಿ ಸವಾರನನ್ನು ಅಪ್ಪಿ ಕೂರುವುದೇಕೆ.

ದಿಲೀಪ್, ಕುಂದಾಪುರ

- ಪ್ರೇಕ್ಷಕರನ್ನು ರಂಜಿಸಲು.

☛ ನನ್ನವಳು ನಮ್ಮ ಪ್ರೀತಿಗೆ ಸಾಕ್ಷಿಯಾಗಿ ಏನಾದರು ಕೊಡು ಅಂತ ಪೀಡಿಸುತ್ತಿದ್ದಾಳೆ?

ಕೆಂಪರೆಡ್ಡಿ, ತುಮಕೂರು

- ಪ್ರಾಣ ಕೊಟ್ಟರೂ ಒಪ್ಪದವರಿರಬೇಕು, ಡೈವೋರ್ಸ್ ಕೊಡಲಾ ಅಂತ ಒಮ್ಮೆ ಕೇಳಿ ನೋಡು.

☛ ಯೋಗರಾಜ್ ಭಟ್ 'ಬಾರು ಗಂಡಸರ ತವರು' ಅಂತ ಹಾಡು ಬರೆದಿದ್ದಾರಲ್ಲ?

ಜಗದೀಶ್, ರಾಜಾಜಿನಗರ

- ಭಟ್ಟರ ತವರುಮನೆ ವ್ಯಾಮೋಹ ಅದು.

☛ ನೆರೆಹೊರೆಯವರನ್ನ ಪ್ರೀತಿಸು ಅಂತ ಹೇಳುತ್ತಾರಲ್ಲ ನಾನೀಗ ಹಾಗೇ ಮಾಡಲಾ?

ರಾಜೀವ್, ಹಾಸನ

- ಆಕೆ ಈಗತಾನೆ ಬಂದಿದ್ದಾಳೆ. ಸ್ವಲ್ಪ ಕಾಯಬಾರದ.

☛ ಹೆಣ್ಣನ್ನು ಭೂಮಿಗೆ ಹೋಲಿಸುತ್ತಾರಲ್ಲ, ಯಾಕೆ?

ದೊಡ್ಡಮನಿ, ಬಿಜಾಪೂರ

- ಉಪಗ್ರಹಗಳಿಂದ ಸುತ್ತುವರೆದಿರುತ್ತಾಳೆ ಅದಕ್ಕೆ.

☛ ಬೆಂಗಳೂರಲ್ಲಿ ಶಾಲೆ ಫೀಸ್‌ಗೆ ಲಕ್ಷ, ಡಾಕ್ಟರ್ ಫೀಸ್ ಸಾವಿರ ಸಾವಿರ.... ಇನ್ನೆಲ್ಲಿ ಉಳಿಗಾಲ?

ಜಯಚಂದ್ರ, ಬೆಂಗಳೂರು

- ... ಆವರ ಅನುಯಾಯಿಗಳ ವರ್ತನೆ ನೋಡಿದರೆ ಹಾಗೆನಿಸುವುದಿಲ್ಲವಲ್ಲ.


☛ ದರ್ಶನ್ ನಿಜಕ್ಕೂ ಗ್ರೇಟ್ ಸ್ಟಾರಾ?

ಯೋಗೀಶ್, ಶ್ರೀರಂಗಪಟ್ಟಣ

- ಮುಖಕ್ಕೆ ಮೆತ್ತಿಸಿಕೊಂಡ ಟಾರು ಬೇರೆ ಕತೆ ಹೇಳುತ್ತಿದೆ.

☛ ಡ್ರಿಂಕ್ಸ್‌ನಲ್ಲಿ ಅದೇನು ಅಂತಾ ಮಜಾ ಇರುತ್ತಾ?

ಕಿರಣ್, ಹುಮ್ನಾಬಾದ್



... exit index ...

ನುಡಿಗನ್ನಡಿ

-ಕಲಾವಿದ-ಚಿಂತಕರ ಸಂದರ್ಶನ

● ಶಶಿಧರ ಹೆಮ್ಮಾಡಿ

ಪ್ರಶ್ನೆ: ಫಣಿ ಸರ್, ನಿಮ್ಮ ಬಾಲ್ಯ, ಊರು, ಮನೆ ಮತ್ತು ವಿದ್ಯಾಭ್ಯಾಸದ ಬಗ್ಗೆ ಹೇಳಿ.

ಫಣಿರಾಜ್: ನಮ್ಮ ತಲೆಮಾರಿನ ಅನೇಕರಿಗೆ ಸಿಕ್ಕ ಬಾಲ್ಯಕ್ಕಿಂತ ಭಿನ್ನವಾದ ಬಾಲ್ಯವೇನೂ ನನ್ನದಲ್ಲ. ನಾನು ಹುಟ್ಟಿದ್ದು ಬಳ್ಳಾರಿ ಜಿಲ್ಲೆಯ ಕಂಪ್ಲಿಯಲ್ಲಿ. ನನ್ನ ತಂದೆ ಸರಕಾರಿ ಕೆಲಸದಲ್ಲಿದ್ದ ಕಾರಣ ಅವರು ಕರ್ನಾಟಕದಾದ್ಯಂತ ಸುತ್ತುತ್ತಾ ಇದ್ರು. ನನ್ನ ಮೂರುವರೆ ವರ್ಷಗಳ ಬಾಲ್ಯವನ್ನ ನಾನು ಹಂಗೆ ಎಲ್ಲೆಲ್ಲೊ ಕಳೆದೆ. ನಾಲ್ಕು ವರ್ಷದವನಿದ್ದಾಗ ನಾನು ಚಿಕ್ಕಮ್ಮನ ಜೊತೆಗೆ ಹರಪನಹಳ್ಳಿಯಲ್ಲಿ ಇರೋಕೆ ಶುರು ಮಾಡಿದೆ. ಎಸೆಸ್ಸೆಲ್ಸಿ ಮುಗಿಯುವವರೆಗೂ ಅಲ್ಲೇ ಇದ್ದೆ. ನೀವು ನಿಮ್ಮ ಜೀವನವನ್ನು ಎಲ್ಲಿ ಕಲಿತಿರಿ ಅದೇ ನಿಮ್ಮೂರು ಅನ್ನೋದಾದ್ರೆ ಹರಪನಹಳ್ಳಿ ನನ್ನೂರು ಅಂತೀನಿ. ನನ್ನ ಜೀವನದ ಧೋರಣೆಗಳನ್ನ ಕಟ್ಟಿಕೊಟ್ಟ ಊರು ಅದು. ಉಡುಪಿಯಲ್ಲಿ ನಾನು ಬಹಳ ಪ್ರಾಡಕ್ಟಿವ್ ವರ್ಷಗಳನ್ನ ಕಳೆದೆ. ಹಾಗಾಗಿ ಉಡುಪಿಯೂ ನನ್ನೂರು. ನನ್ನ ಹೆಸರಿನ ಜೊತೆ ಇರುವ ಕೊಟ್ಟೂರು ನನ್ನ ತಂದೆಯ ಕಾರಣಕ್ಕೆ ಅಂಟಿಕೊಂಡ ಊರು. ನನ್ನ ಚಿಕ್ಕಪ್ಪನ ಜೊತೆ ಕಳೆದ ಬಾಲ್ಯ ನನ್ನ ಬಗ್ಗೆ ಬಹಳ ಮುಖ್ಯವಾದದ್ದು.

ಪ್ರಶ್ನೆ: ಎಡಪಂಥೀಯ ಚಳವಳಿಗೆ ನೀವು ಆಕರ್ಷಿತರಾದದ್ದು ಹೇಗೆ ಮತ್ತು ಆ್ಯಕ್ಟಿವಿಸ್ಟ್ ಆಗಿ ನಿಮ್ಮ ಅಂದಿನ ರಾಜಕಾರಣವನ್ನ ನಾವು ಹೇಗೆ ಅರ್ಥಮಾಡಿಕೊಳ್ಳಬೇಕು?

ಫಣಿರಾಜ್: ಹರಪನಹಳ್ಳಿಯಂತಹ ಒಂದು ಊರಿನಲ್ಲಿ ಉದಾರವಾದ ಜಾತ್ಯತೀತ ಮನೋಭಾವವನ್ನು ಹೊಂದಿರುವಂತಹ ನನ್ನ ಚಿಕ್ಕಪ್ಪನ ಪ್ರೀತಿಯಲ್ಲಿ ನಾನು ಬೆಳೆದೆ. ಎಡಪಂಥೀಯ ಆಕರ್ಷಣೆಯ ಮೂಲ ಪ್ರೇರಣೆ ನಾನು ಹರಪನಹಳ್ಳಿಯಲ್ಲಿ ಕಳೆದ ಬಾಲ್ಯದಲ್ಲೇ ಇತ್ತು ಅನಿಸುತ್ತೆ. ನಾನು ಪಿಯುಸಿಗೆ ಬಂದಾಗ ಅಲ್ಲಿ ಎಸ್.ಎಸ್. ಹಿರೇಮಠ್ ಅನ್ನುವ ಮೇಷ್ಟ್ರು ಇದ್ರು. ಅವರು ಅಲ್ಲಿ ಆಗ ಸಿಪಿಎಂ ಪಕ್ಷವನ್ನ ಕಟ್ಟುತ್ತಾ ಇದ್ರು. ಸಮುದಾಯದ ಮೊದಲ ಜಾಥಾ ಪ್ರಸನ್ನರ ನೇತೃತ್ವದಲ್ಲಿ ಹೊಸಪೇಟೆಗೆ ಬಂದಿತ್ತು. ಗುಲ್ಬರ್ಗದಲ್ಲಿ ಇಂಜಿನಿಯರಿಂಗ್ ಮಾಡಲು ಅಲ್ಲಿ ಐದು ವರ್ಷ ಇದ್ದಾಗ ನನ್ನನ್ನು ಎಡಪಂಥೀಯ ಧೋರಣೆಗೆ ಮತ್ತು ಚಳವಳಿಗೆ ತಂದ ಕಾಲ. ಆಗ ರಾಜಕಾರಣ ಅಂತಂದ್ರೆ ಭಾರತದಲ್ಲಿ ಜಾತಿ ಸಮಾಜದ ನಿರ್ಮೂಲನ ಆಗಬೇಕು ಎಂಬ ಆದರ್ಶ ಇತ್ತು, ಆದರೆ ಅದು ಹೇಗೆ ನಿರ್ಮೂಲನ ಆಗುತ್ತೆ ಅಂತ ಖಚಿತವಾದ ದಾರಿಯ ಅರಿವಿರಲಿಲ್ಲ. ಜಾತಿ ಹೋಗುತ್ತೆ, ನಾನು ಬದಲಾಗಿದ್ದೇನೆ, ಎಲ್ಲರೂ ಬದಲಾಗ್ತಾರೆ ಎಂದೆಲ್ಲ ಯೋಚನೆ ಇತ್ತು, ಆದರೆ ಅದು ಪ್ರಜ್ಞಾಪೂರ್ವಕವಾಗಿ ನಡೀಬೇಕು ಅಂತ ಹೊಸಪೇಟೆಗೆ ಬಂದ ಮೇಲೆ ಗೊತ್ತಾಯ್ತು. ಒಂದಲ್ಲ ಒಂದು ದಿನ ಕಾರ್ಮಿಕ ವರ್ಗ ವಿಜಯ ಸಾಧಿಸುತ್ತೆ ಅಂತ ನಂಬಿದ್ದೆವು. ಆ ಕ್ರಾಂತಿಗೆ ನಾವು ಕಾಲಾಳುಗಳು ಆಗಬೇಕು ಅಂತ ಮಾತ್ರ ಆಸೆ ಇತ್ತು.

ಪ್ರಶ್ನೆ: ನೀವು ಬಾಲ್ಯದಲ್ಲಿ ಆರೆಸ್ಸೆಸ್ ಶಾಖೆಗೆ ಹೋಗುತ್ತಿದ್ದಿರಿ ಅಂತ ನೀವು ಒಮ್ಮೆ ಹೇಳಿದ್ದು ನನಗೆ ನೆನಪಿದೆ. ಅಲ್ಲಿಂದ ತಪ್ಪಿಸಿಕೊಳ್ಳೋದು ಹೇಗೆ ಸಾಧ್ಯವಾಯ್ತು?

ಫಣಿರಾಜ್: 5-6ನೇ ಕ್ಲಾಸಿನ ತನಕ ನಾನು ಆರೆಸ್ಸೆಸ್ ಶಾಖೆಗೆ ಹೋಗ್ತಿದ್ದೆ. 6ನೇ ಕ್ಲಾಸಿನಲ್ಲಿರುವಾಗ ಜಿಲ್ಲಾ ಮಟ್ಟದ ಶಿಬಿರಕ್ಕೆ ನನ್ನನ್ನು ಆಯ್ಕೆ ಮಾಡಿದ್ದರು. ಮನೆಯಲ್ಲಿ ಬಂದು ಚಿಕ್ಕಪ್ಪನ ಹತ್ತಿರ ಹೇಳಿದೆ. 'ನೀನು ಅಲ್ಲಿಗೆ ಹೋಗಲೇಬೇಕಾ' ಎಂದು ಚಿಕ್ಕಪ್ಪ ಕೇಳಿದರು. ನಾನು ಹೌದು ಎಂದೆ. ಆಗ ಚಿಕ್ಕಪ್ಪ ಹೇಳಿದ್ದು ಒಂದೇ ಮಾತು. 'ಗಾಂಧೀಜಿಯನ್ನು ಕೊಂದದ್ದು ಆರೆಸ್ಸೆಸ್, ಅಂಥವರ ಜೊತೆ ನೀನು ಸೋಗ್ತೀಯಾ' ಅಂತ. ಅವರು ಆ ರೀತಿ ಹೇಳಿದ್ದು ಒಂಥರ ಪಿ ಚು ಹೊಡೆದ ಹಾಗೆ ಆಯ್ತು. ಹೀಗಾಗಿ ನಾನು ಶಾಖೆ ಸೀದಾ ಹೋಗ್ಬಿಟ್ಟು 'ನೀವು ಗಾಂಧೀಜಿಯನ್ನ ಕೊಂದ್ಬಿಟ್ಟಿರಂತೆ, ಅದಕ್ಕೆ ನಾನು ನಿಮ್ಮ ಹತ್ರ ಬರಲ್ಲ' ಅಂತಂದೆ. ಅವತ್ತಿಂದ ನಾನು ಆ ಶಾಖೆಗೆ ಹೋಗೋದು ಬಿಟ್ಟೆ. ನಂತರ ನಾನೊಂದು ಕ್ರಿಕೆಟ್ ತಂಡ ಕಟ್ಟಿದೆ. ಕ್ರಿಕೆಟ್ ಅನ್ನೋದು ನನಗೆ ಒಂದು ಸೆಕ್ಯುಲಾರ್ ಅನುಭವ. ಜಾತಿ ಅನ್ನೋದು ನಮ್ಮ ಭಾವನಾತ್ಮಕ ಅಥವಾ ಸಾಮುದಾಯಿಕ ಬದುಕಿಗೆ ಮುಖ್ಯವಾದ ಸಂಗತಿಯಲ್ಲ ಅನ್ನೋದು ನನಗೆ ಆಗಲೇ ಅರಿವಿಗೆ ಬಂದಿತ್ತು.

ಪ್ರಶ್ನೆ: ಸಾಹಿತ್ಯದಲ್ಲಿ ನಿಮಗೆ ಆಸಕ್ತಿ ಹುಟ್ಟಿದ್ದು ಹೇಗೆ, ನಿಮ್ಮನ್ನು ಪ್ರಭಾವಿಸಿದ ಲೇಖಕ ಯಾರು, ಕೃತಿ ಯಾವುದು?

ಫಣಿರಾಜ್: ಯಾವುದೇ ಮನುಷ್ಯನ ಇರುವಿಕೆಗೆ ದೇಶ ಮತ್ತು ಕಾಲ ಬಹಳ ಮುಖ್ಯ ಅಂತ ನನಗೆ ನಂಬಿಕೆ ಬಂದಿದ್ದು ಸ್ವತಃ ನನ್ನ ಜೀವನದಿಂದ ಮತ್ತು ನಾನು ನೋಡಿದ ಅನೇಕ ಸಾಹಿತಿ ಮತ್ತು ಚಿಂತಕರ ಜೀವನದಿಂದ. 'ಸಮುದಾಯ'ಕ್ಕೆ ಬಂದ ಮೇಲೆ ನನ್ನ ಸಾಹಿತ್ಯದ ಪರಿಕಲ್ಪನೆ ಬದಲಾಗುತ್ತಾ ಹೋಯ್ತು. ಅದೃಷ್ಟವಶಾತ್ ಬೀಚಿ ಹರಪನಹಳ್ಳಿಯವರು. ಬೀಚಿ ನಮಗೆ ಕಾಮಿಡಿ ಇನ್‌ಫ್ಲುಯೆನ್ಸ್ ಆಗಿದ್ದರು. ಪ್ರಜಾಮತದಲ್ಲಿ ಬೀಚಿ ಕಾಲಂ ತಪ್ಪದೇ ಓದುತ್ತಿದ್ದೆ. ಆದರೆ ಆಧುನಿಕ ಸಾಹಿತ್ಯದ ಪರಿಚಯ ನನಗೆ ಇರಲಿಲ್ಲ. ಪಿಯುಸಿ ಮೊದಲ ವರ್ಷದ ರಜೆಯಲ್ಲಿ ಲಂಕೇಶ್, ತೇಜಸ್ವಿ ಮತ್ತು ಅನಂತಮೂರ್ತಿಯವರ ಎಲ್ಲ ಕೃತಿಗಳನ್ನು ನಾನು ಓದಿದೆ. ಇವರೆಲ್ಲರ ಪೈಕಿ ಲಂಕೇಶ್ ನನಗ ಭಿನ್ನ ರೀತಿಯ ಬರಹಗಾರ ಅಂತ ಅನಿಸಿತು. ನನ್ನ ಬಾಲ್ಯದ ನೆನಪುಗಳೆಲ್ಲ ಲಂಕೇಶರ ಬಾಲ್ಯದ ನೆನಪುಗಳ ಹಾಗೆ ಕಾಣ್ತಾ ಇತ್ತು. ಅನಂತಮೂರ್ತಿಗಿಂತ ಆರ್ಗಾನಿಕಲಿ ಐ ಸ್ಟಾರ್ಟೆಡ್ ಕನೆಕ್ಟಿಂಗ್ ವಿತ್ ಲಂಕೇಶ್. ಇಂದಿಗೂ ಅನೇಕರನ್ನು ಓದಿದ ಮೇಲೆಯೂ ನನಗೆ ಗದ್ಯದಲ್ಲಿ ಲಂಕೇಶ್, ಕಾವ್ಯದಲ್ಲಿ ರಾಮಾನುಜನ್ ಇಷ್ಟ. ಯಾಕೆ ಅಂತ ವಿವರಿಸೋದು ಸ್ವಲ್ಪ ಕಷ್ಟ. ಎಲ್ಲ ಬಂಡಾಯ ಬರಹಗಾರರ ಪೈಕಿ ನನಗೆ ಅತ್ಯಂತ ಇಷ್ಟ ದೇವನೂರು. ನನಗೆ ಯಾವತ್ತೂ ವಾಸ್ತವವನ್ನು ಭಾಷೆಯಲ್ಲಿ ಹೇಳುವಂತಹ, ಆದರೆ ಬಂಡುಕೋರರಾಗಿ ಹೇಳುವಂತಹ, ಯಾವುದೇ ಆಕ್ರೋಶ ಇಲ್ಲದೆ ಅಂಡರ್‌ಸ್ಟೇಟ್‌ಮೆಂಟ್ ಆಗಿ ಹೇಳುವ ಲೇಖಕರು ತುಂಬಾ ಇಷ್ಟ. ಇದನ್ನೇ ಲಂಕೇಶ್ ಮತ್ತು ರಾಮಾನುಜನ್ ಮಾಡಿದ್ರು.



ಅಂಬೇಡ್ಕರ್ ಅವರನ್ನ ಪ್ರೀತಿಸದೆ ಭಾರತದಲ್ಲಿ ಯಾವ ಮಾರ್ಕ್ಸ್‌ವಾದವೂ ಸಾಧ್ಯವಿಲ್ಲ

● ಫಣಿರಾಜ್

ಪ್ರಶ್ನೆ: ನೀವು ಬರೆದ 'ಅಮ್ಮನನ್ನು ಕೊಲ್ಲುವ ಕುರಿತು' ಮುಂತಾದ ಅನೇಕ ಕವನಗಳು ಅದ್ಭುತವಾಗಿತ್ತು. ಈ ಚಳವಳಿಯ ಧಾವಂತದಲ್ಲೂ ನಿಮ್ಮೊಳಗೆ ಉಳಿದುಕೊಂಡ ಕವಿ ಮತ್ತು ನಿಮ್ಮ ಕಾವ್ಯದ ಒಲವಿನ ಬಗ್ಗೆ ಹೇಳಿ.

ಫಣಿರಾಜ್: ಸಿಪಿಎಂ ಪಾರ್ಟಿ ಮುಖವಾಣಿಗೆ ನಿರಂತರವಾಗಿ ಕ್ರಾಂತಿಕಾರಿ ಕವನಗಳನ್ನ ಬರೀಬೇಕು ಎಂದು ಬೇಡಿಕೆ ಬಂದಾಗ ಕಾವ್ಯದ ಸೌಂದರ್ಯ ಶಾಸ್ತ್ರವನ್ನ ಅರಿತು ಬರೆಯಬೇಕು ಅಂತ ನನಗೆ ಇತ್ತು. ಕಾವ್ಯ ಬರೆಯೋದೆ ಆದ್ರೆ ಕಾವ್ಯದ ಶಕ್ತಿ ಅರಿತು ಬರೆಯಬೇಕು. ಇಲ್ಲವಾದರೆ ಬರೆಯಬಾರದು. ನಿತ್ಯ ಜೀವನದ ಯಜಮಾನಿಕೆಗಳನ್ನ ಪ್ರಶ್ನೆ ಮಾಡುವ ಕವನಗಳನ್ನು ಬರೆಯೋದು ಸಾಧ್ಯ ಅಂತ ಲಂಕೇಶ್ ಕಾವ್ಯ ಓದಿ ತಿಳಿದುಕೊಂಡೆ. ಇತ್ತೀಚಿನ ಎರಡು ವರ್ಷದಿಂದ ಮತ್ತೆ ಕವಿತೆಗಳನ್ನು ಬರೆಯುತ್ತಾ ಇದ್ದೇನೆ. ಅನಂತಮೂರ್ತಿಯವರ ಬ್ರೆಕ್ಟ್ ಕವಿತೆಗಳ ಅನುವಾದ ಇತ್ತೀಚೆಗೆ ಬಂತು. ಅಲ್ಲೊಂದು ಪಾಲಿಟಿಕಲ್ ಪಾರ್ಷಿಯಾಲಿಟಿ ಇತ್ತು. ಅನಂತಮೂರ್ತಿಗೆ ಸಮಾಜವಾದಿಯಾದ ಬ್ರೆಕ್ಟ್ ಬೇಡ. ಕವಿಯಾದ ಬ್ರೆಕ್ಟ್ ಮಾತ್ರ ಬೇಕು. ನನಗೊಂದು ಛಲ ಬಂತು. ನನಗೆ ಸಮಾಜವಾದಿಯೂ, ಕವಿಯೂ ಆದ ಬ್ರೆಕ್ಟ್ ಬೇಕಿತ್ತು. ಫೈರ್ಝ್ ಮತ್ತು ಬ್ರೆಕ್ಟ್‌ಗೆ ಕಾವ್ಯ ಸಮಾಜವಾದವನ್ನು ನಿರೂಪಿಸುವ ಒಂದು ಮಾಧ್ಯಮ. ಅದಕ್ಕಾಗಿ ಅನಂತಮೂರ್ತಿ ಮಾಡದ ಸುಮಾರು 35 ಬ್ರೆಕ್ಟ್ ಕವನಗಳ ಅನುವಾದ ಮಾಡಿದ್ದೇನೆ.

ಪ್ರಶ್ನೆ: ಗ್ರಾಮ್ಷಿಯ ಕುರಿತು ಅಪರೂಪದ ಪುಸ್ತಕವೊಂದನ್ನ ನೀವು ಕನ್ನಡಕ್ಕೆ ಕೊಟ್ಟಿದ್ದೀರಿ. ಗ್ರಾಮ್ಷಿಯ ಚಿಂತನೆಗಳ ಬಗ್ಗೆ ಅಷ್ಟೊಂದು ಉತ್ಕಟ ಪ್ರೀತಿಗೆ ಕಾರಣ?

ಫಣಿರಾಜ್: ಗ್ರಾಮ್ಷಿಯ ಓದಿಗೆ ಪ್ರೇರೇಪಿಸಿದ್ದು ಎಡ್ವರ್ಡ್ ಸೈದ್. ಗ್ರಾಮ್ಷಿಯ ಸಿದ್ಧಾಂತ ನನಗೆ ಎಷ್ಟು ಇಷ್ಟ ಆ... ಅಂತಂದ್ರೆ, ನಾನು ಬಾಲ್ಯದಿಂದಲೂ ಬಲ್ಲಂತ... ಮಾರ್ಕ್ಸ್‌ವಾದವನ್ನ ಅಲ್ಲಿ ನಾನು ಕಂಡುಕೊಂ... ಮಾರ್ಕ್ಸ್‌ವಾದವನ್ನ ನನ್ನ ಜೀವನದ ಧಾಟಿಯಲ್ಲಿ... ನನಗೆ ವಿವರಿಸುತ್ತಾ ಇದ್ದ. ಸಾಮಾನ್ಯ ಜೀವನ... ಇದ್ದುಕೊಂಡು ಸಹ ಓರ್ವ ರಾಜಕೀಯ ವ್ಯಕ್ತಿಯಾಗಿ... ಸಾಧ್ಯ ಅಂತ ನನಗೆ ತೋರಿಸಿಕೊಟ್ಟವನು ಗ್ರಾಮ್ಷಿ. ಇ... ನಿನ್ನ ಪೊಲಿಟಿಕಲ್ ಐಡಿಯಾಲಜಿ ಏನು ಅಂ... ಯಾರಾದರೂ ಕೇಳಿದ್ರೆ, ನಾನು ಗ್ರಾಮ್ಷಿಯ... ಅಂಬೇಡ್ಕರ್‌ವಾದಿ ಅಂತಾನೇ ಹೇಳುತ್ತೇನೆ.

ಪ್ರಶ್ನೆ: ಅಂಬೇಡ್ಕರ್ ಬರಹಗಳನ್ನೂ ಸಹ ನೀವು ... ಪ್ರಕಾಶನಕ್ಕಾಗಿ ಅನುವಾದ ಮಾಡಿದ್ದೀರಿ. ಅಂಬೇಡ... ಅವರನ್ನು ಅಂದಿನ ಪ್ರಧಾನ ಧಾರೆಯ ಜನರು ನಡೆಸಿಕೊಂ... ರೀತಿ ಮತ್ತು ಅದಕ್ಕೆ ಪ್ರಾಯಶ್ಚಿತ್ತವೋ ಎಂಬಂತೆ ಇಂ... ಪ್ರಧಾನ ಧಾರೆಯ ಮಂದಿ ಅಂಬೇಡ್ಕರ್ ವಿಚಾರಗಳ ... ಮಾತನಾಡುತ್ತಾ ಇರೋದು, ಇದರ ಬಗ್ಗೆ ನಿಮಗೆ ... ಅನಿಸುತ್ತೆ?


ಫಣಿರಾಜ್: ಯಾವುದೇ ರೀತಿಯಲ್ಲಿ ನೋಡಿದ... ಭಾರತದ ಚಿಂತಕರಲ್ಲಿ ಬಹಳ ಅನ್ಯಾಯಕ್ಕೊಳಗಾದ... ಅಂಬೇಡ್ಕರ್. ದಲಿತರು ತಮ್ಮ ಸ್ವಾಭಿಮಾನದ ... ಅಂತ ಅಂಬೇಡ್ಕರ್ ಅವರನ್ನ ಏನಾದರೂ ಉಳಿಸಿಕೊಳ್ಳ... ಇದ್ದಿದ್ದರೆ, ಇವತ್ತು ನಾವು ಅಂಬೇಡ್ಕರ್ ಅವರ ಹೆಸ... ಕೇಳುತ್ತಿರಲಿಲ್ಲವೇನೋ. ಯಾಕೆ ಮಾರ್ಕ್ಸ್‌ವಾದಿಗಳ... ಲೋಹಿಯಾವಾದಿಗಳಿಗೆ ಅಂಬೇಡ್ಕರ್ ಅವರ ಬರಹ... ಉಜ್ವಲವಾದ ಕೆಲಸ ಅಂತ ಅನಿಸಲಿಲ್ಲ ಅಂತ ... ಆಶ್ಚರ್ಯವಾಗುತ್ತೆ. ಮಾರ್ಕ್ಸ್‌ವಾದಿಗಳು ಗ್ರಾಮ್ಷಿ... ನಿರ್ಲಕ್ಷಿಸಿದ ಕಾರಣ ಅವರಿಗೆ ಅಂಬೇಡ್ಕರ್ ಅವ... ಓದೋಕೆ ಸಾಧ್ಯವಾಗಿಲ್ಲ. ಸಮಾಜವನ್ನ ಬದಲು ಮಾಡ... ಅಂಬೇಡ್ಕರ್ ಅವರ ಬೌದ್ಧಿಕ ಉತ್ಪಾದನೆಯನ್ನು ಗಂಭೀರ... ತೆಗೆದುಕೊಳ್ಳದೇ ಇದ್ದರೆ ಭಾರತದ ಯಾವ ಮಾರ್ಕ್ಸ... ಕೂಡ ಕ್ರಾಂತಿಕಾರಿ ಬದಲಾವಣೆಗಳನ್ನ ತರೋಕೆ ಸಾ... ಇಲ್ಲ. ಅಂಬೇಡ್ಕರ್ ಅವರನ್ನ ಪ್ರೀತಿಸದೆ ಭಾರತದಲ್ಲಿ ಯ... ಮಾರ್ಕ್ಸ್‌ವಾದವೂ ಸಾಧ್ಯವಿಲ್ಲ.

ಪ್ರಶ್ನೆ: ಉಡುಪಿಯಲ್ಲಿ ನೀವು ಮತ್ತು ಜಿ. ರಾಜಶೇ... ಸಂಘಪರಿವಾರದ ಕೋಮು ಹಿಂಸೆಯ ವಿರುದ್ಧ ಪ್ರಖರ... ಚಳವಳಿಯನ್ನ ಕಟ್ಟಿದವರು. ಕಳೆದ ಎರಡೂವರೆ ದಶಕ... ಹಿಂದೂತ್ವವಾದ ಉಂಟುಮಾಡಿದ ಇಲ್ಲಿನ ಸಾಮ... ಪಲ್ಲಟಗಳು ಮತ್ತು ತಲ್ಲಣಗಳನ್ನು ನೀವು ಎದು... ಬಗೆ ಹೇಗಿತ್ತು?

ಫಣಿರಾಜ್: ಹಿಂದೂತ್ವವಾದದ ಹಿಂಸೆಯ ವಿರು... ಈ ಚಳವಳಿಯ ಎಲ್ಲ ಕೀರ್ತಿ ರಾಜಶೇಖರ್‌ಗೆ ಸಲ್ಲ... ಅವರು ಕರ್ನಾಟಕದ ಓರ್ವ ನೈಜ ಗ್ರಾಮ್ಷಿಯನ್ ಚಿ... ತನ್ನ ಊರಿನಲ್ಲಿ ಅಸಮಾನತೆ ಮತ್ತು ಹಿಂಸೆ ... ನಡೆಯುತ್ತಿದೆ ಎಂಬುದನ್ನು ಬಹಳ ಚೆನ್ನಾಗಿ ಗ್ರಹಿಸಬ... ನಾನು ಮಂಗಳೂರಿಗೆ ಬಂದದ್ದು ಹಿಂದೂತ್ವದ ರಾಜಕೀ... ಬೀಜಗಳು ಇಲ್ಲಿ ಊರುವ ಸಮಯದಲ್ಲಿ. ಅದರ ಹಿಂ... ಮೊದಲ ಸಾರ್ವಜನಿಕ ಪ್ರಕಟಣೆ ಆಗಿದ್ದು ಬಾಬರಿ ಮ... ಉರುಳಿದ ನಂತರ ಮಂಗಳೂರಿನಲ್ಲಿ ನ... ಕೋಮುಗಲಭೆಯಲ್ಲಿ. ಆಗ ಫಕೀರ್ ಮೊಹಮ್ಮದ್ ... ಮತ್ತು ರಾಜಶೇಖರ್ ನಮಗೆ ಹೇಳಿದ್ದೇನು ಅಂ... ಹಿಂದೂತ್ವವಾದ ಏನು ಅಂತ ತೋರಿಸಬೇಕಾದರೆ ... ಕಥನವನ್ನ ಮಾಡಬೇಕು. ನಮ್ಮ ಪ್ರತಿಭಟನೆಯ ... ರೂಪ ಅದಾಗಿರಬೇಕು. ಆಗ ನಾವು ಒಂದು ಸತ್ಯಶೋ... ಸಮಿತಿ ಮಾಡಿ ವರದಿ ಮಾಡಿದೆವು. ಅದು ಕರ್ನಾಟ... ಹಿಂದೂತ್ವವಾದದ ಹಿಂಸೆಯ ಮೊದಲ ಸತ್ಯಶೋ... ದಾಖಲೆ. ಸುರತ್ಕಲ್ ಕೋಮು ಗಲಭೆಯ ಬಳಿಕ ... ಮಾಡಿದ ಅಧ್ಯಯನ ನಮಗೆ ಹಿಂದೂತ್ವ... ಅರ್ಥಮಾಡಿಕೊಳ್ಳಲಿಕ್ಕೆ ಪ್ರಾಥಮಿಕ ಶಾಲೆ ಆಯ್ತು... ಅರ್ಥ ಆಗಿದ್ದು ಏನೆಂದರೆ ಇದು ಭಜರಂಗಿಗಳ ...



3, 6 ಮತ್ತು 37 ವರ್ಷ ವಯಸ್ಸಿನಲ್ಲಿ ಫಣಿರಾಜ್



ಪತ್ನಿ ರಮಾ ಮತ್ತು ಮಗಳು ಸಂಜನಾ ಜೊತೆ ಫಣಿರಾಜ್

...ಇದಕ್ಕೆ ಸಮಾಜದ ಒಂದು ವರ್ಗದ ಒಪ್ಪಿಗೆ ...ಂಬುದು. ನಾಗರಿಕರ ಪ್ರತಿಭಟನೆ ಇಲ್ಲದೆ ...ವನ್ನ ಎದುರಿಸಲು ಸಾಧ್ಯವಿಲ್ಲ. ಅವರು ಹಿಂಸೆಯನ್ನ ...ವುದಿಲ್ಲ. ಆದರೆ ಹಿಂಸೆಯನ್ನ ಅನುಮೋದಿಸುತ್ತಾರೆ. ...ನ್ನು ಬಿಂಬಿಸುತ್ತಾ ಸತ್ಯಸಂಗತಿಗಳನ್ನ ಮತ್ತೆ ಮತ್ತೆ ಹೇಳುವುದರ ಮೂಲಕ ಚಳವಳಿಯನ್ನು ...ವಾಗಿಡಬೇಕು. ಇದನ್ನು ಬುದ್ಧಿಜೀವಿಗಳೂ ...ಕು. ಆಕ್ಟಿವಿಸ್ಟ್ ಕೂಡ ಮಾಡಬೇಕು. ನಿಜ ...ಹೇಳಬೇಕೆಂದರೆ ನೀವು ನಿಜವಾದ ಬುದ್ಧಿಜೀವಿ ಆಗಿದ್ರೆ ...ಷೆಯ ಕಾಲದಲ್ಲಿ ಆಕ್ಟಿವಿಸ್ಟ್ ಆಗಿರದೆ ಇರೋಕೆ ...ಇಲ್ಲ.

...: ಸಾಹಿತ್ಯ ಮತ್ತು ಚಳವಳಿಯ ಜೊತೆ ನಿಮ್ಮ ...ಮ ಆಸಕ್ತಿಯ ಕ್ಷೇತ್ರ ಸಿನಿಮಾ. ನಿಮ್ಮ ಸಿನಿಮಾ ...ಆರಂಭವಾಗಿದ್ದು ಎಲ್ಲಿಂದ, ಹೇಗೆ?

...ರಾಜ್: ಭಾರತದಲ್ಲಿ ಸಿನಿಮಾ ಒಂದು ಜಾನಪದ. ...ೇ ಊರಿನ ಥಿಯೇಟರ್‌ನಲ್ಲಿ ಸಿನಿಮಾ ನೋಡದೆ ...ತ ಭಾರೀ ಮಡಿವಂತ ಪಾಪಿ ಅಥವಾ ಅಲ್ಟ್ರಾ ...ಲೆಕ್ಚುವಲ್. ಆಗ ಸಮುದಾಯದ ವಾರ್ತಾಪತ್ರದಲ್ಲಿ ...ಪಿಯನ್ ಸಿನಿಮಾಗಳು, ಸತ್ಯಜಿತ್ ರೇ ಸಿನಿಮಾಗಳ ...ವಿಗಳು ಬರುತ್ತಿದ್ದವು. ಡಿಡಿಯಲ್ಲಿ ಪ್ರತಿ ಭಾನುವಾರ ...ವಿನ್ನಿಂಗ್ ಫಿಲ್ಮ್ ನೋಡಲಿಕ್ಕೆ ಶುರು ಮಾಡಿದೆ. ...ಒಂದು ಬೇರೆ ರೀತಿಯ ಕಾವ್ಯ ಅಂತ ಆಗ ...ತ್ತಾಯಿತು. ಆಗ ಡೆಬೊನೇರ್ ಮ್ಯಾಗಝೀನ್ ...ತ್ತು. ಕೆಲವರು ಅದು ಬರೇ ಪೋಲಿ ಚಿತ್ರ ...ಮ್ಯಾಗಝೀನ್ ಅಂತ ಭಾವಿಸಿದ್ರು. ಅದರಲ್ಲಿ ...ಶ್ರೇಷ್ಠ ಚಿತ್ರಗಳ ಸಿನಿಮಾ ರಿವ್ಯೂ ಬರುತ್ತಿತ್ತು. ...ನಲ್ಲಿ 10 ರೂ.ಗೆ ನಾನು ಹಳೆಯ ಡೆಬೊನೇರ್ ...ುತ್ತಿದ್ದೆ. ಸುಬ್ಬಣ್ಣ ನಡೆಸಿದ ಸಿನಿಮಾ ರಸಗ್ರಹಣ ...ಹೋದ ಮೇಲೆ ಸಿನಿಮಾಕ್ಕೆ ತನ್ನದೇ ಆದ ...ಇದೆ, ಸಾಹಿತ್ಯದ ಹಾಗೆಯೆ ಬೇರೆ ಬಗೆಯ ...ಡೆಯ ಶಕ್ತಿ ಇದೆ ಅಂತ ಗೊತ್ತಾಯ್ತು. ಅದೊಂದು ...ಪಂಚ.

...: ಇತ್ತೀಚೆಗೆ ನೀವು ನೋಡಿದ ಒಳ್ಳೆಯ ಸಿನಿಮಾ ...ಒಳ್ಳೆಯ ಟೈಂಪಾಸ್ ಸಿನಿಮಾ ಯಾವುದು?

...ರಾಜ್: ಒಳ್ಳೆಯ ಸಿನಿಮಾ ಫೆಲಿನಿಯ ಲಾ ಡೋಲ್ಸ್ ...ಒಳ್ಳೆಯ ಟೈಂ ಪಾಸ್ ಸಿನೆಮಾ 'ಲುಟೆರೆ'.

...: 'ಲಂಕೇಶ್' ಪತ್ರಿಕೆಯಲ್ಲಿ ಬರೆಯುವ ನಿಮ್ಮ ...ಕ್ಕೆ 'ಗುಮಾಸ್ತನ ಬ್ಲಾಗ್' ಅಂತ ಯಾಕೆ ...ಕೊಂಡ್ರಿ?

...ರಾಜ್: ನಾನು ದಾಖಲೆ ತರಹ ಬರೀತಾ ಇದ್ದೀನಿ. ..., ಕ್ಲರ್ಕ್. ನಾನು ಅನೇಕರ ಅನುಭವಗಳನ್ನ ...ಪ್ರೊಸೆಸ್ ಮಾಡ್ತಾ ಇದ್ದೀನಿ. ಸೃಜನಶೀಲತೆ ಅನ್ನೋದು ...ರೂ ಇದೆ, ಈ ಅನುಭವಗಳನ್ನ ...ಕೊಳ್ಳೋದು ಮತ್ತು ಅದನ್ನು ಮರುನಿರೂಪಣೆ ...ಕೆ ಭಾಷೆ ಬೇಕಾಗುತ್ತೆ ಅನ್ನೋದರಲ್ಲಿ ಮಾತ್ರ. ...ದು ಖಾತ್ರಿಯಾಗ್ಬಿಟ್ಟಿದೆ. ಯಾವ ಬರಹಗಾರನೂ ...ನಲ್ಲ. ಯಾವ ಬರಹಗಾರನೂ ಒರಿಜಿನಲ್ ಅಲ್ಲ. ...ಕ್ಲರ್ಕ್.

...: ನಿಮ್ಮ ಸಾಹಿತ್ಯ ಚಳವಳಿಯಿಂದ ತೀರಾ ...ರುವ ವಾತಾವರಣದಲ್ಲಿ ನೀವು ಪ್ರೊಫೆಸರ್ ಆಗಿ ...ಮಾಡುತ್ತಿದ್ದೀರಿ. ಮಣಿಪಾಲದ ಎಂಐಟಿಯಲ್ಲಿ 24 ...ಕಾಲ ಪಾಠ ಮಾಡಿದ ನಂತರ ಈಗ ನಿಮ್ಮ ...ಏನು?

...ರಾಜ್: ಎಂಐಟಿಯಲ್ಲಿ ಕೆಲಸ ಮಾಡುವಾಗ ...ಕ್ಲಾಸ್ ಬಗ್ಗೆ ಇರುವ ಪೂರ್ವಾಗ್ರಹ ಬಿಟ್ಟು ... ಸಮಾಜದಲ್ಲಿ ನಡೆಯುವ ಅನ್ಯಾಯಗಳ ಬಗ್ಗೆ ...ಯಲ್ಲ ಅನ್ನುವ ಮನಸ್ಥಿತಿಯವರೂ ಆ ವರ್ಗದಲ್ಲಿ ...ಈ ಹುಡುಗ-ಹುಡುಗಿಯರ ಡ್ರೆಸ್ ನೋಡಿದ್ರೆ ...ಟಿರಿಯಲಿಸ್ಟಿಕ್ ಅನ್ನುತ್ತೆ, ಮನುಷ್ಯ ಸಂಬಂಧಗಳ ...ರಿಗೆ ಏನೇನೂ ಗೌರವ ಇಲ್ಲ ಅನಿಸುತ್ತೆ, ಆದರೆ ...ಸ್ಸಿ, ಆ ಹುಡುಗರು ವಿಲಕ್ಷಣವಾಗಿದ್ದರೂ ಮನುಷ್ಯ ...ಗಳಲ್ಲಿ ಸೂಕ್ಷ್ಮರಾಗಿರುತ್ತಾರೆ. ನನಗಿಂತ ಭಿನ್ನವಾದ ...- ಜನರೇಷನ್ ಎಕ್ಸ್-ಅಂತೀವಲ್ಲ ಇವರ ಜೊತೆ ...ವ ಕಾರಣ ನಾನು ಇವತ್ತಿಗೂ ಒಂದು ಸ್ಟ್ರೋಕ್ ...ಮೇಲೂ ಸಹ ನನಗೆ ವಯಸ್ಸು 22 ದಾಟಿಲ್ಲ ...ಮನಸ್ಥಿತಿಯಲ್ಲೇ ಇದ್ದೇನೆ.

...ಇಷ್ಟು ವರ್ಷದ ಕರಾವಳಿಯ ನಿಮ್ಮ ಜೀವನದಲ್ಲಿ ...ಗಿ ನೀವು ಕಂಡ ಯಾವುದಾದರೂ ಒಂದು ಸಂಗತಿ

...ರಾಜ್: ಕರಾವಳಿಯ ಹುಡುಗಿಯರೇ ನನಗೆ ಬಲು ...ಶೇಷ. ಕರಾವಳಿಗೆ ಕಾಲಿಟ್ಟ ದಿನವೇ ಈ ...ನ್ನು ನೋಡಿ ಮತ್ತೆ ಈ ಊರಿನಿಂದ ವಾಪಾಸು ...ಸ ಎಂದು ನಿರ್ಧಾರ ಮಾಡಿದ್ದೆ.

...ತ್ಯ ಮಂದೀಪ್ ಶೆಟ್ಟಿ, ಉಡುಪಿ

ಅಂಚಿನಿಂದ.....



ಡಾ. ವಾಸು ಎಚ್.ವಿ.

'ಅನ್ನಭಾಗ್ಯ'ದ ಮಹದೇವಪ್ಪರ ಕಾಲು ಮುರಿದ ಸರ್ಕಾರ

ಈ ಅಂಕಣಕ್ಕೆ 'ಅಂಚಿನಿಂದ' ಎಂಬ ಹೆಸರು ಇಟ್ಟ ನಂತರ ಕೆಲವೊಮ್ಮೆಯಾದರೂ 'ಅಂಚಿನ' ದೃಷ್ಟಿಕೋನದಿಂದ ಬೇರೆ ಸಂಗತಿಗಳ ಬಗ್ಗೆ ಬರೆಯೋಣ ಎಂದುಕೊಳ್ಳುತ್ತೇನೆ. ಆದರೆ ನಿರಾಕರಿಸಲಾಗದಂತೆ ಕೆಲವು ಸಂಗತಿಗಳು ಮುನ್ನೆಲೆಗೆ ನುಗ್ಗಿ ನುಗ್ಗಿಬರುತ್ತವೆ. ಈ ಸಾರಿ 'ಭಾಗ್ ಮಿಲ್ಖಾ ಭಾಗ್' ಎಂಬ ಸಿನಿಮಾ ಕುರಿತು ಬರೆಯಬೇಕೆಂದುಕೊಂಡಿದ್ದರೂ, ಅದು ಸಾಧ್ಯವಾಗದ ಹಾಗೆ ಮಹದೇವಪ್ಪರ ಕಾಲು ಮುರಿದುಹೋಯಿತು. ಕಳೆದ ವಾರವಷ್ಟೇ ಇದೇ ಅಂಕಣದಲ್ಲಿ ಪ್ರಸ್ತಾಪಿಸಿದ್ದ ಅನ್ನಭಾಗ್ಯ ಯೋಜನೆಗಾಗಿ ಕೆಲಸ ಮಾಡುವ ಕಾರ್ಮಿಕ ಈ ಮಹದೇವಪ್ಪ, ಜುಲೈ 14ರ ಕರ್ನಾಟಕ ಶ್ರಮಿಕಶಕ್ತಿಯ ಹಕ್ಕೊತ್ತಾಯ ಸಮಾವೇಶದಲ್ಲಿ ಭಾಗವಹಿಸಿದ್ದ ಮಹದೇವಪ್ಪ, ಸರ್ಕಾರಕ್ಕೆ ಮನವಿ ಸಲ್ಲಿಸಿದ್ದನ್ನು ಕಣ್ಣಾರೆ ಕಂಡಿದ್ದರು. ಸ್ವತಃ ಆರೋಗ್ಯ ಮಂತ್ರಿಯೇ ಆಗಮಿಸಿ ಮನವಿ ಸ್ವೀಕರಿಸಿದ್ದರಿಂದ ಏನಾದರೂ ಆಗಬಹುದು ಎಂಬ ನಿರೀಕ್ಷೆಯಲ್ಲಿ ಬೆಂಗಳೂರಿನಿಂದ ಹೋಗಿದ್ದರು. ಅದಾದ ಮೂರೇ ದಿನದಲ್ಲಿ ಅವರು ನಿರೀಕ್ಷಿಸಿರದ ಅಪಘಾತ ನಡೆಯಿತು.

ಜುಲೈ 10ಕ್ಕೆ ಅಧಿಕೃತವಾಗಿ ಆರಂಭವಾದ 'ಅನ್ನಭಾಗ್ಯ' ಯೋಜನೆಯ ಅಕ್ಕಿಯನ್ನು ಪಡಿತರ ವಿತರಕ ಅಂಗಡಿಗಳಿಗೆ ಸರಬರಾಜು ಮಾಡಲು ಜುಲೈ 17ರಂದು ಮಂಡ್ಯದ ರೈತರ ಸೊಸೈಟಿಯ ಆವರಣದಿಂದ ಲಾರಿಯೊಂದು ಹೊರಟಿತು. ಅದಕ್ಕೆ ಅಕ್ಕಿಯನ್ನು ಲೋಡ್ ಮಾಡಿದ ಕಾರ್ಮಿಕರಲ್ಲಿ ಮೂವರನ್ನು ಅಂಗಡಿಯ ಹತ್ತಿರ ಅನ್‌ಲೋಡ್ ಮಾಡಲೆಂದು ಹತ್ತಿಸಿಕೊಳ್ಳಲಾಯಿತು. ಅವರಲ್ಲಿ ಮಹದೇವಪ್ಪ ಸಹ ಒಬ್ಬರು. ಮಂಡ್ಯ ನಗರವನ್ನು ದಾಟುವ ಮೊದಲೇ ಲಾರಿ ರಸ್ತೆ ಉಬ್ಬೊಂದರ ಹತ್ತಿರ ಕುಕ್ಕಿದಂತಾಯಿತು. ಲಾರಿಯಲ್ಲಿ ಪೇರಿಸಿದ್ದ ಮೂಟೆಗಳ ಮೇಲೆ ಕೂತಿದ್ದ ಮಹದೇವಪ್ಪ, ಅಲ್ಲಿಂದ ಎಸೆಯಲ್ಪಟ್ಟು ಕೆಳಕ್ಕೆ ಬಿದ್ದರು. ಬೀಳುವಾಗ ಪಕ್ಕದಲ್ಲಿದ್ದ ವಿದ್ಯುತ್ ಕಂಬಕ್ಕೆ ಕಾಲು ಬಲವಾಗಿ ತಗುಲಿತು.

ಆ ಕ್ಷಣದಲ್ಲೇ ಕಾಲಿನ ಕೆಳಗಿನ ಮೂಳೆಗಳು ಹಲವು ತುಂಡುಗಳಾಗಿ ಒಡೆದು ಹೋದವು; ಮಾಂಸಖಂಡವು ಕಿತ್ತು ಹೋಗಿ, ರಕ್ತ ಸುರಿಯಲಾರಂಭಿಸಿತು. ಮೂಳೆ ಹೊರಗೆ ಕಂಡು, ಕಾಲಿನ ಚಿತ್ರಣವೇ ಭಯಾನಕವಾಗಿ ಕಾಣುತ್ತಿತ್ತು. ಮಹದೇವಪ್ಪ ಸದಸ್ಯರಾಗಿರುವ ಕರ್ನಾಟಕ ಶ್ರಮಿಕಶಕ್ತಿ ಸಂಘಟನೆಯ ಕಾರ್ಯಕರ್ತರು ಅವರಿಗೆ ತಕ್ಷಣದಲ್ಲೇ ಚಿಕಿತ್ಸೆಗೆ ಮಂಡ್ಯ ಜಿಲ್ಲಾಸ್ಪತ್ರೆಗೆ ಕರೆದುಕೊಂಡು ಹೋದರೆ ಅಲ್ಲಿ ಕಾಲನ್ನು ಕತ್ತರಿಸಬೇಕೆಂದು ಹೇಳಿದರು; ಹಾಗಾಗಿ ಅಲ್ಲಿಂದ ಬೆಂಗಳೂರಿಗೆ ಕಳಿಸಿದ ಮೇಲೆ ಬೌರಿಂಗ್ ಆಸ್ಪತ್ರೆಯಲ್ಲಿ ದಾಖಲು ಮಾಡಿಕೊಂಡು ಶಸ್ತ್ರಚಿಕಿತ್ಸೆ ಮಾಡಿದ್ದಾರೆ. ಸದ್ಯಕ್ಕೆ ಕಾಲು ಇನ್ನೂ ಜೀವ ಉಳಿಸಿಕೊಂಡಿದೆ. ಸರ್ಕಾರೀ ಆಸ್ಪತ್ರೆಯಲ್ಲಿ ದಾಖಲಾಗಿದ್ದರೂ ಇದುವರೆಗೆ 20,000 ರೂ. ಖರ್ಚಾಗಿದೆ. ಕಾಲು ಶಾಶ್ವತವಾಗಿ ಉಳಿಯುತ್ತದೋ ಇಲ್ಲವೋ ಗೊತ್ತಿಲ್ಲ.

ಆದರೆ ಮಹದೇವಪ್ಪರಿಗೆ ಕಾಲು ಮುರಿದಾಗ ಅದರ ಹೊಣೆ ಹೊರಲು ಮಾತ್ರ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಮುಂದಾಗಲಿಲ್ಲ. ಅದೇ ದಿನ ಸಂಜೆ ಕಾರ್ಮಿಕ ಸಂಘಟನೆಯ ಕಾರ್ಯಕರ್ತರು ದಬಾಯಿಸಿದಾಗ ಮಂಡ್ಯ ಜಿಲ್ಲಾಧಿಕಾರಿಯವರು ಎಲ್ಲಾ ಚಿಕಿತ್ಸೆಯ ವೆಚ್ಚವನ್ನೂ ಉಚಿತವಾಗಿಸಲು ಬೌರಿಂಗ್ ಆಸ್ಪತ್ರೆಯ ಅಧಿಕಾರಿಗಳಿಗೆ ಸೂಚಿಸಿದರು. ಅವರ ಸೂಚನೆಗೆ ಯಾವ ಬೆಲೆಯೂ ಇರದೇ, ಅದೇ ರಾತ್ರಿಯ ಒಳಗೆ 10,000 ರೂ. ಖರ್ಚಾಗಿ ಹೋಯಿತು. ಮಾರನೆಯ ದಿನ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಯ ಹತ್ತಿರ ಹೋಗಿ ಇದರ ಬಗ್ಗೆ ವಿಚಾರಿಸಿದರೆ ಅವರ ಉತ್ತರ ಹೀಗಿತ್ತು: 'ಪ್ರಪಂಚದಲ್ಲಿ ಆಗುವ ಎಲ್ಲಾ ಬೆಳವಣಿಗೆಗಳ ಬಗ್ಗೆ ನಾನೇನು ಮಾಡೋಕಾಗುತ್ತೆ ರೀ?'

ಈಜಿಪ್ಟ್‌ನಲ್ಲಿ ಆಗುತ್ತಿರುವ ಕ್ಷಿಪ್ರ ಬೆಳವಣಿಗೆಗಳಿಗೆ ಪರಿಹಾರ ಸೂಚಿಸಲು ಈ ಅಧಿಕಾರಿಯನ್ನು ಕೇಳಲಾಗಿತ್ತೇನೋ ಎಂಬಂತೆ ಆತ ವರ್ತಿಸಿದರು. ತನ್ನದೇ ಇಲಾಖೆಯಡಿ ಕಾಲು ಶತಮಾನ ಕೆಲಸ ಮಾಡಿದ ಕಾರ್ಮಿಕ, ಕೆಲಸದಲ್ಲಿರುವಾಗಲೇ ಆದ ಅಪಘಾತದಿಂದ ಕಾಲು ಮತ್ತು ಬದುಕನ್ನು ಕಳೆದುಕೊಳ್ಳುತ್ತಿದ್ದಾನೆ ಎಂಬ ಬಗ್ಗೆ ಆ ಅಧಿಕಾರಿಯಲ್ಲಿ ಯಾವ ಸಂವೇದನೆಯೂ ಇರಲಿಲ್ಲ. ಇದರಲ್ಲಿ ಆಶ್ಚರ್ಯವೇನೂ ಇಲ್ಲ, ಏಕೆಂದರೆ ಇದೇ ರೀತಿಯಲ್ಲಿ ಈ ರಾಜ್ಯದ ಎಲ್ಲಾ ಅಕ್ಕಿ ಗೋಡೋನ್‌ಗಳನ್ನೂ ಕಳೆದ 25 ವರ್ಷಗಳಿಂದಲೂ ನಡೆಸಿಕೊಂಡು ಬರುತ್ತಿದ್ದಾರೆ. ಇದೇ ರೀತಿಯಲ್ಲಿ ಎಲ್ಲೆಲ್ಲಿ ಗುತ್ತಿಗೆ ಪದ್ಧತಿ ಇದೆಯೋ, ಅಲ್ಲೆಲ್ಲಾ ಹೀಗೇ ನಡೆಯುತ್ತದೆ.

ಮಾರನೆಯ ದಿನ ಕೇವಲ 25,000 ರೂ. ಆರಂಭಿಕ ಪರಿಹಾರ ಪಡೆದುಕೊಳ್ಳಲು ಕಾರ್ಮಿಕ ಸಂಘಟನೆಯವರು ಜಿಲ್ಲಾಧಿಕಾರಿ ಕಚೇರಿಗೆ ಮುತ್ತಿಗೆಯನ್ನೇ ಹಾಕಬೇಕಾಯ್ತು. ಪ್ರತಿಭಟನಾನಿರತರನ್ನು ಬಂಧಿಸಿ, ಜೈಲಿಗೇ ಕಳಿಸಿಬಿಡುತ್ತಾರೆನ್ನುವಷ್ಟು ಮಟ್ಟಿಗಿನ ಉದ್ವಿಗ್ನತೆ ಉಂಟಾದ್ದರಿಂದ ಪರಿಸ್ಥಿತಿಯನ್ನು ನೇರವಾಗಿ ಜಿಲ್ಲಾಧಿಕಾರಿ ನಿರ್ವಹಿಸಲು ಮುಂದೆ ಬಂದರು. ಒಂದಷ್ಟು ಜನಪರ ಕಾಳಜಿ ಇರುವ ಅಧಿಕಾರಿಯಾದ್ದರಿಂದ ತಕ್ಷಣಕ್ಕೆ ಪರಿಹಾರದ ವ್ಯವಸ್ಥೆ ಮಾಡಿದರು. ವ್ಯಂಗ್ಯವೇನೆಂದರೆ ಆ ಪರಿಹಾರವನ್ನು ಸರ್ಕಾರ ನೀಡಲಿಲ್ಲ. ಲಾರಿ ಮಾಲೀಕರ ಕಡೆಯಿಂದ ಒಂದು 'ಅಡ್ಜಸ್ಟ್‌ಮೆಂಟ್' ಹಣವಾಗಿ ಅದು ಮಹದೇವಪ್ಪರಿಗೆ ಬಂದಿತು.

ಒಂದು ವೇಳೆ ಉಳಿದುಕೊಂಡರೂ, ಇನ್ನು ಮುಂದೆ ಇದೇ ಉದ್ಯೋಗವನ್ನು ಮುಂದುವರೆಸಲಾಗದು; ಮಹದೇವಪ್ಪರ ಕುಟುಂಬದ ನಿರ್ವಹಣೆ ಕಷ್ಟ. ಮಹದೇವಪ್ಪ ಕೆಲಸ ಮಾಡುತ್ತಿದ್ದುದು ಸರ್ಕಾರದ ಸಂಸ್ಥೆಯಡಿಯಲ್ಲೇ. ಈ ಕೆಲಸವನ್ನು ಕಳೆದ 25 ವರ್ಷಗಳಿಂದ ನಿಷ್ಠೆಯಿಂದ ಮಾಡುತ್ತಿದ್ದಾರೆ. ಆ ದಿನ ಹೊತ್ತೊಯ್ಯುತ್ತಿದ್ದುದು ಸಿದ್ದರಾಮಯ್ಯ, ದಿನೇಶ್ ಗುಂಡೂರಾವ್ ಮತ್ತು ಕಾಂಗ್ರೆಸ್ ಪಕ್ಷದ ಕಿರೀಟದ ಗರಿ ಹೆಚ್ಚಿಸಿರುವ 'ಅನ್ನಭಾಗ್ಯ' ಯೋಜನೆಗೆ.



'ನೀವು ತಿನ್ನುವ ಪ್ರತೀ ಅಕ್ಕಿಯ ಕಾಳಿಗೆ ಹಮಾಲಿ ಕಾರ್ಮಿಕರ ಬೆವರು ಮೆತ್ತಿಕೊಂಡಿದೆ' ಎನ್ನುವುದು ಸಾಮಾನ್ಯವಾಗಿ ಕೇಳಿ ಬರುವ ಮಾತು. ಇನ್ನು ಮುಂದೆ ಹೀಗೆ ಹೇಳಬೇಕಾಗುತ್ತೆ 'ನೀವು ತಿನ್ನುವ ಪ್ರತೀ ಅಕ್ಕಿಯ ಕಾಳಿಗೆ ಹಮಾಲಿ ಕಾರ್ಮಿಕರ ರಕ್ತ ಮೆತ್ತಿಕೊಂಡಿದೆ'. ಮಹದೇವಪ್ಪರ ಕಾಲಿನ ಗಾಯವನ್ನು ಹತ್ತಿರದಿಂದ ಗಮನಿಸಿದರೆ ಅಕ್ಕಿ ಕಾಳುಗಳು ಕಾಣುತ್ತವೆ!

ಗುತ್ತಿಗೆ ಕಾರ್ಮಿಕ ನಿಯಂತ್ರಣ ಮತ್ತು ರದ್ದತಿ ಕಾಯ್ದೆಯ ಪ್ರಕಾರ ಗುತ್ತಿಗೆದಾರರು ಒಂದು ವೇಳೆ ನಿರ್ದಿಷ್ಟ ಸೌಲಭ್ಯವನ್ನು ಕೊಡಮಾಡದಿದ್ದರೆ ಮೂಲ ಉದ್ಯೋಗದಾತ (Principle employer) ನೇ ಅದಕ್ಕೆ ಹೊಣೆಗಾರ. ಈ ಸಂದರ್ಭದಲ್ಲಿ ಮೂಲ ಉದ್ಯೋಗದಾತ ಸರ್ಕಾರ. ಆದರೆ ಗುತ್ತಿಗೆ ನೀಡಿದ್ದರಿಂದ ನಮಗೂ ಈ ಕಾರ್ಮಿಕರಿಗೂ ಯಾವುದೇ ಸಂಬಂಧವಿಲ್ಲ ಎನ್ನುವ ಗಿಣಿಪಾಠವನ್ನು - ಕಾನೂನಿಗೆ ವಿರುದ್ಧವಾಗಿ - ಅಧಿಕಾರಿಗಳು ಕಾರ್ಮಿಕರಿಗೂ ಹೇಳುತ್ತಾರೆ. ಮಂತ್ರಿ ಕೇಳಿದರೆ ಅವರಿಗೂ ಅದನ್ನೇ ಉಲಿಯುತ್ತಾರೆ. ಮೇಲಾಗಿ, ಇಲ್ಲಿ ಪಡಿತರ ವಿತರಕ ಅಂಗಡಿಗಳಿಗೆ ಅಕ್ಕಿ ಸರಬರಾಜು ಮಾಡಲು ಇದ್ದ ಗುತ್ತಿಗೆ ಪದ್ಧತಿಯನ್ನೂ ಕಿತ್ತುಹಾಕಿದ್ದು ಸರ್ಕಾರ. ಅಂದಮೇಲೆ, ಆ ಸಂದರ್ಭದಲ್ಲಿ ಆಗುವ ಎಲ್ಲಾ ಅವಘಡಗಳಿಗೆ ಹೊಣೆಯಾಗಬೇಕಾದ್ದು ಸರ್ಕಾರ. ಆದರೆ ಕಾನೂನು, ಸಂವಿಧಾನ, ಜವಾಬ್ದಾರಿಗಳು ಹಾಳಾಗಿ ಹೋಗಲಿ, ಕನಿಷ್ಠ ಮಾನವೀಯತೆಯೂ ಇಲ್ಲದಂತೆ ವ್ಯವಸ್ಥೆ ವರ್ತಿಸುತ್ತಿದೆ.


ವಿಧಾನಸೌಧದಲ್ಲಿ ಕುಳಿತು ಮಾಡುವ ಆದೇಶಗಳು ತಳಹಂತದಲ್ಲಿ ಜಾರಿಯಾಗಬೇಕೆಂದರೆ ಸಾವಿರಾರು ಕಾರ್ಮಿಕರು ದುಡಿಯುತ್ತಾರೆ, ಅವರ ಪರಿಸ್ಥಿತಿ ಹೇಗಿದೆ ಎಂಬ ಕುರಿತು ಕನಿಷ್ಠ ಅರಿವಿಲ್ಲದೇ ವರ್ತಿಸುವ ಅಧಿಕಾರಶಾಹಿ ಧೋರಣೆಯನ್ನು ಬದಲಿಸಬೇಕಾದ್ದು ಬಹಳ ಮುಖ್ಯವಾಗಿದೆ. ಇಂತಹ ಸಂದರ್ಭದಲ್ಲಿ ದುಡಿವ ವರ್ಗವು 'ಹಕ್ಕಿ'ನ ಭಾಷೆಯಲ್ಲಿ ಮಾತಾಡಿದರೆ ಸಂಬಂಧಪಟ್ಟವರಿಗೆ ಇನ್ನೂ ಸಿಟ್ಟು ಬರುತ್ತದೆ. ಏನಿದ್ದರೂ ಬೇಡಿಕೊಳ್ಳುವ ರೀತಿಯಲ್ಲಿ ಕೇಳಿದರೆ 'ಅಡ್ಜಸ್ಟ್' ಮಾಡಿ ಭಿಕ್ಷೆ ಹಾಕುವ ರೀತಿಯಲ್ಲಿ ವರ್ತಿಸುತ್ತಾರೆ. ಈ ಸ್ಥಿತಿ ರಾಜ್ಯದ ಎಲ್ಲಾ ವಲಯದ ಗುತ್ತಿಗೆ ಮತ್ತು ಅಸಂಘಟಿತ ಕಾರ್ಮಿಕರದ್ದಾಗಿದೆ. ಇಂತಹ ಪರಿಸ್ಥಿತಿಯು ರಾಜ್ಯದಲ್ಲಿ ಮುಂದೆ ಎಂತಹ ಪ್ರತಿರೋಧದ ಸ್ವರೂಪವನ್ನು ನಿರ್ಮಾಣ ಮಾಡುತ್ತದೋ ಗೊತ್ತಿಲ್ಲ. ಆದರೆ ಈ ರೀತಿಯಲ್ಲಿ ತನ್ನ ರಾಜ್ಯವನ್ನು ಇಟ್ಟುಕೊಳ್ಳುವುದು ನಾಗರಿಕ ಸರ್ಕಾರಕ್ಕೆ ತಕ್ಕುದಲ್ಲ. ●

ಅತಂತ್ರರಾದ ಕಾರ್ಮಿಕರು

ಪರಿಸ್ಥಿತಿಯ ವಿಪರ್ಯಾಸ ನೋಡಿ. ಗುತ್ತಿಗೆ ಹಾಗೂ ಇನ್ನಿತರ ವಿಚಾರಗಳಲ್ಲಿ ಮೊದಲು ಸರ್ಕಾರ ಕಾನೂನನ್ನು ಸರಿಯಾಗಿ ಪಾಲಿಸಬೇಕು. ಅಂದರೆ 'ಮಾದರಿ ಉದ್ಯೋಗದಾತ'ನಾಗಿರಬೇಕು. ಆದರೆ ತಪ್ಪು ಮಾದರಿಗಳನ್ನು ಮೊದಲು ಕಲಿಸುವುದು ಇವರೇ ಆಗಿದ್ದಾರೆ. ಖಾಸಗಿ ಕಂಪೆನಿಗಳಲ್ಲಿ ಎಂಬಿಎ ಓದಿರುವವರಷ್ಟೇ ಉಸ್ತುವಾರಿ ಹೊರುತ್ತಾರಾದರೆ, ಸರ್ಕಾರೀ ಕಂಪೆನಿಗಳಲ್ಲಿ ಐಎಎಸ್, ಕೆಎಎಸ್ ಹೊಂದಿರುವವರು ಉಸ್ತುವಾರಿ ಹೊಂದಿರುತ್ತಾರೆ. ಇವರು ಮತ್ತಷ್ಟು ಚಾಣಾಕ್ಷರಾದ್ದರಿಂದ, ಕೆಳಗಿನ ಹಂತದಲ್ಲಿ ಜೀತಗಾರಿಕೆ ಮಾಡಿಸಿಕೊಳ್ಳುವುದು ಹೇಗೆಂಬ ಬಗ್ಗೆ ಹೆಚ್ಚಿನ ಪರಿಣಿತಿ ತೋರುತ್ತಾರೆ. ಅಂತಹದೊಂದು ಉದಾಹರಣೆ ರಾಜ್ಯ ಸರ್ಕಾರೀ ಸ್ವಾಮ್ಯದ ಕರ್ನಾಟಕ ರಾಜ್ಯ ಪಾನೀಯ ನಿಗಮದ್ದಾಗಿದೆ. ಕನಿಷ್ಠ ಮೂರು ಜನ ಐಎಎಸ್‌ಗಳು ಆಡಳಿತ ಮಂಡಳಿಯಲ್ಲಿರುವ ಈ ಸಂಸ್ಥೆಯು ರಾಜ್ಯದಲ್ಲಿ ಮಾರಾಟವಾಗುವ ಎಲ್ಲಾ ಮದ್ಯವನ್ನು ನಿರ್ವಹಿಸುತ್ತದೆ. ಸುಮಾರು 3,500 ಜನ ಕಾರ್ಮಿಕರು ಇಲ್ಲಿ ಕೆಲಸ ಮಾಡುತ್ತಾರೆ.

ಅವರಲ್ಲಿ 2,000 ಲೋಡಿಂಗ್ ಕಾರ್ಮಿಕರಿಗೆ ಯಾರು ಮಾಲೀಕರು ಎಂದು ಗೊತ್ತೇ ಆಗದ ರೀತಿಯಲ್ಲಿ ಅತಂತ್ರರನ್ನಾಗಿಸುತ್ತದೆ. ಅವರನ್ನು ಕೆಲಸ ಮಾಡಿಸುವುದು ಕೆಎಸ್‌ಬಿಸಿಎಲ್ ಮ್ಯಾನೇಜರ್, ಅವರ ಕೆಲಸದಿಂದ ಬರುವ ಹಣವನ್ನು ತೆಗೆದುಕೊಳ್ಳುವುದು ಕೆಎಸ್‌ಬಿಸಿಎಲ್ ಸಂಸ್ಥೆ, ತೆರಿಗೆ ಸೇರುವುದು ಸರ್ಕಾರಕ್ಕೆ, ಆದರೆ ಮಾಲೀಕರು ಮಾತ್ರ ಅವರಲ್ಲ. ಹಾಗಾಗಿ ಮದ್ಯದ ಬಾಟಲಿಗಳು ಒಡೆದು ಕಾರ್ಮಿಕರ ಕೈಗೆ ಗಾಯವಾದರೆ, ಕಾರ್ಮಿಕರು ಸುರಿವ ರಕ್ತ ನೋಡುತ್ತಿರುತ್ತಾರೆ; ಸರ್ಕಾರೀ ಸಂಸ್ಥೆಯ ಅಧಿಕಾರಿಗಳು ಒಡೆದ ಬಾಟಲ್ ನೋಡುತ್ತಿರುತ್ತಾರೆ. ಆ ಕಾರ್ಮಿಕರಿಗೆ ನಿಗಮವು ಒಂದು ಗುರುತಿನ ಚೀಟಿಯನ್ನೂ ದಯಪಾಲಿಸಿಲ್ಲ. ಇನ್ನು ಇತರ ಹಕ್ಕುಗಳು ದೂರವೇ ಉಳಿಯಿತು. ಅದೇ ರೀತಿ ಈ ಸಂಸ್ಥೆಯ ಸೆಕ್ಯುರಿಟಿ ಹಾಗೂ ಸಪೋರ್ಟಿಂಗ್ ಸ್ಟಾಫ್ ಸಹಾ ಅತಂತ್ರರೇ!

ಈ ಸಂಸ್ಥೆ ಮುಖ್ಯಮಂತ್ರಿ, ಸಿದ್ದರಾಮಯ್ಯನವರ ಹಣಕಾಸು ಇಲಾಖೆಯ ನೇರ ಉಸ್ತುವಾರಿಯಲ್ಲಿ ಬರುತ್ತದೆ. ಇದೇ ನಿಗಮದ ಕೇಂದ್ರ ಕಚೇರಿಯಲ್ಲಿ ಕುಳಿತೇ ಅವರು ಈ ಸಾರಿಯ ಬಜೆಟ್‌ಗೆ ಅಂತಿಮ ರೂಪುರೇಷೆ ಕೊಟ್ಟದ್ದು!



ಅಹಂ ಬ್ರಹ್ಮಾಸ್ತ್ರ

ಉದಾಹರಣೆ 1 : ಟ್ರಿಣ್ ಟ್ರಿಣ್

- ಹಲೋ
- ಹಾ. ಎಲ್ಲಿದಿ?
- ಇಲ್ಲೇ ಫ್ರೆಂಡ್ ಮನೀಗಿ ಬಂದೀನಿ.
- ನಿನ್ಗ್ಯಾವ ಫ್ರೆಂಡ್ ಅದಾನ, ಸುಳ್ಯಾಕ ಬೊಗಳತಿ.
- ನನ್ನ ಆಫೀಸ್ ಫ್ರೆಂಡ್ ಅದಾರ, ನಾ ಮನೀಗಿ ಬಂದ ಮಾತಾಡತೀನಿ.
- ನೀ ಏನಲೇ ಮಾತಾಡತಿ, ನಾಯಿ ಹಳಿ ನಾಯಿ ಒಯ್ದು ನಾಚಿಕೆ ಇಲ್ಲೇನ ನಿನಗ. ಸೀದಾ ಆಫೀಸ್ ಮುಗಿಸಿ ಮನೀಗಿ ಬರೋದು ಬಿಟ್ಟು ನಾಯಿ ಹಂಗ ತಿರಗಾಡಕತ್ತೀಯಲಾ, ನೀ ಎಂಥಾ ಗಂಡಸಲೇ.
- ನಾ ಆಮ್ಯಾಗ ಮಾತಾಡತೀನಿ.
- ನಿನ ಮಾತ ಯಾರೀಗಿ ಬೇಕಲೇ ನಾಯಿ. ನನಗೇನ ನಿನ ಮುಖಾ ನೋಡಬೇಕು ಅನಸಿಲ್ಲಾ, ಇಲ್ಲಿ ಮನ್ಯಾಗ ಬಿಟ್ಟು ಹೋಗಿಯಲಾ ನಿಮ್ಮವ್ವಗ ಆಕೀನ್ನ ಸಹಿಸಕೊಳ್ಳಾಕ ಆಗಾಂಗಿಲ್ಲ ನನಗ, ಶನಿ ಮಾರಿಯಾಕಿಯಾ ಬ್ಯಾಡ ಅಂದ್ರು ನನ್ನ ಅಡಗಿ ಮನೀಗಿ ಹೋಗ್ತಾಳ. ಆಕೀನ್ನ ಊರಿಗಿ ಕಳಸ್ತಿಯೋ ಇಲ್ಲಾ ಚೀರ್‍ಯಾಡಿ ಬಿಲ್ಡಿಂಗ್‌ದಾಗ ಗದ್ದಲಾ ಹಾಕಲ್ಯೋ?

ಉದಾಹರಣೆ 2 :

- ಮೇಡಂ ನನ್ನ ಗಂಡನ ಕಿರುಕುಳ ಸಹಿಸ್ಕೊಳ್ಳೋಕೇ ಆಗಲ್ಲ, ಹೇಗಾದ್ರು ಮಾಡಿ ಡೈವೋರ್ಸ್ ಕೊಡಿಸಿ. ಇವನ್ನ ಮದುವೆ ಆದ್ಮೇಲೆ ನನ್ನ ತಂಗೀ ಬದುಕಲ್ಲಿ, ನೆಮ್ಮದೀನೆ ಹೊರಟ್ಹೋಗಿದೆ. ನೀವೇ ಇಮ್ಯಾಜಿನ್ ಮಾಡಿ ದಿನಕ್ಕೆ 5 ರಿಂದ 10 ಸಾರಿ ತನ್ನ ಆಫೀಸ್‌ನಿಂದ ಫೋನ್ ಮಾಡಿ ಊಟಾ ಆಯ್ತಾ? ಕೆಲಸ ಆಯ್ತಾ? ನಿದ್ದೆ ಆಯ್ತಾ? ಅಂತ ಕೇಳ್ತಾನೇ ಇರ್‍ತಾನೆ. ಹೀಗೆ ಫೋನ್ ಮಾಡ್ತಾ ಇದ್ರೆ ನನ್ನ ತಂಗಿ ಮನೇಲಿ ರೆಸ್ಟ್ ತಗೋಳ್ಳೋದಾದ್ರೂ ಹೇಗೆ.
- ಅಲ್ಲಮ್ಮಾ ಮದುವೆ ಆಗಿ ಇನ್ನೂ ಆರೇಳು ತಿಂಗಳೂ ಆಗಿಲ್ಲ, ಮದುವೆ ಆದ ಹೊಸತರಲ್ಲಿ ಗಂಡ ಹೆಂಡತೀಗೆ ಫೋನ್ ಮಾಡಿದರೆ ಅದನ್ಯಾರಾದ್ರೂ ತಪ್ಪು ತಿಳ್ಕೋತಾರಾ. ಅದೂಅಲ್ಲದೆ ಏಳು ವಾರದ ಪ್ರೆಗ್ನಂಟ ಕೂಡಾ ಇದ್ದೀಯಾ ಯಾಕೆ ಆತುರದ ನಿರ್ಧಾರ ತಗೋತಿಯಾ? ಇನ್ನೊಂದ್ಸಲಾ ವಿಚಾರ ಮಾಡು.
- ಮೇಡಂ ಪ್ರೆಗ್ನಂಸಿ ಬಗ್ಗೆ ನೀವು ತಲೆ ಕೆಡಿಸ್ಕೋಬೇಡಿ ಅದನ್ನ ತೆಗೆಸಿಬಿಡ್ತೀನಿ. ನನ್ನ ತಂಗಿ ಮತ್ತೆ ಫ್ರೆಶ್ ಆಗ್ತಾಳೆ. ಆದ್ರೆ ಆ ಮಗನಿಗೆ ಮಾತ್ರ ಸುಮ್ಮನೆ ಬಿಡಬಾರ್ದು, ಒಳ್ಳೆ ಮಾತಲ್ಲಿ ಮ್ಯೂಚುವಲ್ ಡೈವೋರ್ಸ್‌ಗೆ ಒಪ್ಪಿಕೊಂಡರೆ ಸರಿ ಇಲ್ಲದಿದ್ದರೆ ಒಂದು ಡೌರಿ ಕಂಪ್ಲೇಂಟ್ ಕೊಟ್ಟು ಬಿಡೋಣ. ತಾನಾಗಿ ದಾರಿಗೆ ಬರ್‍ತಾನೆ.

ಯಾಕೆ, ಗೊಂದಲ ಆಗ್ತಾ ಇದೆಯಾ? ಇದೇನು ಯಾವುದಾದರೂ ನಾಟಕದ ಸಂಭಾಷಣೆಗಳೋ ಇಲ್ಲ ನಿಜವಾಗಿ ನಡೆದ ಮಾತುಕತೆಗಳೋ ಎಂಬ ಸಂಶಯ ಮೂಡುತ್ತಿದೆಯಾ? ಒಂದು ಕ್ಷಣ ಮನಸ್ಸು ಗಟ್ಟಿ ಮಾಡಿಕೊಳ್ಳಿ. ದುರದೃಷ್ಟವಶಾತ್ ಇವೆಲ್ಲ ಸತ್ಯ ಘಟನೆಗಳೇ. ಪರಿಸ್ಥಿತಿಯ ಬಲಿಪಶುಗಳಾದವರ ನಿಟ್ಟುಸಿರೊಂದಿಗೆ ಹೊರಬಿದ್ದ ಮಾತುಗಳು. ಅವರ ನೋವು, ಕಾನೂನಿನ ಬಗೆಗಿನ ಅಸಮಾಧಾನ ಹಾಗೂ ಏನೂ ಮಾಡಲು ಆಗದ ಅಸಹಾಯಕತೆಯಿಂದ ತೋಡಿಕೊಂಡ ಕಥೆಗಳು.

ವರದಕ್ಷಿಣೆ ತರಲಿಲ್ಲ ಎಂಬ ಕಾರಣಕ್ಕೆ ಸತ್ತು ಹೆಣಗಳಾಗುತ್ತಿರುವ, ಗಂಡನಿಗೆ ಕುಡಿಯಲು ಹಣ ಕೊಡಲಿಲ್ಲ ಎಂಬ ಕಾರಣಕ್ಕೆ ಅವನಿಂದ ಒದೆತ ತಿಂದು ನೋವನ್ನು ಸಹಿಸಿಕೊಂಡು ಬದುಕುತ್ತಿರುವ, ಗಂಡನಷ್ಟೇ ದುಡಿದು ಸಂಪಾದಿಸಿದರೂ ತನ್ನ ಅಗತ್ಯಗಳಿಗೆ ಗಂಡನ ಎದುರು ಕೈಚಾಚುತ್ತ ಬದುಕಬೇಕಾಗಿರುವ ಹೆಂಗಸರ ಗೋಳಾಟದ ಕಥೆಗಳು ನಮ್ಮ ಮುಂದೆ ಎಣಿಸಲು ಆಗದಷ್ಟು ಸಂಖ್ಯೆಯಲ್ಲಿ ಇರುವಾಗ ಈ ಮೇಲೆ ಹೇಳಿದ ಕಥೆಗಳನ್ನು ನಂಬುವುದು ಸ್ವಲ್ಪ ಕಷ್ಟವಾಗುತ್ತದೆ.

ನೂರಾರು ವರ್ಷದಿಂದ ಕಷ್ಟ ಅನುಭವಿಸಿ, ನೋವು ನುಂಗಿಕೊಂಡು ಬದುಕುತ್ತಿದ್ದ ಹೆಂಗಸರಿಗೆ ಒಂದು ಗೌರವಯುತ ಸ್ಥಾನಮಾನ ಕಲ್ಪಿಸಲು ಸರ್ಕಾರ ಮತ್ತು ಅದೆಷ್ಟೋ ಸಂಘ ಸಂಸ್ಥೆಗಳು ಹೆಣಗಾಡಿ ನಿರಂತರ ಪ್ರಯತ್ನಪಟ್ಟದ್ದರಿಂದ ಇವತ್ತು ಇಷ್ಟೊಂದು ಮಹಿಳಾ ಪರ ಕಾನೂನುಗಳನ್ನು ನೋಡಬಹುದು. ವರದಕ್ಷಿಣೆ ನಿಷೇಧ ಕಾಯ್ದೆ, ಕೌಟುಂಬಿಕ ದೌರ್ಜನ್ಯ ನಿಷೇಧ ಕಾಯ್ದೆ ಇವು ಕೆಲವು ಉದಾಹರಣೆ ಮಾತ್ರ. ಇವನ್ನು ಬಿಟ್ಟು ಸಹ ಉಳಿದ ಕಾನೂನುಗಳಲ್ಲಿ ಆಗಾಗ ಬದಲಾವಣೆ ತಿದ್ದುಪಡಿ ಮಾಡುತ್ತ ಹೆಂಗಸರಿಗೆ ಅನುಕೂಲ ಆಗುವಂತಹ ಮಾರ್ಪಾಟುಗಳನ್ನು ಮಾಡಲಾಗಿದೆ. ಈ ಎಲ್ಲ ಪ್ರಯತ್ನಗಳೂ ಹೆಂಗಸರ ಆತ್ಮವಿಶ್ವಾಸವನ್ನು ಹೆಚ್ಚು ಮಾಡಿವೆ. ಕಾನೂನಿನ ಬಗ್ಗೆ ಇರುವ ಸ್ವಲ್ಪ ತಿಳಿವಳಿಕೆ ಕೂಡ ಅದೆಷ್ಟೋ ಸಲ ಹೆಂಗಸರಿಗೆ ರಕ್ಷೆಯಾಗಿ ಕೆಲಸ ಮಾಡಿದೆ. ಚರ್ಚಿಸಬೇಕಾದ ಅಂಗ ಎಂದರೆ, ಈ ಎಲ್ಲ ಕಾಯ್ದೆ ಕಾನೂನುಗಳಿಗೆ ಇದೊಂದೇ ಮುಖ ಇದೆಯಾ ಇಲ ಬೇರೆ ಮಜಲುಗಳೂ ಇವೆಯಾ? ಎಂಬುದು.


ಬೇರೆ ಮುಖ ಖಂಡಿತ ಇದೆ. ಆದರೆ ಅದನ್ನು ಒಪ್ಪಿಕೊಳ್ಳಲು ಮನಸ್ಸು ಬೇಕು. ಮುಖ್ಯವಾಗಿ ಸಮಸ್ಯೆಯನ್ನು ನಿಷ್ಪಕ್ಷಪಾತದಿಂದ ವಿಶ್ಲೇಷಿಸುವ ಮನಸ್ಸು ಬೇಕು. ಯಾವುದೇ ಕಾನೂನು ಇರಲಿ ಅದರ ಲಾಭ ಪಡೆಯುವ ಸಮೂಹ ಒಂದು ಕಡೆ ಇದ್ದರೆ ಅದರ ದುರುಪಯೋಗ ಪಡೆಯುವ ಗುಂಪು ಕೂಡ ಜೊತೆಗೇ ಹುಟ್ಟುಕೊಂಡಿರುತ್ತದೆ. ಕೆಲವು ಜನ ದುರುಪಯೋಗ ಪಡೀತಾರೆ ಎನ್ನುವ ಒಂದೇ ಕಾರಣಕ್ಕೆ ಕಾನೂನನ್ನೇ ಬೈಯ್ಯುವುದು, ಅಣಕಿಸುವುದು ಸರಿಯಲ್ಲ. ಬೆಳೆಯ ಜೊತೆ ಕಳೆಯೂ ಹುಟ್ಟಿಕೊಳ್ಳುತ್ತದೆ ಎನ್ನುವ ಕಾರಣಕ್ಕೆ ಯಾರೂ ಬೆಳೆ ಬೆಳೆಯುವುದನ್ನೇ ನಿಲ್ಲಿಸುವುದಿಲ್ಲ.

ಈ ಲೇಖನ ಮಾಲೆಯಲ್ಲಿ ವ್ಯಕ್ತವಾಗುವ ಅಂಶಗಳು, ಮಹಿಳಾ ಪರ ಕಾನೂನಿನಿಂದ ತೊಂದರೆಗೆ ಒಳಗಾಗಿರುವ, ಬಲಿಪಶುಗಳಾಗಿರುವ ಹಲವಾರು ವ್ಯಕ್ತಿಗಳ ಸ್ವಂತ ಅನುಭವದಿಂದ ಹೊರ ಹೊಮ್ಮಿರುವಂಥವು. ಇದರಲ್ಲಿ ಕೆಲವರ ಕಷ್ಟ ಕಂಡು ಮನಸ್ಸು ಕರಗಿದರೆ ಕೆಲವರ ಬಗ್ಗೆ ಕನಿಕರ ಬರುತ್ತದೆ. ಹಾಗೆಂದ ಮಾತ್ರಕ್ಕೆ ಈ ಕಥೆಗಳಲ್ಲಿ ಬರುವ ಹೆಂಗಸರೆಲ್ಲಾ ಖಳನಾಯಕಿಯರು ಎಂತಲೂ ಅಲ್ಲ. ಅವರಲ್ಲಿ ಎಷ್ಟೋ ಜನ ಸರಿಯಾದ ಮಾರ್ಗದರ್ಶನ ಇಲ್ಲದವರು; ಕೆಲವರು ಸಿಟ್ಟು, ಆತಂಕದ ಕಾರಣದಿಂದ ಇಂಥ ಮಾರ್ಗ ಹಿಡಿದವರು. ಉಳಿದ ಒಂದು ಸಣ್ಣ ಪ್ರಮಾಣದ ಹೆಂಗಸರು ನಿಜವಾಗಿಯೂ ಕಾನೂನಿನ ದುರುಪಯೋಗ ಪಡೆಯುತ್ತಿರುವವರು. ಈ ಒಂದು ಸಣ್ಣ ಗುಂಪು ಮಾಡುತ್ತಿರುವ ಕಾನೂನಿನ ದುರುಪಯೋಗದಿಂದಾಗಿ ಎಷ್ಟೋ ಸಾರಿ ಕಾನೂನನ್ನೇ ತಪ್ಪು ದೃಷ್ಟಿಯಿಂದ ನೋಡಲಾಗುತ್ತದೆ. ಈ ಪರಿಸ್ಥಿತಿ ಹೋಗಬೇಕಾದರೆ ನ್ಯಾಯಾಲಯಗಳು, ಮಹಿಳಾ ಪರ ಸಂಘಸಂಸ್ಥೆಗಳು, ಪ್ರತಿಯೊಂದು ಸಮಸ್ಯೆಯನ್ನು ಪ್ರತ್ಯೇಕ ನೆಲೆಗಟ್ಟಿನಿಂದಲೇ ನೋಡಿ ವಿಶ್ಲೇಷಿಸಬೇಕು. ಗಂಡು ಹೆಣ್ಣು ಇಬ್ಬರ ಬಗೆಗಿನ ಪೂರ್ವಾಗ್ರಹಗಳನ್ನು ಬದಿಗಿಟ್ಟು ಸಮಸ್ಯೆಗಳನ್ನು ಬಗೆಹರಿಸಬೇಕು.

ಲೋಕೇಶ್ ಒಬ್ಬ ಪ್ರತಿಭಾವಂತ ಯುವಕ. ಓದಿನಲ್ಲಿ ಚುರುಕಾಗಿದ್ದ. ಹಿಂದುಳಿದ ವರ್ಗದ ಅವಿದ್ಯಾವಂತ ಕುಟುಂಬದಲ್ಲಿ ಹುಟ್ಟಿದ್ದ ಈತ ಚೆನ್ನಾಗಿ ಓದಿ ಮುಂದೆ ಬರುವುದನ್ನು ನೋಡಿದಾಗ ಆತನ ತಂದೆತಾಯಿಯ ಜೊತೆಗೇ ಇತರ ಹತ್ತಿರದ ಸಂಬಂಧಿಗಳ ಕನಸುಗಳೂ ಚಿಗುರೊಡೆಯ ತೊಡಗಿದವು. ಈತ ಎಲ್ಲರ ಕೈಹಿಡಿದು ಮೇಲೆತ್ತುತ್ತಾನೆ. ಸಮಾಜದಲ್ಲಿ ಇಲ್ಲಿಯವರೆಗೆ ಸಿಗದಿದ್ದ ಸ್ಥಾನಮಾನ, ಗೌರವ ಪಡೆಯಲು ಅವಕಾಶ ಮಾಡಿಕೊಡುತ್ತಾನೆ ಎಂದು ಕನಸು ಕಾಣಲು ಶುರು ಮಾಡಿದರು. ಲೋಕೇಶ ಅವರ ಅನಿಸಿಕೆ ಹುಸಿ ಮಾಡಲಿಲ್ಲ, ಎರಡೆರಡು ಸ್ನಾತಕೋತ್ತರ ಪಡೆದು ಒಳ್ಳೆಯ ಕಡೆ ಕೆಲಸಕ್ಕೆ ಸೇರಿದ. ಅವನ ಅದೃಷ್ಟ ಎನ್ನುವಂತೆ ಅದೇ ಸಮಯಕ್ಕೆ ಕೆಪಿಎಸ್‌ಸಿ ಪರೀಕ್ಷೆಗೆ ಕರೆಯಿತು. ಶ್ರದ್ಧೆಯಿಂದ ಪರೀಕ್ಷೆ ಬರೆದ ಲೋಕೇಶ್ ಪಾಸಾಗಿದ್ದೂ ಅಲ್ಲದೆ ಇಂಟರ್‌ವ್ಯೂ ಅನ್ನೂ ಸರಿಯಾಗಿ ಮಾಡಿ ತಹಶೀಲ್ದಾರನಾಗಿ ಹೊರಬಂದ. ಅವನ ತಂದೆತಾಯಿಯ ಸಂತೋಷಕ್ಕೆ ಮಿತಿಯೇ ಇರಲಿಲ್ಲ, ಇನ್ನು ಜೀವನದಲ್ಲಿ ಯಾವ ನೋವಿಗೂ ಜಾಗ ಇಲ್ಲ ಎಂದುಕೊಂಡು ಸಂಭ್ರಮಿಸಿದರು.

ಆದರೆ ಅವರ ಖುಷಿ ಬಹಳ ದಿನ ಉಳಿಯಲಿಲ್ಲ, ಉತ್ತರ ಕರ್ನಾಟಕದ ಹಳ್ಳಿಯೊಂದರಲ್ಲಿ ಬೆಳೆದ ಸಾಮಾನ್ಯ ಯುವಕ ಈಗ ಅವರ ಸಮುದಾಯದಲ್ಲಿ ದೊಡ್ಡ ವ್ಯಕ್ತಿಯಾಗಿದ್ದ. ಮೈಸೂರಿನಿಂದ ಲೋಕೇಶನಿಗೆ ಮದುವೆಯ ಪ್ರಸ್ತಾಪ ಬಂತು. ಹುಡುಗಿ ನೋಡಲು ಚೆನ್ನಾಗಿದ್ದಳು, ಓದಿಕೊಂಡಿದ್ದಳು. ಇವಳನ್ನು ಮದುವೆ ಆದರೆ ತನ್ನ ಪ್ರಯತ್ನಗಳಿಗೆ ಕೈಜೋಡಿಸುತ್ತಾಳೆ ಎಂದುಕೊಂಡು ಲೋಕೇಶ್ ಒಪ್ಪಿ ಮದುವೆ ಆದ. ಹುಡುಗಿಯ ತಂದೆ ಸರ್ಕಾರಿ ಇಲಾಖೆಯೊಂದರಲ್ಲಿ ಸಾಮಾನ್ಯ ಗುಮಾಸ್ತ, ಆದರೆ ಅವನು ಗಳಿಸಿದ ಆಸ್ತಿ ಎಂಥವರನ್ನೂ ಗಾಬರಿ ಮಾಡುವಂತಿತ್ತು. ಮದುವೆಯ ನಂತರ ಲೋಕೇಶನ ಹೆಂಡತಿ ಮಂಜುಳಾ ಗಂಡನ ಮನೆಗೆ ಬರಲು ಒಪ್ಪಲಿಲ್ಲ, ತಂದೆತಾಯಿಯರನ್ನು ಬಿಟ್ಟು ಬರಲು ಆಗುವುದಿಲ್ಲ ಅವರಿಗೆ ಬೇರೆ ಯಾರೂ ಜೊತೆ ಇಲ್ಲ ಎಂಬ ಸಬೂಬು ಹೇಳಿ ಅಲ್ಲಿಯೇ ಉಳಿದಳು. ಹೊಸ ದಾಂಪತ್ಯವಾದ್ದರಿಂದ ಲೋಕೇಶನೇ ಹೋಗಿಬರುವುದು ಮಾಡುತ್ತಿದ್ದ. ಮಂಜುಳಾ ಗರ್ಭಿಣಿ ಆದಾಗ ಸ್ವಲ್ಪ ದಿನಗಳ ಮಟ್ಟಿಗಾದರೂ ಬಂದು ಹೋಗು. ಇಲ್ಲದಿದ್ದರೆ ಊರಿನಲ್ಲಿ ಜನ ತಪ್ಪು ತಿಳಿದುಕೊಳ್ಳುತ್ತಾರೆ ಎಂದು ಲೋಕೇಶ್ ಆಕೆಯ ಮನವೊಲಿಸಿ ಕರೆತಂದ. ಆದರೆ ಕೇವಲ ಒಂದು ತಿಂಗಳಲ್ಲಿ ಆಕೆ ಇಲ್ಲಿಯ ವಾತಾವರಣ, ಜೀವನಶೈಲಿಗೆ ಹೊಂದಿಕೊಳ್ಳಲು ಆಗುವುದಿಲ್ಲ ಎಂದು ನೆಪವೊಡ್ಡಿ ಮೈಸೂರಿಗೆ ವಾಪಸು ಹೋದಳು. ಕೆಲವು ತಿಂಗಳ ನಂತರ ಹೆಣ್ಣು ಮಗುವಿಗೆ ಜನ್ಮ ಕೊಟ್ಟ ಮಂಜುಳಾ ನಿಧಾನವಾಗಿ ಲೋಕೇಶನ ಬಗ್ಗೆ ಅಸಡ್ಡೆ ತಾಳಲು ಶುರು ಮಾಡಿದಳು.

ಲೋಕೇಶ್ ಒಂದು ಜಾಗದಿಂದ ಇನ್ನೊಂದಕ್ಕೆ ವರ್ಗಾವಣೆ ಆದಾಗ ಒಂದು ಬಾರಿಯೂ ಅವನೊಂದಿಗೆ ಹೋಗಿ ವಾಸಿಸಲಿಲ್ಲ, ಕಾರಣ ಕೇಳಿದರೆ ಜೀವನಶೈಲಿ ಹೊಂದಾಣಿಕೆ ಆಗುವುದಿಲ್ಲ ಎಂಬ ಉತ್ತರ ಕೊಟ್ಟಳು. ಬರಬರುತ್ತ ಕೆಲಸದಲ್ಲಿ ನಿರತನಾದ ಲೋಕೇಶ್, "ಆಗಾಗ ಮೈಸೂರಿಗೆ ಬರುವುದು ಕಷ್ಟವಾಗುತ್ತದೆ. ಮಗುವಿನೊಂದಿಗೆ ಕಾಲ ಕಳೆಯಬೇಕು ಕರೆದುಕೊಂಡು ಬಾ" ಎಂದಾಗ ಮಂಜುಳಾ ಸಾರಾಸಗಟಾಗಿ ಒಲ್ಲೆ ಎಂದಳು. ನಂತರ ಮೈಸೂರಿಗೆ ಹೋದ ಲೋಕೇಶನಿಗೆ ಮಗುವಿನ ಮುಖವನ್ನೂ ತೋರಿಸಲಿಲ್ಲ, ಅನೇಕ ಬಾರಿ ಪ್ರಯತ್ನಪಟ್ಟು ಯಾರ್‍ಯಾರ ಕಡೆಯಿಂದಲೋ ಹೇಳಿಸಿ ನೋಡಿದರೂ ಪ್ರಯೋಜನವಾಗಲಿಲ್ಲ, ಹೀಗೇ ವರ್ಷಗಳು ಕಳೆದವು ಆದರೆ ಮಂಜುಳಾಳ ಹಠ ಕಡಿಮೆ ಆಗಲಿಲ್ಲ. ಕೊನೆಗೆ ಬೇಸತ್ತ ಲೋಕೇಶ ಮೈಸೂರಿನ ನ್ಯಾಯಾಲಯದಲ್ಲಿ ಮಾನಸಿಕ ಕಿರುಕುಳದ ಆಧಾರದ ಮೇಲೆ ವಿಚ್ಛೇದನ ಕೋರಿ ಅರ್ಜಿ ಸಲ್ಲಿಸಿದ. ಈ ವಿಷಯ ತಿಳಿದದ್ದೇ ತಡ, ಮಂಜುಳಾ ಲೋಕೇಶನಿಗೆ ಸರಿಯಾದ ಬುದ್ಧಿ ಕಲಿಸುತ್ತೇನೆ ಎಂದು ಪಣ ತೊಟ್ಟಳು. ಅವಳ ನಿರ್ಧಾರದಲ್ಲಿ ನೋವು, ಹತಾಶೆಗಿಂತ ಹೆಚ್ಚಾಗಿ ಸೇಡು ತುಂಬಿದಂತಿತ್ತು.



ಲೋಕೇಶನ ಒಂದು ಕೇಸಿಗೆ ಪ್ರತಿಯಾಗಿ ಮಂಜುಳಾ ಒಂದರಹಿಂದೆ ಒಂದು ಕೇಸು ಹಾಕಲು ಪ್ರಾರಂಭಿಸಿದಳು. ಮಂಜುಳಾಗೆ ಪತಿ ತನ್ನನ್ನು ತ್ಯಜಿಸಲು ಮುಂದಾಗಿದ್ದನ್ನು ಸಹಿಸಲು ಆಗಲಿಲ್ಲ, ಆತನ ಆ ನಿರ್ಧಾರದ ಹಿಂದಿರುವ ಕಾರಣವನ್ನು ಅವಳು ನೋಡಲೇ ಇಲ್ಲ, ಬದಲಿಗೆ ದ್ವೇಷ ಸಾಧಿಸಲು ಮುಂದಾದಳು. ಮೈಸೂರಿನಲ್ಲೇ ಇದ್ದುಕೊಂಡು ಲೋಕೇಶನ ಮೇಲೆ ಜೀವನಾಂಶಕ್ಕಾಗಿ ಕೇಸು ಹಾಕಿದಳು. ಕೋರ್ಟಿನ ತೀರ್ಪು ಅವಳ ಪರವಾಗಿ ಬಂದಾಗ ಮಂಜುಳಾಗೆ ವಿಚಿತ್ರ ಧೈರ್ಯ ಬಂದಂತಾಗಿ ಅತ್ಯಂತ ಗಟ್ಟಿಯಾಗಿ ನಿಂತು ಗಂಡ ಹಾಕಿದ ವಿಚ್ಛೇದನದ ಕೇಸನ್ನು ವಿರೋಧಿಸಿದಳು.

ಅಷ್ಟೇ ಅಲ್ಲದೆ ಈ ಹಿಂದೆ ಗಂಡನ ಮನೆಯಲ್ಲಿ ಕಳೆದ ಆ ಸ್ವಲ್ಪ ಅವಧಿಯನ್ನೇ ಆಧಾರವಾಗಿಟ್ಟುಕೊಂಡು ಗಂಡನ ಮನೆಯ ಎಲ್ಲ ಸದಸ್ಯರ ಮೇಲೆ ವರದಕ್ಷಿಣೆ ಕಿರುಕುಳದ ದೂರು ದಾಖಲಿಸಿದಳು. ಅವಳ ಸಿಟ್ಟು ಇಲ್ಲಿಗೇ ಮುಗಿಯಲಿಲ್ಲ, ಬೆಂಗಳೂರಿನಲ್ಲಿರುವ ಮಹಿಳಾ ಆಯೋಗದ ಮುಂದೆ 'ತನ್ನ ಗಂಡ ಇನ್ನಾವುದೋ ಹೆಂಗಸಿನೊಂದಿಗೆ ಸಂಬಂಧ ಹೊಂದಿರುವುದಾಗಿಯೂ ಅವಳನ್ನು ಕರೆದು ವಿಚಾರಣೆ ನಡೆಸಬೇಕೆಂದೂ ಮನವಿ ಸಲ್ಲಿಸಿದಳು. ಎಂದೋ ಗಂಡನ ಬಾಯಿಂದ ಕೇಳಿದ ಹೆಂಗಸಿನ ಹೆಸರನ್ನು ಇದಕ್ಕೆ ಬಳಸಿಕೊಂಡಳು.

ಕೆಲವೊಮ್ಮೆ ಮಹಿಳೆಯ ಹಿತರಕ್ಷೆ ಹಾಗೂ ಗೌರವ ಕಾಪಾಡಲು ಎಂದೇ ಹುಟ್ಟಿಕೊಂಡ ಸಂಸ್ಥೆಗಳು ಹೇಗೆ ತಮ್ಮ ಉತ್ಸಾಹ ಹಾಗೂ ಅಧಿಕಾರ ಚಲಾಯಿಸುವ ಭರದಲ್ಲಿ ತಮ್ಮ ವಿವೇಚನೆಯನ್ನು ಕಳೆದುಕೊಳ್ಳುತ್ತವೆ ಎನ್ನುವುದಕ್ಕೆ ಈ ಘಟನೆಯೇ ಸಾಕ್ಷಿ. ಮಂಜುಳಾಳಂತಹ ಹೆಣ್ಣಿಗೆ ನಾವು ನ್ಯಾಯ ಒದಗಿಸುತ್ತೇವೆ ಎಂಬ ಭ್ರಮೆಯಲ್ಲಿ ಅವಳು ಯಾವುದೇ ಆಧಾರವಿಲ್ಲದೆ ಸಾಕ್ಷಿ ಪುರಾವೆಗಳಿಲ್ಲದೆ ಹೆಸರಿಸಿದ ಹೆಂಗಸು ಹಾಗೂ ಲೋಕೇಶನಿಗೆ ಬಂದು ವಿಚಾರಣೆಗೆ ಹಾಜರಾಗುವಂತೆ ಆಯೋಗ ನೋಟಿಸು ಕಳಿಸಿತು. ಹಿಂದೆ ಮುಂದೆ ಗೊತ್ತಿಲ್ಲದೆ ಗಾಬರಿಯಲ್ಲಿ ವಿಚಾರಣೆಗೆ ಹಾಜರಾದ ಹೆಂಗಸಿನ ಮೇಲೆ, ಮಂಜುಳಾ ಹಾಗೂ ಅವಳ ಸಹಚರರು ಹಲ್ಲೆ ನಡೆಸಿ ಬಾಯಿಗೆ ಬಂದಂತೆ ಬಯ್ದು ಅವರಿನ್ನೂ ಎಚ್ಚೆತ್ತುಕೊಳ್ಳುವ ಮೊದಲೇ ಹತ್ತಿರದ ಪೊಲೀಸ್ ಸ್ಟೇಷನ್ನಿಗೆ ಹೋಗಿ ಲೋಕೇಶ್ ಹಾಗೂ ಇನ್ನೊಬ್ಬ ಹೆಂಗಸು ಸೇರಿ ತನ್ನ ಮೇಲೆ ಹಲ್ಲೆ ಮಾಡಿದರು ಎಂಬ ದೂರು ನೀಡಿದಳು. ಸ್ವಲ್ಪ ಸಮಯದಲ್ಲೇ ಲೋಕೇಶ್ ಕೂಡ ಬಂದು ಮಂಜುಳಾ ವಿರುದ್ಧ ದೂರು ನೀಡಿದರು. ಆದರೆ ಮಂಜುಳಾ ಏನನ್ನೋ ಸಾಧಿಸಿದ ಹುರುಪಿನಲ್ಲಿದ್ದಳು.

ಮಹಿಳೆಯೊಬ್ಬಳು ಇನ್ನೊಬ್ಬ ಮಹಿಳೆಯ ವಿರು ತನ್ನನ್ನು ದಾಳದಂತೆ ಬಳಸಿದರೂ ಏನೂ ಮಾಡಲಾಗದ ಸ್ಥಿತಿಯಲ್ಲಿ ಮಹಿಳಾ ಆಯೋಗ ನಿಂತಿತ್ತು. ಇದೇ ಸಮಯ ದುರದೃಷ್ಟವಶಾತ್ ಲೋಕೇಶ್ ದಾಖಲಿಸಿದ ವಿಚ್ಛೇದನದ ಕೇಸು ಸಾಕ್ಷ್ಯಾಧಾರಗಳ ಕೊರತೆಯಿಂದ ವಜಾ ಆಯಿತು.

ಅಕಸ್ಮಾತ್ ಇಷ್ಟೇ ಆಗಿದ್ದರೆ ಬಹುಶಃ ಲೋಕೇಶ ಅಷ್ಟೊಂದು ತಲೆ ಕೆಡಿಸಿಕೊಳ್ಳುತ್ತಿರಲಿಲ್ಲವೇನೋ. ಆದ ಅವನ ವೈಯಕ್ತಿಕ ಜೀವನದಲ್ಲಿ ನಡೆಯುತ್ತಿರುವ ಎ ಘಟನೆಗಳು ಅವನ ವೃತ್ತಿಜೀವನದಲ್ಲಿ ವ್ಯತಿರಿಕ್ತ ಪರಿಣಾಮ ಬೀರಲು ಪ್ರಾರಂಭಿಸಿದಾಗ ಅವನು ಸಹಿಸದಾದ. ತಾ ದಾಖಲಿಸಿದ ವಿಚ್ಛೇದನ ಅರ್ಜಿ ವಜಾ ಆದಾ ಹೈಕೋರ್ಟಿನಲ್ಲಿ ಅದರ ವಿರುದ್ಧ ಮೇಲ್ಮನವಿ ಸಲ್ಲಿಸಿದ ಮಂಜುಳಾ ಅದೆಷ್ಟು ಚಾಕಚಕ್ಯತೆಯಿಂದ ತನ್ನ ಕಾರ್ಯ ಸಾಧಿಸಿಕೊಂಡಳೆಂದರೆ ಹೈಕೋರ್ಟಿನ ನ್ಯಾಯಾಧೀಶ ಎದುರು ತಾನು ಗಂಡನ ಜೊತೆ ವಾಸಿಸಲು ಇಚ್ಛೆಪಡುವುದಾಗಿ ತಿಳಿಸಿ ನ್ಯಾಯಾಧೀಶರ ಮನಗೆದ್ದಳು. ನ್ಯಾಯಾಧೀಶರು ಲೋಕೇಶನ ಇಚ್ಛೆ ಕೇಳಿದಾಗ ಆ 'ಮಂಜುಳಾ ತನ್ನ ವಿರುದ್ಧ ದಾಖಲಿಸಿದ ಕ್ರಿಮಿನಲ್ ಮೊಕದ್ದಮೆಗಳನ್ನು ಹಿಂತೆಗೆದುಕೊಂಡು ಬರುವುದಾದ ಅವಳ ಜೊತೆಗೆ ಬದುಕಲು ತಯಾರು' ಎಂದು ಹೇಳಿದ ಅದರಂತೆ ಮಂಜುಳಾ ಒಪ್ಪಿ ನ್ಯಾಯಾಧೀಶರ ಎದುರು ತಾನು ಕೇಸು ಹಿಂತೆಗೆದುಕೊಳ್ಳುವುದಾಗಿ ಒಪ್ಪಿ ಸಂಧಾ ಅರ್ಜಿ ಬರೆದು ಸಹಿ ಹಾಕಿ ಕೊಟ್ಟಳು. ಅದರಂ ಲೋಕೇಶನ ಮೇಲ್ಮನವಿಯನ್ನು ವಜಾ ಮಾಡಲಾಯಿತು. ಮಂಜುಳಾಳ ಹುನ್ನಾರಗಳನ್ನು ತಿಳಿಯದ ಲೋಕೇಶ ಅಂತೂ ತನ್ನ ದುಃಖಗಳಿಗೆ ಒಂದು ಕೊ ಬಂತೆಂದುಕೊಂಡ. ಆದರೆ ಅವನ ಅನಿಸಿಕೆಗಳಿಗೊಂದು ಆಘಾತ ಕಾದಿತ್ತು. ಮಂಜುಳಾ ಬರಲೇ ಇಲ್ಲ. ಯಾ ಎಂದು ಕೇಳಿದರೆ 'ಮತ್ತೆ ನಿನ್ನ ಜೊತೆ ಬಂದು ಬಾಳುತ್ತೇ ಎಂದುಕೊಂಡೆಯಾ? ನಿನ್ನ ಕೇಸು ಹಾಳು ಮಾಡಲು ಹಾಗೆ ಮಾಡಿದೆ' ಎಂದು ಹೇಳಿ ತನ್ನ ಜೀವನಕ್ಕೆ ಒಂದ ಒಳ್ಳೆ ತಿರುವು ಕೊಡಬಹುದಾದ ಅವಕಾಶವನ್ನು ತಾನೆ ಹಾಳು ಮಾಡಿಕೊಂಡಳು.

ಗಾಯದ ಮೇಲೆ ಬರೆ ಎಳೆದಂತೆ ಲೋಕೇಶ ಇಲಾಖೆಯು ಅವನ ಬಡ್ತಿಯನ್ನು ತಡೆಹಿಡಿದಿರುವುದಾ ಪತ್ರ ಕಳಿಸಿತು. ಕಂಗಾಲಾದ ಲೋಕೇಶ್ ಏಕೆ ಎಂದ ಕೇಳಿದಾಗ ಕಾರಣವನ್ನು ಕೇಳಿ ಅವನಿಗೆ ನಂಬಲೇ ಆಗಲಿ 'ನಿಮ್ಮ ಹೆಂಡತಿ ನಿಮ್ಮ ಮೇಲೆ ವರದಕ್ಷಿಣೆ ಕಿರುಕು ದೂರು ದಾಖಲಿಸಿರುವುದು, ಕ್ರಿಮಿನಲ್ ಕೇಸ ಇರುವವರೆಗೂ ನಿಮಗೆ ಬಡ್ತಿ ನೀಡಲಾಗುವುದಿಲ್ಲ' ಎಂದ ಹೇಳಿದರು. ಎಷ್ಟೆಷ್ಟೋ ರೀತಿಯಿಂದ ಅದನ್ನು ಪ್ರಶ್ನಿಸಿದರು ಪರಿಣಾಮ ಮಾತ್ರ ಬರಲಿಲ್ಲ, ಲೋಕೇಶನ ಜೊತೆ ಕೆಲಸ ಸೇರಿದ ಅವನ ಸಹೋದ್ಯೋಗಿಗಳೆಲ್ಲ ಬಡ್ತಿ ಪಡೆದ ಉಪ-ವಿಭಾಗಾಧಿಕಾರಿ (A.C)ಗಳಾಗಿ ಕೆಲಸ ಮಾಡಲ ಶುರು ಮಾಡಿದಾಗ ಲೋಕೇಶ್ ತನ್ನ ಅಸಹಾಯಕತೆಯ ಬಗ್ಗೆ ಸಂಕಟಪಟ್ಟುಕೊಂಡ. ಆದರೆ ಏನು ಮಾಡಲು ತೋಚಲಿಲ್ಲ, ಕೊನೆಗೆ ತನ್ನ ಸ್ವಾಭಿಮಾನವನ್ನು ಬದಿಗೊ ಹೆಂಡತಿಗೆ ಕೈಮುಗಿದು ದಯವಿಟ್ಟು ಕೇಸ ಹಿಂತೆಗೆದುಕೊಳ್ಳುವಂತೆ ಕೇಳಿದ. ಅದಕ್ಕೆ ಅವಳು ಇ ಷರತ್ತನ್ನು ಕೇಳಿ ಭೂಮಿ ಕುಸಿದಂತಾಯ್ತು ಅವನಿಗೆ. ಅವ ಹೇಳಿದ್ದಿಷ್ಟೆ 'ಸರಿ ಹಿಂತೆಗೆದುಕೊಳ್ತೀನಿ. ಆದರೆ ಅದ ಮೊದಲು ನೀನು ನಿನ್ನ ಹುದ್ದೆಗೆ ರಾಜೀನಾಮೆ ಕೊಡಬೇಕು ನೀನು ಕಂಗಾಲಾಗಿ ಬೀದಿಗೆ ಬಂದರೆ ನಾನೇ ಕೇ ಹಿಂತೆಗೆದುಕೊಳ್ತೀನಿ' ಎಂದು.


ಅಷ್ಟರಲ್ಲಾಗಲೇ ಮತ್ತೊಮ್ಮೆ ಬಡ್ತಿ ಪ್ರಕ್ರಿಯೆಗಳು ನಡ ಲೋಕೇಶನ ಕಿರಿಯ ಸಹೋದ್ಯೋಗಿಗಳು ಕೂಡ ಬ ಪಡೆದು ಅವನ ಮೇಲಾಧಿಕಾರಿಗಳಾಗಿ ಬಂದಾಗ ಅವ ನೋವು, ಸಂಕಟ ಕೇಳುವವರಿಲ್ಲದಂತಾಗಿತ್ತು.

ಆದರೆ ಎಲ್ಲದಕ್ಕಿಂತ ದೊಡ್ಡದಾದರೂ, ಯಾರ ಕಣ್ಣಿ ಕಾಣದಂತಹ ನಷ್ಟವೊಂದು ಆಗಿತ್ತು. ಅದರ ಬಗ್ಗೆ ವಿಚಾ ಮಾಡಲೂ ಯಾರಿಂದಲೂ ಸಾಧ್ಯವಾಗಿರಲಿಲ್ಲ. ಅ ಲೋಕೇಶ್ ಹಾಗೂ ಮಂಜುಳಾರ ಮುಗ್ಧ ಮಗಳ ಬಾ ಈ ಎಲ್ಲ ಘಟನೆಗಳು ನಡೆಯುವಷ್ಟರಲ್ಲಿ ಎಂಟೊಂಭ ವರ್ಷಗಳೇ ಕಳೆದುಹೋಗಿದ್ದವು.

ಇಬ್ಬರು ವ್ಯಕ್ತಿಗಳ ಯೌವ್ವನ, ಒಂದು ಮಗು ಬಾಲ್ಯ, ಹಣ, ಸಮಯ ಎಲ್ಲ ಕಳೆದುಹೋಗಿದೆ. ಅ ಕೊನೆ ಇನ್ನೂ ಮುಟ್ಟಿಲ್ಲ, ಮಂಜುಳಾ ಲೋಕೇ ಪತನವನ್ನೇ ತನ್ನ ಜೀವನದ ಗುರಿಯಾಗಿಸಿಕೊಂಡಿದ್ದಾ ಲೋಕೇಶ್ ತನ್ನ ಅಹವಾಲನ್ನು ಎಲ್ಲ ಮಾಧ್ಯಮ ಮುಂದೆಯೂ ತೋಡಿಕೊಂಡಿದ್ದಾರೆ. ಆದರೆ ಮಾಧ್ಯಮಗ ತಮ್ಮ ಸಂತಾಪ ಸಹಾನುಭೂತಿಯಲ್ಲದೆ ಬೇರೆ ಏನೂ ತೋರಿಸಲು ಸಾಧ್ಯವಾಗಿಲ್ಲ.

ಲೋಕೇಶ್ ದಂಪತಿಯ ಮಗಳೇ ಮಧ್ಯಸ್ಥಿಕೆ ವಹಿಸಿ ಇದಕ್ಕೊಂದು ತೆರೆ ಎಳೆಯುತ್ತಾಳೆ ಎಂದು ಆಶಿಸೋಣ.

(ಮುಂದುವರೆಯುವುದು)



● ರಾಜಲಕ್ಷ್ಮೀ ಅಂಕಲಗಿ

ಸ್ತ್ರೀವಾದ ಒಡೆದಿಡಲಿಕ್ಕಲ್ಲ- ಹೊಸ ಬೆಸುಗೆಗೆ

ನ್ನಡದಲ್ಲಿ ಮಹಿಳಾ ಕವಿಗಳು ಮುಖ್ಯನೆಲೆಗೆ ದ್ದಾರೆ ಮತ್ತು ಅವರು ತಮಗಾಗಿ ಬರೆಯುತ್ತಿದ್ದಾರೆ ಮೂಲಕ ಪ್ರತಿಭಾ ನಂದಕುಮಾರ್ ಸದ್ಯದ ಕನ್ನಡ ಲೋಕಕ್ಕೆ ಅಗತ್ಯವಾಗಿದ್ದ ವಾಗ್ವಾದವನ್ನು ಆರಂಭಿಸಿದ್ದಾರೆ. ನ್ನಡ ಸಾಹಿತ್ಯ ಪರಂಪರೆ ಹೊಸ ಪಲ್ಲಟಕ್ಕೆ ಒಳಗಾದ ಮಹಿಳೆಯರು ಅಭಿವ್ಯಕ್ತಿಯ ಹೊಸ ಹೊಸ ಪ್ರಯೋಗ ಒಡ್ಡಿಕೊಳ್ಳುತ್ತಿದ್ದಾರೆ ಎಂಬ ಅಭಿಪ್ರಾಯವು ಸರಿಯಾ ಆದರೆ ಮಹಿಳಾ ಬರಹಗಳ ಕುರಿತ ಅಭಿಪ್ರಾಯವು ಬರಹಗಳಿಗೆ ಪ್ರತಿಯಾಗಿಯೇ ರೂಪುಗೊಳ್ಳಬೇಕಿಲ್ಲ. ಅಭಿವ್ಯಕ್ತಿಯು ಕನ್ನಡ ಸಾಹಿತ್ಯವನ್ನು ಪಲ್ಲಟ ದ ಪ್ರಕ್ರಿಯೆ ಆರಂಭವಾದದ್ದು ಎಂಭತ್ತರ ದಶಕ . ಇದಕ್ಕೆ ದಲಿತ-ಬಂಡಾಯ ಸಾಹಿತ್ಯದ ಮನೋ ಒಂದು ಪ್ರೇರಕವಾದರೆ, ಎಪ್ಪತ್ತರ ದಶಕದಲ್ಲಾಗಲೇ ನ್ನು ಪ್ರವೇಶಿಸಿದ ಸ್ತ್ರೀವಾದಿ ಚಿಂತನೆ ಮತ್ತೊಂದು ವಾಗಿತ್ತು. ಮಹಿಳೆಯರು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಯುತ್ತಿದ್ದಾರೆ ಎನ್ನುವ 'ಜನಗಣತಿ' ಆಧಾರದಲ್ಲಿ ಮಾತ್ರ ಭಿಪ್ರಾಯಮಂಡಿತವಾಗುವುದಿಲ್ಲ. ಅವರು ಏನನ್ನು ಯುತ್ತಿದ್ದಾರೆ ಮತ್ತು ಹೇಗೆ ಬರೆಯುತ್ತಿದ್ದಾರೆ ಎನ್ನುವುದನ್ನು ಸಿಯೂ ಯಾವ ಮುಜುಗರವಿಲ್ಲದೆ, ಮುಲಾಜಿಗೆ ಗದೆ ಈ ಮಾತನ್ನು ಹೇಳಬಹುದು.

ಂದಿಗೂ ಕನ್ನಡ ಸಾಹಿತ್ಯದಲ್ಲಿ ಪ್ರಧಾನ, ಉಪ ಎಂಬ ಣೆ ಬಿಟ್ಟುಹೋಗಿಲ್ಲ. ಹಾಗಾಗಿಯೇ ಸಾಹಿತ್ಯದ lled ವಿಮರ್ಶಕರು ಹೊರಡಿಸುವ ಫರ್ಮಾನು ಸೃಜನಶೀಲತೆಯು ಒಡನುಡಿವ ಜೀವಾನುಭವಕ್ಕೂ ರ್ಷ ನಡೆದಿರುತ್ತದೆ. ಮಹಿಳಾ ಸಾಹಿತ್ಯದ ಸಂದರ್ಭ ೂ ಈ ದೂರ ಇನ್ನೂ ಹೆಚ್ಚು. ತಿರುಮಲಾಂಬಾ ಕಾಲದಿಂದಲೂ ಇದು ಚಾಲ್ತಿಯಲ್ಲಿದೆ. ಸಾಹಿತ್ಯ ುಲ್ಲಿ ಲೇಖಕಿಯರ ಚರಿತ್ರೆ ಯಾಕೆ ಇಲ್ಲವಾಗಿದೆ ದೇ ಒಂದು ಚರಿತ್ರೆ. ಪಿತೃಪ್ರಧಾನ ದೃಷ್ಟಿಕೋನವು ನ ಗೌರಮ್ಮ ಮತ್ತು ತ್ರಿವೇಣಿ ಎಂಬ ಎರಡು ುಗಳನ್ನು ಮಾತ್ರ ಯಾಕಿಡುತ್ತದೆ? ಶ್ಯಾಮಲಾದೇವಿ ಂವಕರ, ಎಚ್.ವಿ.ಸಾವಿತ್ರಮ್ಮ ಇವರೆಲ್ಲ ಯಾಕೆ ಶರಾಗುತ್ತಾರೆ? ಈ ಆಯ್ದು ಕಟ್ಟುವ ತಂತ್ರ ಸ್ಥೆಯ ಚಿಂತನೆಯಲ್ಲಿ ಪ್ರಸಿದ್ಧವಾದುದೇ. ಪ್ರಶ್ನೆ ಎಂದರೆ ಚಿಂತನಾ ವಿಧಾನವು ಪೂರಾ ಸ್ಥಗಿತವಾಗಿದೆಯೇ ಪುದು. ಈ ಅನಾದಿ ಸಂಕಟ ಪ್ರತಿಭಾ ಅವರ ನ್ನು ಪ್ರಭಾವಿಸಿದೆ.


ಂಭತ್ತರ ದಶಕದಿಂದೀಚೆಗೆ ಕನ್ನಡ ಸಾಹಿತ್ಯದ ಧೋರಣೆಗಳಲ್ಲಿ ಉಂಟಾದ ಬದಲಾವಣೆಯನ್ನು ಅವರು ಗಮನಿಸಿದಂತಿಲ್ಲ. ವಿಮರ್ಶಕರನ್ನು ಪುರುಷ ಯ ವಕ್ತಾರರು ಎಂದು ಪ್ರತಿಪಕ್ಷದಲ್ಲಿಡಲಾದೀತೆ? ಕರಲ್ಲಿ ಮಹಿಳೆಯರಿದ್ದಾರೆ ಎನ್ನುವುದರ ಕಡೆ ಗಮನ ಶಿಕಲಾ ಅವರ ಅಭಿಪ್ರಾಯಕ್ಕೆ ನನ್ನ ಸಹಮತವಿದೆ. ವಿಮರ್ಶಕರಾದ ಡಾ.ಜಿ.ಎಸ್.ಶಿವರುದ್ರಪ್ಪ, ಎಸ್.ಅಮೂರ ಅವರನ್ನು ಮೊದಲು ಮಾಡಿಕೊಂಡು ಾನದ ವಿಮರ್ಶೆ ಕೂಡ ಮಹಿಳಾ ಬರಹವನ್ನು ಮಿಯಾಗಿ ಸ್ವೀಕರಿಸಿದೆ. ಮಹಿಳಾ ಕೃತಿಗಳು ಸಿಕೊಂಡ ಮುನ್ನುಡಿಗಳು ಮತ್ತು ಅಲ್ಲಿ ಮುನ್ನೆಲೆಗೆ ನ ಮುಖ್ಯ ಚರ್ಚೆಗಳನ್ನು ಗಮನಿಸಬಹುದು. ಸ್.ರಾಘವೇಂದ್ರರಾವ್, ಕೆ.ವಿ.ನಾರಾಯಣ, ನರಹಳ್ಳಿ ಬ್ರಹ್ಮಣ್ಯ, ಓ.ಎಲ್.ನಾಗಭೂಷಣಸ್ವಾಮಿ, ರಹಮತ್ ಇಂತಹ ಕೆಲವರನ್ನಾದರೂ ನೆನೆಯಲೇಬೇಕು.

ಉದಾಹರಣೆಯನ್ನು ಗಮನಿಸುವುದಾದರೆ ಸ್. ಆರ್ ಅವರ 'ಕಣ್ಣ ಹನಿಗಳ ಕಾಣಿಕೆ' ಎಂಬ ಇದು ಮಹಿಳಾ ಬರಹಗಳಿಗೆ ಬರೆದ ಡಿ-ಟಿಪ್ಪಣಿಗಳ ಸಂಕಲನ. 1975 ರಿಂದ 2012 ನ ಅಭಿಪ್ರಾಯಗಳು ಇಲ್ಲಿವೆ. "ಗಂಡಸರು ಸತ್ತು ೇರಿದರೆ ಅಪ್ಸರೆಯರಿದ್ದಂತೆ ಹೆಂಗಸರಿಗೆ ಅಪ್ಸರರು ಎಂಬ ಪ್ರಸ್ತಾಪವಿಲ್ಲ" ಎನ್ನುವ ಸಾಮಾಜಿಕ ೆಯ ಶೋಧದಿಂದ ಹಿಡಿದು: "ಲೇಖಕಿಯರು ಬಹುದಾದ ಕುಸುಮಬಾಲೆ ಇನ್ನೂ ಬಂದಿಲ್ಲವೋ ಅಥವಾ ಅದು ಬಂದಿದ್ದರೂ ನಾವು ಗಂಡಸರು ಅದನ್ನು ಗುರುತಿಸಿಲ್ಲವೋ ಅಥವಾ ನೋಡಿಯೂ ಪಕ್ಕಕ್ಕೆ ತಳ್ಳಿದ್ದೇವೆಯೋ" ಎನ್ನುವ ಸೂಕ್ಷ್ಮ ಒಳನೋಟಗಳು ಮತ್ತು ಹುಡುಕಾಟಗಳು ಇಲ್ಲಿವೆ. ಮಹಿಳಾ ಅಭಿವ್ಯಕ್ತಿಯ ಕಥನವನ್ನು ರೂಪಿಸುವ ಕ್ರಮ ಈ ಕೃತಿಯಲ್ಲಿದೆ. ಕಳೆದ ಮೂರು ವರ್ಷಗಳ ಹಿಂದೆ ಪದವಿ ವಿದ್ಯಾರ್ಥಿಗಳಿಗಾಗಿ ಪಠ್ಯ ಸಂಪಾದನೆ ಮಾಡುವ ಸಂದರ್ಭದಲ್ಲಿ ಎಚ್.ಎಸ್.ಆರ್ ಅವರೊಂದಿಗೆ ಚರ್ಚಿಸಿದ್ದೆ. ತೊಂಭತ್ತರ ನಂತರದ ಕನ್ನಡ ಸಾಹಿತ್ಯವನ್ನು ಮಹಿಳಾ ಸಾಹಿತ್ಯದ ಕಾಲ ಎಂದು ಗುರುತಿಸಬೇಕು ಎಂದಿದ್ದರು.

ಪ್ರಸ್ತುತ ಸಂದರ್ಭದಲ್ಲಿ ಸ್ತ್ರೀವಾದಿ ಚಿಂತನೆಯು ಕನ್ನಡ ಸಂವೇದನಾಶೀಲತೆಯನ್ನು ತೀವ್ರವಾಗಿ ಪ್ರಭಾವಿಸಿದೆ. ಮಹಿಳಾಪರ ನಿಲುವುಗಳು ಆಲೋಚನೆಯ ಭಾಗವಾಗಿ ಬೆರೆತಿವೆ. ಅನಾದಿಯಿಂದಲೂ ಸಾಹಿತ್ಯದಲ್ಲಿ ಹೆಣ್ಣು ಇದ್ದೇ ಇದ್ದಳು. ಅವಳು ಪಿತೃವ್ಯವಸ್ಥೆಯ ಪ್ರೇರಕಳೂ ಪೋಷಕಳೂ ಆಗಿ ಪುರುಷ ಚಿಂತನೆಯ ಕೆತ್ತೋಣದಲ್ಲಿ ಮೂಡಿದ್ದಳು. ಆದರೆ ಈಗ ಹೆಣ್ಣು ವ್ಯಕ್ತಿಯಾಗಿ, ತಪ್ಪು ಸರಿಗಳ ಒಳಿತು-ಕೆಡಕುಗಳ ಪಾಲುದಾರಳಾಗಿ ಒಟ್ಟು ಬದುಕಿನ ರಚನೆಯೊಳಗಿನ ಅನಿವಾರ್ಯತೆಯಾಗಿ ಅಗತ್ಯವೂ ಆಗಿ ಪ್ರತಿಪಾದಿತಳಾಗುತ್ತಿದ್ದಾಳೆ. ಅವಳ ಮನಸ್ಸನ್ನು, ಜಗತ್ತನ್ನು ಮಹಿಳಾ ಬರವಣಿಗೆಗಳು ಮಾತ್ರ ಅನಾವರಣಗೊಳಿಸಿಲ್ಲ. ಅದು ಒಟ್ಟು ಸಾಹಿತ್ಯದ ಸಂವೇದನೆಯೇ ಆಗಿ ಹರಹಿ ಕೊಂಡಿದೆ. ತೇಜಸ್ವಿಯವರ ಗಯ್ಯಾಳಿಗಳನ್ನು, ಪಾಕಶಾಸ್ತ್ರವನ್ನು ಹೀಗಲ್ಲದೆ ಹೇಗೆ ಓದುವುದು? ಜಯಂತ ಕಾಯ್ಕಿಣಿಯವರ 'ಸರ್ಕಸ್ಸಿನಲ್ಲೊಂದು ಹೆರಿಗೆ', 'ಮೋಗ್ರಿಯ ಸತ್ಸಂಗ'ದಂತಹ ಕಥೆಗಳನ್ನು ಸ್ತ್ರೀವಾದಿ ಕಥೆಗಳು ಎನ್ನದಿರಬಹುದೆ?

ಹೀಗೆಂದಾಕ್ಷಣ ಕನ್ನಡ ಸಂವೇದನಾಶೀಲತೆ ಮಹಿಳೆಯ ಕಣ್ಣಿಂದಲೂ ಜಗತ್ತನ್ನು ನೋಡುವ ಪಲ್ಲಟ ಪ್ರಕ್ರಿಯೆಗೆ ಒಳಗಾಗಿ ಬಿಟ್ಟಿದೆ ಎನ್ನಲಾಗದು. 'ಕವಲು' ಎಂಬ ಕೃತಿ ಬಂದ ಕಾಲವೂ ಇದೇ ಅಲ್ಲವೆ? ಮಹಿಳಾ ಸಾಹಿತ್ಯ ಕೇಂದ್ರಿತ ವಿಚಾರಸಂಕಿರಣಗಳ ಕೆಲ ಅನುಭವಗಳು ಹೀಗಿವೆ. (1) ವಿಚಾರ ಸಂಕಿರಣದ ಅಧ್ಯಕ್ಷತೆಯನ್ನೋ, ಸಮಾರೋಪವನ್ನೋ ವಹಿಸಿಕೊಂಡಿರುತ್ತಿದ್ದ ಹಿರಿಯ ನವ್ಯ ವಿಮರ್ಶಕರೊಬ್ಬರು, ಅದುವರೆಗಿನ ಗಂಭೀರ ಚರ್ಚೆಗೆ ನಗೆಯ ತೇಪೆ ಹಚ್ಚಿಬಿಡುತ್ತಾರೆ. ಸ್ತ್ರೀವಾದಿ ಚಿಂತನೆಯನ್ನು ಸಮಕಾಲೀನ ಎಂಬ ಸ್ನೇಹದಿಂದೇನೋ ಹಗುರ ಲೇವಡಿ ಮಾಡುತ್ತಾರೆ. (2) ಇನ್ನೊಬ್ಬರು ಕಥೆಗಾರರು ಮತ್ತು ವಿಮರ್ಶಕರು. ಮಹಿಳಾ ಕಾವ್ಯದ ಬಗ್ಗೆ ಮಾತಾಡಿದವರೊಬ್ಬರು ಕವಿತೆಯ ಸಾಲುಗಳನ್ನು ಉಲ್ಲೇಖಿಸಿ ಚರ್ಚೆ ಮಾಡಿದ್ದರು. ಇವರು ಕವಿತೆಯ ಸಾಲುಗಳ ಮೂಲಕ ಕವಿತೆಯನ್ನು ತಿಳಿಯಬಹುದೆ? ಎಂದು ಆಕ್ಷೇಪಿಸಿದರು. ಅಲ್ಲಿ ಸೇರಿದ್ದ ಮಹಿಳೆಯರು ಪಂಪನಿಗಾದರೆ ಕುವೆಂಪುವಿಗಾದರೆ ಉಲ್ಲೇಖಿಸಬಹುದು. ಅವರದೇ ಪರಿಭಾಷೆ, ಪರಿಕ್ರಮ, ನಮ್ಮ ಕೈಗೆ ಬಂದೊಡನೆ ವಿತಂಡವಾದ ಆರಂಭ ಎಂದಿದ್ದರು. (3) ಯುವ ಮಿತ್ರರೊಬ್ಬರು ವಿಚಾರಸಂಕಿರಣದಲ್ಲಿ ಮಹಿಳಾ ಸಾಹಿತ್ಯದ ಬಗ್ಗೆ ಮಾತನಾಡಲು ಬಂದು ಪುಸ್ತಕಗಳು ಸಿಗದಿರುವುದರ ಬಗ್ಗೆ ಹೇಳಿಕೊಂಡು ಮಾತು ಮುಗಿಸಿದರು. ಬೇರೆ ವಿಷಯವಾದರೆ ಹೀಗೆ ತೇಲಿಸಿ ಮಾತನಾಡುತ್ತಾರೆಯೋ? ಎಂದು ನೋಯುವಂತಾಗಿತ್ತು. ಇಂತಹ ಸಂಗತಿಗಳು ಸತತವಾಗಿ ನಡೆಯುತ್ತವೆ ಮತ್ತು ಮಹಿಳಾ ಸಾಹಿತ್ಯದ ಬಗೆಗಿನ ತಾತ್ಸಾರ ಧೋರಣೆಯನ್ನು ಸಾರುತ್ತವೆ.

ಹಾಗಾಗಿ ಮಹಿಳಾ ಬರಹವನ್ನು ಓದುವ ಬದಲೀ ದೃಷ್ಟಿಕೋನದ ಅಗತ್ಯ ಕಾಣುತ್ತದೆ. ಆಧುನಿಕ ಕಾಲದಲ್ಲೂ ಮಹಿಳಾ ಬರಹ ಪುರುಷ ಹಿತಾಸಕ್ತಿಯ ಕೇಂದ್ರದಲ್ಲೇ



ಸುತ್ತಿದೆ. ಸಂಯಮ, ತಾಳ್ಮೆ, ಬಿಡುಗಡೆ, ಪ್ರತಿರೋಧ ಈ ಎಲ್ಲ ಪರಿಭಾಷೆಗಳೂ ಪುರುಷ ನೆಲೆಯಿಂದಲೇ ಅರ್ಥೈಸಲ್ಪಡುತ್ತವೆ. ಮಹಿಳೆ ಬದುಕಿನ ಕಟ್ಟೋಣದಲ್ಲಿ ಈ ಎಲ್ಲವುಗಳನ್ನು ಅರ್ಥೈಸಿಕೊಳ್ಳುವ ಬಗೆ ಬೇರೆಯಾಗಿರುತ್ತವೆ. ಗೃಹಕೃತ್ಯ ಪುರುಷ ಚಿಂತನೆಗೆ ಒಂದು ಕೆಲಸ, ಹೆಣ್ತನದ ಕರ್ತವ್ಯ ಮತ್ತು ಕೌಟುಂಬಿಕ ವಾತ್ಸಲ್ಯ. ಹೆಣ್ಣಿಗೆ ಅದು ಕೌಶಲ ಮತ್ತು ಅಸ್ತಿತ್ವದ ಗುರುತು. ಪಿತೃವ್ಯವಸ್ಥೆಯ ರಾಜಕಾರಣ ಹಾಗೂ ಆ ರಾಜಕೀಯ ಸಂಹಿತೆಯನ್ನು ವಿವರಿಸುವ ಗುರುಮನೆ. ಬಂಧನವೂ ಬಿಡುಗಡೆಯೂ. ಈ ಅಂತರಾಳವನ್ನು ಮೊಗೆದುಕೊಡಲು ಕನ್ನಡ ಪ್ರಜ್ಞೆ ಸಾಕಷ್ಟು ಒಳನೋಟವನ್ನು ಹರಿಸಬೇಕಿದೆ. ಅದಿಲ್ಲದಿದ್ದಾಗ ಮಹಿಳಾ ಬರಹದಲ್ಲಿ ಅಡಿಗೆಯ ಲೋಕವೋ ಖಾಸಗಿ ದರ್ಬಾರೋ ಕಾಣಿಸುತ್ತದೆ ಎಂದು ತಿಳಿಯಲಾಗುತ್ತದೆ. ರಾಜಕೀಯ ಪ್ರಜ್ಞೆಯ ಕುರಿತ ಪಿತೃವ್ಯವಸ್ಥೆಯ ಪರಿಭಾಷೆ ಇಲ್ಲಿ ಅನ್ವಯವಾಗುವುದಿಲ್ಲ. ಹಾಗಾಗಿ ಮಹಿಳಾ ಕಾವ್ಯಮೀಮಾಂಸೆಯು ರೂಪುಗೊಳ್ಳಬೇಕಾದ ಅಗತ್ಯವನ್ನು ಪ್ರತಿಭಾ ಅವರ ವಾದವು ಮುಂಚೂಣಿಗೆ ತರುತ್ತಿದೆ.

ಇದಕ್ಕೆ ಬಂದ ಪ್ರತಿಕ್ರಿಯೆಗಳು ಬರಹದ ಕುರಿತ ಪ್ರಾಥಮಿಕ ತೊಡಕನ್ನು ಬಿಡಿಸಲು ಒತ್ತಾಯಿಸುತ್ತವೆ. ಹೌದು, ಲೇಖಕರು ಹೆಣ್ಣಾಗಲಿ, ಗಂಡಾಗಲಿ ಅವರ ಸಂವೇದನಾ ಸಾಧ್ಯತೆಯೇ ಬರಹವನ್ನು ರೂಪಿಸುವುದು. ಆದರೆ ಸಂವೇದನೆ ರೂಪಣಗೊಳ್ಳುವುದೇ ಜೀವವು ಬದುಕುವ ಬೆಳೆಯುವ ಪರಿಸರದ ಪ್ರಭಾವದಲ್ಲಿ. ಬದುಕನ್ನು ಎಚ್ಚರದಿಂದ ಗಮನಿಸುವುದಕ್ಕಿಂತ ಮುಂಚೆಯೇ ಹೆಣ್ಣು-ಗಂಡು ಎಂಬ ಭೇದ ನಿರ್ಮಾಣಗೊಂಡಿರುತ್ತದೆ. ಬೆಳೆಯುತ್ತ ಹೆಣ್ಣಾಗಿಯೋ ಗಂಡಾಗಿಯೋ ಮಾತ್ರವಲ್ಲ, ಹೆಣ್ಣಲ್ಲದೆಯೂ, ಗಂಡಲ್ಲದೆಯೂ ಬೆಳೆಯುತ್ತೇವೆ. ಅವಕಾಶಗಳು ಆಸ್ಪದಗಳು ಈ ಗಡಿರೇಖೆಯೊಳಗೇ ದಕ್ಕುತ್ತವೆ ಅಥವಾ ತಪ್ಪುತ್ತವೆ. ಲಿಂಗವ್ಯವಸ್ಥೆಯು ಜೀವದ ಸಂವೇದನೆಯನ್ನು ನಿಯಂತ್ರಿಸುವ ಮತ್ತು ನಿರೂಪಿಸುವ ವ್ಯವಸ್ಥೆಯೂ ಹೌದು. ಬರಹಗಾರನ ಸಂವೇದನಾ ತಾಕತ್ತು ನೆಲದ ಹಂಗು ಹರಿದು ಅಲಾಯದವಾಗಿ ಸಂಭವಿಸುವಂಥದ್ದಲ್ಲ.

ಶಶಿ ದೇಶಪಾಂಡೆಯವರು ಸ್ತ್ರೀವಾದಿ ಓದಿನ ಪೂರ್ವಕಲ್ಪಿತ ನೆಲೆಯ ಬಗ್ಗೆ ತಕರಾರೆತ್ತುತ್ತಾರೆ. ಬರಹವೇ ಒಂದು ಅಖಂಡ ಆಯಾಮ ಅದನ್ನು ಅದಾಗಿ ಮಾತ್ರ ನೋಡಬೇಕೆನ್ನುವುದು ಸೃಜನಶೀಲತೆಯ ಶಕ್ತಿ ನಿಜ. ಆದರೆ ಯಾವುದನ್ನು ಅನುಭವದ ಅನನ್ಯತೆ ಎನ್ನುತ್ತೇವೋ ಅದು ಲಿಂಗತಾರತಮ್ಯದಂತೆ ಹಲವು ತಾರತಮ್ಯಗಳ ಸಂತುಲಿತವೇ ಆಗಿರುತ್ತದೆ. ಬರಹಗಾರರೂ ವ್ಯಕ್ತಿಗಳೇ. ವ್ಯಕ್ತಿಗಳ ವ್ಯಕ್ತಿತ್ವ ಸಮುದಾಯದೊಂದಿಗಿನ ಹೊಕ್ಕುಬಳಕೆಯಲ್ಲಿಯೆ ರೂಪುಗೊಂಡಿರುತ್ತದೆ. ಆದ್ದರಿಂದ ವ್ಯಕ್ತಿಗಳು ಸಮೂಹದ ಭಾಗವೇ. ಬರಹವೂ ಸಮೂಹದ ಭಾಗವೇ.

ಶಶಿ ದೇಶಪಾಂಡೆಯವರು ಬಂಡಾಯದ ಕಲ್ಪಿತವನ್ನು ಒಡೆಯುವ ಕ್ರಮ ತೀವ್ರವಾದದ್ದು. ಮಹಿಳೆಯಾಗಿ ಮತ್ತು ಲೇಖಕಿಯಾಗಿ ನಾನು ಬದಲಾಗುತ್ತೇನೆ ಎಂದು ಹೇಳುವಾಗ ಬರಹದ ಒಳಬಂಡಾಯವನ್ನವರು ಸೂಚಿಸುತ್ತಾರೆ. ಇದನ್ನೆಲ್ಲ ಸ್ತ್ರೀವಾದಿ ಚಿಂತನೆಯೂ ಹೇಳುತ್ತದೆ. ಮಹಿಳಾ ಬರಹಗಾರರೆಲ್ಲರೂ ಸ್ತ್ರೀವಾದಿಗಳಲ್ಲ, ಹಾಗೆ ಸ್ತ್ರೀವಾದಿ ಚಿಂತನೆಯನ್ನು ಹೊಂದಿದವರು ಮಹಿಳೆಯರು ಮಾತ್ರವೇ ಆಗಬೇಕಾಗಿಲ್ಲ. ಸ್ತ್ರೀವಾದ ಎನ್ನುವುದು ಚಿಂತನಾ ವಿಧಾನವೇ ವಿನಃ ಜೈವಿಕತೆಯಲ್ಲ, ಜೈವಿಕತೆ ಅದನ್ನು ವಿವರಿಸಿಕೊಳ್ಳುವ ಕ್ರಮ ಅಷ್ಟೇ.

ಸ್ತ್ರೀವಾದವೆನ್ನುವುದು ರೂಕ್ಷವಾದ ಸಿದ್ಧಾಂತ ಎಂದು ಹೊರಟರೆ ಆ ಚಿಂತನೆಯ ಪ್ರವೇಶ ಮತ್ತು ಸ್ಥಿತ್ಯಂತರಗಳನ್ನು ನಿರಾಕರಿಸಿದಂತಾಗುತ್ತದೆ. ಅದು ಭಾರತೀಯ ಸಮಾಜ ವ್ಯವಸ್ಥೆಯೊಳಗೆ ಸಾಕಷ್ಟು ಮಿದ್ದು ಹದವಾಗಿದೆ. ಕೃತಿಯೊಂದರ ಓದಿಗೆ ಹಲವು ಹಾದಿಗಳು ಯಾವತ್ತಿನಿಂದಲೂ ಇವೆ. ಸ್ತ್ರೀವಾದದ ಪ್ರವೇಶ ಮತ್ತೊಂದು ಸೀಳುಹಾದಿಯನ್ನು ಹಾಕಿಕೊಂಡಿದೆ. ಹಾಗೆಂದಾಕ್ಷಣ ಅದು ಉಳಿದವುಗಳನ್ನು ನಿರಾಕರಿಸುತ್ತದೆ ಎಂದಲ್ಲ. ಲಕ್ಷ್ಮೀಶ ಕವಿಯ 'ಸೀತಾಪರಿತ್ಯಾಗ' ಭಾಗದಲ್ಲಿ ಸೀತೆ ಲಕ್ಷ್ಮಣನಿಗೆ "ನೆರವುಂಟು ತನಗೀಕಾಡೊಳುಗ್ರಜಂತುಗಳಲ್ಲಿ ರಘುನಾಥನೇಕಾಕಿಯಾಗಿರ್ಪನು" ಎಂಬ ಮಾತು ಸ್ತ್ರೀವಾದಿ ತಾತ್ವಿಕತೆ ಇಲ್ಲದಿದ್ದಾಗ ರಾಮನ ಬಗೆಗಿನ ಪ್ರೇಮವಾಗಿ ಕಾಣುತ್ತದೆ. ಸ್ತ್ರೀವಾದಿ ನೋಟಕ್ಕೆ ರಘುರಾಮನನ್ನು ನಿವಾಳಿಸಿ ಒಗೆವ ತೀಕ್ಷ್ಣ ವ್ಯಂಗ್ಯವಾಗಿ ಕಾಣುತ್ತದೆ. ಹಾಗೆಂದ ಮಾತ್ರಕ್ಕೆ ಕಾವ್ಯದ ಉಳಿದ ಸಾಧ್ಯತೆಗಳೇಕೆ ಮಸುಕಾಗುತ್ತವೆ? 'ಮಲೆಗಳಲ್ಲಿ ಮದುಮಗಳು' ಕೃತಿಯನ್ನು ದೇಯಿ, ತಿಮ್ಮಿ, ಪೀಂಚಲು ಮೂಲಕ ಪ್ರವೇಶಿಸಿದಾಗ ಅಗಮ್ಯವಾಗಿದ್ದ ಮತ್ತೊಂದು ಹಾದಿ ತೆರೆಯುತ್ತದೆಯೆ ವಿನಃ ಒಟ್ಟು ಕೃತಿಯ ಓದನ್ನು ಮೊಟಕುಗೊಳಿಸುತ್ತದೆಯೇ? ಇದೊಂದು ಓದುವಿಕೆಯೇ ಅಲ್ಲ ಎನ್ನಲಾದೀತೆ? ಸ್ತ್ರೀವಾದಿ ಓದು ಒಂದು ಪೂರ್ವಗ್ರಹ ಓದು. ಆದರದು ಕೃತಿಯ ಒಟ್ಟು ಕೇಂದ್ರವನ್ನು ಪ್ರವೇಶಿಸಲು ಇರುವ ದಾರಿ. ಇದು ಮಹಿಳಾ ಸಾಹಿತ್ಯವನ್ನು ಓದುವ ಕ್ರಮ ಮಾತ್ರವಲ್ಲ, ಒಟ್ಟು ಸಾಹಿತ್ಯವನ್ನೂ ಕಲೆಯನ್ನೂ ಬದುಕನ್ನೂ ಓದುವ ಕ್ರಮ.

ಬದುಕು ಬದಲಾಗಿದೆ ಎಂದು ಶ್ರೇಣೀಕೃತ ವ್ಯವಸ್ಥೆಯ ಮೇಲ್ತುದಿಯಲ್ಲಿದ್ದವರಿಗೆ ಯಾವತ್ತೂ ತೋರುತ್ತದೆ. ಕೆಳ ಅಂಚಿನ ಜಗತ್ತು, ಬದುಕು ಬದಲಾಗುತ್ತದೆ- ಬದಲಾಗಬೇಕಿದೆ- ಬದಲಾಗುತ್ತಿದೆ ಎಂಬ ಹುಡುಕಾಟದಲ್ಲಿರುತ್ತದೆ. ಇದು ಸ್ತ್ರೀವಾದಿ ಸಂಕಥನ. ಬರಹಗಾರ್ತಿ ಪರಂಪರೆಗೆ ಆತುಕೊಂಡಿರುವುದಿಲ್ಲ, ಆದರೆ ಅಂತಹ ವಾಸ್ತವವನ್ನು ಅಲಕ್ಷಿಸುವುದೂ ಇಲ್ಲ. ಸ್ತ್ರೀವಾದಿ ತಾತ್ವಿಕತೆಯ ಬದಲೀ ಓದು ಮಹಿಳಾ ಬರಹಕ್ಕೆ ಮಾತ್ರವಲ್ಲ, ಒಟ್ಟಾರೆ ಕಣ್ನೋಟಕ್ಕೆ ಅಗತ್ಯವಾಗಿದೆ. ಒಡೆದಿಡಲಿಕ್ಕಲ್ಲ- ಹೊಸ ಬೆಸುಗೆ ಹಾಕಲಿಕ್ಕೆ.

● ಡಾ. ವಿನಯಾ

ಗುಂಪುಗಳ ದಬ್ಬಾಳಿಕೆ

ಯಾರಾದರೂ ನಾಲ್ಕು ಜನ ಬಂದು ಬಣ್ಣದ ಮಾತಾಡತೊಡಗಿದೊಡನೆ ೋ ಮಾರ್ಕ್ಸ್ ಹೇಳುತ್ತಿದ್ದ: 'ನೀನು ಹೇಳುವುದು ಅದೇನೇ ಇರಲಿ, ನನ್ನ ವಿರೋಧವಿದೆ' (Whatever it is, I'm st it).



ುಷ್ಯ ಸಂಘಜೀವಿ ಎಂದು ಎಲ್ಲರೂ ಹೇಳುತ್ತಾರೆ; ಜವಾದ ಮನುಷ್ಯ ಒಬ್ಬಂಟಿಯಾಗಿರುತ್ತಾನೆ. ಸಂಘ ಒಬ್ಬಂಟಿತನ ಎರಡರ ಮಧ್ಯೆ ಸಾಮರಸ್ಯ ಸಾಧಿಸುವುದು ಷ್ಟ. 'ನನಗೆ ಇದರಲ್ಲೆಲ್ಲ ನಂಬಿಕೆ ಇಲ್ಲ, ಆದರೆ ನನ್ನ ು ಜನಿವಾರ ಹಾಕಿಕೊಳ್ಳಲೇಬೇಕೆಂದು ಒತ್ತಾಯ ್ಲೆ'; 'ನನಗೆ ಪಂಥ, ಪವಾಡದಲ್ಲೆಲ್ಲ ನಂಬಿಕೆ ಇಲ್ಲ, ನ್ನ ಹೆಂಡತಿ ಸಾಯಿಬಾಬಾ ಭಕ್ತೆ- ಹೀಗಾಗಿ ನಾನು ಕೂಡ ಬಾಬಾ ಅನುಯಾಯಿ' ಇಂಥ ಮಾತುಗಳನ್ನು ಕೇಳುತ್ತಲೇ ಇರುತ್ತೇವೆ.

ಹಾಗೆಯೇ ಮದುವೆ, ರಾಜಕೀಯ ಪಕ್ಷ, ಗುಂಪಿನ ಘೋಷಣೆ, ಇಲ್ಲೆಲ್ಲ ಮನುಷ್ಯ ಚಿಕ್ಕವನಾಗುತ್ತಾನೆ; ಆತನ ಸ್ವಂತಿಕೆಯನ್ನು ಪೂರ್ತಿ ನಾಶ ಮಾಡಿ ಗುಂಪು ಅಥವಾ ಸಂಪ್ರದಾಯ ದಬ್ಬಾಳಿಕೆ ನಡೆಸುತ್ತದೆ.

ಮೊನ್ನೆ ಒಬ್ಬ ಬಂದ. "ನಮ್ಮ ಬಡಾವಣೆಯ ಪಾರ್ಕನ್ನು ಆಟದ ಮೈದಾನ ಮಾಡಬೇಕೆಂದು ಹುಡುಗರು ಒತ್ತಾಯ ಮಾಡುತ್ತಿದ್ದಾರೆ. ಆದರೆ ಪಾರ್ಕು ಮುದುಕರು ಬೆಳಗ್ಗೆ ವಾಕ್ ಮಾಡಲು ಚೆನ್ನಾಗಿದೆ. ಆಟದ ಮೈದಾನ ಮಾಡಕೂಡದು ಎಂದು ನಾವು ಅರ್ಜಿ ಸಲ್ಲಿಸಿ ಕೇಳಿಕೊಳ್ಳುತ್ತಿದ್ದೇವೆ. ಇಲ್ಲಿ ನಿಮ್ಮ ರುಜು ಹಾಕಿ" ಎಂದು ಒಬ್ಬ ನನ್ನ ಅಭಿಪ್ರಾಯವನ್ನು ಕೇಳದೆ ಹಾಕಿಸಿಕೊಂಡ. ನನ್ನ ಪ್ರಕಾರ ಪಾರ್ಕುಗಳು ಮತ್ತು ಆಟದ ಮೈದಾನ ಎರಡೂ ಆಗಲು ಸಾಧ್ಯವಿದೆ. ಎಂ.ಎನ್.ಕೃಷ್ಣರಾವ್ ಪಾರ್ಕು ಆ ತರಹ ಇದೆ. ನಂದಾ ಸಿನಿಮಾ ಥಿಯೇಟರ್ ಎದುರಿನ ತೋಟ ನಡೆದಾಡಲು ಮಾತ್ರ ಯೋಗ್ಯವಾಗಿದೆ.



ಹಾಗೆಯೇ ಇನ್ನೊಬ್ಬ ಹೆಣ್ಣುಮಗಳು, "ಶಿಲ್ಪ ಪ್ರದರ್ಶನ ಮಾಡುತ್ತಿದ್ದೇವೆ. ಇದಕ್ಕೆ ಹಣ ಸಂಗ್ರಹಿಸುತ್ತಿದ್ದೇವೆ" ಎಂದು ಬಂದಳು. ಆಕೆಗೆ ಸ್ವಲ್ಪ ಕಾಸು ಕೊಟ್ಟಮೇಲೆ ಹೇಳಿದೆ, "ಮನುಷ್ಯ ಈವಿಲ್, ಕಲಾವಿದ ಕೂಡ. ಆತ ಈ ಭೂಮಿಯ ಮೇಲೆ ಪರ್ವತಾಕಾರದ ಭವನಗಳು, ವಿಚಿತ್ರ ರಸ್ತೆಗಳು, ಮೂರ್ತಿಗಳು ಇತ್ಯಾದಿಯನ್ನು ನಿಲ್ಲಿಸುತ್ತಲೇ ಇದ್ದಾನೆ. ಪ್ರಕೃತಿಗೆ ಏನನ್ನೂ ಬಿಡುತ್ತಿಲ್ಲ, ಹೀಗಾಗಿ ಮುಂದುವರಿದ ದೇಶಗಳು (ಆಕಾಶದಿಂದ ನೋಡಿದರೆ) ಹುತ್ತದಂತೆ ಕಾಣುತ್ತಿವೆ, ಗಲೀಜಾಗಿ ಕಾಣುತ್ತಿವೆ...." ಅಂದೆ.

ಕ್ರಾಂತಿ ಕೂಡ ಗಲೀಜು ಮಾಡುತ್ತದೆ. ಮನುಷ್ಯನ ಎಲ್ಲ ಸಾಹಸಗಳೂ ವಿಕೃತವಾಗಿವೆ. ಆತನ ಸಂಶೋಧನೆಗಳು ಮನುಷ್ಯನನ್ನು ಪ್ರಕೃತಿಯಿಂದ ದೂರ ಸಾಗಿಸಿವೆ....

ಈಗ ಮನುಷ್ಯನಿಗೆ ಬೇಕಾದದ್ದು ಸರಳತೆ, ಪ್ರೀತಿ, ಮೌನ ಮಾತ್ರ.

● ಮೇ 5, 1999

ನಿರಂತರವಾಗಿರುವ 'ರಂಗ ನಿರಂತರ'

ರಂಗ-ಅಂತರಂಗ




'ರಂಗ ನಿರಂತರ' ಜೊತೆಗಿದ್ದ ಪ್ರಕಾಶ್ ರೈ ಮತ್ತು ಉಮಾಶ್ರೀಗೆ ಅಭಿನಂದನಾ ಸಮಾರಂಭ, ತಂಡದ ಒಂದು ನಾಟಕದ ದೃಶ್ಯ

1984 ರಲ್ಲಿ ಆರಂಭವಾದ 'ರಂಗನಿರಂತರ' ತಂಡವು ಕನ್ನಡ ರಂಗ ಭೂಮಿಯಲ್ಲಿ ಜನಪರ ಹಾಗೂ ಸಮಾಜಮುಖಿ ನಾಟಕ ಪ್ರಯೋಗಗಳನ್ನು ಕಟ್ಟುವ ಮೂಲಕ ಜನಾನುರಾಗಿಯಾಗಿದೆ. ಕನ್ನಡ ರಂಗಭೂಮಿ ತಟಸ್ಥವಾಗಿದ್ದ ಸಂದರ್ಭ ಅರಿತು ಬೆಂಗಳೂರು ವಿಶ್ವವಿದ್ಯಾಲಯದ ಅರ್ಥಶಾಸ್ತ್ರದ ಪ್ರಾಧ್ಯಾಪಕರಾಗಿದ್ದ ಸಿ.ಜಿ.ಕೃಷ್ಣಸ್ವಾಮಿ ಅವರು 'ರಂಗನಿರಂತರ' ತಂಡ ಕಟ್ಟಿದರು. ಅದಕ್ಕೂ ಮುನ್ನ ಸಿ.ಜಿ.ಕೆ ರಂಗ ಸಂಪದದಲ್ಲಿ ಸಹ ಇದ್ದು ಅದನ್ನು ತೊರೆದು ಬಂದರು. ಆರಂಭದಲ್ಲಿ ಕನ್ನಡದ ಪ್ರಖ್ಯಾತ ಗ್ರಾಮೀಣ ಹಿನ್ನೆಲೆಯ ಕಥೆಗಾರರ ಕಥೆಗಳನ್ನು ಆಯ್ದುಕೊಂಡು ರಂಗರೂಪಗಳೊಂದಿಗೆ 'ಗ್ರಾಮ ಸಮಾಜ ನಾಟಕೋತ್ಸವ' ಮೂಲಕ ಒಂಭತ್ತು ನಾಟಕಗಳನ್ನು ಪ್ರಯೋಗಿಸಿದರು. ಇದೆ ಸಂದರ್ಭದಲ್ಲಿ ನಾಟಕ ಸಂವಾದ, ವಿಚಾರಸಂಕಿರಣ ಹಮ್ಮಿಕೊಂಡು ಅದರಲ್ಲಿ ಪಿ.ಲಂಕೇಶ್, ಕೆ.ಮರುಳಸಿದ್ದಪ್ಪ, ಕಿ.ರಂ.ನಾಗರಾಜ, ದೇವನೂರು ಮಹಾದೇವ ಮುಂತಾದವರು ಪಾಲ್ಗೊಂಡಿದ್ದರು. ವರ್ಷದ 150 ದಿನಗಳ ಕಾಲ ರಂಗ ಚಟುವಟಿಕೆಗಳಲ್ಲಿ ತೊಡಗುವ ಮೂಲಕ ತಮ್ಮ ರಂಗ ತಂಡವನ್ನು 'ನಿರಂತರ'ವಾಗಿಸಿದ್ದರು ಸಿ.ಜಿ.ಕೆ. ಅಲ್ಲದೆ 'ಕಲಾಕ್ಷೇತ್ರ-30' ಹೆಸರಿನಲ್ಲಿ 30 ದಿನಗಳ ನಿರಂತರ ರಂಗ ಚಟುವಟಿಕೆಗಳನ್ನು ಸಹ ನಡೆಸಿದ್ದರು. ರಂಗನಿರಂತರ ಈವರೆಗೆ ಸುಮಾರು 40ಕ್ಕೂ ಹೆಚ್ಚಿನ ನಾಟಕಗಳನ್ನು, ಬೀದಿ ನಾಟಕಗಳನ್ನು ಪ್ರಯೋಗಿಸಿದೆ.


'ರಂಗ ನಿರಂತರ' ತಂಡದ ಆರಂಭದಲ್ಲಿ ಮಾಜಿ ಮಂತ್ರಿಗಳಾದ ಡಾ.ಜೀವರಾಜ ಆಳ್ವ ಅಧ್ಯಕ್ಷರಾಗಿದ್ದರು. ಸಿ.ಜಿ.ಕೆ. ಉಪಾಧ್ಯಕ್ಷರು, ಕೆ.ಜಿ.ವಿಶ್ವನಾಥ ಕಾರ್ಯದರ್ಶಿ, ಆ.ನ.ರಮೇಶ್ ಖಜಾಂಚಿಯಾಗಿದ್ದರು. ಜೊತೆಗೆ ಕತ್ತಲು ಸತ್ಯ (ಸತ್ಯನಾರಾಯಣ) ಮುಂತಾದವರಿದ್ದರು.

ರಂಗ ನಿರಂತರ ಸದಸ್ಯರಾಗಿ, ಪದಾಧಿಕಾರಿಗಳಾಗಿ, ನಟರಾಗಿ, ನಿರ್ದೇಶಕರಾಗಿದ್ದ ಪ್ರಮುಖರಲ್ಲಿ ನಟ ಪ್ರಕಾಶ್ ರೈ, ನಿರ್ದೇಶಕ ಬಿ.ಸುರೇಶ, ಡಾ.ಬಿ.ವಿ.ರಾಜಾರಾಂ, ರಂಗ ಸಂಘಟಕ ಕೆ.ವಿ.ನಾಗರಾಜ ಮೂರ್ತಿ, ನಟಿ ಉಮಾಶ್ರೀ, ಸಿ.ಕೆ.ಗುಂಡಣ್ಣ, ರಾಷ್ಟ್ರಮಟ್ಟದ ಕಲಾ ನಿರ್ದೇಶಕ ಶಶಿಧರ ಅಡಪ, ದಿನೇಶ್ ಮಂಗಳೂರು, ಅಪ್ಪಯ್ಯ, ಎಂ.ರವಿ, ಚಂದ್ರಕಾಂತ, ಜೆ.ಪಿ.ಓ ಚಂದ್ರು, ಕಲ್ಪನಾ, ನಾಗನಾಥ್ ಮುರುಡಯ್ಯ, ಶೃಂಗೇಶ್, ಚಲುವಯ್ಯ, ಮೇಲುಕೋಟೆ ಶಿವು, ಬಾನು ತಿರುಮಲೆ, ಅಪ್ಪಯ್ಯ- ಹೀಗೆ ಪಟ್ಟಿ ಬೆಳೆಯುತ್ತದೆ.

'ರಂಗ ನಿರಂತರ' ಪ್ರಯೋಗಿಸಿರುವ ಪ್ರಮುಖ ನಾಟಕಗಳೆಂದರೆ ಕಿ.ರಂ.



ಸಿ.ಜಿ.ಕೆ



ಶಶಿಧರ ಅಡಪ

ಅವರ 'ಕಾಲಜ್ಞಾನಿ ಕನಕ,' ಹೆಚ್.ಎಸ್.ಶಿವಪ್ರಕಾಶ್ ಅವರ 'ಟಿಪ್ಪುಸುಲ್ತಾನ್', ಷೇಕ್ಸ್‌ಪಿಯರನ 'ಸ್ವಪ್ನನೌಕೆ', ಎಮರ್ಜೆನ್ಸಿ ಸಂದರ್ಭದಲ್ಲಿನ ಬಿಹಾರದ ಒಂದು ಘಟನೆ ಆಧರಿಸಿದ 'ಬೆಲ್ಚಿ,' 'ದೇವರ ಮುಂದೆ ಕುಂತ ಬಸವ', ನಾಗತಿಹಳ್ಳಿ ಚಂದ್ರಶೇಖರ ಕಥೆ ಆಧಾರಿತ 'ವಲಸೆ ಹಕ್ಕಿಯ ಹಾಡು' (ರಂಗರೂಪ ಎಲ್.ಎನ್.ಮುಕುಂದರಾಜ್), ಕಾ.ತ. ಚಿಕ್ಕಣ್ಣ ಅವರ 'ದಂಡೆ', 'ವೈಶಂಪಾಯನ ತೀರ' (ರಂಗರೂಪ ಎಲ್.ಎನ್.ಮುಕುಂದರಾಜ್), ಎಲ್.ಹನುಮಂತಯ್ಯ ಅವರ ರಚನೆಯ, ಸಿಜಿಕೆ ನಿರ್ದೇಶನದ 'ಅಂಬೇಡ್ಕರ್', 'ಒಥೆಲೋ', ಎಸ್.ಜಿ.ಸಿದ್ದರಾಮಯ್ಯ ಅವರು 'ದಾ

'ದಾಳ' ನಾಟಕವನ

ಸಿದ್ದರಾಮಯ್ಯನವರು 'ರಂಗ ನಿರಂತ

ತಂಡಕ್ಕಾಗಿಯೇ ರಚಿಸಿದ್ದಾರೆ (ನಿರ್ದೇ

ಮೈಕೋ ಶಿವಣ್ಣ). ಹಾಗೆಯೆ

ಶೇಡಿಯಾಪು ಕೃಷ್ಣಭಟ್ಟರ 'ನಾಗರಬ

(ರಂಗರೂಪ ಕೆ.ಜಿ.ಶಂಕರಪ್ಪ, ನಿರ್ದೇಶ

ಮೈಕೋ ಶಿವಶಂಕರ್), ದೇವನೂ

ಅವರ 'ಕುಸುಮ ಬಾಲೆ' (ರಂಗರೂ

ಕೆ.ಜಿ.ಶಂಕರಪ್ಪ, ನಿರ್ದೇಶನ ಶಂಕರ

ಹಾಗೂ ಕೃಷ್ಣ ಕುಮಾರ್ ಯಾಧವ

ದಿನೇಶ್ ಮಂಗಳೂರು ನಿರ್ದೇಶನ

'ಶ್ರಾದ್ಧಭಟ್ಟರ ಮನೆಗೆ', ಡಿ.ಕೆ.ಚೌ

ಅವರ ಕಾದಂಬರಿ ಆಧರಿಸಿರುವ 'ಪಿ

ಚೈಲ್‌ಯುವಮುನಕ್ಕ' (ನಿರ್ದೇಶ

ಪ್ರಮೋದ್ ಸಿಗ್ಗಾಂ), ಅಲ್ಲಮ್ಮನ ಜೀ

ಆಧರಿಸಿರುವ 'ಅಲ್ಲಮನ ಬಯಲಾ

(ರಚನೆ ಲಕ್ಷ್ಮಿಪತಿ ಕೋಲಾರ, ನಿರ್ದೇಶನ ಡಾ.ರಾಮಕೃಷ್ಣಯ್ಯ), ರಾಘವೇ

ಪಾಟೀಲರ 'ತುದಿ ಎಂಬೊ ತುದಿ ಇಲ್ಲ' (ನಿರ್ದೇಶನ ಕೃಷ್ಣಮೂರ್ತಿ ಕವತ್ತಾ

ಡಾ.ಕೆ.ವೈ.ನಾರಾಯಣ ಸ್ವಾಮಿ ಅನುವಾದದ 'ಮಳೆ ಮಾಂತ್ರಿಕ' (ನಿರ್ದೇ

ಬಿ.ಜಿ.ರಾಮಕೃಷ್ಣ), 'ದೌಡ್ ಗಾಂಧಿ ದೌಡ್' (ಬೀದಿ ನಾಟಕ) ಮುಂತಾದವುಗಳ

'ರಂಗನಿರಂತರ' ತಂಡವು ಜನರಿಗೆ ತಂದಿದೆ. ಬಿ.ಸುರೇಶ್ ಅವರು ರ

ನಿರಂತರಕ್ಕಾಗಿ 'ಅಹಲ್ಯ ನನ್ನ ತಾಯಿ' ನಿರ್ದೇಶಿಸಿದ್ದಾರೆ. ಹಾಗೆ ನಟ ಪ್ರಕಾ

ರೈ ಅವರು 'ಸೇತು ಮಾಧವನ ಸಲ್ಲಾಪ' ನಾಟಕ ನಿರ್ದೇಶಿಸಿದ್ದಾರೆ. ಸುರೇಂದ್ರನಾ

ಅವರು 'ಮಾಂಡಲೀಕಪುರದ ದುರಂತ ಕಥೆ', 'ಮ್ಯಾಕ್‌ಬೆತ್' ಮುಂತ

ನಾಟಕಗಳನ್ನು ನಿರ್ದೇಶಿಸಿದ್ದಾರೆ. ಮುಖ್ಯವಾಗಿ ಉಮಾಶ್ರೀ ಅವರಿಗೆ ಮರುಜ

ಕೊಟ್ಟ 'ಒಡಲಾಳ' ನಾಟಕವನ್ನು ತಂದಿದ್ದು ಸಿಜಿಕೆ ಅವರ 'ರಂಗ ನಿರಂತ

ತಂಡವೇ.

ಸಿ.ಜಿ.ಕೆ ನಿಧನರಾದ ನಂತರ ಸ್ವಲ್ಪಕಾಲ ರಂಗ ನಿರಂತರಕ್ಕೆ ಡಿ.ಕೆ.ಚೌ

ಅಧ್ಯಕ್ಷರಾಗಿ ಪ್ರತಿ ವರ್ಷ ಸಿ.ಜಿ.ಕೆ ನೆನಪಿನ ನಾಟಕ ಉತ್ಸವ ನಡೆಸಲಾರಂಭಿಸಿದ


ಪ್ರಸ್ತುತ ಶಶಿಧರ ಅಡಪ ಅಧ್ಯಕ್ಷರಾಗಿದ್ದಾರೆ.. ಜೆ.ಪಿ.ಓ ಚಂದ

ಕಾರ್ಯದರ್ಶಿಯಾಗಿದ್ದಾರೆ. ಡಿ.ಕೆ. ಚೌಟ ಮಹಾ ಪೋಷಕರಾಗಿದ್ದಾರೆ. ಆರಂಭ

ಸಿ.ಜಿ.ಕೆ ಅವರ ಬಹುತೇಕ ನಾಟಕಗಳಿಗೆ ಸಹ ನಿರ್ದೇಶಕರಾಗಿ ಕೆಲಸ ನಿರ್ವಹಿ


ಕತ್ತಲು ಸತ್ಯ ಪ್ರಸಕ್ತ ತಟಸ್ಥರಾಗಿದ್ದಾರೆ.

'ರಂಗ ತಂಡ' ತನ್ನ ಚಟುವಟಿಕೆಗಳ ಮೂಲಕ ತಕ್ಕ ನೂರಾರು ಸಮಾನ ಮನಸ್ಕರನ್ನು ಸೃಷ್ಟಿಸಿದೆಯಲ್ಲದೆ, ರಾಷ್ಟ್ರಮಟ್ಟದ ಕಲಾವಿದರನ್ನು ಕೊಡುಗೆಯಾಗಿ ನೀಡಿದೆ.




● ಡಾ.ಎ.ಆರ್.ಗೋವಿಂದಸ್ವಾಮಿ,
ರಂಗನಟ, ವಿಮರ್ಶಕ

ಕ್ರೈಂ ರೇಟ್ ಹೆಚ್ಚಿಸಿದ್ದೇ ಶ್ರೀನಿವಾಸರಾಜು ಸಾಧನ



ಇತ್ತೀಚೆಗೆ ಈ ಸಿನಿಮಾದವರಿಗೆ 'ಏನ್ ದಾಡಿ' ಆಗಿದೆಯೋ.. ತಿಳೀತಿಲ್ಲಾ. ಹೋಗಿ ಹೋಗಿ ವಿವಾದಗಳನ್ನು ಮೈಮೇಲೆ ಎಳೆದುಕೊಂಡು ಮತ್ತೆ 'ಅಪಾಲಜಿ' ಕೇಳ್ತವೆ. ಕನ್ನಡದ ನೆಲ-ಜಲ, ಮಹಾತ್ಮರ-ಪುಣ್ಯಾತ್ಮರ, ಐತಿಹಾಸಿಕ ವ್ಯಕ್ತಿಗಳ ಬಗ್ಗೆ ತಿಳಿಯದ ಅವಿವೇಕಿಗಳಾಗಿರೋ ಇವರು ಹಾಗೇ-ಹೀಗೆ 'ರೀಲ್' ಸುತ್ತಿ ಕೇರಾಫ್ ಫುಟ್‌ಪಾತ್ ಆಗುತ್ತಾರೆ. ಸದ್ಯಕ್ಕೆ ಅಂತಹವರ ಸಾಲಿಗೆ ಸೇರ್ಪಡೆಗೊಂಡಿದ್ದಾರೆ ನಿರ್ದೇಶಕ ಶ್ರೀನಿವಾಸರಾಜು. 'ಸುಮ್ಮನಿರದವನು ಇನ್ನೇನೋ ಕೆತ್ತಿಕೊಂಡ್ನಂತೆ' ಅನ್ನೋ ಹಾಗೇ ಈ ಶ್ರೀನಿವಾಸರಾಜು ತಮ್ಮ ಮುಂದಿನ ಚಿತ್ರಕ್ಕೆ (ಉಪೇಂದ್ರ ನಾಯಕತ್ವ) 'ಬಸವಣ್ಣ'ನ ಹೆಸರಿಟ್ಟು ಇಡೀ ಲಿಂಗಾಯತ ಸಮುದಾಯದ 'ಕೆಂಗಣ್ಣಿ'ಗೆ ಗುರಿಯಾಗಿದ್ದಾರೆ. ಮತ್ತೊಂದು ಹೆಜ್ಜೆ ಮುಂದಕ್ಕೋಗಿ "ಬಸವಣ್ಣ ಏನು ಲಿಂಗಾಯತರ ಸ್ವತ್ತೇ?" ಅನ್ನೋ ಉಡಾಫೆ ಉತ್ತರ ಕೊಟ್ಟು ಈಗ 'ಹ್ಯಾಪ್ಯಾ' ಆಗೋ ಮಟ್ಟಕ್ಕೆ ಬಂದಿದ್ದಾರೆ. ನಿರ್ದೇಶಕ ಕೇಳೋ ಹಾಗೇ ಖಂಡಿತವಾಗಿ ಬಸವಣ್ಣ ಲಿಂಗಾಯತರ ಸ್ವತ್ತಲ್ಲ, ಆ ಮಹಾನುಭಾವ ವಿಶ್ವಗುರು, ಮಹಾಮಾನವತಾವಾದಿ. ಹೀಗಿರುವಾಗ ಪ್ರಜ್ಞಾವಂತರು ಆ 'ಟೈಟಲ್' ಬೇಡ ಅಂದಿದ್ದಕ್ಕೆ, ನಿರ್ದೇಶಕ ಕೊಟ್ಟ ಉತ್ತರ ಮಾತ್ರ 'ಅಪಕ್ವ' ಎಂದೇ ಹೇಳಬೇಕು. 'ಅಣ್ಣ'ನ ಬಗ್ಗೆ ಒಂದಿಂಚೂ ಗೊತ್ತಿರದ ಶ್ರೀನಿವಾಸರಾಜುಗೆ 'ಬಸವಣ್ಣ'ನ ಬಗ್ಗೆ ಸಿನಿಮಾ ಮಾಡ್ಲೇ ಬೇಕೆಂದ್ರೆ ಮೊದ್ಲು ಪ್ರಾತಃಸ್ಮರಣೀಯರು ಆದ ಹುಣಸೂರು ಕೃಷ್ಣಮೂರ್ತಿ, ವಿಜಯ್, ಪೇಕೇಟಿ ಅಂತವರ ಸಿನಿಮಾ ನೋಡುವುದು ಒಳಿತು.



ಶ್ರೀನಿವಾಸರಾಜು ಸಾಹೇಬ್ರು ಗಾಂಧಿನಗರಕ್ಕೆ ಹೊಸಬರು, ಅವರ ಕೊಡುಗೆ ಅಪಾರವೇನಿಲ್ಲ, 'ದಂಡುಪಾಳ್ಯ' ಅನ್ನೋ ಪಕ್ಕಾ ಕುತ್ತಿಗೆ ಕುಯ್ಯೋ 'ಕ್ರೈಂ ಸ್ಟೋರಿ' ಮಾಡಿ ಬೆಂಗಳೂರ್‌ನಲ್ಲಿ ಇನ್ನೊಂದಿಷ್ಟು ಹೆಣ ಬೀಳೋ ಹಾಗೇ ಮಾಡಿದ್ದನ್ನು ಬಿಟ್ರೇ ಅಷ್ಟೇನೂ ದೊಡ್ಡ ಹೆಸರೇನಲ್ಲ, ಈಗ್ಲೂ ಕಾಲ ಮಿಂಚಿಲ್ಲ, ಒಳ್ಳೊಳ್ಳೆಯ ಸಿನಿಮಾ ಮಾಡಬಹುದು. ಅದನ್ನು ಬಿಟ್ಟು 'ದಯೆ ಇರಬೇಕು ಸಕಲ ಪ್ರಾಣಿಗಳಲ್ಲಿ' ಎಂದು ಇಡೀ ವಿಶ್ವಕ್ಕೆ ಸಾರಿದ 'ವಿಶ್ವಗುರು'ವಿನ ಹೆಸರನ್ನು ಯಾವುದೋ 'ಥರ್ಡ್‌ಕ್ಲಾಸ್' ಕಮರ್ಷಿಯಲ್ ಸಿನಿಮಾಕ್ಕೆ ಇಟ್ಟರೆ ಏನಾಗಬಹುದು ಅನ್ನೋದು ಎಲ್ಲರಿಗೂ ಗೊತ್ತು.

ಈ ಚಿತ್ರದ ನಟ-ನಿರ್ಮಾಪಕ-ನಿರ್ದೇಶಕರು ಈ ಚಿತ್ರದ ಮೂಲಕ 'ಬಸವಣ್ಣ'ನ ಯಾವ ಸಂದೇಶವನ್ನು ಜನಮಾನಸಕ್ಕೆ ಸಾರ್ತಾರೆ ಅನ್ನೋದು ಇನ್ನೊಂದು ಪ್ರಶ್ನೆ. ಮೈಯಲ್ಲಿ ವಿಭೂತಿ, ಕೈಯಲ್ಲಿ ಕತ್ತಿ, ಪಕ್ಕದಲ್ಲಿ ಗನ್ನು ಇಡ್ತಾರೆ ಅಂದ್ರೆ ನಾಚಿಕೆ ಬರೋದಿಲ್ವಾ. ಇವ್ರಿಗೆ ದುಡ್ಡು ಮಾಡೋದಕ್ಕೆ 'ಕ್ರಾಂತಿಯೋಗಿ'ಯ ಹೆಸರೇ ಬೇಕಾ?

- ನಿಲೇಶ್ ಬೇನಾಳ್, ಆಲಮಟ್ಟಿ ಡ್ಯಾಂ ಸೈಟ್, ಬಿಜಾಪುರ ಜಿಲ್ಲೆ

ಒಂದು ವಾರ ಕಾಯಬೇಕಲ್ಲ, ಥೂತ್ತೇರಿ!

ಇಂದು ಪತ್ರಿಕೆ ಕೊಂಡು ಬಸ್ಸಿನಲ್ಲಿ ಕೂತು ಓದೋಕೆ ಶುರು ಮಾಡಿದೆ ಅನ್ನಿ... ಬೆಂಗಳೂರು ಬರುವ ಮೊದಲೇ ಪತ್ರಿಕೆಯೆಲ್ಲಾ ಓದಿ ಮುಗಿಸಿದೆನಲ್ಲಾ.. ಈಗ ಇನ್ನು ಮುಂದಿನ ಶುಕ್ರವಾರದವರೆಗೂ ಕಾಯಬೇಕಲ್ಲ..... ಥೂತ್ತೇರಿ! ಅನ್ನಿಸುತ್ತೆ.

-ಸರೋವರ್, ಬೆಂಕಿಕೆರೆ

ಚೆನ್ನಾಗಿದೇರಿ

ಈ ವಾರದ ಬಿಡಿ ಚಿತ್ರಗಳು ಮತ್ತೆ ವಿರೋಧ ಪಕ್ಷದ ನಾಯಕನ ಜೊತೆ ಸಂದರ್ಶನ ಚೆನ್ನಾಗಿದೇರಿ.

- ಮಧುಬಾಲ, ಬೆಳಗಾಂ

ವಸತಿ ಶಾಲೆ ಅಕ್ರಮಗಳು ಹೀಗಿವೆ..

ವಸತಿ ಶಿಕ್ಷಣ ಸಂಸ್ಥೆಯ (KREIS) ಅವ್ಯವಸ್ಥೆ



ಹಾಗೂ ಅಕ್ರಮಗಳು ಬಗ್ಗೆ 'ಲಂಕೇಶ್'ನಲ್ಲಿ ಪ್ರಕಟ

ವರದಿ ನೂರಕ್ಕೆ ನೂರು ಸತ್ಯ ಹಾಗೂ ಸಕಾಲಿಕ.


ಇಲ್ಲಿನ ಅಕ್ರಮಗಳ ಬಗ್ಗೆ ಇನ್ನಷ್ಟು ಹೇಳಬಹು

1. ರೂಪಶ್ರೀ ಎಂಬುವರು ವರಪನಹಳ್ಳಿಯ ಕ

ಚೆನ್ನಮ್ಮ ಶಾಲೆಗೆ ಕನ್ನಡ ಶಿಕ್ಷಕಿಯಾಗಿ

ನಾಯಕನಟ ನೀನಾಸಮ್ ಸತೀಶ್

'ಪ್ರತಿಭೆ ಯಾರ ಸ್ವತ್ತೂ ಅಲ್ಲ'



...ತನೇ ಶತಮಾನದ ಪ್ರಾರಂಭವೇ ಕನ್ನಡ ...ರಂಗಕ್ಕೊಂದು ಹೊಸ ಸುಗ್ಗಿ ಎನ್ನಬಹುದು. ...ದಾಗಿ ಹುಟ್ಟಿಕೊಂಡ ನಿಯೋರಿಚ್ ...ರೆ ನವ ಶ್ರೀಮಂತ ವರ್ಗವು ಒಂದರ ... ಒಂದರಂತೆ ಸಾಲುಸಾಲು ಚಿತ್ರಗಳನ್ನು ...ರಾತ್ರಿ ನಿರ್ಮಿಸತೊಡಗಿದವು. ...ಗಳಲ್ಲಿ ಅದೆಷ್ಟೋ ಹೊಸ ಮುಖಗಳು ...ಕ-ನಾಯಕಿಯರಾಗಿ ಧುತ್ತೆಂದು ...ರದೆಯ ಮೇಲೆ ಮಿಂಚತೊಡಗಿದರು. ... ವರ್ಷಗಳ ಹಿಂದೆ ನಿರ್ಮಾಪಕರನ್ನು ...ದಿಸಲು ಪರಿಪಾಟಲು ಪಡುತ್ತಿದ್ದ ... ನಿರ್ದೇಶಕರಿಗೆ ಕೆಲವೇ ದಿನಗಳಲ್ಲಿ ...ಮಾಡುವ ಭಾಗ್ಯ ಸ್ವಲ್ಪ ನಿರಾಯಾಸವಾಗಿ ...ಬಂತೆಂಬುದು ಸುಳ್ಳಲ್ಲ. ಆದರೆ ಈ ಸರಣಿ ...ಗಳಲ್ಲಿ ಮೂಡಿಬಂದ ಎಲ್ಲ ಚಿತ್ರಗಳೂ ... ಮಹಾಪ್ರಭುಗಳನ್ನಾಗಲೀ ಅಥವಾ ಬಾಕ್ಸ್ ...ಸ್ ಟಾರ್ಗೆಟ್‌ಗಳನ್ನಾಗಲೀ ಅಷ್ಟು ...ಭವಾಗಿ ಗೆಲ್ಲಲು ಸಾಧ್ಯ ...ಲ್ಲ. ಕಾರಣ ಹುಡುಕುತ್ತ ...ಟರೆ ಮೊದಲು ...ದಾಗುವುದೇ ಪ್ರತಿಭೆ ಮತ್ತು ಹೊಸತನದ ...ಕಾಟಗಳ ಕೊರತೆ.

...ಂಥಾ ಕೊರತೆಯ ನಡುವೆಯೂ ಪ್ರೇಕ್ಷಕರ ...ಮೊರೆಗೊಂಡ ಕೆಲವು ಹೊಸ ನಟ-ನಟಿಯರು ...ಮಾನಕ್ಕೆ ಬಂದದ್ದು ಆ ಮೂಲಕ ತಮ್ಮ ಚಿತ್ರಗಳನ್ನು ...ಪೆಟ್ಟಿಗೆಯಲ್ಲಿ ಗೆಲ್ಲಿಸಿದ್ದು ಸಂತೋಷದ ವಿಷಯ. ಈ ...ಬನ ಸಾಲಿನಲ್ಲಿ ತಮ್ಮದೇ ವಿಶಿಷ್ಟ ಅಭಿನಯದ ...ಲಕ ಹೊಸ ಭರವಸೆಯನ್ನು ಮೂಡಿಸಿರುವ ...ಸಮ್ ಸತೀಶ್ ಎದ್ದು ಕಾಣುವ ನಟ.

...ಮಾದೇಶ' ಚಿತ್ರದ ಮೂಲಕ ಕನ್ನಡ ಚಿತ್ರರಂಗ ... ಸತೀಶ್ ಯೋಗರಾಜ ಭಟ್ಟರ 'ಡ್ರಾಮಾ' ಚಿತ್ರದಲ್ಲಿ ...ರಿ ಪರ್‌ಫಾಮೆನ್ಸ್ ನೀಡಿ ಎಲ್ಲರ ಗಮನ ಸೆಳೆದರು. ...ಸಮ್ ಸತೀಶ್ ಈವರೆಗೂ ಪವರ್‌ಸ್ಟಾರ್ ಪುನೀತ್ ...ಗೆ 'ಪರಮಾತ್ಮ', 'ಅಣ್ಣಾ ಬಾಂಡ್', ದಿಗಂತ್ ಜೊತೆಗೆ ...ಪಾರೆ', 'ಪಂಚರಂಗಿ', 'ಲೈಫ್ ಇಷ್ಟೇನೆ', ಬಿ.ಸುರೇಶ್ ... 'ಪುಟ್ಟಕ್ಕನ ಹೈವೇ' ಚಿತ್ರದಲ್ಲಿ ತಮ್ಮ ವಿಶಿಷ್ಟ ...ಯವನ್ನು ಮೆರೆದ ಯುವ ನಟ.

...ತ್ತೀಚೆಗಷ್ಟೇ ಬಿಡುಗಡೆಯಾದ, ಅವರೇ ...ಕನಟರಾಗಿರುವ 'ಲೂಸಿಯಾ' ಚಿತ್ರದ ಯಶಸ್ಸಿನ ...ದಲ್ಲಿರುವ ನೀನಾಸಮ್ ಸತೀಶ್ ಲಂಕೇಶ್ ಪತ್ರಿಕೆಯ ...ಗೆ ಸಿಕ್ಕಿದ್ದರು. ಅವರೊಡನೆ ಹಾಗೇ ಸುಮ್ಮನೆ ಒಂದು ... ಬಾತ್-ಚೀತ್ ಇಲ್ಲಿದೆ.

...ಶ್ನೆ: ನಮಸ್ಕಾರ. ಹೇಗಿದ್ದೀರಿ, ಏನು ನಡೆಸಿದ್ದೀರಿ?

...ತೀಶ್: ನಮಸ್ಕಾರ ಸರ್, ತುಂಬಾ ಖುಷಿಯಾಗಿದ್ದೀನಿ. ...ನಲ್ಲಿ ನಾನು ನಾಯಕನಾಗಿ ನಟಿಸಿರೋ 'ಲೂಸಿಯಾ' ... ಆಗಿದೆ, ಹೌಸ್‌ಫುಲ್ ಆಗಿ ನಡೀತಿದೆಯಂತೆ, ತುಂಬಾನೇ ಒಳ್ಳೆ ರೆಸ್ಪಾನ್ಸ್ ಬರ್ತಿದೆ. ರಿಯಲಿ ಐಮ್ ಹ್ಯಾಪಿ. ನಾನೇ ಹೀರೋ ಆಗಿರೋ 'ಕ್ವಾಟ್ಲೆ ಸತೀಶ', 'ಅಂಜದಗಂಡು' ಮತ್ತು 'ದ್ಯಾವ್ರೇ' ರೆಡಿಯಾಗಿವೆ, ರಿಲೀಸ್ ಆಗ್ಬೇಕು ಅಷ್ಟೆ.

ಪ್ರಶ್ನೆ: ಈ ಹೊತ್ತಿನ ಹೊಸ ಸಂವೇದನೆಯ ನಟ ನೀವು. ಹೇಳಿ ಇಂದಿನ ಕನ್ನಡ ಚಿತ್ರರಂಗ ಮತ್ತು ನಿಮ್ಮ ಮುಂದಿನ ಅವಕಾಶಗಳು ಹೇಗೆ ಕಾಣ್ತಾ ಇವೆ?

ಸತೀಶ್: ನೋಡಿ ಸಾರ್, ಪ್ರತಿಭೆ ಯಾರ ಸ್ವತ್ತೂ ಅಲ್ಲ. ಯಾರಲ್ಲಿ ನಿಜವಾದ ಟ್ಯಾಲೆಂಟ್ ಇರುತ್ತೋ ಅವರು ಖಂಡಿತವಾಗಿ ಮುಂದೆ ಬರ್ತಾರೆ. ಅವರನ್ನ ಇಷ್ಟ ಪಡೋರು, ಅವಕಾಶ ಕೊಡೋರು ಕೂಡಾ ಖಂಡಿತಾ ಮುಂದೆ ಬರ್ತಾರೆ, ಅವಕಾಶ ಕಲ್ಪಿಸಿಕೊಡ್ತಾರೆ. ಬರೀ ಫ್ಯಾಮಿಲಿ ಬ್ಯಾಕ್‌ಗ್ರೌಂಡ್ ಇದ್ದೋರಿಗೆ, ಗಾಡ್ ಫಾದರ್ ಇರೋರಿಗೆ ಮಾತ್ರ ಅವಕಾಶ ಅನ್ನೋದೆಲ್ಲ ನನ್ನ ಮಟ್ಟಿಗೆ ಸುಳ್ಳು ಸಾರ್, ಆ ಕಾಲ ಹೋಯ್ತು. ಒಳ್ಳೆ ಕಥೆ, ನಟನೆ ಇದ್ರೆ ಒಳ್ಳೆ ಸಿನೆಮಾ ಆಗೇ ಆಗುತ್ತೆ, ಜನ ಖಂಡಿತಾ ಇಷ್ಟಪಟ್ಟು ನೋಡೇ ನೋಡ್ತಾರೆ.

ಇತ್ತೀಚಿನ ದಿನಗಳಲ್ಲಿ ಸೂಕ್ಷ್ಮ ಮನಸ್ಸಿನ ಹೊಸ ಹೊಸ ನಿರ್ದೇಶಕರ, ನಟರ ಒಂದು ದಂಡೇ ಬರ್ತಾ ಇದೆ, ಒಂದು ಹೊಸ ಕ್ರಾಂತಿಯಾಗೋದು ಗ್ಯಾರಂಟಿ.

ಪ್ರೇಕ್ಷಕರೂ ಅಷ್ಟೆ ತುಂಬಾ ಡೀಟೈಲಾಗಿ ಅಬ್ಸರ್ವ್ ಮಾಡ್ತಾ ಇದ್ದಾರೆ; ಅದೆಷ್ಟೋ ಸಲ ನಾನು ನನ್ನ ಮನಸ್ಸಿನಲ್ಲಿ ಏನೋ ಒಂದು ಅಂದುಕೊಂಡು ಕೊಟ್ಟ ಮೌನವಾದ ಟರ್ನಿನ ಸಬ್‌ಟೆಕ್ಸ್ಟ್ - ಅಂದರೆ ಮಾತಾಡದೇ ಮನಸ್ಸೊಳಗೇ ಅಂದು ಕೊಂಡ ಅರ್ಥವನ್ನೂ - ಅವರು ಸರಿಯಾಗಿ ಗ್ರಹಿಸಿ ಹೇಳ್ತಾರೆ, ಹಾಗಾಗಿ ನಾವು ನಟರು ಪ್ರಾಮಾಣಿಕರಾಗಿರಬೇಕು.

ಪ್ರಶ್ನೆ: ನಿಮ್ಮ ಹುಟ್ಟೂರಿನ ನಂಟು ಮತ್ತು ನಿಮ್ಮ ಹಿಂದಿನ ಜೀವನದ ಬಗ್ಗೆ ಹೇಳಿ.

ಸತೀಶ್: ನನ್ನೂರಿನ ಜೀವನಾನುಭವವೇ ನನ್ನ ಅಭಿನಯದ ಬಂಡವಾಳ ಸರ್. ನಮ್ಮೂರು ಮಂಡ್ಯ ಜಿಲ್ಲೆಯ ಯಲಾಡಹಳ್ಳಿ, ಭೂಮಿಣೇ ನೆಚ್ಕೊಂಡು ಬೇಸಾಯ ಮಾಡೋ ಕುಟುಂಬ ನಮ್ದು. ಅಪ್ಪಅಮ್ಮಂಗೆ ನಾವು ಒಟ್ಟು ಎಂಟು ಜನ ಮಕ್ಳು, ನಾನೇ ಕೊನೇ ಮಗ. ಎಸ್‌ಎಸ್‌ಎಲ್‌ಸಿವರ್‍ಗೂ ಹಂಗೂ ಹಿಂಗೂ ಹೋದೆ, ಆಮೇಲೆ ಓದು ಹತ್ತದೇ ಬೆಂಗ್ಳೂರ್ ಸೇರ್ಕೊಂಡೆ ಮನೆಯವರ್‍ಗೆ ಹೇಳ್ದೆನೆ. ಗೋಪಾಲ್ ಟಾಕೀಸ್ ಕ್ಯಾಂಟೀನ್ನಲ್ಲಿ ಒಂದಷ್ಟು ದಿನ, ಬಸ್ ಕ್ಲೀನರ್ರಾಗಿ ಒಂದಷ್ಟು ದಿನ, ಗಾರ್ಮೆಂಟ್ನಲ್ಲಿ ಒಂದಷ್ಟು ದಿನ ಕೆಲಸ ಮಾಡ್ತಿದ್ದೆ; ಹೆಂಗೋ ವಿಚಾರ ಮನೆಯವರಿಗೆ ಗೊತ್ತಾಗಿ ತಿರುಗಾ ಊರಿಗೆ ಕರ್ಕೊಂಡೋದ್ರು. ಅಲ್ಲಿ ನೇತಾಜಿ ಯುವಕ ಸಂಘ ಅಂತ ಕಟ್ಕೊಂಡು ಯುವಜನ ಮೇಳಕ್ಕೆ ಹೋಗ್ತಾ ಇದ್ದೆ, ಡ್ರಾಮಾ-ಡ್ಯಾನ್ಸು ಅಂತ ಮಾಡ್ತಾ ಇದ್ದೆ. ಹಂಗೆ ಹವ್ಯಾಸಿ ನಾಟಕದಲ್ಲಿ ಪಾರ್ಟು ಮಾಡೋಕೆ ಶುರುಮಾಡ್ದೆ.

ಮಂಡ್ಯದ ಜಯಪ್ರಕಾಶ ಗೌಡರ 'ಜನದನಿ' ತಂಡವನ್ನು ಸೇರಿ ನಾಟ್ಕ ಮಾಡ್ತಿದ್ದೆ. ನನ್ನನ್ನ ಗಮನಿಸ್ತಾ ಇದ್ದ ನನ್ನ ಗೆಳೆಯಾ ಒಬ್ಬ: 'ಇಥರಕ್ಕೀಥರ ನೀನಾಸಮ್ಮು ಅಂತ ಒಂದದೆ, ಅಲ್ಲಿಗೊಂಟೋಗು ನೀನು. ನಿನಗದೇ ಸರಿಯಾದ ಜಾಗ' ಅಂದ. ನೀನಾಸಮ್‌ಗೆ ಸೆಲೆಕ್ಟ್ ಆದೆ. ಹೊಸ ಬದುಕಿಗೆ ತೆರೆದುಕೊಂಡೆ. ಆಮೇಲಿನದ್ದು ನನ್ನದೊಂದು ಹೊಸ ಜೀವನದ ದೊಡ್ಡ ಅಧ್ಯಾಯ.

ಸಂದರ್ಶನ

ನರೇಶ ಮಯ್ಯ
(ನಟ-ನಿರ್ದೇಶಕ)



ಪ್ರಶ್ನೆ: ನಿಮ್ಮ ಹೆಸರಿನ ಮುಂದೆ ಯಾಕೆ ನೀನಾಸಮ್ ಹೆಸರನ್ನ ಉಳಿಸಿಕೊಂಡಿದ್ದೀರಿ? ಮುಜುಗರ ಅನ್ನಿಸಲ್ವೇ?

ಸತೀಶ್: ಖಂಡಿತಾ ಮುಜುಗರವಾಗೊಲ್ಲ, ಖುಷಿಯಾಗುತ್ತೆ. ನನಗೆ ಹೊಸ ಬದುಕು ಕಲಿಸಿಕೊಟ್ಟ ನನ್ನ ಸಂಸ್ಥೆಯ ಹೆಸರಿನ ಮೂಲಕ ಗುರುತಿಸಿಕೊಳ್ಳೋದ್ರಲ್ಲಿ ತಪ್ಪೇನಿದೆ ಹೇಳಿ? ಸಿನೆಮಾಗೂ ಮುಂಚೆ ಬಿ.ಸುರೇಶ ಅವರ ಒಂದು ಸೀರಿಯಲ್ಲಿನಲ್ಲಿ ನಟಿಸ್ತಾ ಇದ್ದೆ. ಆಗ ಅವರು 'ನಿನ್ನ ಹೆಸರಿನ ಮುಂದೆ ನೀನಾಸಮ್ ಹೆಸರು ಸೇರಿಸಿಕೋ. ಅದರಿಂದ ನಿನ್ನನ್ನು ನಿರ್ದೇಶಕರು ಬೇಗ ಗುರ್ತಿಸ್ತಾರೆ, ಅವಕಾಶಗಳಿಗೆ ಅನುಕೂಲ ಆಗುತ್ತೆ' ಅಂದ್ರು. ಅದು ನನಗೂ ಸರಿ ಅನ್ನಿಸ್ತು, ಸತೀಶ ಆಗಿದ್ದವನು ನೀನಾಸಮ್ ಸತೀಶ ಆದೆ.

ಪ್ರಶ್ನೆ: ಬೆಂಗಳೂರಿನ ಈಗಿನ ನಿಮ್ಮ ಜೀವನ ಹೇಗಿದೆ? ಏನನ್ನಿಸುತ್ತೆ?

ಸತೀಶ್: ಈಗ ದುಡೀತಾ ಇದ್ದೀನಿ, ಖರ್ಚಿಗೆ ಹಣ ಇದೆ, ಪರ್ವಾಗಿಲ್ಲ. ಆದ್ರೆ ಹಣ ಇಲ್ದೆ ಇರೋರಿಗೆ ಖಂಡಿತಾ ಬೆಂಗ್ಳೂರ್ ಜೀವನ ಆಗಲ್ಲ ಸರ್. ಮನೇಲಿ ಇರ್ಬೇಕೂ ಅಂದ್ರೂ ಖರ್ಚು, ಆಚೆ ಹೋಗ್ಬೇಕು ಅಂದ್ರೆ ಇನ್ನೂ ಖರ್ಚು. ಎಲ್ಲಿಂದ ಬರುತ್ತೆ ಹೇಳಿ ಹಣ? ಬೆಂಗ್ಳೂರನ್ನ ಮೊದಲು ನೋಡಬೇಕಾದ್ದೇ ಈ ಫೈನಾನ್ಸಿಯಲ್ ದೃಷ್ಟಿಯಿಂದ ಸಾರ್. ನಮ್ಮ ಹಳ್ಳಿ ವಿಚಾರಾನೇ ಉಲ್ಟಾ; ಇಲ್ಲಿ ಖರ್ಚು ಮಾಡೋ ಇಪ್ಪತ್ತು ಪರ್ಸೆಂಟಲ್ಲಿ ಆರಾಮವಾಗಿ ಬದುಕಬಹುದು.

ಪ್ರಶ್ನೆ: ನೀವು ಅಭಿನಯವನ್ನೇ ಜೀವನೋಪಾಯ ಮಾಡ್ಕೋಬೇಕು ಅಂತ ಅನ್ನಿಸಿದ್ದು ಹೇಗೆ?

ಸತೀಶ್: ನೀನಾಸಮ್‌ನಲ್ಲಿ ರಂಗಭೂಮಿ ಬಗ್ಗೆ ಕಲಿತಾ ಇದ್ದಾಗ ನನಗೆ ಬಹಳ ಇಷ್ಟ ಅನಿಸಿದ್ದು, ನಾನು ಚೆನ್ನಾಗಿ ಇನ್ವಾಲ್ವ್ ಆಗ್ತಾ ಇದ್ದಿದ್ದು ಯಾಕ್ಟಿಂಗ್‌ನಲ್ಲಿ, ಹೋಗ್ತಾ ಹೋಗ್ತಾ ನನಗೆ ಕ್ಲಿಯರ್ರಾಗಿ ಗೊತ್ತಾಯ್ತು ನಾನೇನಾದ್ರೂ ಸಾಧಿಸ್ಬೇಕು ಅಂತ ಇದ್ರೆ ಅದು ಆಕ್ಟಿಂಗ್ನಲ್ಲಿ ಅಂತ. ಹಂಗಾಗಿ ಅಭಿನಯದ ಬೆನ್ನು ಹತ್ತಿದೆ. ಈಗ ಸಿನೆಮಾದಲ್ಲಿ ಆಕ್ಟ್ ಮಾಡ್ಬೇಕಾದ್ರೆ ನಾನು ನೀನಾಸಮ್‌ನಲ್ಲಿ ಕಲಿತ ಎಲ್ಲ ಪಟ್ಟುಗಳೂ ರೀಕಾಲ್ ಆಗ್ತವೆ. ನನ್ನ ಎಲ್ಲ ಪಾತ್ರಾಭಿನಯದ ಹಿಂದೆ ಎಂಬತ್ತು ಪರ್ಸೆಂಟ್ ಅವು ಕೆಲಸ ಮಾಡಿರ್ತವೆ.

ಪ್ರಶ್ನೆ: ನಾಟಕದಲ್ಲಿ ನೀವು ಅಭಿನಯಿಸೋದಕ್ಕೂ, ಕ್ಯಾಮೆರಾ ಮುಂದೆ ಆಕ್ಟ್ ಮಾಡೋದಕ್ಕೂ ಏನು ವ್ಯತ್ಯಾಸ ಅಂತೀರಿ?

ಸತೀಶ್: ಅತ್ಯ ಒಂದೇ, ಅದು ಸಾಕ್ಷಿಕಾಭಿನಯ. ಇಲ್ಲಿ ಬಿಯಿಂಗ್ ಮುಖ್ಯ ಅಂದ್ರೆ ಪಾತ್ರ ಆ ಕ್ಷಣಕ್ಕೆ ಅಲ್ಲಿ ಜೀವಿಸ್ತಾ ಇರ್ಬೇಕು. ಕಾಲ್‌ಶೀಟ್ ಮೀಟರ್ ಓಡ್ತಿರತ್ತೆ, ಮತ್ತೆ ಮತ್ತೆ ರೀಟೇಕ್ ಮಾಡಿದ್ರೆ ಚೆನ್ನಾಗಿರಲ್ಲ, ಕಾಸ್ಟ್ಲೀ ಅಫೈರ್. ಸ್ಟೇಜ್ ಮೇಲಾದ್ರೆ ಖರ್ಚೂ ಕಡಿಮೆ, ದಿನಗಟ್ಲೆ ರಿಹರ್ಸಲ್ ಗಳಿರ್ತವೆ, ವಿಸ್ತಾರವಾದ ಜಾಗ ಇರತ್ತೆ, ನಾವು ನಟರು ಇಷ್ಟೇ ಇರ್ತೀವಿ. ಅಲ್ಲಿ ಬಾಡಿ ಮೂವ್‌ಮೆಂಟ್ಸ್ ಮುಖಾಂತರ ಹೆಚ್ಚು ಕಮ್ಯುನಿಕೇಟ್ ಮಾಡ್ಬೇಕಾಗುತ್ತೆ, ಇಲ್ಲಿ ಕ್ಯಾಮೆರಾದಲ್ಲಿ ನಿರ್ದಿಷ್ಟವಾದ ಫ್ರೇಮ್ ಮತ್ತು ಡಿಸ್ಟೆನ್ಸ್‌ಗಳಿರ್ತಾವೆ, ಹಾಗಾಗಿ ಅವುಗಳಿಗೆ ತಕ್ಕಂತೆ ಸೂಕ್ಷ್ಮವಾಗಿ ಅಭಿನಯಿಸಬೇಕು.

ಪ್ರಶ್ನೆ: ಗಾಂಧೀನಗರದ ಪ್ರೋತ್ಸಾಹ ಮತ್ತು ನಿರುತ್ಸಾಹಗಳ ಬಗ್ಗೆ ಏನಂತೀರಿ?

ಸತೀಶ್: ಈ ಗಾಂಧೀನಗರ ಅನ್ನೊ ಕಲ್ಪಿತವಾದ ಲೋಕಾನೇ ಬೇರೆ ಅನ್ಸುತ್ತೆ ಸಾರ್. ನನ್ ಪ್ರಕಾರ ಎಷ್ಟೊಂದು ವರ್ಷಗಳಿಂದ ಎಷ್ಟೆಷ್ಟು ಕೆಲಸ ಮಾಡಿರೋ, ಎಂತೆಂಥಾ ಸಿನೆಮಾಗಳನ್ನ ಮಾಡಿರೋ ಗ್ರೇಟ್ ಪ್ರೊಡಕ್ಷನ್ ಹೌಸ್‌ಗಳಿವೆ ಅಲ್ಲಿ, ಪ್ರತಿಭೆ ಮತ್ತೆ ಕೆಲ್ಸಾ ಇಲ್ದೇ ಇರೋ ಯಾರೋ ಕೆಲವರು ಮಾತ್ರ ಇಲ್ದೇ ಇರೋ ಕಥೆಗಳನ್ನ ಸೃಷ್ಟಿಸ್ತಾರೆ ಅಷ್ಟೆ. ನನಗಂತೂ ಎಲ್ಲರೂ ಪ್ರೋತ್ಸಾಹ ಕೊಟ್ಟವರೇ, ಒಳ್ಳೊಳ್ಳೆ ಅವಕಾಶ ಕೊಟ್ಟೋರೇನೆ. ಜಯಣ್ಣಾ-ಭೋಗೇಂದ್ರ, ಯೋಗ್ರಾಜಭಟ್ರು, ಸೂರಿ, ಪವನ್ ಅಂತಹ ನಿರ್ದೇಶಕರು ಅಷ್ಟೇ ಯಾಕೆ ನಾನು ಜೊತೆಯಾಗಿ ನಟಿಸಿದ ಅಪ್ಪು ಸಾರ್, ಯಶ್, ಅನಂತ್ ನಾಗ್ ಸರ್, ದಿಗಂತ್ ಎಲ್ಲರೂ ನನಗೆ ಸಹಕಾರ ಕೊಟ್ಟವರೇ. ಊಹಾಪೋಹಗಳ ಕಾಲ ಮುಂದೆ ನಡೆಯಲ್ಲ ಸಾರ್. ಪ್ರತಿಭೆಗೆ, ಕೆಲಸಕ್ಕೆ ಗೌರವ ಯಾವಾಗ್ಲೂ ಇದ್ದೇ ಇರುತ್ತೆ.

ಪ್ರಶ್ನೆ: ನಿಮಗೆ ಇಷ್ಟವಾಗೋ ನಟನಟಿಯರು ಯಾರು?

ಸತೀಶ್: ರಣ್‌ಬೀರ್ ಕಪೂರ್ ನನ್ಗೆ ತುಂಬಾ ಹಿಡಿಸಿದ ನಟ. ಅಷ್ಟು ದೊಡ್ಡ ನಟರ ಫ್ಯಾಮಿಲಿ ಹಿನ್ನೆಲೆ ಇದ್ರೂನು ಅವನಲ್ಲಿರೋ ಮುಗ್ಧತೆ ನನಗೆ ತುಂಬಾ ಹಿಡಿಸ್ತು. ಒಬ್ಬ ನಟನಿಗೆ ಇನ್ನೊಸೆನ್ಸ್ ಬಹಳ ಮುಖ್ಯ. ಅದಿದ್ರೇನೇ ಎಂಥಾ ಪಾತ್ರವಾದರೂ ಮನಸ್ಸಿಗೆ ತಗೊಂಡು ಚೆನ್ನಾಗಿ ಮಾಡೋಕೆ ಸಾಧ್ಯ. ಅಣ್ಣಾವ್ರನ್ನ ಗಮನಿಸಿದ್ರೆ ಗೊತ್ತಾಗುತ್ತೆ ಅವರು ಕೊನೇವರೆಗೂ ಒಂದು ಮಗುವಿನಹಾಗೆ ಮುಗ್ಧವಾಗಿದ್ರು.

ಇನ್ನೊಂದು ದಾರಿ ಇದೆ, ನಾನೇನು ಅಂತ ಕಾನ್ಷಿಯಸ್ ಆಗಿದ್ದುಕೊಂಡೇ ಬೇರೆ ಬೇರೆ ಪಾತ್ರ ಧಾರಣೆ ಮಾಡೋದು. ಅದು ಬಹಳ ಕಷ್ಟ, ಅದರಲ್ಲಿ ದಾದಾ ಅಂದ್ರೆ ಸೂಪರ್ ಸ್ಟಾರ್ ರಜನಿ. ತುಂಬಾ ತುಂಬಾ ಇಷ್ಟ ಪಡ್ತೀನಿ ನಾನವರನ್ನ.

ಪ್ರಶ್ನೆ: ಮುಂದೆ ಬೇರೆ ಏನು ಮಾಡ್ಬೇಕು ಅಂತಿದ್ದೀರಿ?

ಸತೀಶ್: ಒಂದು ಸಿನೆಮಾ ಸಂಸ್ಥೆ ಮಾಡಿ, ಡೈರೆಕ್ಟ್ ಮಾಡ್ಬೇಕು ಅಂತ ಪ್ಲಾನ್ ಮಾಡಿದ್ದೀನಿ, ಮುಂದೆ ತಿಳಿಸ್ತೀನಿ. ಈ ಮಧ್ಯೆ ಹೇಂಗಾದ್ರೂ ಬಿಡುವು ಮಾಡಿಕೊಂಡು ನಾಟ್ಕಾ ಮಾಡ್ಬೇಕು ಅಂತ ಮನಸ್ಸಾಗಿದೆ.

ಪ್ರಶ್ನೆ: ಹುಡ್ಗೀರ್‍ಯಾರೂ ಕಾಳು ಹಾಕ್ಲಿಲ್ವಾ? ಮದುವೆ?

ಸತೀಶ್: ಅದೆಲ್ಲ ಸೀಕ್ರೆಟ್ ಸರ್. ಇನ್ನೂ ಒಂದೆರಡು ವರ್ಷ ಮದುವೆ ಮಾತೇ ಇಲ್ಲ.

ಪ್ರಶ್ನೆ: ಹೊಸದಾಗಿ ಬರೋ ನಟ-ನಟಿಯರಿಗೆ ಏನು ಟಿಪ್ಸ್ ಕೊಡ್ತೀರಿ?

ಸತೀಶ್: ಆಸೆನೇ ಪ್ರತಿಭೆ ಅಂದ್ಕೊಂಡು ಕನ್‌ಫ್ಯೂಸ್ ಆಗ್ತಾ ಇದ್ದಾರೆ ತುಂಬಾ ಜನ. ನಟ ಅಥವಾ ನಟಿ ಆಗ್ತೀನಿ ಅಂತ ಆಸೆ ಇದ್ರೆ ಅಷ್ಟೆ ಸಾಕಾಗಲ್ಲ, ನಟನೆ, ಸಂಗೀತ, ಸಾಹಿತ್ಯ ಜನಜೀವನದ ಬಗ್ಗೆ ತಿಳ್ಕೋಬೇಕು, ನಿರಂತರವಾಗಿ ಅಭ್ಯಾಸ ಮಾಡ್ಬೇಕು, ಓದಬೇಕು. ತುಂಬಾ ಜನ ಇದನ್ನೆಲ್ಲ ಮಾಡಲ್ಲ, ಅದಕ್ಕೆ ಸಕ್ಸಸ್ ಆಗಲ್ಲ, ಮನಸ್ಸು ಮತ್ತೆ ದೇಹವನ್ನ ದಂಡಿಸಿ, ಧ್ಯಾನಮಾಡಿ ಕಲೀಬೇಕು. ಅದನ್ನು ಮಾಡದೆ ಬರೀ ಕನಸು ಕಾಣಬಾರದು. ಇದು ನನ್ನ ಜೀವನ ಕಲಿಸಿದ ಪಾಠ. ಅದನ್ನೇ ಮುಂದೆ ಬರೋರಿಗೂ ಹೇಳೋಕೆ ಇಷ್ಟಪಡ್ತೀನಿ ಸಾರ್.

ಪ್ರಶ್ನೆ: ಮುಂದಿನ ಸಿನೆಮಾ?

ಸತೀಶ್: 'ಲವ್ ಇನ್ ಮಂಡ್ಯ' ಅನ್ನೋ ಹೊಸಾ ಸಿನೆಮಾ ಇನ್ನೇನು ಶುರುವಾಗ್ಬೇಕು.

ಪ್ರಶ್ನೆ: ಕಡೆಯದಾಗಿ ಪ್ರೇಕ್ಷಕರಿಗೆ ಏನು ಹೇಳ್ತೀರಿ?

ಸತೀಶ್: ಅಣ್ಣಾವ್ರು 'ಅಭಿಮಾನಿ ದೇವ್ರುಗಳು' ಅಂತಿದ್ರಲ್ಲ, ಅದು ಖಂಡಿತಾ ಸುಳ್ಳಲ್ಲ, ಅವರೇ ನನ್ನ ಬೆಸ್ಟ್ ಫ್ರೆಂಡ್ಸ್, ಕಷ್ಟದಲ್ಲಿದ್ದಾಗ ನನ್ನನ್ನ ಕಾಯ್ತಾರೆ, ನನ್ನನ್ನ ಮೆಚ್ಚಿ ಬೆನ್ನು ತಟ್ತಾರೆ, ಆ ಅದ್ಭುತವಾದ ಗೆಳೆತನಕ್ಕೆ ನನ್ನನ್ನ ನಾನೇ ಒಪ್ಪಿಸಿಕೊಳ್ತೇನೆ.

...ಸಲ್ಪಟ್ಟಿದ್ದಾರೆ. ಅಂತಿಮ ಆಯ್ಕೆ ಪಟ್ಟಿಯಲ್ಲಿ ಇವರ ... ಇರಲಿಲ್ಲ, ಆದರೂ ನೇಮಕಗೊಂಡಿದ್ದಾರೆ.

... ಟೆಕ್ನಿಕಲ್ ಕೋರ್ಸ್ ಓದಿದವರಿಗೆ ನೇಮಕಾತಿಗೆ ...ಶವಿರದಿದ್ದರೂ ರಿಜ್ವಾನ್ ಎ ಬೇಗಂ ಎಂಬ ಬಯೋ ...ಜಿ ಓದಿದವರನ್ನು ಪ್ರಿನ್ಸಿಪಲ್ ಆಗಿ ಆಯ್ಕೆ ...ಲಾಗಿದೆ.

ವಿಜಯ್ ಕುಮಾರ್ ಉತ್ತೂರ್ ಎಂಬುವರ ...ತಾಯಿ ಇಬ್ಬರೂ ಸರ್ಕಾರಿ ನೌಕರರಾಗಿದ್ದು ಅವರ ...ಬದ ಒಟ್ಟು ವಾರ್ಷಿಕ ಆದಾಯ ಮೂರು ಲಕ್ಷಕ್ಕಿಂತ ...ಡೆ. ಹಾಗಾಗಿ ಸಿಂಧುತ್ವ ಪ್ರಮಾಣಪತ್ರ ಅವರಿಗೆ ...ವಾಗುವುದಿಲ್ಲ, ಕಾನೂನು ಹೀಗಿದ್ದಾಗಲೂ ವಿಜಯ್ ...ರನ್ನು ಪ್ರಥಮ ದರ್ಜೆ ಸಹಾಯಕ/ಕಂಪ್ಯೂಟರ್ ... ಎಂದು ನೇಮಕ ಮಾಡಿಕೊಂಡಿದ್ದಾರೆ.

... ದೇವಿಕಾ. ಕೆ. ಜೋಗಿ ಎಂಬುವರನ್ನು ಸಂಗೀತ ...ರಾಗಿ ನೇಮಿಸಲಾಗಿದೆ. ಆದರೆ ಇವರ ಬಳಿ ಯಾವ ...ಗಳೂ ಇಲ್ಲ.

ಮಹಂತೇಶ ಹಿರೇಗೌಡ ಎಂಬುವರಿಗೆ ...ಲೇ 42 ವಯಸ್ಸಾಗಿದೆ. ಕಾನೂನಿನ ಪ್ರಕಾರ 40 ...ದಾಟಿದವರಿಗೆ ನೇಮಕಾತಿಗೆ ಅವಕಾಶವಿಲ್ಲದಿದ್ದರೂ ...ಕ (KREIS) ನಲ್ಲಿ ಕೆಲಸ ಗಿಟ್ಟಿಸಿದ್ದಾರೆ.

-ನೊಂದ ಶಿಕ್ಷಕರು.

...ಷೀರ್ ತಲೆಗೆ ಯಾರೂ ...ಸ್ತೂಲ್ ಹಿಡಿಯದಿರಲಿ

...ಮ್ಲಿಮ್ ಮಹಿಳೆಯರಿಗೆ ಮಸೀದಿ ಪ್ರವೇಶಕ್ಕಿಂತ ... ಪ್ರವೇಶ ಮುಖ್ಯ' ಎಂಬ ಬಿ.ಎಂ.ಬಷೀರ್ ...ಲ್ಲಿ ಅರ್ಥ ಓದಿದೆ. ಮನೆಯೇ ಮೊದಲ ಪಾಠಶಾಲೆ ... ಕೇವಲ ಮುಸ್ಲಿಂ ಮಹಿಳೆಯರಿಗೆ ಮಾತ್ರವಲ್ಲ ...ಣ್ಣುಮಕ್ಕಳಿಗೂ ಶಾಲೆಯೇ ಮಂದಿರ ಹಾಗೂ



ದೇಗುಲ ಅನ್ನುವುದರಲ್ಲಿ ಸಂಶಯವಿಲ್ಲ. ಶಾಲೆಯಲ್ಲಿ ನಡೆಸುವ ತಪಸ್ಸಿನಿಂದಾಗಿ ಭವಿಷ್ಯದಲ್ಲಿ ಅಕ್ಷರ ದೇವರನ್ನು ಒಲೈಸಿಕೊಂಡು 'ವಿಚಾರ' ಎಂಬ ಫಲಭರಿತ ವರವನ್ನು ಪಡೆದುಕೊಳ್ಳುತ್ತಾರೆ. ಹಾಗಾದರೆ ಮಾತ್ರ ಹೆಣ್ಣುಮಕ್ಕಳು ಭವಿಷ್ಯದಲ್ಲಿ ಭಾರತದ ಸತ್‌ಪ್ರಜೆಗಳನ್ನು ರೂಪಿಸಬಹುದು. ಹಾಗಾಗಿ ಮಸೀದಿಗಿಂತ ಶಾಲಾ ಪ್ರವೇಶ ಮುಖ್ಯ ಎಂಬ ಬಷೀರ್ ಅವರ ಮಾತು ಸರಿಯಾದದ್ದು.

ಕಾದಿ ಒಳಗೆ ಬದುಕು ನಡೆಸುವವರು ಎಷ್ಟೋ ಇದ್ದಾರೆ. ಆದರೆ ಕಾದಿ ಒಳಗೆ ಬೆಳ್ಳಂಬೆಳ್ಳ ಪ್ರಪಂಚ ಕಂಡುಕೊಳ್ಳಲಿಕ್ಕೆ ಹಾತೊರೆಯುವವರ ಸಂಖ್ಯೆ ಬಹಳಷ್ಟಿದೆ.

ಇನ್ನಾದರು ಬಿ.ಎಂ.ಬಷೀರ್‌ರ ತಲೆಗೆ ಯಾರೂ ಪಿಸ್ತೂಲ್ ಹಿಡಿಯದಿರಲಿ.

- ಅಲ್ಲಾರಂಡ ವಿಠಲ ನಂಜಪ್ಪ, ಮಡಿಕೇರಿ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.

Registered No.KA/RNP/BGS/2036/2011-13 Posted at : GPO, Bangalore-01. Friday R B P LANKESH, Kannada Weekly Price Rs. 14/- 07-08-2013 RNI No. KARKAN2005/1464

ಸುಮಲತಾ ಮತ್ತು ರಮ್ಯಾ- ಇವರಿಬ್ಬರಲ್ಲಿ ಅಭ್ಯರ್ಥಿ ಯಾರು?



ಮಂಡ್ಯ ಲೋಕಸಭಾ ಕ್ಷೇತ್ರದಿಂದ ಬರುವ ಆಗಸ್ಟ್ 21ರಂದು ಉಪಚುನಾವಣೆ ನಡೆಯಲಿದೆ.

ಇದು ರಾಜಕೀಯ ಸುದ್ದಿಯಾದರೂ ಉಪಚುನಾವಣೆಯ ದಿನಾಂಕ ನಿಗದಿಯಾದ ಕೂಡಲೇ ಗಾಂಧಿನಗರದಲ್ಲಿ ಒಂದು ತರಹದ ತಳಮಳ ಹುಟ್ಟಿಕೊಂಡಿದೆ. ಇದಕ್ಕೆ ಕಾರಣ ಮಂಡ್ಯ ಚುನಾವಣೆ ಎಂದರೆ ಅದು ರೆಬಲ್ ಸ್ಟಾರ್ ಅಂಬರೀಶ್ ಅವರ ರಾಜಕೀಯ ಅಸ್ತಿತ್ವದ ಚುನಾವಣೆ ಎಂದು ಸಿನಿಮಾ ಲೋಕದ ಜನ ಭಾವಿಸಿರುವುದು.

ಎರಡು ತಿಂಗಳ ಹಿಂದೆಯಷ್ಟೆ ಮೊದಲ ಬಾರಿಗೆ ಕ್ಯಾಬಿನೆಟ್ ಮಂತ್ರಿಯಾಗಿ ಅಂಬರೀಶ್ ಅಧಿಕಾರ ಸ್ವೀಕರಿಸಿದ್ದನ್ನೇ ಅಂಬಿ ಇನ್ನೂ ಸಂಭ್ರಮಿಸುತ್ತಿರುವಾಗಲೇ ಮಂಡ್ಯ ಲೋಕಸಭಾ ಉಪಚುನಾವಣೆ ಅವರಿಗೆ 'ಅಗ್ನಿಪರೀಕ್ಷೆ'ಯಾಗಿ ಎದುರಾಗಿಬಿಟ್ಟಿದೆ.

ಇತ್ತೀಚೆಗೆ ನಡೆದ ಅಸೆಂಬ್ಲಿ ಚುನಾವಣೆಯಲ್ಲಿ ರೆಬಲ್‌ಸ್ಟಾರ್ ಹೇಳಿದವರಿಗೆ ಕಾಂಗ್ರೆಸ್ ಹೈಕಮಾಂಡ್ ಟಿಕೆಟ್ ನೀಡಿತು. ಹೀಗಾಗಿ ಈ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯನ್ನು ಗೆಲ್ಲಿಸುವ ಜವಾಬ್ದಾರಿ ಅಂಬರೀಶ್ ಮೇಲಿದೆ.

ಮಾಜಿ ಸಚಿವ ಆತ್ಮಾನಂದ ಕಾಂಗ್ರೆ ಅಭ್ಯರ್ಥಿಯಾಗಿ ಸ್ಪರ್ಧಿಸಲು ತುದಿಗಾಲಲ್ಲಿ ನಿಂತಿದ್ದಾರೆ. ಆದರೆ ಇವರು ಅಂಬರೀಶ್ ವಿರೋಧಿ ಪಾಳೆಯದ ನಾಯಕ. ಹೀಗಾಗಿ ಇವರು ಅಭ್ಯರ್ಥಿಯಾಗುವುದು ಅಂಬಿಗೆ ಸುತರಾಮ್ ಇಷ್ಟವಿಲ್ಲ. ಹಾಗಂತ ಈಗಾಗಲೇ ಅಂಬಿ ಕಾಂಗ್ರೆಸ್ ನಾಯಕರಿಗೆ ಹೇಳಿದ್ದಾರೆ. "ಹಾಗಾದರೆ ನಿಮ್ಮ ಪತ್ನಿ ಸುಮಲತಾರನ್ನು ನಿಲ್ಲಿಸಿ ಅವರನ್ನು ಗೆಲ್ಲಿಸುವ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತೀರಾ?" ಎಂದು ಕಾಂಗ್ರೆ ನಾಯಕರು ಅಂಬಿಗೆ ಸವಾಲು ಹಾಕಿದ್ದಾರಂತೆ.

ಮೊನ್ನೆಯ ಚುನಾವಣೆಯಲ್ಲಿ ಸುಮಲತಾ ಅವರು ತಮ್ಮ ಪತಿ ಅಂಬರೀಶ್ ಪರವಾಗಿ ಕ್ಷೇತ್ರದ ಉದ್ದಗಲಕ್ಕೂ ಪ್ರಚಾರ ಮಾಡಿದ್ದರು. ಅಷ್ಟೆ ಅಲ್ಲ, ಇತ್ತೀಚೆಗೆ ಅಂಬರೀಶ್ ಅವರು ಕಣ್ಣಿನ ಆಪರೇಷನ್ ಆಗಿ ಅವರು ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದ ಸಂದರ್ಭದಲ್ಲಿ ಸುಮಲತಾ ಮಂಡ್ಯಕ್ಕೆ ಹೋಗಿ ಜನರ ಅಹವಾಲುಗಳನ್ನು ಕೇಳಿದ್ದರು. ಆದರೆ ಚುನಾವಣೆ ಸಂದರ್ಭದಲ್ಲಿ ಅಂಬಿ "ರಾಜಕೀಯಕ್ಕೆ ನನ್ನ ಪತ್ನಿಯಾಗಲಿ, ಮಗನಾಗಲಿ ಬರುವುದಿಲ್ಲ, ರಾಜಕೀಯ ನನ್ನಲ್ಲಿಗೇನೆ ಮುಗಿದುಹೋಗುತ್ತದೆ" ಎಂದಿದ್ದರು. ಇಷ್ಟು ಬೇಗ ಅಂಬಿ ತಮ್ಮ ಮಾತನ್ನು ಮರೆತು ಹೋಗುತ್ತಾರೆಯೇ ಎಂಬುದೇ ಕೆಲವರ ಪ್ರಶ್ನೆಯಾಗಿದೆ.

ಇದೇ ಹೊತ್ತಿಗೆ ಕೇಳಿಬರುತ್ತಿರುವ ಮತ್ತೊಂದು ಹೆಸರು ಕನ್ನಡ ಚಿತ್ರರಂಗದ ಸದ್ಯದ ನಂ.1 ನಾಯಕಿ ನಟಿ ರಮ್ಯಾಳದ್ದು. ಮೊನ್ನೆ ನಡೆದ ಚುನಾವಣೆಯಲ್ಲಿ ರಮ್ಯಾ ರಾಜ್ಯಾದ್ಯಂತ ಕಾಂಗ್ರೆಸ್ ಅಭ್ಯರ್ಥಿಗಳ ಪರವಾಗಿ ಪ್ರಚಾರವನ್ನು ಮಾಡಿದ್ದರು. ಒಕ್ಕಲಿಗ ಸಮುದಾಯದ ಈ ಮಂಡ್ಯದ



ಹುಡುಗಿಯನ್ನು ಚುನಾವಣೆಗೆ ನಿಲ್ಲಿಸಿದರೆ ಲಾಭವಾಗಬಹುದು ಎಂದು ಕಾ... ನಾಯಕರು ಚಿಂತಿಸುತ್ತಿದ್ದಾರೆ.

ಆದರೆ ರಮ್ಯಾ ಮಂಡ್ಯದಿಂದ ಸ್ಪರ್ಧಿಸಲು ಉತ್ಸುಕರಾಗಿದ್ದಾರೆಯೇ ಇ... ಎಂಬುದು ಗೊತ್ತಿಲ್ಲ. ಇದಕ್ಕೆ ಒಂದು ಸಣ್ಣ ಕಾರಣವೂ ಇದೆ. ಅದೇನೆ... ಅಂಬರೀಶ್ ಅವರ ಜೊತೆ ರಮ್ಯಾಳ ಸಂಬಂಧ ಚೆನ್ನಾಗಿದ್ದರೂ, ಅ... ರಾಜಕೀಯ ಗಾಡ್ ಫಾದರ್ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ... ಕೃಷ್ಣ ಮತ್ತು ಅಂಬರೀಶ್ ನಡುವಿನ ಸಂಬಂಧ ತೀರಾ ಕೊಳೆತುಹೋ... ಹೀಗಾಗಿ ಒಂದು ವೇಳೆ ರಮ್ಯಾ ಚುನಾವಣೆಗೆ ಸ್ಪರ್ಧಿಸಿ ಗೆದ್ದರೆ ಅದು ... ಗೆಲುವಾಗುತ್ತದೆಯೇ ಹೊರತು ಅಂಬಿಯ ಗೆಲುವಾಗುವುದಿಲ್ಲ. ಇದು ಅ... ಚೆನ್ನಾಗಿ ಗೊತ್ತು.

ಸುಮಲತಾ ಮತ್ತು ರಮ್ಯಾ ಇವರಿಬ್ಬರಲ್ಲಿ ಯಾರು ಅಭ್ಯರ್ಥಿಯಾಗುತ್ತಾ... ಗೊತ್ತಿಲ್ಲ. ಆದರೆ ಈ ಚುನಾವಣೆ ಅಂಬಿಯ ಪಾಲಿಗೆ ಅಗ್ನಿಪ... ಎಂಬುದರ ಬಗ್ಗೆ ದುಸರಾ ಮಾತಿಲ್ಲ. ಈ ಕಾರಣಕ್ಕೆ... ಉಪಚುನಾವಣೆ ಸಿನಿಮಾ ಲೋಕದ ರಾಜಧಾನಿಯ... ಗಾಂಧಿನಗರದಲ್ಲಿ ಒಂದು ರೀತಿಯ ಕುತೂಹಲವನ್ನು ಹುಟ್ಟುಹಾ...

● ಶ...



ದೇಸಾಯಿ ಅಜ್ಞಾತವಾಸ ಮುಕ್ತಾಯ?

ಕನ್ನಡ ಚಿತ್ರರಂಗ ಕಂಡ ಶ್ರೇಷ್ಠ ನಿರ್ದೇಶಕರಲ್ಲಿ ಒಬ್ಬರಾದ ಸುನೀಲ್ ಕುಮಾರ್ ದೇಸಾಯಿ ಆರೇಳು ವರ್ಷದ ಅಜ್ಞಾತವಾಸದಿಂದ ಹೊರಬಂದು ಗಾಂಧಿನಗರಕ್ಕೆ ಕಾಲಿಟ್ಟಿರುವ ಸುದ್ದಿ ಬಂದಿದೆ.



'ನಮ್ಮೂರ ಮಂದಾರ ಹೂವೆ' ಖ್ಯಾತಿಯ ಸುನೀಲ್ ಕುಮಾರ್ ದೇಸಾಯಿ ಅವರ ಹೊಸ ಚಿತ್ರದಲ್ಲಿ ರಮೇಶ್ ಅರವಿಂದ್ ನಾಯಕರಾಗಿ ನಟಿಸಲಿದ್ದಾರಂತೆ. ಅವರ ಜೊತೆಗೆ ರಂಗಾಯಣ ರಘು ಮತ್ತು ದೇಸಾಯಿಯವರ ಫೇವರೇಟ್ ನಟ ಅನಂತ ನಾಗ್ ಕೂಡ ಇದ್ದಾರಂತೆ. ಈ ಚಿತ್ರ ಸಂಪೂರ್ಣವಾಗಿ ಹಾಸ್ಯಮಯವಾಗಿರುತ್ತದೆ ಎಂಬ ಸುದ್ದಿಯೂ ಕೇಳಿಬರುತ್ತಿದೆ.

ದೇಸಾಯಿಯಂತಹ ಸೂಕ್ಷ್ಮ ಮನಸ್ಸಿನ ಹಿರಿಯ ನಿರ್ದೇಶಕ ವಾಪಸ್ ಗಾಂಧಿನಗರಕ್ಕೆ ಮರಳಿ ಬಂದಿರುವುದು ಖಂಡಿತವಾಗಿಯೂ ಸಂತೋಷದ ವಿಷಯ. ಆದರೆ ಪ್ರೇಕ್ಷಕರ ಅಭಿರುಚಿ ಬದಲಾಗಿರುವ ಈ ಕಾಲಘಟ್ಟದಲ್ಲಿ ದೇಸಾಯಿಯವರು ಹೊಸತನವನ್ನು ನೀಡುತ್ತಾರೆಯೇ ಎಂಬುದೇ ಉಳಿದಿರುವ ಕುತೂಹಲ.

ಹೊಸ ಪೀಳಿಗೆಯ ಪ್ರವಾಹದಲ್ಲಿ ಹಳಬರಾದ ದೇಸಾಯಿ ಕೊಚ್ಚಿ ಹೋಗದಿರಲಿ ಎಂಬುದು ನಮ್ಮ ಸದಾಶಯ.

ಚಿತ್ರೋದ್ಯಮದವರ ಪುಸ್ತಕೋದ್ಯಮ

ಇತ್ತೀಚೆಗೆ ಕನ್ನಡ ಚಿತ್ರರಂಗದಲ್ಲಿ ಸಿನಿಮಾಗಳ ಬಗ್ಗೆ ಪುಸ್ತ... ಬರೆಯುವ ಟ್ರೆಂಡ್ ಆರಂಭವಾಗಿದೆ. ಮೊನ್ನೆಮೊನ್ನೆಯಷ್ಟೆ ... ನಿರ್ದೇಶಕ ರಾಮದಾಸ್ ನಾಯ್ಡು ಅವರು ವಿಶ್ವ ಸಿನಿಮಾದ ... ಒಂದು ಪುಸ್ತಕವನ್ನು ಬಿಡುಗಡೆ ಮಾಡಿದರು. ಅಷ್ಟೇ ಅಲ್ಲ, ... ಸಿನಿಮಾದ ಬಗ್ಗೆ ಅವರು ಬರೆಯಲಿರುವ ನಾಲ್ಕು ಪುಸ್ತಕಗಳಲ್ಲಿ ... ಮೊದಲನೆಯದಂತೆ.

ವಿಶ್ವ ಸಿನಿಮಾದ ಬಗ್ಗೆ ಬರೆಯುವುದು ಒಂದು ಹುಡುಗಾಟಿಕೆಯ ವಿಷಯವಲ್ಲ, ಆದ್ದರಿಂದ ರಾಮದಾಸ್ ನಾಯ... ಅವರು ವಿಶ್ವದ ಇಷ್ಟೊಂದು ಸಿನಿಮಾಗಳನ್ನು ಯಾವಾಗ ನೋಡಿದರು? ಎಲ್ಲಿ ನೋಡಿದರು? ಎಂಬುದು ಹಲವು ಕುಹಕಿಗಳ ಪ್ರಶ್ನೆಯಾಗಿದೆ.



ಹಾಗೆಯೇ ಇತ್ತೀಚೆಗೆ ಸೌಂಡ್ ಆಫ್ ಮ್ಯೂಸಿಕ್‌ನ ಗಾಯಕ ಗುರು... ಅವರು ಕನ್ನಡ ಚಿತ್ರರಂಗದ ಮರೆಯಲಾಗದ 544 ಹಾಡುಗಳ ಬಗ್ಗೆ ... ಸಣ್ಣ ಪುಸ್ತಕವನ್ನು ಹೊರತಂದಿದ್ದಾರೆ. ಈ ಪುಸ್ತಕದಲ್ಲಿ ಹಾಡಿನ ಸಾಹಿತ್ಯ ... ಬರೆದವರು, ಸಂಗೀತ ನೀಡಿದವರು, ಹಾಡಿದವರ ಬಗ್ಗೆ ಒಂದಿಷ್ಟು ಸಣ್ಣ ವಿವ... ಕೂಡ ಇವೆ. ಈ ಪುಸ್ತಕವನ್ನು ಮೊನ್ನೆ ಖ್ಯಾತ ಹಿನ್ನೆಲೆ ಗಾ... ಎಸ್.ಪಿ.ಬಾಲಸುಬ್ರಮಣ್ಯಂ ಅವರು ಲೋಕಾರ್ಪಣೆ ಮಾಡಿದರು.

ಸಿನಿಮಾದ ಬಗೆಗಿನ ದೊಡ್ಡ ದೊಡ್ಡ ಗ್ರಂಥಗಳಿಗಿಂತ ಇಂತಹ ಸಣ್ಣ ಪುಸ್ತ... ಪ್ರೇಕ್ಷಕರನ್ನು ಅಥವಾ ಓದುಗರನ್ನು ಆಕರ್ಷಿಸುತ್ತವೆ. ಒಂದು ಕಾಲದಲ್ಲಿ ಸಿ... ಹಾಡುಗಳ ಗೀತ ಸಾಹಿತ್ಯವನ್ನು ಚಿತ್ರ ಬಿಡುಗಡೆಯ ಸಂದರ್ಭದಲ್ಲಿ ಬಿಡ... ಮಾಡುತ್ತಿದ್ದರು. ಆದೀಗ ಇತಿಹಾಸ ಬಿಡಿ. ಅಂತಹ ಪುಸ್ತಕಗಳನ್ನು ನೆನಪಿ... ರೀತಿಯಲ್ಲಿ ಗುರುರಾಜ್ 500ಕ್ಕೂ ಹೆಚ್ಚು ಶ್ರೇಷ್ಠ ಹಾಡುಗಳ ಸಾಹಿತ್... ಒಂದೇ ಪುಸ್ತಕದಲ್ಲಿ ನೀಡಿದ್ದಾರೆ. ಕನ್ನಡ ಸಿನಿಮಾ ಸಂಗೀತ ಅಭಿಮಾನಿ... ಎಂಜಾಯ್ ಮಾಡುವಂತಹ ಗ್ರಂಥ ಇದಾಗಿದೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore-4. Phone : 2667642...
Fax : 26604536 E-mail ...